
ಕಸ್ತೂರಿ

ಅಕ್ಟೋಬರ್ 1988 ರೂ. 3-00



ಕನ್ನಡದ ನೆಲದಲ್ಲಿ

ಕಸ್ತೂರಿ
ಕನ್ನಡ ಡೈಜೆಸ್ಟ್



ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಸಹಸಂಪಾದಕ:
ಮಾಧವ ನಾ. ಮಹಿಷಿ

ಸಹಾಯಕ ಸಂಪಾದಕ:
ಎಸ್.ಕೆ. ಶಾಮಸುಂದರ

ಮುಖಪುಟ:
ಬಾಪೂಜಿ
ಕಲೆ: ಆರ್. ಚಂದ್ರಶೇಖರ್

ಬೆಳಕಿಂಡಿ

● ಅನುಕರಣೆಯಿಂದ ನಾವು ಕಲಿಯುವುದಕ್ಕಿಂತಲೂ ಹೆಚ್ಚಾಗಿ ಕಳೆದುಕೊಳ್ಳುತ್ತೇವೆ.
- ಮಹರ್ಷಿ ಅರವಿಂದ

● ನೀನು ಚಕ್ರವರ್ತಿಯೇ ಇರಬಹುದು. ಆದರೆ ಜೋಕೆ. ನನ್ನ ಬಳಿ ಲೇಖನಿ ಇದೆ.
- ವಾಲ್ಟೇರ್

● ಮಾಡಬಾರದ ಕ್ರಿಯೆಗಳಲ್ಲಿ ನಿರತನಾಗುವವನನ್ನು ಯಾರು ತಡೆಯುವರೋ ಅವರೇ ಅವನ ಮಿತ್ರರು.
- ಭಾಸ

● ಇಂದಿನ ಮುಂದುವರಿದ ಪಾಲಕರು ಮಕ್ಕಳನ್ನು ಬೆಳೆಸುವಲ್ಲಿ ಕೂಡ ಹೊಸ ವಿಧಾನವನ್ನು ಕಂಡುಕೊಂಡಿದ್ದಾರೆ. ಮಕ್ಕಳಿಗೆ ಕೇಳಿದಾಗ ಕೇಳಿದಷ್ಟು ಹಣ ನೀಡಿಬಿಡುತ್ತಾರೆ.
- ಜಾನ್ ಬ್ರೂಕ್ಸ್

● ಶುದ್ಧ ನಗೆಯೆಂಬುದು ಮನಕ್ಕೆ ಶಾಂತಿ ನೀಡುವ -ಉಪ ಪರಿಣಾಮಗಳಿಲ್ಲದ- ಒಳ್ಳೆಯ ಮಾತ್ರೆಯಿದ್ದಂತೆ.
- ಅರ್ನಾಲ್ಡ್ ಗ್ಲಾಸ್ಗೊ.

● "ಈ ದೇಶ ಮುಕ್ತ. ಇಲ್ಲಿ ಮುಕ್ತ ವಾಕ್ ಸ್ವಾತಂತ್ರ್ಯ, ಮುಕ್ತ ವಿಚಾರ ಸ್ವಾತಂತ್ರ್ಯ ಮುಕ್ತ ಪ್ರೇಮ... ಇಷ್ಟೆಲ್ಲ ಮುಕ್ತವಾಗಿದ್ದರೂ ಮತ್ತೇಕೆ ಬೇಕೊ ನಿನಗೆ ರೊಕ್ಕ?" -ತಂದೆಯೊಬ್ಬ ಮಗನನ್ನು ಕೇಳುತ್ತಾನೆ.
- ಯಬ್ಬಂಕ

ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

KASTURI, OCTOBER 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ	....	• 3
ವೇದಗಳು ಮತ್ತು ಸತ್ಯ	...ಮಂಗಳಗೌರಿ	• 5
ಓದು	...ಕೆ.ಟಿ. ಗಟ್ಟಿ	• 6
ಕನ್ನಡದ ನೆಲದಲ್ಲಿ ಗಾಂಧಿ	...ಡಾ. ಸೂರ್ಯನಾಥ ಕಾಮತ್	• 8
ನೀರುಕೊಳ್ಳುವ ದೇಶ	...ಗೋ	• 14
ಡಾ. ಕೌಲಗುಡ್ಡ	...ಡಾ. ಸುನಂದಾ ಕುಲಕರ್ಣಿ	• 18
ನೋವು ನಲಿವೆಂಬುದು...(ಕವನ)	...ಹೊರೆಯಾಲ ದೊರೆಸ್ವಾಮಿ	• 21
ನಾಗಾ ಗುಡ್ಡಗಾಡಿನಲ್ಲಿ	...ರೇಣುಕ	• 22
ಬೆಳಕಿನುಂಗುರ	...ಗ್ಯಾರಿ ಟಾವ್‌ಬೆಸ್	• 29
ನಿಮ್ಮ ಶಬ್ದ ಭಾಂಡಾರ ಬೆಳೆಯಲಿ	....	• 33
ವಿ.ಶ್ರೀ. ವಾಕಣಕರ್	...ಮನಸಾ	• 35
ಸಂಗಾತಿ ಯಾರಿಗೆ? (ಕಥೆ)	...ರವೀಂದ್ರ ಎಸ್.	• 40
ಅದ್ಭುತ ಭೃಗು ಸಂಹಿತೆಗಳು	...('ಕಸ್ತೂರಿ' ನಡೆದು ಬಂದ ದಾರಿ)	• 44
ಕಂಪಾಲಾದಿಂದ ಪಾರು	...ಡಾ. ಪ್ರಕಾಶ ಕೊಣ್ಣೂರ	• 49
ಇದುವೆ ಜೀವ ಇದು ಜೀವನ	....	• 53
ಕುಚ್ಚದಲ್ಲಿ ಸೌಂದರ್ಯ	...ಎಸ್.ಎನ್. ಲಕ್ಷ್ಮೀಪತಿ	• 55
ಬೆಳ್ಳಿ ಈಗ ಬಂಗಾರ	...ಸಂಜೀವ	• 58
ಸುಹೃಲ್ಲೇಖ: ಒಂದು ಅಪೂರ್ವ ಪತ್ರ	...ತಾಳ್ತಜೆ ವಸಂತಕುಮಾರ	• 61
ಜೀವನ ದರ್ಶನ	...ಕೆ.ಟಿ. ಪಾಂಡುರಂಗಿ	• 65
ಉಲ್ಲಾಸ ತರುವ ಹವ್ಯಾಸ	...ಜಿ. ಕೃಷ್ಣಪ್ರಸಾದ	• 66
ಗೋಡೆಯಲ್ಲಿ ಮನುಷ್ಯ (ಕಥೆ)	...ಮಾರ್ಸೆಲ್ ಐಮೆ	• 73
ಪದಾರ್ಥ ಚಿಂತಾಮಣಿ	...ಪಾವೆಂ	• 80
ಸಂಕಟ ಬಂದಾಗ (ವಿಡಂಬನೆ)	...ಎಚ್. ಆನಂದರಾಮ ಶಾಸ್ತ್ರೀ	• 82
ಸುಲಗ್ನಾ ಸಾವಧಾನ...?	...ಗೌರೀಶ ಕಾಯ್ಕಿಣಿ	• 87
ಗೊರ್ಬಾಚೇವ್	...ಸಂಜೀವ ಪ್ಯಾಟಿ	• 90
ಭೇದಿ	...ಡಾ. ಕೆ.ಎಂ. ಧ್ರುವಕುಮಾರ	• 97
ಕೃಷಿಕರ ಹಬ್ಬಗಳು	...ಜಿ.ಆರ್. ಗುಂಡಪ್ಪ	•100
ಪ್ರಾಥಮಿಕ ಕಣಗಳ ಮಾಯಾಲೋಕ	...ಎಸ್. ರವಿಕುಮಾರ, ಮಾಗಳ	•104

● ಪುಸ್ತಕ ವಿಭಾಗ ●

ಶ್ರೀರಂಗ ಪಟ್ಟಣದ ಪತನ

ಮೂಲ: ಎಂ. ಶಾಮರಾವ್

ನಿರೂಪಣೆ: ಬಿ.ಎಸ್. ರಾಮಭಟ್ •111



ಆನಂದಿಬಾಯಿ: ಅಪ್ರಕಟಿತ ತಥ್ಯಗಳು

ವಸಂತ ಕಲಕೋಟಿಯವರ ಈ ಲೇಖನ (ಸೆಪ್ಟೆಂಬರ್ 88)ದಲ್ಲಿ ಸಾಕಷ್ಟು ಮಾಹಿತಿಗಳು ಇದ್ದಾಗಿಯೂ ಕೆಲವು ತಥ್ಯಗಳು ಸೇರಿಲ್ಲ.

ಡಾಕ್ಟರಾಗಲು ಆಕೆ ಅಪಾರ ಕಷ್ಟ ಅನುಭವಿಸ ಬೇಕಾಗಿ ಬಂದದ್ದು ಗಂಡ ಗೋಪಾಲರಾಯನ ಹಟ ಮತ್ತು ಹಿಂಸೆಗಳಿಂದ. ಗಂಡ ಎಂದರೆ ಆಕೆಗೆ ಪ್ರೀತಿ ಗಿಂತ ಭಯವೇ ಹೆಚ್ಚಾಗಿತ್ತು. ಎಂದೂ ಒಂದಾ ದರೂ ಅಭಿಮಾನದ ನುಡಿ ಆಕೆಗೆ ಗಂಡನಿಂದ ಬರ ಲಿಲ್ಲ. ಅಲ್ಲದೆ ಅಮೆರಿಕಕ್ಕೆ ಆಕೆ ಹೋದ ಮೇಲೆ ಎಲ್ಲಿ 'ಕೆಟ್ಟು ಹೋಗು'ತ್ತಾಳೋ ಎಂದು ಪತ್ರವನ್ನು ಆತ ಆನಂದಿಬಾಯಿಗೆ ಬರೆದಿದ್ದ. ("...ನೀನಿನ್ನು ಡಾಕ್ಟ ರಾದೆ. ಮೊಟ್ಟೆ ಮಾಂಸ ತಿನ್ನುತ್ತಿರಬಹುದು. ಗಂಡ ನನ್ನೂ ಮರೆತಿರಬಹುದು..." ಇತ್ಯಾದಿ.) ಇಂಥ ಮಾನಸಿಕ ಚಿತ್ರಹಿಂಸೆಯೂ ಆನಂದಿಬಾಯಿಯ ಆರೋಗ್ಯ ಕ್ಷೀಣಿಸಲು ಕಾರಣ.

'ಕಡಲಗಲಿ'ಯ ಸಂಗ್ರಹ 'ಕಸ್ತೂರಿ'ಯ ಈವರೆಗಿನ ಉತ್ತಮ 'ಪುಸ್ತಕ ವಿಭಾಗ'ಗಳಲ್ಲೊಂದು. ಇಂಥ ಸಂಗ್ರಹಗಳಿಗಾಗಿಯೇ ನಾನು 'ಕಸ್ತೂರಿ'ಯನ್ನು ಕೊಂಡು ಓದಿ ಕಾಪಾಡಿಟ್ಟುಕೊಳ್ಳುತ್ತಿರುವುದು.

ಜಯಸಿಂಗಪುರ — ಅಸ್ಮಿತಾ ಗಣಪುಲೆ

'ತೇಗು ಹೇಗೆ ಬಂತು?

ಆಗಸ್ಟ್ ಸಂಚಿಕೆಯ 'ಪದಾರ್ಥ ಚಿಂತಾಮಣಿ' ಯಲ್ಲಿ ಪಾವೆಂ ಅವರು ತೇಗು ಎಂಬ ಶಬ್ದಕ್ಕೆ ಕೇವಲ ಸಾಗುವಾನಿ ಮರದ ಅರ್ಥದಲ್ಲಿ ವಿವರಿಸಿದ್ದಾರೆ. ಆದರೆ "ತಿಂದು ತೇಗು" ಎಂಬರ್ಥದಲ್ಲಿ ಈ ಪದ ಬಳಸಲ್ಪಡುತ್ತಿದೆಯಲ್ಲ. ಪಾವೆಂ ಅವರು ಈ ಅರ್ಥ ಹೇಗೆ ಬಂತೆಂದು ವಿವರಿಸಿದ್ದರೆ ಚೆನ್ನಾಗಿತ್ತು. ಇಲ್ಲಿ 'ತೇಗು' ಎಂಬುದು ತೆಗೆ-ತೆಗು-ತೆಗಿ (ಹೊರಕ್ಕೆ ತೆಗೆ) ಎಂಬರ್ಥದಲ್ಲಿ ಉಪಯೋಗಿಸಿರಬಹುದೆ?

ಪುಣೆ — ಡಾ॥ ಗೋಪಾಲ ಎಸ್. ಕಾರ್ಕಳ

'ಕೊರವಂಜಿ'

ನಾ. ಕಸ್ತೂರಿಯವರ ಕುರಿತ ಲೇಖನದಲ್ಲಿ (ಆಗಸ್ಟ್ 88) ಎಸ್.ಜೆ. ಸುಜಾತ ಅವರು "ಕನ್ನಡ ದಲ್ಲಿ ಹಾಸ್ಯ ಲೇಖನಗಳು, ಹಾಸ್ಯ ಪತ್ರಿಕೆ, ಹಾಸ್ಯ ಸಾಹಿತಿಗಳು ಅಪರೂಪ, ಅದೇ ಕಾರಣಕ್ಕಾಗಿ 'ಕೊರ ವಂಜಿ'ಯ ನಂತರ ಅಂಥದೊಂದು ಹಾಸ್ಯ ಪತ್ರಿಕೆ ಹುಟ್ಟಿ ಬರಲಿಲ್ಲ" ಎಂದಿದ್ದಾರೆ.

ಅದೇ ಕೊರವಂಜಿ ಬಳಗದ ಹಾಸ್ಯ ಸಾಹಿತಿ ಮಿತ್ರರು ಸೇರಿ 'ಅಪರಂಜಿ' ಎಂಬ ಹಾಸ್ಯಕ್ಕೇ ಮೀಸ ಲಾದ ಪತ್ರಿಕೆಯನ್ನು ಮೂರು ವರ್ಷಗಳಿಂದ ಪ್ರಕಟಿ ಸುತ್ತಿರುವುದು ಲೇಖಕರ ಗಮನಕ್ಕೆ ಬಂದಿಲ್ಲವೆ?

ಹರಿಹರ — ಎಸ್.ವಿ. ಗೌಡರ್

ವಿಕಿರಣ-ವಿಜ್ಞಾನ-ನಿಸರ್ಗ

'ವಿಕಿರಣ: ವರವೋ? ಶಾಪವೋ' ಒಂದು ಉಪ ಯುಕ್ತ ಹಾಗೂ ಸಮಯೋಚಿತ ಲೇಖನ. ಆಂಗ್ಲ ಬರಹದ ಕನ್ನಡೀಕರಣ ಉತ್ತಮವಾಗಿದೆ.

ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಎದ್ದ ಗಗನಚುಂಬಿ ಕಟ್ಟಡಗಳು, ಹೊಗೆಯುಗುಳುವ ಕಾರ್ಖಾನೆಗಳು, ವಾಹನಗಳು, ಡಾಂಬರಿನ ರಸ್ತೆ ಗಳೇ ಮೊದಲಾದವುಗಳು ಭೂಮಿ, ಗಾಳಿ ಹಾಗೂ ಸೂರ್ಯರ ಜೈವಿಕ-ಸಂಬಂಧಕ್ಕೆ ಅಡ್ಡಿಯುಂಟು ಮಾಡಿ, ಸೂರ್ಯನ ವಿಕಿರಣದಿಂದ ಗಾಳಿಗೆ ವಿದ್ಯುತ್ ಸ್ಪರ್ಶವಾಗಿ ಹುಟ್ಟಿಕೊಳ್ಳುತ್ತಿದ್ದ ಪ್ರಯೋ ಜನಕಾರೀ 'ನೆಗೆಟಿವ್ ಅಯಾನ್'ಗಳ ಸಂಖ್ಯೆಯನ್ನು ಕಡಿಮೆಯಾಗಿಸಿದವು.

'ನಿಸರ್ಗ'ವೇ ಅತ್ಯುತ್ತಮ ವೈಜ್ಞಾನಿಕ ಸಾಧನ; ಅಲ್ಲವೇ?

ಬೆಂಗಳೂರು — ಎಚ್. ಆನಂದರಾಮ ಶಾಸ್ತ್ರೀ

ಇದ್ದಾನೆ!

ದೇವರು ಎಂದರೆ ಬೇರೆ ಯಾರೂ ಅಲ್ಲ! ದೇಹಕ್ಕೆ ವರ್ಚಸ್ಸಿನ ರುಮಾಲು ಆಗಿ ನಮ್ಮೆಲ್ಲರನ್ನು ಬದುಕಿಸುವ ಆ ಅದಮ್ಯ ಶಕ್ತಿ ಅಷ್ಟೇ! ಮನುಷ್ಯ ಈ ಶಕ್ತಿಯ ವಶ ಆದಾಗ ಜೀವಿಯಾಗುತ್ತಾನೆ! ಆ ಶಕ್ತಿಯಿಂದ ದೂರವಾದಾಗ ಶವ ಆಗುತ್ತಾನೆ!

ಹೀಗೆ ಸರ್ವವ್ಯಾಪಿಯಾಗಿ ಗಿಡಮರತರುಲತೆಗಳಲ್ಲಿಯೂ ಹುಳು ಹುಪ್ಪಟೆ ಕ್ರಿಮೀಕೀಟಗಳಲ್ಲಿಯೂ ಆ ಚೈತನ್ಯ ಸ್ವರೂಪಿ ದೇವರಿದ್ದಾನೆ. ಆತನನ್ನು ದೇವರೆಂದೂ ಕರೆಯಬಹುದು. ಅತಿಮಾನವ ಶಕ್ತಿ ಎಂದೂ ಕರೆಯಬಹುದು. ಮಹಾಮೇಧಾವಿಗಳೆನಿಸಿದ ಕೆಲವರು ವ್ಯಕ್ತಪಡಿಸಿದ 'ನೋಡಿ, ನಿಮ್ಮ ದೇವರು ಹೀಗಿದ್ದಾನೆಯೇ?' (ಸೆಪ್ಟೆಂಬರ್ 88) ಲೇಖನ ಓದಿ ಬಹಳ ದುಃಖವಾಗುತ್ತದೆ.

ಸಾಲಿಗ್ರಾಮ (ದ.ಕ.)

— ಡಾ|| ಎ.ಚಂದ್ರಶೇಖರ ಉಡುಪ

"ನಿಮ್ಮ ಬುದ್ಧಿಮತ್ತೆಯ (Logical) ದೇವರು ನನಗೆ ಬೇಡ" ಎಂದರು ಮಹಾತ್ಮಾಗಾಂಧಿ. ಹೌದು. ಮುಗ್ಧ ನಂಬಿಕೆಯ ದೇವರೇ ಒಳ್ಳೆಯದು.

ಯಮಕನಮರಡಿ — ಡಿ.ಎಲ್. ಪಾಟೀಲ

ಈ ಲೇಖನ ಓದಿದಾಗ ನನಗೆ ನೆನಪಿಗೆ ಬಂದದ್ದು ಸಂತರೊಬ್ಬರು ಹೇಳಿದ ಈ ಕಥೆ:

"ಪರಮಾತ್ಮನು ಬುದ್ಧಿಗೆ ತಿಳಿಯುವ ವಸ್ತುವಲ್ಲ; ಬುದ್ಧಿಯಿಂದಾಚೆಗೆ ಅನುಭವಕ್ಕೆ ತಿಳಿಯುವ ವಸ್ತು. ತಾಯಿಯ ಚಿಕ್ಕ ಮಗಳೊಬ್ಬಳು ತಾನು ಹುಟ್ಟಿದ್ದು ಹೇಗೆ ಎಂದು ತಾಯಿಯನ್ನು ಕೇಳಿದಾಗ ಆಕೆ ನೇರ ಹೇಳದೆ ಹಾರಿಕೆಯ ಉತ್ತರ ಕೊಟ್ಟಾಳು; ಆ ಚಿಕ್ಕ ಮಗಳು ತಾನೇ ಪ್ರೌಢೆಯಾದಾಗ ತನ್ನ ಅನುಭವದಲ್ಲಿ ಮಗುವನ್ನು ಹೆತ್ತಾಗ, ಆ ಜ್ಞಾನವನ್ನು ಬೇರೆಯವರಿಂದ ತಿಳಿಯುವ ಅಗತ್ಯವಿಲ್ಲ."

ಈ ಕಥೆ ಎಷ್ಟು ಅರ್ಥಪೂರ್ಣ!

ಬೆಂಗಳೂರು. — ಪಿ. ಶರಣಯ್ಯ

ನೂರೆಂಟು ದೇವರುಗಳ ಈ ರಾಜ್ಯದಲ್ಲಿ ನಮ್ಮ ದೇವರು ಹೇಗಿದ್ದಾನೆಂದು ನೋಡಲಿ? ಎಲ್ಲರೂ ನಮ್ಮವರೆಂದು ಕೊಂಡರೂ ಯಾರೂ ನಮ್ಮವರಲ್ಲ. ಆದ್ದರಿಂದ ನನಗೆ ಯಾವ ದೇವರೂ ಇಲ್ಲ.

ಧಾರವಾಡ — 'ದೇವಸುತ'

ಪ್ರಾಚೀನ ತಪಸ್ವಿ

ಡಾ|| ಜಿ. ವರದರಾಜರಾಯರನ್ನು (ಸೆಪ್ಟೆಂಬರ್ 88) ಕುರಿತ ಲೇಖನಕ್ಕಾಗಿ ಕೃತಜ್ಞ.

ಅವರ ಸರಳತೆ-ಗಾಂಭೀರ್ಯಗಳು ಅವರನ್ನು 'ಪ್ರಾಚೀನ ತಪಸ್ವಿಯಂತೆ ಎಲ್ಲದರಿಂದ ದೂರವಿಟ್ಟ ವೇನೊ. ಅವರದೇ ಆದ ಒಂದು 'ಮಠ'ವಿದ್ದಿದ್ದರೆ? ಅದಿಲ್ಲದೆಯೆ ಅವರು ಪ್ರಶಸ್ತಿ ಪುರಸ್ಕಾರಗಳಿಂದ ವಂಚಿತರಾದರು. ನಾ. ಪ್ರಭಾಕರರೇ ಹೇಳುವಂತೆ, ರಾಯರು "ತನ್ನ ಪಾಡಿಗೆ ತಾನು ತನಗೆ ತಿಳಿದಷ್ಟು ಕೆಲಸ ಮಾಡುತ್ತ" ಜೀವಿತದ ಕೊನೆಯ ಉಸಿರಿನ ವರೆಗೂ ಕನ್ನಡ ಡಿಂಡಿಮವನ್ನು ಬಾರಿಸಿದರು.

ಬೆಂಗಳೂರು — ಮುರಾರಿ

ಡಾ|| ವರದರಾಜರಾಯರು ನಿಧನರಾದದ್ದು 'ಕಸ್ತೂರಿ' ಪ್ರಕಟಿಸಿದಂತೆ 12-11-82ರಲ್ಲಲ್ಲ, 1987ರಲ್ಲಿ.

ಮೈಸೂರು — ರಂಗಸ್ವಾಮಿ

ಒಬ್ಬ ಕಲಾವಿದ ತಾನು ಪ್ರಬುದ್ಧನಾಗಲು ಏನೆಲ್ಲ ಸಾಧಿಸಬೇಕು, ಏನೆಲ್ಲಾ ಸಾಹಸಮಾಡಬೇಕು, ತಾನು ಕಂಡ ನಿಸರ್ಗವನ್ನು ಕುಂಚ-ಬಣ್ಣಗಳಲ್ಲಿ ಹೇಗೆ ಪ್ರತಿರೂಪಿಸಬೇಕು ಎಂದುದಕ್ಕೆ ಪಿ.ಆರ್. ತಿಪ್ಪೇಸ್ವಾಮಿಯವರ ಕಲಾಯಾತ್ರೆ ಒಂದು ಉತ್ತಮ ನಿದರ್ಶನ.

ಉಜಿರೆ (ದ.ಕ.) — ವೈ. ಉಮಾನಾಥ ಶೆಣೈ

ಸಿಯಾಚಿನ್

ಸಮಸ್ಯಾ ಪರ್ವತದ ಪರಿಚಯವನ್ನು ಮಹತ್ವವನ್ನು ಕೆಲವೇ ಮಾತುಗಳಲ್ಲಿ ಮಾಡಿಕೊಟ್ಟಿರುವುದಲ್ಲದೆ ಅನೇಕ ಕುತೂಹಲಕರ ವಿಷಯಗಳನ್ನು ತಿಳಿಸಿಕೊಟ್ಟ ರವೀಂದ್ರ ಭಟ್ಟರಿಗೆ ಧನ್ಯವಾದಗಳು.

ಸೂರಣಗಿ — ನರಸಪ್ಪ ಮೇಲ್ಮರಿ

ಡಾ|| ಪರಮೇಶ್ವರ ರಾವ್

ಅಮೆರಿಕದಲ್ಲಿ ಓದಿ ಬಂದು ಆಂಧ್ರದ ಹಳ್ಳಿಗಳ ಉದ್ಧಾರಕ್ಕೆ ಶ್ರಮಿಸುತ್ತಿರುವ ಡಾ|| ಪರಮೇಶ್ವರ ರಾಯರು ಮಹಾತ್ಮಾಜಿಯ ಆಶೆಯನ್ನು ಪೂರೈಸಿದ ಮಹನೀಯ. ಈ ಪರಿಚಯ ಅವರ ಭಾವಚಿತ್ರ ವಿಲ್ಲದೆ ಅಪೂರ್ಣವೆನಿಸಿತು.

ಉಡುಪಿ — ಶ್ರೀಪತಿರಾವ್ ಸಲಿಮಾರ್ಕರ್

ಇರಾಕೋ, ಇರಾನೋ?

ಜುಲೈ 'ಕಸ್ತೂರಿ'ಯಲ್ಲಿ ಪ್ರಕಟವಾದ ವೃಷಭೇಂದ್ರಯ್ಯನವರ ಲೇಖನ 'ಹಾಲು ಮಡ್ಡಿಯ ನಾಡು. ಖರ್ಜೂರದ ಬೀಡು' ಲೇಖನಕ್ಕಾಗಿ ಧನ್ಯವಾದಗಳು. ಆದರೆ ಲೇಖನದೊಂದಿಗಿನ ನಕ್ಷೆಯಲ್ಲಿ ಪಾಕಿಸ್ತಾನಕ್ಕೆ ತಗುಲಿದಂತೆ ಇರಾಕ್ ಎಂದು ಕಾಣಿಸಿದ್ದೀರಿ. ಅದು ಇರಾನ್ ಅಲ್ಲವೆ?

ಬೆಟ್ಟದಪುರ — ಎ.ಜಿ. ಕೃಷ್ಣಪ್ಪ

(ಹೌದು ನೀವು ಹೇಳುವುದು ಸರಿ. ಕಣ್ತಪ್ಪಿನಿಂದಾದ ಪ್ರಮಾದಕ್ಕೆ ವಿಷಾದಿಸುತ್ತೇವೆ. — ಸಂಪಾದಕ)

ಕಸ್ತೂರಿ

ವರ್ಷ ೩೩	ಅಕ್ಟೋಬರ್ ೧೯೮೮	ಸಂಚಿಕೆ ೨

ವೇದಗಳು ಮತ್ತು ಸತ್ಯ

ಹಿಂದೆ ಕುಮಾರಿಲಭಟ್ಟನೆಂಬ ಒಬ್ಬ ಜ್ಞಾನಿ ಇದ್ದ. ಅವನು ವೇದಗಳನ್ನು ಸಾಕಷ್ಟು ಓದಿ ತಿಳಿದವನು. ಅದರಲ್ಲಿ ಹೇಳಿದಂಥ ಕರ್ಮಾನುಷ್ಠಾನಗಳಲ್ಲಿ ನಂಬಿಕೆಯುಳ್ಳವನು. ಆ ದಿನಗಳಲ್ಲಿ ಬೌದ್ಧರು ವೈದಿಕ ಮತಕ್ಕೆ ವಿರುದ್ಧವಾಗಿರುವ ತಮ್ಮ ಮತಪ್ರಚಾರವನ್ನು ಬಹಳ ತೀವ್ರವಾಗಿ ನಡೆಸುತ್ತಿದ್ದರು.

ಅವರ ವಾದವನ್ನು ಖಂಡಿಸಬೇಕೆಂದು ಕುಮಾರಿಲಭಟ್ಟ ಸಿದ್ಧನಾದ. ಹಾಗೆ ಮಾಡಬೇಕಾದರೆ ಬೌದ್ಧ ಮತವನ್ನು ಕುರಿತು ಕೂಲಂಕಷವಾಗಿ ತಿಳಿದುಕೊಳ್ಳಬೇಕಾಗಿತ್ತು. ಅದಕ್ಕಾಗಿ ಕುಮಾರಿಲಭಟ್ಟ ಬೌದ್ಧ ಸನ್ಯಾಸಿಯ ವೇಷವನ್ನು ಹಾಕಿಕೊಂಡು ಪ್ರಯಾಗದೊಳಗಿನ ಒಂದು ಬೌದ್ಧ ವಿಹಾರವನ್ನು ಸೇರಿ ಆ ಮತವನ್ನು ಆಳವಾಗಿ ಅಭ್ಯಸಿಸತೊಡಗಿದ.

ಹೀಗಿರುವಾಗ ಒಮ್ಮೆ ಕುಮಾರಿಲಭಟ್ಟ ತಮ್ಮ ಮತಕ್ಕೆ ಬದ್ಧಶತ್ರುವೆಂದು ಬೌದ್ಧರಿಗೆ ಗೊತ್ತಾಗಿ ಬಿಟ್ಟಿತು. ತಮ್ಮ ರಹಸ್ಯಗಳನ್ನು ತಿಳಿದುಕೊಂಡವನನ್ನು ಜೀವದೊಂದಿಗೆ ಬಿಡಬಾರದೆಂದುಕೊಂಡ ಬೌದ್ಧರು ಅವನನ್ನು ಮಂದಿರದ ಏಳನೇ ಅಂತಸ್ತಿನಿಂದ ಕೆಳಗೆ ದೂಡಿಬಿಟ್ಟರು.

ಬೀಳುವಾಗ ಕುಮಾರಿಲಭಟ್ಟನು "ವೇದಗಳು ಸತ್ಯವಾಗಿದ್ದರೆ ನಾನು ಸುರಕ್ಷಿತನಾಗಿರಬೇಕು" ಎಂದುಕೊಂಡ.

ವಿಚಿತ್ರವೆಂದರೆ ಅವನಿಗೆ ಯಾವ ಪೆಟ್ಟೂ ಆಗಲಿಲ್ಲ. ಆದರೆ ಅವನ ಒಂದು ಕಣ್ಣಿಗೆ ಕಲ್ಲು ಚುಚ್ಚಿ ಬಹಳ ನೋವಾಯಿತು.

ತಾನು ವೇದಗಳ ಮೇಲೆ ಅಷ್ಟೊಂದು ನಂಬಿಕೆಯಿಟ್ಟಿರುವಾಗ ಹೀಗೇ ಕಾಯಿತೆಂದು ತಿಳಿಯದೆ ಕುಮಾರಿಲಭಟ್ಟನು ತನ್ನ ಸಂದೇಹವನ್ನು ಗುರುವಿನ ಮುಂದೆ ಬಿಚ್ಚಿಟ್ಟ.

"ನೀನು ವೇದಗಳನ್ನು ಪೂರ್ತಿಯಾಗಿ ನಂಬದೆ ವೇದಗಳು ನಿಜವಾಗಿದ್ದರೆ ಎಂದು ಸಂದೇಹಪಟ್ಟವನಂತೆ ಹೇಳಿಕೊಂಡೆ. ಸತ್ಯವಾದ ವೇದಗಳು ನನ್ನನ್ನು ಯಾವ ಕೇಡೂ ಬಾರದಂತೆ ಸುರಕ್ಷಿತವಾಗಿಡುತ್ತವೆ ಎಂದು ನೀನು ಹೇಳಿಕೊಂಡಿದ್ದರೆ ನಿನಗೆ ಹೀಗೆ ನೋವು ಉಂಟಾಗುತ್ತಿರಲಿಲ್ಲ" ಎಂದು ಗುರುವು ಕುಮಾರಿಲಭಟ್ಟನಿಗೆ ಸಮಾಧಾನ ಹೇಳಿದರು.

● ಮಂಗಳಗೌರಿ.



ಓದು

● ಕೆ.ಟಿ. ಗಟ್ಟಿ ●

ಉದ್ಯೋಗ ಗಳಿಸುವುದಕ್ಕಾಗಿ ಓದು ಎಂಬ ಪರಿಪಾಠವು ಆರಂಭವಾದಂದಿನಿಂದ ಓದಿನ ಇತರ ಪ್ರಯೋಜನಗಳ ಬಗೆಗೆ ಯೋಚಿಸುವ ಜನ ಕಡಿಮೆ. ಎಷ್ಟೋ ಜನ ಡಿಗ್ರಿ ಪಡೆದು ಉದ್ಯೋಗ ದೊರಕಿಸಿಕೊಂಡದ್ದೇ ತಡ, ಓದು ಮುಗಿಯಿತು ಎಂದು ಉದ್ಗನೆಯ ಉಸಿರೆಳೆದು ಗಂಭೀರವಾದ ಓದಿಗೆ ಪೂರ್ಣ ವಿರಾಮ ಹಾಕಿ ಬಿಡುತ್ತಾರೆ. ಎಷ್ಟೋ ಜನರ ವಿಚಾರದಲ್ಲಿ, ಶಾಲೆ ಕಾಲೇಜಿನ ಓದು ಮುಗಿದ ಬಳಿಕ ಓದು ಎಂಬುದು ವೃತ್ತ ಪತ್ರಿಕೆಗಳಿಗೆ ಮಾತ್ರ ಸೀಮಿತ ವಾಗಿರುತ್ತದೆ.

ತೃಪ್ತ, ಸಂತುಷ್ಟ ಜೀವನಕ್ಕೋಸ್ಕರ ಮನುಷ್ಯ

ಹಲವು ವಸ್ತುಗಳನ್ನು ಕೊಂಡುಕೊಳ್ಳುತ್ತಾನೆ. ಸುಖ ಸಂತೋಷಗಳನ್ನು ಅರಸುತ್ತಾ ಕೆಲ ವೊಂದು ಮನೋರಂಜಕ ವಸ್ತುಗಳ ಮೊರೆ ಹೋಗುತ್ತಾನೆ. ಆದರೆ ಈ ಸುಖವನ್ನೂ ಸಂತೋಷವನ್ನೂ ಪಡೆಯುವ ವ್ಯವಹಾರದಲ್ಲಿ ವ್ಯಕ್ತಿಗೆ ನಿಜವಾದ ತೃಪ್ತಿ ಸಿಗುತ್ತದೆಯೇ? ಅಥವಾ ಅದೊಂದು ಚಟವಾಗಿ ಅದರಿಂದ ಸಿಗುವುದು ಬರೀ ಕ್ಷಣಿಕ ತೃಪ್ತಿಯೇ ಎಂಬುದು ಚರ್ಚಾಸ್ಪದ ವಿಚಾರ. ತೃಪ್ತಿಗಾಗಿ ಒಂದು ವಸ್ತುವನ್ನು ಪದೇ ಪದೇ ತೆಗೆದುಕೊಳ್ಳುವಾಗ, ತೃಪ್ತಿಗೋಸ್ಕರ ಏನನ್ನೋ ಒಂದನ್ನು ಮರಳಿ ಮರಳಿ ಮಾಡುವಾಗ ಉಂಟಾಗುವುದು ಅತೃಪ್ತಿಯೇ ಹೊರತು, ತೃಪ್ತಿಯಲ್ಲ. ಹಲವು ಬಗೆಯ ಸುಖ ಭೋಗದ ವಸ್ತುಗಳಿದ್ದರೂ ಯಾವುದರಿಂದಲೂ ಸಂಪೂರ್ಣ ಸಂತುಷ್ಟಿ ದೊರೆಯುವುದಿಲ್ಲ. ಎಲ್ಲಾ ಬಗೆಯ ಮಾದಕ ವಸ್ತುಗಳ ಸೇವನೆಯ ಪರಿಣಾಮ ಅತೃಪ್ತಿ, ಅಶಾಂತಿ, ಅಸಂತೋಷವೇ.


ಸುಖ ಸಂತೋಷವನ್ನು ಪಡೆಯುವ ಮೂಲಕ ಮನುಷ್ಯ ಕರಗುತ್ತಾ, ಕ್ಷಯಿಸುತ್ತಾ ಹೋಗ ಬಾರದು, ಬೆಳೆಯುತ್ತಾ, ಬೆಳಗುತ್ತಾ ಹೋಗ ಬೇಕು. ದೇಹಕ್ಕೆ ಅಂತಹ ಸತ್ವವನ್ನು ನೀಡುವ ವಸ್ತುಗಳೆಂದು ಹಾಲನ್ನು, ಹಣ್ಣನ್ನು, ಜೇನನ್ನು, ತುಪ್ಪವನ್ನು ಹೆಸರಿಸಬಹುದು. ಬುದ್ಧಿಗೆ ಅಂತಹ ಶಕ್ತಿಯನ್ನು ನೀಡುವಂಥಾದ್ದು ಏನಿದೆ?

ಇದೆ ಸಾಹಿತ್ಯವಿದೆ, ಸಂಗೀತವಿದೆ, ಕಲೆಯಿದೆ.

ಸಾಹಿತ್ಯ ಅದರಲ್ಲಿ ಮುಖ್ಯವಾದದ್ದು. ಓದಿ ನಿಂದ ಆಗುವ ಪ್ರಯೋಜನ ಕಣ್ಣಿಗೆ ಕಾಣಿಸದಿರ ಬಹುದು. ಅದರಿಂದ ಮನಸ್ಸಿನಲ್ಲಿ ಆಗುವ ಪರಿ ಣಾಮ ಥಟ್ಟನೆ ಗೋಚರಿಸದೆ ಇರಬಹುದು. ಇಲ್ಲಿ ಒಂದು ವಿಚಾರವನ್ನು ಗಮನಿಸಬೇಕು. ಅದೇನೆಂದರೆ ಥಟ್ಟನೆ ಆಗುವ ಪರಿವರ್ತನೆಯ ಪ್ರಭಾವ ಥಟ್ಟನೆ ಕೊನೆಯಾಗುತ್ತದೆ. ಓದಿನ ಮೂಲಕ ಮನಸ್ಸು, ಬುದ್ಧಿ ಬೆಳೆಯುವ ವಿಧಾನ ವನ್ನು ಒಂದು ವೃಕ್ಷದ ಬೆಳವಣಿಗೆಗೆ ಹೋಲಿಸ ಬಹುದು. ಅದೂ ಒಂದು ಬಗೆಯ ಕ್ರಾಂತಿ. ಅತ್ಯಂತ ಸುಂದರವಾದ, ಅತ್ಯಂತ ಸುಖಪ್ರದ ವಾದ ಕ್ರಾಂತಿ, ಶಾಂತಿಯಿಂದ ಕ್ರಾಂತಿ. ಅದರ ಮೂಲಕ ದೊರೆಯುವ ಮನೋರಂಜನೆ ಬರೀ ಮನೋರಂಜನೆಯಲ್ಲ. ಬೌದ್ಧಿಕ ವಿಕಾಸ ವನ್ನುಂಟುಮಾಡುವ ಮನೋರಂಜನೆ.

ನಾವು ಸಂತೋಷದಿಂದ ಜೀವಿಸಬೇಕಾದರೆ, ಬದುಕಿನಲ್ಲಿ ಆನಂದ ಎಂಬುದನ್ನು ಕಾಣಬೇಕಾ ದರೆ, ನಾವು ಇತರರ ಬಗ್ಗೆ, ಪರಿಸರದ ಬಗ್ಗೆ, ಪ್ರಪಂಚದ ಬಗ್ಗೆ ತಿಳಿವು ಉಳ್ಳವರಾಗಿರಬೇಕು. ನಮಗೆ ಸುಖವನ್ನು, ಸಂತೋಷವನ್ನು, ಆರಾಮವನ್ನು ನೀಡುವ ವಸ್ತುಗಳನ್ನು ನಿರ್ಮಿ ಸಿದ ಶಕ್ತಿಗಳ, ವ್ಯಕ್ತಿಗಳ ಕುರಿತು ತಿಳಿಯಬೇಕು. ಮತ್ತು ಅಂಥ ನಿರ್ಮಾಣಕಾರ್ಯದಲ್ಲಿ ನಾವೂ ಪಾಲುಗೊಳ್ಳಬೇಕು. ಹಣವನ್ನು ಕೂಡಿಹಾಕು ವುದರಿಂದ ಮತ್ತು ಅದನ್ನು ಇಷ್ಟಾನುಸಾರ ವ್ಯಯಿಸುವುದರಿಂದ ನಮಗೆ ಆನಂದ ಸಿಗ ಲಾರದು. ನಾವು ಉಡುವ ಬಟ್ಟೆ, ನಾವು ನಡೆವ ರಸ್ತೆ, ನಾವು ಸಂಚರಿಸುವ ವಾಹನ, ದಿನದ ಇಪ್ಪತ್ನಾಲ್ಕು ಗಂಟೆಗಳ ನಮ್ಮ ಸುಖಮಯ ಜೀವನಕ್ಕೆ ಉಪಯೋಗಿಸುವ ನೂರಾರು ವಸ್ತು ಗಳು ನಮ್ಮ ಕೈಗಳಿಂದ ಆಗಿರುವುದಿಲ್ಲ. ಅವು ಗಳನ್ನು ನಿರ್ಮಿಸಿದವರು ಯಾರ್‍ಯಾರೋ ಆಗಿರು ತ್ತಾರೆ. ಅದೊಂದು ಬರೀ ಭೌತಿಕ ಪ್ರಕ್ರಿಯೆ ಯಲ್ಲ. ಅದರ ಹಿಂದೆ ಮನುಷ್ಯನಿರಬಹುದು. ಪ್ರಕೃತಿಯಿರಬಹುದು. ಎರಡನ್ನೂ ಮೀರಿದ ಶಕ್ತಿಯೂ ಇರಬಹುದು.

ಅದನ್ನು ಅರ್ಥಮಾಡಿಕೊಳ್ಳಲು ಪ್ರಜ್ಞಾ ವಂತಿಕೆ ಅಗತ್ಯ. ತಿಳುವಳಿಕೆ ಅಗತ್ಯ. ಅನು ಕಂಪನ ಅಗತ್ಯ. ಓದು ಈ ಪ್ರಜ್ಞಾವಂತಿಕೆ ಯನ್ನೂ ತಿಳುವಳಿಕೆಯನ್ನೂ ಬೆಳೆಸುವ ಸರ್ವೋ ತ್ಕೃಷ್ಟ ಸಾಧನವಾಗಿದೆ. ನಾವು ಅನುಭವಿಸುವ ಪ್ರತಿಯೊಂದು ವಸ್ತುವಿನ ಹಿಂದೆ ಇರುವ ಕೃತಿ, ಸೇವೆಯ ಹಿಂದೆ ಇರುವ ಸಹೃದಯತೆಯನ್ನು ಗುರುತಿಸಲು, ಅರಿವಿನ ಸೀಮೆಯನ್ನು ಮಾತ್ರ ವಲ್ಲ, ಬದುಕನ್ನು ಉದಾತ್ತವಾಗಿ, ಹೆಚ್ಚು ಸುಂದರವಾಗಿ ಬದುಕಲು ಬೇಕಾದ ವಿವೇಚನಾ ಶಕ್ತಿಯೂ ಲಭಿಸುತ್ತದೆ. ●





ಕನ್ನಡದ ನೆಲದಲ್ಲಿ ಗಾಂಧಿ

● ಡಾ|| ಸೂರ್ಯನಾಥ ಕಾಮತ ●

ರಾಷ್ಟ್ರೀಯತೆಯ ಪ್ರಜ್ಞೆ ಕರ್ನಾಟಕದಲ್ಲಿ ಬಹಳ ಕಾಲದ ಹಿಂದೆಯೇ ಮೊಳಕೆಯೊಡೆದಿತ್ತು. ಲೋಕಮಾನ್ಯ ಟಿಳಕರ 'ಕೇಸರಿ' ಪತ್ರಿಕೆಯಲ್ಲಿನ ಲೇಖನಗಳು ಹಾಗೂ ಅವರ ಅನುಯಾಯಿಗಳ ಕಾರ್ಯಕ್ರಮಗಳು ಜನರಲ್ಲಿ ರಾಷ್ಟ್ರೀಯತಾಭಾವವನ್ನು ಮೂಡಿಸಿದ್ದವು. ಆದರೆ ಅದು ನಗರ ಪ್ರದೇಶಗಳಿಗಷ್ಟೇ ಸೀಮಿತವಾಗಿತ್ತು.

ಜಾತಿ, ಧರ್ಮಗಳ ಗೋಡೆ ಐಕ್ಯಭಾವಕ್ಕೆ ಅಡ್ಡಿಯಾಗಿದ್ದವು. ಈ ಎಲ್ಲ ತೊಡಕುಗಳನ್ನು ನಿವಾರಿಸಿ, ಜನರನ್ನು ಒಗ್ಗೂಡಿಸುವ ಕಾಯಕ ಗಾಂಧೀಜಿಯಿಂದ ಮಾತ್ರ ಸಾಧ್ಯವಿತ್ತು.

ಕನ್ನಡ ನೆಲವನ್ನು ಗಾಂಧೀಜಿಯ ಪಾದಗಳು ಪ್ರಪ್ರಥಮವಾಗಿ ಸ್ಪರ್ಶಿಸಿದ್ದು 1915ರಲ್ಲಿ. ಬೆಂಗಳೂರಿಗೆ ಬಂದ ಗಾಂಧೀಜಿ, ಅಲ್ಲಿ ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರವನ್ನು ಅನಾವರಣಗೊಳಿಸಿದರು. ಡಿ.ವಿ.ಜಿ. ಯವರು ಈ ಸಮಾರಂಭವನ್ನು ಏರ್ಪಡಿಸಿದ್ದರು.

1916ರಲ್ಲಿ ಬೆಳಗಾವಿಯಲ್ಲಿ ನಡೆದ 'ಮುಂಬೈ ರಾಜಕೀಯ ಗೋಷ್ಠಿ'ಯಲ್ಲಿ ಗಾಂಧೀಜಿ ಭಾಗವಹಿಸಿದ್ದರು. ಟಿಳಕರಂತಹ ಉಗ್ರವಾದಿಗಳ ಬೆಂಬಲಿಗರಾಗಿದ್ದ ದೇಶಪಾಂಡೆ ಗಂಗಾಧರರಾಯರು ಈ ಗೋಷ್ಠಿಯ ಬಳಿಕ ಗಾಂಧೀಜಿಯ ವಿಚಾರಧಾರೆಯಿಂದ ಪ್ರಭಾವಿತರಾದರು. "ಗಾಂಧೀಜಿಯ ಸಂಪರ್ಕದಲ್ಲಿ ಬಂದನಂತರ ಅಹಿಂಸೆಯಲ್ಲಿ ಎಂತಹ ಅದ್ಭುತ ಶಕ್ತಿಯಡಗಿದೆ ಎಂಬುದು ನನಗರಿವಾಯಿತು," ಎಂದು ಆ ಬಳಿಕ ಅವರು ಹೇಳಿದರು.


ವಿಠ್ಠಲಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ 1918ರಲ್ಲಿ ವಿಜಾಪುರದಲ್ಲಿ ನಡೆದ ಇನ್ನೊಂದು ಗೋಷ್ಠಿಯಲ್ಲಿ, ಅಸ್ಪೃಶ್ಯತೆಯನ್ನು ತೊಡೆದುಹಾಕುವ ಬಗ್ಗೆ ಗಾಂಧೀಜಿ ಭಾಷಣ ಮಾಡಬೇಕಿತ್ತು. ಆದರೆ ಯಾವೊಬ್ಬ ಅಸ್ಪೃಶ್ಯನೂ ಅಲ್ಲಿ ಹಾಜರಿರಲಿಲ್ಲವಾದ್ದರಿಂದ ಗಾಂಧೀಜಿ ಭಾಷಣ ಮಾಡಲು ನಿರಾಕರಿಸಿದರು. ಕೊನೆಗೆ ಹಲವಾರು ಹರಿಜನರನ್ನು ಕರೆತಂದ ಬಳಿಕವೇ ಸಭೆ ನಡೆಯಿತು.

ಮಂಗಳೂರಿನಲ್ಲಿ

ಕರ್ನಾಡ ಸದಾಶಿವರಾಯರ ಆಹ್ವಾನದ ಮೇರೆಗೆ ಬಾಪು 1920 ರ ಅಗಸ್ಟ್ 19ರಂದು ಮಂಗಳೂರಿಗೆ ಭೇಟಿ ನೀಡಿದರು. 'ಖಿಲಾಪತ್' ಚಳವಳಿಯ ನಾಯಕ ಶೌಕತ್ ಅಲಿ ಗಾಂಧೀಜಿಯ ಜೊತೆಗಿದ್ದರು. ಅಲ್ಲಿ ಮುಸ್ಲಿಮರನ್ನುದ್ದೇಶಿಸಿ ಮಾತನಾಡಿದ ಗಾಂಧೀಜಿ "ಇಸ್ಲಾಂ ರಕ್ಷಣೆಗೆ ಅಸಹಕಾರ ಚಳುವಳಿಯೊಂದೇ ಮಾರ್ಗ" ಎಂದು ಹೇಳಿ ಅಸಹಕಾರ ತತ್ವವನ್ನು ಜಾರಿಗೆ ತರಲು ಒಂದು ಕಾರ್ಯಕ್ರಮವನ್ನೇ ರೂಪಿಸಿದರು.

ಒಂದು ದಿನದ ನಂತರ ಬೆಂಗಳೂರಿನ ಕಂಟೋನ್ಮೆಂಟಿನಲ್ಲಿ ನಡೆದ ಮುಸಲ್ಮಾನರ ಬೃಹತ್ ಸಭೆಯಲ್ಲಿ 'ಖಿಲಾಫತ್'ನ ಪುನರ್ ಸ್ಥಾಪನೆಗೆ ಬಹಿಷ್ಕೃತ ಅಸಹಕಾರ ಚಳುವಳಿಯೇ ಹೆಚ್ಚು ಪರಿಣಾಮಕರವೆಂದು ಗಾಂಧೀಜಿ ವಾದಿಸಿದರು. ಪರಿಣಾಮವಾಗಿ ಕಂಟೋನ್ಮೆಂಟಿನಲ್ಲಿ 'ನ್ಯಾಷನಲ್ ಸ್ಕೂಲ್' ಆರಂಭವಾಯಿತು. ಅಸಹಕಾರ ಚಳುವಳಿಗೆ ಓಗೊಟ್ಟು ಬೆಂಗಳೂರಿನ ಶಾಲೆಗಳನ್ನು ತೊರೆದು ಬಂದ ವಿದ್ಯಾರ್ಥಿಗಳು ಈ ಶಾಲೆಯನ್ನು ಸೇರಿದರು.

ಮಂಗಳೂರು ಹಾಗೂ ಬೆಂಗಳೂರಿನ ಹಲವಾರು ಮಹಿಳೆಯರು ತಮ್ಮ ಸ್ವರ್ಣಾಭರಣಗಳನ್ನು 'ಟಿಳಕ ಸ್ವರಾಜ್ ನಿಧಿ'ಗೆ ದೇಣಿಗೆ ನೀಡಿದರು. 1920ರಲ್ಲಿ ಗಾಂಧೀಜಿ ಬೆಳಗಾವಿಗೆ ಹೋದಾಗಲೂ ಈ ಘಟನೆಯ ಪುನರಾವರ್ತನೆಯಾಯಿತು. ಗಾಂಧೀಜಿ ನಿಪ್ಪಾಣಿಗೆ ಹೋದಾಗ ಅಲ್ಲಿಯ ನಾಯಕರೊಬ್ಬರು, ಗಾಂಧೀಜಿಯನ್ನು ಬ್ರಾಹ್ಮಣರ ಕೈಗೊಂಬೆಯೆಂದು ಕರೆದು ಕಾಂಗ್ರೆಸ್ ಪಕ್ಷವಿರುವುದು ಬ್ರಾಹ್ಮಣರ ಹಿತರಕ್ಷಣೆಗಾಗಿ ಮಾತ್ರ ಎಂದು ಆಪಾದಿಸಿದರು. ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರಗಳನ್ನು ಸಂದರ್ಶಿಸಿದ ಬಳಿಕ ಗಾಂಧೀಜಿ ಖಾನಾಪುರ, ನಂದಗಾವ್, ಅಳ್ನಾವರ ಹಾಗೂ



[illegible] ತೆಂಬುವರು

[illegible] ರೀತಿ [illegible] ಗಾಂಧೀಜಿಗೆ ಸ್ವಾಗತ ಸಮಾರಂಭವನ್ನೇರ್ಪಡಿ [illegible] ತಮ್ಮ ಕೆಲಸವನ್ನೇ [illegible] ದೇಶಕ್ಕಾಗಿ ತಮ್ಮ [illegible]

ಜಯರಾಮಾಚಾರ್ಯ ಕೊಪ್ಪಳಕರ್ ಅ[illegible] ಧಾರವಾಡದಲ್ಲೂ ಗಾಂಧೀಜಿಯ ಕರೆಗೆ ಓಗೊಟ್ಟು, ಆಲೂರು ವೆಂಕಟರಾವ್, ಮು[illegible] ರಾವ್ ಕಬ್ಬೂರು, ಮುದವೀಡು ವೆಂಕಟ ರಾವ್ ಮುಂತಾದವರು ತಮ್ಮ ವಕೀಲಿ ವೃತ್ತಿಯನ್ನು ತೊರೆದರು. ಧಾರವಾಡ, ಗದಗು, ಹುಬ್ಬಳ್ಳಿಗಳಲ್ಲಿ ರಾಷ್ಟ್ರೀಯ ಶಾಲೆಗಳು ತೆರೆ [illegible].

ವಿಜಾಪುರ

1921 ಮೇ 28ರಂದು ಗಾಂಧೀಜಿ ವಿಜಾಪುರದಲ್ಲಿದ್ದಾಗ ಸ್ಥಳೀಯ ನಾಯಕ ಶಾಬಾದಿ ಗುಂಡಪ್ಪನವರು ಸಾರ್ವಜನಿಕ ಸಭೆಯಲ್ಲೇ ಗಾಂಧೀಜಿಯನ್ನು ಟೀಕಿಸಿದರು. "ಬ್ರಾಹ್ಮಣೇತರ ಯುವಕರನ್ನು ಶಾಲಾ ಕಾಲೇಜುಗಳಿಂದ ಹೊರಬರಲು ಉತ್ತೇಜಿಸುವುದರ ಮೂಲಕ ಅವರಿಗೆ ಸರಕಾರಿ ನೌಕರಿ ದೊರಕದಂತೆ ಗಾಂಧೀಜಿ ಮಾಡುತ್ತಿದ್ದಾರೆ. ಇದೊಂದು ಬ್ರಾಹ್ಮಣರ ಒಳಸಂಚು" ಎಂಬುದು ಅವರ ಆರೋಪವಾಗಿತ್ತು. ತಮ್ಮ ಕರೆ ಸಮಾಜದ ಎಲ್ಲಾ ವರ್ಗಗಳಿಗೂ ಸಂಬಂಧಿಸಿದ್ದು ಶಾಬಾದಿಯವರ ವಾದ ಟೀಕಿತರ ಒಡನೆ

ಆಳುವ ನೀತಿಯಿಂದ, ಪ್ರೇರಿತವಾದದ್ದೆಂದು ಗಾಂಧೀಜಿ ಉತ್ತರಿಸಿದರು. ಗಾಂಧೀಜಿಯ ಹುಬ್ಬಳ್ಳಿ ಪ್ರವಾಸದಲ್ಲಿ ಸರ್ ಸಿದ್ದಪ್ಪ ಕಂಬಳಿ ಯವರೂ ಇದೇ ರೀತಿಯ ವಾದವನ್ನು ಮಂಡಿಸಿದ್ದರು. ಆದರೆ ಗಾಂಧೀಜಿಯ ಬಿಚ್ಚುಮನಸ್ಸು ಹಾಗೂ ವಿನಯ ಸ್ವಭಾವಗಳಿಂದಾಗಿ ಈ ರೀತಿಯ ಅನುಮಾನಗಳು ಕಾಲಕ್ರಮಮೇಣ ದೂರವಾದವು.

"ನೂತನ ಶಿಕ್ಷಣ ಕ್ರಮ ನಮ್ಮನ್ನು ಹೇಡಿಗಳನ್ನಾಗಿ ಮಾಡಿದೆ. ನಮ್ಮಲ್ಲಿಯ ಅಸಹಾಯಕತೆ ಹಾಗೂ ಪರಸ್ಪರ ಅಸೂಯೆಗಳು ಈ ಹೊಸ ಶಿಕ್ಷಣ ಕ್ರಮದಿಂದಾಗಿಯೆ ಬಂದದ್ದು. ಇದು ನಮ್ಮಲ್ಲಿ ಗುಲಾಮಗಿರಿಯ ಮನೋಭಾವವನ್ನು ಹುಟ್ಟು ಹಾಕಿದೆ." ಎಂದು ಗಾಂಧೀಜಿ ವಿಜಾಪುರದಲ್ಲಿ ಹೇಳಿದರು. ಇದೇ ಸಂದರ್ಭದಲ್ಲಿ ಮಂಗಳವೇಢೆ ಶ್ರೀನಿವಾಸರಾಯರು ಕಾಲೇಜು ತೊರೆದು 'ನವಜೀವನ' ಎಂಬ ಕನ್ನಡ ಪತ್ರಿಕೆಯನ್ನು ಹೊರತಂದರು. ಇದು ಇದೇ ಹೆಸರಿನಲ್ಲಿ ಗಾಂಧೀಜಿ ಗುಜರಾತೀ ಭಾಷೆಯಲ್ಲಿ ಹೊರಡಿಸುತ್ತಿದ್ದ ಪತ್ರಿಕೆಯ ಕನ್ನಡ ಆವೃತ್ತಿ.

1921ರ ಅಕ್ಟೋಬರ್ 1ರಂದು ಬಳ್ಳಾರಿಯ ಸಮೀಪದ ಸಂಡೂರಿಗೆ ಬಾಪೂಜಿ ಭೇಟಿಯಿತ್ತರು. ಅಲ್ಲಿಯ ದೇವಾಲಯಗಳಲ್ಲಿ ಹರಿಜನರಿಗೂ ಪ್ರವೇಶವಿರುವುದನ್ನು ಮುಕ್ತಮನಸ್ಸಿನಿಂದ ಪ್ರಶಂಸಿಸಿದರು.

ಬೆಳಗಾವಿ ಕಾಂಗ್ರೆಸ್

ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದಲ್ಲಿ, ಗಾಂಧೀಜಿಯ ಅಧ್ಯಕ್ಷತೆಯಲ್ಲಿ, ನಡೆದ ಏಕಮಾತ್ರ ಕಾಂಗ್ರೆಸ್ ಅಧಿವೇಶನವೆಂದರೆ ಬೆಳಗಾಂ ಸಮಾವೇಶ (1924). ಎಲ್ಲ ರೀತಿಯಲ್ಲೂ ಇದೊಂದು ಅದ್ಭುತ ಸಮಾರಂಭ. ಇಲ್ಲಿ ಬಂದವರೆಲ್ಲ ರಾಷ್ಟ್ರೀಯಭಾವದಿಂದ ಓತಪ್ರೋತರಾದರು. "ಅಲ್ಲಿ ಸೇರಿದ ಭಾರೀ ಜನಸ್ತೋಮ, ಹರ್ಡೀಕರ ಮೊದಲಾದ ನಾಯಕರ ಕುದುರೆ ಸವಾರಿ, ಸ್ವಯಂಸೇವಕರ ಕವಾಯಿತು. ನಾಯಕರ ಭಾಷಣಗಳು ಇವೆಲ್ಲವೂ ನನ್ನಲ್ಲಿ ದೇಶಭಕ್ತಿಯ ನೆಲೆಯನ್ನು ಉಕ್ಕಿಸಿದವು" ಎಂದು ಅಂದಿನ ಹದಿಹರೆಯದ ಬಾಲಕನೊಬ್ಬ 50 ವರ್ಷಗಳ ಬಳಿಕ ಬರೆದ. ಅವರೇ ಶಂಕರ ಕುರ್ತಕೋಟಿ.

ಕಲಬುರ್ಗಿಯಲ್ಲಿ ತಲೆದೋರಿದ್ದ ಕೋಮು ವೈಷಮ್ಯವನ್ನು ಅಭ್ಯಸಿಸಲು ತೆರಳಿದ್ದ ಸಂದರ್ಭದಲ್ಲಿ (1927) ಗಾಂಧೀಜಿ ಅಸ್ವಸ್ಥರಾದರು. ಆ ಬಳಿಕ ನಾಲ್ಕು ತಿಂಗಳವರೆಗೆ ನಂದಿಬೆಟ್ಟದಲ್ಲಿ ವಿಶ್ರಾಂತಿ ಪಡೆದರು. ಚೇತರಿಸಿಕೊಂಡ ತಕ್ಷಣ ಅವರು ಮೈಸೂರು. ತುಮಕೂರು. ಚಿತ್ರದುರ್ಗ ಜಿಲ್ಲೆಗಳಲ್ಲಿ ಖಾದೀ ಚಳುವಳಿಯ ಪ್ರಚಾರಕ್ಕಾಗಿ ಸಂಚರಿಸಿದರು. ಇದರ ಫಲವಾಗಿ ಮೈಸೂರಿನ ಬದನ್‌ವಾಲಾದಲ್ಲಿ ಖಾದೀ ನಿರ್ಮಾಣ ಕೇಂದ್ರವೊಂದು ಸ್ಥಾಪನೆಗೊಂಡಿತು. ಸರಕಾರಿ ನೌಕರರೂ ಖಾದಿಯನ್ನು ಧರಿಸಬಹುದು ಎಂದು ದಿವಾನರಿಂದ ಅನುಮತಿಯನ್ನು ದೊರಕಿಸಿಕೊಟ್ಟರು. ಆ ವರ್ಷದ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲೊಂದು ಖಾದಿ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಆಗ ಖಾದಿ ನಿಧಿಯ ಸಹಾಯಾರ್ಥವಾಗಿ 'ಕಬೀರ್' ನಾಟಕ ಪ್ರದರ್ಶನವೂ ನಡೆಯಿತು. ಹಲವಾರು ವಿದ್ಯಾರ್ಥಿಗಳು, ಮಹಿಳಾ ಸಮಾಜದವರು ಖಾದಿ ನಿಧಿಗೆ ಹಣ, ಆಭರಣಗಳನ್ನು ಕಾಣಿಕೆಯಾಗಿತ್ತರು. ಗಾಂಧೀಜಿ ಬೆಂಗಳೂರಿನಲ್ಲಿದ್ದಾಗ ಕೈಲಾಸಂ ಅವರು ತಮ್ಮ ಇಂಗ್ಲಿಷ್ ನಾಟಕ ಹಾಗೂ ಕವಿತೆಗಳನ್ನು ಓದಿ ಹೇಳಿ ಅವರನ್ನು ರಂಜಿಸುತ್ತಿದ್ದರು.

ತುಮಕೂರು ಹಾಗೂ ಮೈಸೂರು

ತುಮಕೂರಿನಲ್ಲೂ ಹಲವಾರು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು 'ಖಾದಿ ನಿಧಿ'ಗೆ ಕಾಣಿಕೆ ನೀಡಿದರು. ಜುಲೈ 19ರಂದು ಮೈಸೂರಿಗೆ ತೆರಳಿದ ಗಾಂಧಿ ಅಲ್ಲಿದ್ದ ಅಸ್ಪೃಶ್ಯರ ಕರಕುಶಲ ತರಬೇತಿ ಕೇಂದ್ರವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಹರಿಜನೋದ್ಧಾರದ ಬಗ್ಗೆ ಅಲ್ಲಿಯ ಪ್ರಮುಖರೊಡನೆ ಚರ್ಚಿಸಿದರು. ಕಲಾವಿದ ವೆಂಕಟಪ್ಪ, ವಿದ್ವಾಂಸರಾದ ರಾಮಶಾಸ್ತ್ರಿ ಇವರೊಡನೆಯೂ ಗಾಂಧೀಜಿ ಮಾತುಕತೆ ನಡೆಸಿದರು. ಮತ್ತೆ ಬೆಂಗಳೂರಿಗೆ ಬಂದ ಗಾಂಧೀಜಿ ಮಿಥಿಕ್ ಸೊಸೈಟಿಯನ್ನು ಸಂದರ್ಶಿಸಿ ಅಸ್ಪೃಶ್ಯತೆಯ ಬಗ್ಗೆ ಸಂಶೋಧನೆ ನಡೆಸುವಂತೆ ಅಲ್ಲಿಯ ವಿದ್ವಾಂಸರನ್ನು ಕೋರಿದರು. ಅಸ್ಪೃಶ್ಯತೆಯನ್ನು ಪುರಾಣಗ್ರಂಥಗಳು ಎಂದೂ ಪುರಸ್ಕರಿಸಿಲ್ಲವೆನ್ನುವುದನ್ನು ಜನರಿಗೆ

ತಿಳಿಹೇಳುವ ತನ್ನ ಪ್ರಯತ್ನಕ್ಕೆ ಇದರಿಂದ ಸಹಾಯವಾಗುತ್ತದೆ ಎಂದು ಅವರು ಹೇಳಿದರು. ಸಂಸ್ಕೃತ ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಗಾಂಧೀಜಿ ಶೂದ್ರರಿಗೂ ಸಂಸ್ಕೃತ ಕಲಿಯುವ ಹಕ್ಕಿದೆ ಎಂದು ವಾದಿಸಿದರು. "ಶೂದ್ರರಿಗೆ ಸಂಸ್ಕೃತವನ್ನು ಕಲಿಸಬಾರದು" ಎಂಬ ಸಂಸ್ಕೃತ ವಿದ್ವಾಂಸರ ವಾದ ಆಧಾರರಹಿತವಷ್ಟೆ, ಅಲ್ಲ, ಅನಗತ್ಯವಾದದ್ದು ಕೂಡ ಎಂದು ಗಾಂಧೀಜಿ ಹೇಳಿದರು.

ಅಸ್ಪೃಶ್ಯತೆಯನ್ನು ತೊಡೆದುಹಾಕುವ ಪ್ರಯತ್ನದ ಅಂಗವಾಗಿ ಅವರಿಗೆ ಶಾಲೆ ಹಾಗೂ ದೇವಾಲಯಗಳಲ್ಲಿ ಪ್ರವೇಶ ದೊರಕುವಂತೆ ಪ್ರಯತ್ನಿಸಬೇಕೆಂದು ಗಾಂಧೀಜಿ ನಾಗರಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಂಘದ ಸದಸ್ಯರಿಗೆ ಕರೆ ನೀಡಿದರು.

ಅಗಸ್ಟ್ ತಿಂಗಳಲ್ಲಿ ಗಾಂಧೀಜಿ ಸಂದರ್ಶಿಸಿದ ಸ್ಥಳಗಳು ಹಾಸನ, ಹೊಳೆನರಸೀಪುರ, ರಾಮನಗರ, ಕನಕಪುರ, ದಾವಣಗೆರೆ, ಮಂಡಗದ್ದೆ, ಗಾಜನೂರು, ಭದ್ರಾವತಿ, ತರೀಕೆರೆ, ಬೀರೂರು ಹಾಗೂ ಕಡೂರು. ಪ್ರವಾಸದ ಮುಕ್ತಾಯಕ್ಕೆ ಬೆಂಗಳೂರಿಗೆ ಬಂದ ಗಾಂಧೀಜಿ ಕುಮಾರಕೃಪಾ ಅತಿಥಿಗೃಹದಲ್ಲಿ ತಂಗಿದ್ದರು. ಕರ್ನಾಟಕದಲ್ಲಿ ಹೀಗೆ ನಾಲ್ಕು ತಿಂಗಳು ಪ್ರವಾಸ ಮಾಡಿದ ಬಳಿಕ ಅವರು ನೆಲ್ಲೂರಿಗೆ ಹೋದರು. 1927ರಲ್ಲಿ ಕರ್ನಾಟಕಕ್ಕೆ ಇನ್ನೊಂದು ಸಲ ಬಂದ ಗಾಂಧೀಜಿ ಅಕ್ಟೋಬರ್ ತಿಂಗಳಿಡೀ ಪುತ್ತೂರು, ಬಂಟ್ವಾಳ, ಕಾರ್ಕಳ, ಕುಂದಾಪುರ, ಉಡುಪಿ, ಮೂಲ್ಕಿಗಳ ಮೂಲಕ ಮುಂತಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚರಿಸಿದರು. ಬಳಿಕ ಅಕ್ಟೋಬರ್ 31ರಂದು ಅವರು ಸಿಂಹಳಕ್ಕೆ ಹೋದರು.

ಏಳು ವರ್ಷಗಳ ಬಳಿಕ ಮಹಾತ್ಮಾಜಿ ಮತ್ತೆ ಕರ್ನಾಟಕಕ್ಕೆ ಬಂದರು. (1934). ಹರಿಜನೋದ್ಧಾರವೇ ಅವರ ಈ ಭೇಟಿಯ ಗುರಿಯಾಗಿತ್ತು. ಜನವರಿ 4ರಂದು ಗೌರಿಬಿದನೂರಿನಲ್ಲಿ ಹಣ ಸಂಗ್ರಹ, ಚೆನ್ನಪಟ್ಟಣದಲ್ಲಿ ಹರಿಜನರಿಗಾಗಿ ಅವರ ಕೇರಿಯಲ್ಲೆ ಒಂದು ಬಾವಿ ಹಾಗೂ ರಾಮಮಂದಿರ ಸ್ಥಾಪನೆ ಮುಂತಾದ ಹಲವಾರು ಚಟುವಟಿಕೆಗಳನ್ನು ಅವರು ಕೈಗೊಂಡರು. ಮೈಸೂರು ಸಂಸ್ಥಾನದಲ್ಲಿ ಹರಿಜನ ಸೇವಕ ಸಂಘಕ್ಕಾಗಿ ಈ ಸಂದರ್ಭದಲ್ಲಿ ಅವರು ಸಂಗ್ರಹಿಸಿದ ಒಟ್ಟು ಮೊತ್ತ 25000 ರೂಪಾಯಿಗಳಷ್ಟು.

ದಕ್ಷಿಣ ಕನ್ನಡ

ಮೈಸೂರು ಹಾಗೂ ಬೆಂಗಳೂರು ಪ್ರವಾಸದ ಬಳಿಕ ಗಾಂಧೀಜಿ ಕೊಡಗಿಗೆ ಕಾಲಿಟ್ಟರು. ಪೊನ್ನಂಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಗೆ ಹಳ್ಳಿ ಹಳ್ಳಿಗಳಿಂದ ಹತ್ತು ಸಾವಿರದಷ್ಟು ಜನ ಬಂದು ಸೇರಿದ್ದರು. ವಿರಾಜಪೇಟೆಯಲ್ಲಿ ಮುಸ್ಲಿಂ ಬಾಂಧವರು ಹಿಂದೂ-ಮುಸ್ಲಿಂ ಬಾಂಧವ್ಯಕ್ಕೆ ಬೆಂಬಲ ಸೂಚಿಸುವ ಒಂದು ಮನವಿಪತ್ರವನ್ನು ಗಾಂಧೀಜಿಯವರಿಗೆ ಸಲ್ಲಿಸಿದರು. ಕನ್ನಡದಲ್ಲಿ ಸಣ್ಣ ಕತೆಗಳ ಮೊದಲ ಲೇಖಕಿಯಾದ ಗೌರಮ್ಮನವರು ಗಾಂಧೀಜಿಯವರನ್ನು ತಮ್ಮ ಮನೆಗೆ ಕರೆದೊಯ್ದು ಆಭರಣಗಳನ್ನು ದೇಣಿಗೆಯಾಗಿತ್ತರು.

ಪುತ್ತೂರಿನಲ್ಲೂ ಹಲವಾರು ಮಹಿಳೆಯರು ಸ್ವರ್ಣಾಭರಣಗಳನ್ನು ಗಾಂಧೀಜಿಯ ಕೈಗೊಪ್ಪಿಸಿದರು. ಆಭರಣಗಳನ್ನು ದೇಣಿಗೆಯಾಗಿ ನೀಡುವಲ್ಲಿ ಬೇರೆ ಯಾವ ರಾಜ್ಯಗಳೂ ಕರ್ನಾಟಕಕ್ಕೆ ಸರಿಸಾಟಿಯಲ್ಲ ಎಂದು ಗಾಂಧೀಜಿ ಹೇಳಿದರು.

ಸಿರ್ಸಿಯಲ್ಲಿ ಮಾರಿಕಾಂಬಾ ದೇವಿಗೆ ಪ್ರಾಣಿಬಲಿಯನ್ನು ಪದ್ಧತಿಯ ಬಗ್ಗೆ ಗಾಂಧೀಜಿ ಅಪಾರ ಖೇದ ವ್ಯಕ್ತಪಡಿಸಿದರು. ಇದರಿಂದಾಗಿ ಬಹಳ ಕಾಲದ ಬಳಿಕವಾದರೂ ಈ ಆಚರಣೆ ನಿಂತುಹೋಯಿತು. ಗಾಂಧೀಜಿಯ ಪ್ರಯತ್ನದಿಂದಾಗಿ ಸಿರ್ಸಿಗೆ ಸಮೀಪವಿರುವ ನೀಲೇಕಣಿಯ ಸುಬ್ರಮಣ್ಯ ದೇವಾಲಯವೂ ಸೇರಿದಂತೆ ಹಲವಾರು ದೇವಾಲಯಗಳ ದ್ವಾರಗಳು ಹರಿಜನರಿಗೆ ಮುಕ್ತವಾದವು.

ದಕ್ಷಿಣ ಕನ್ನಡದ ಹಲವಾರು ಸ್ಥಳಗಳಿಗೆ ಭೇಟಿ [illegible] ಹರಪನಹಳ್ಳಿ, ಸಂಡೂರು, ಬಳ್ಳಾರಿ, ಹೊಸಪೇಟೆ, ಹುಬ್ಬಳ್ಳಿ, ಬೆಳಗಾವಿ, ಬೈಲಹೊಂಗಲ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು. [illegible] ಅವರು ಪಾಲ್ಗೊಂಡರು. ಹರಿಜನ ಕೇರಿಗಳಿಗೆ [illegible] ಹಾಗೂ ಕುಡಿತದ ದುಷ್ಪರಿಣಾಮಗಳ ಬಗೆ [illegible]ರಿಗೆ ತಿಳಿಹೇಳುತ್ತಿದ್ದರು.

[illegible]

ತಂಗಿದ್ದರು. ಕೆ.ಸಿ. ರೆಡ್ಡಿ ಮೊದಲಾದ ನಾಯಕರು ಆಗಾಗ ಗಾಂಧೀಜಿಯನ್ನು ಭೇಟಿಯಾಗುತ್ತಿದ್ದರು. ಈ ಭೇಟಿಗಳೇ ಮುಂದೆ ಪ್ರಜಾಪಕ್ಷ, ಕಾಂಗ್ರೆಸ್ ಪಕ್ಷದ ಜೊತೆಗೆ ವಿಲೀನವಾಗುವುದಕ್ಕೆ ದಾರಿಮಾಡಿಕೊಟ್ಟವು. ಈ ಬಾರಿ ಗಾಂಧೀಜಿ ಬಂಗಾರಪೇಟೆ, ದೊಡ್ಡಬಳ್ಳಾಪುರ, ಕೆಂಗೇರಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು. ಸಿ.ವಿ. ರಾಮನ್‌ರನ್ನೂ ಒಳಗೊಂಡಂತೆ ಅನೇಕ ಪ್ರಮುಖರನ್ನು ಈ ಸಂದರ್ಭದಲ್ಲಿ ಅವರು ಭೇಟಿಯಾದರು.

ಕರ್ನಾಟಕಕ್ಕೆ ಗಾಂಧೀಜಿ ಕೊನೆಯ ಸಲ ಭೇಟಿ ನೀಡಿದ್ದು 1937ರ ಏಪ್ರಿಲ್ 16ರಂದು. ಬೆಳಗಾವಿ ಜಿಲ್ಲೆಯ ಹುದ್ಲಿಯ ಗಾಂಧಿ ಸೇವಾ ಸಂಘದವರು ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ಅವರು ಆಗ ಆಗಮಿಸಿದ್ದರು.

ಕನ್ನಡ ಯುವ ಜನಾಂಗಕ್ಕೆ ಹಾಗೂ ನಾಯಕರಿಗೆ ಗಾಂಧೀಜಿಯ ವ್ಯಕ್ತಿತ್ವ ವಿಚಾರಧಾರೆಗಳು ಬಹಳಷ್ಟು ಸ್ಫೂರ್ತಿ ಚೈತನ್ಯಗಳನ್ನು ನೀಡಿದವು. ಪರಿಣಾಮವಾಗಿ ಕಾಂಗ್ರೆಸ್ಸಿನ ಕಟ್ಟಾ ವಿರೋಧಿಗಳೂ ಕಾಂಗ್ರೆಸ್ಸನ್ನು ಸೇರಿ ದೇಶದ ಹಿತಕ್ಕಾಗಿ ಒಟ್ಟಾಗಿ ದುಡಿಯುವಂತಾಯಿತು. ■

(March of Karnataka ದಿಂದ)

ನಯಾಗಾರಾ ಬತ್ತಿದಾಗ!

ಜಗತ್ತಿನಲ್ಲಿಯೇ ಅತಿ ಅಗಲವಾದ ಪ್ರಪಾತವುಳ್ಳ ಕುದುರೆ ನಾಲಿನಾಕಾರದಲ್ಲಿ ಧುಮುಕುವ ಅಮೇರಿಕದ ನ್ಯಾಯಾಗಾರಾ ಜಲಪಾತವು ಒಂದು ದಿವಸ ಪೂರ್ತಿ ಬತ್ತಿಹೋಯಿತೆಂಬುದನ್ನು ನೀವು ನಂಬುವಿರಾ?

ಅದು ನಡೆದದ್ದು 1848ರ ಮಾರ್ಚ್ 29ರಂದು. ಅಂದು ರಾತ್ರಿ ಜಲಪಾತದ ಆಸುಪಾಸಿನಲ್ಲಿ ವಾಸಿಸುತ್ತಿದ್ದ ಜನರಿಗೆ ಒಂದು ಅಪೂರ್ವ ಕಸಿವಿಸಿಗೊಳಿಸುವ, ಭಯಾನಕ ಅನುಭವ. ದಿನಪೂರ್ತಿ ಸದಾ "ಧೋ" ಎಂದು ಭೋರ್ಗರೆಯುವ "ಜೋಗುಳ"ಕ್ಕೆ ಹೊಂದಿಕೊಂಡಿದ್ದ ಜನರು ಅಂದು ರಾತ್ರಿ ಮಲಗಲಾರದೇ ಎದ್ದು ಹೊರಬಂದರು. ಜಲಪಾತ ನಿಂತಿತು ಎಂಬ ಸುದ್ದಿ ಹರಡುತ್ತಲೇ ಸಾವಿರಾರು ಜನ ಜಲಪಾತದೆಡೆ ಧಾವಿಸಿದರು. ಅನೇಕ ಟಾರ್ಚುಗಳ ಬೆಳಕಿನಲ್ಲಿ ತಾವು ಕೇಳಿದ್ದು, ಅನುಭವಿಸಿದ್ದು ನಿಜವೆಂದು ಅವರಿಗೆ ಮನವರಿಕೆ ಆಯಿತು. ಪ್ರಪಾತದ ಕೆಳಗೆ ಅಲ್ಲಲ್ಲಿ ನಿಂತ ನೀರಲ್ಲಿ ಕಂಡದ್ದು, ಟಾರ್ಚ್ ಬೆಳಕಿನಲ್ಲಿ ಹೊಳೆಯುವ ಕಲ್ಲು ಬಂಡೆ ಮತ್ತು ಕೆಸರು.

ಬೆಳಗಾಗುತ್ತಲೇ ಮತ್ತಷ್ಟು ಜನ ಬಂದು ಸೇರಿದರು. ನದಿಯ ಪಾತ್ರದಲ್ಲಿ ಅನೇಕ ಪ್ರಾಚೀನ ಅವಶೇಷಗಳು ಕಂಡುಬಂದವು. ಜನರು ಧೈರ್ಯ ಮಾಡಿ ನದಿಯ ಈ ದಡದಿಂದ ಆ ದಡಕ್ಕೆ ನಡೆದೇ ಬಿಟ್ಟರು. ಆದರೂ ಇದು ಹೀಗೇಕಾಯಿತು ಎಂದು ಯಾರಿಗೂ ಅರ್ಥವಾಗಲೇ ಇಲ್ಲ. ಇದೇನೋ ದೈವಿ ಪ್ರಕೋಪವೇ ಇರಬೇಕೆಂದು ಭಾವಿಸಿದ ಅನೇಕರು ಚರ್ಚುಗಳಿಗೆ ಧಾವಿಸಿ ಪ್ರಾರ್ಥಿಸತೊಡಗಿದರು. ಜಗತ್ತಿನ ಅಂತ್ಯ ಸಮೀಪಿಸುತ್ತಿದೆಯೆಂದು ಭಾವಿಸಿದ ಅನೇಕ ಭಾವುಕರು ದೇವರನ್ನು ಮೊರೆ ಹೊಕ್ಕರು.

ಮೂವತ್ತು ಗಂಟೆ ಈ ಭಯಮಿಶ್ರಿತ. ನ ಭೂತೋ ನ ಭವಿಷ್ಯತಿ ಎಂಬಂತೆ ಎರಗಿ ಬಂದ ಪ್ರಕೃತಿಯ ಈ ಸೋಜಿಗವು ಮೆಲ್ಲನೆ ಮೈತುಂಬಿಕೊಂಡು, ನಿಧಾನವಾಗಿ ತನ್ನ ವಿಸ್ತಾರವನ್ನು ಮೊದಲಿನಂತೆ ಹಬ್ಬಿಸುತ್ತ, ನದಿಯು ಭೋರ್ಗರೆಯುತ್ತಿದ್ದಂತೆಯೇ ಕೊನೆಗೊಂಡಿತು. ಜಲಪಾತವು ಕೆಲವೇ ಸಮಯದಲ್ಲಿ ತನ್ನ ಮೊದಲಿನ ಗಾಂಭೀರ್ಯ ಮತ್ತು ರುದ್ರ ಸೌಂದರ್ಯವನ್ನು ಪಡೆದಾಗಲೇ ಅಲ್ಲಿನ ಜನರಿಗೆ ನೆಮ್ಮದಿ ಸಿಕ್ಕಿದ್ದು.

ಆದರೆ ಇಷ್ಟು ಅವಾಂತರಕ್ಕೆಲ್ಲ ಕಾರಣ?

ಅಂದು ಪ್ರಚಂಡ ಬಿರುಗಾಳಿಯಿಂದಾಗಿ ಜಲಪಾತದ ಮೇಲ್ಭಾಗದಲ್ಲಿದ್ದ "ಎರ್ರಿ" ಸರೋವರದ ಹೆಪ್ಪುಗಟ್ಟಿದ ಅಗಾಧ ಗಾತ್ರದ ಹಿಮ ಬಂಡೆಗಳು ಕೆಳಗೆ ತಳ್ಳಲ್ಪಟ್ಟು ಸರೋವರದಿಂದ ಹರಿದು ಧುಮ್ಮಿಕ್ಕುವ ನದಿಗೆ ಅಡ್ಡಲಾಗಿ ತಾತ್ಕಾಲಿಕ ಅಡ್ಡ ಗೋಡೆಯನ್ನು ಕಟ್ಟಿದಂತಾಗಿದ್ದು. ಮೂವತ್ತು ಗಂಟೆಗಳ ನಂತರ ಹಿಮ ಬಂಡೆಗಳು ಕರಗುತ್ತಿದ್ದಂತೆಯೇ ಜಲಪಾತಕ್ಕೆ ಪುನಃ ಜೀವದಾನ ಸಿಕ್ಕಿತು.

ಸಂಗ್ರಹ: ಕೃಷ್ಣ ಶ್ರೀನಿವಾಸ ಪಂಚಭಾವಿ.

ಈ ಜನಕ್ಕೆ ನಾಳೆಯ ಚಿಂತೆಯಿಲ್ಲ

ನೀರು ಕೊಳ್ಳುವ ದೇಶ

• ಗೋ •

ಈ ಜನ ಮಳೆಗಾಗಿ ಕಾಯುವುದಿಲ್ಲ! ಅದು ಬಾರದಿದ್ದರೂ ಬಿಸು ಸುಯ್ಯುವುದಿಲ್ಲ!! ಸುತ್ತಲಿನ ಶಾಂತಸಾಗರದಂತೆ ಪ್ರಶಾಂತ ವದನರಾಗಿ, ನಗೆಯನ್ನು ಚಿಮ್ಮುವ ಈ ಜನ ಭವಿಷ್ಯದ ಕುರಿತು ಚಿಂತಿಸುವುದೂ ಇಲ್ಲ!!!

ತಮ್ಮ ಮುಂದಿನ ಪೀಳಿಗೆಗಳೆಲ್ಲ ಕೂತು ಉಣ್ಣುವಷ್ಟು ಧನಸಂಗ್ರಹವಿರುವ ಅವರಿಗೆ ಸದ್ಯದ ದೊಡ್ಡ ಚಿಂತೆಯೆಂದರೆ ತಮ್ಮಲ್ಲಿರುವ ಹಣವನ್ನು ಹೇಗೆ ಖರ್ಚು ಮಾಡಬೇಕು ಎಂಬುದು. ಅಲ್ಲದೆ ಇನ್ನೈದು ವರ್ಷಗಳಲ್ಲಿ ಅವರಿಗೆಲ್ಲ ವರ್ಷವೊಂದಕ್ಕೆ ತಲಾ ಎಪ್ಪತ್ತೈದು ಸಾವಿರ ರೂಪಾಯಿಗಳಿಗೂ ಹೆಚ್ಚು ಹಣ ಬಡ್ಡಿಯ ರೂಪದಲ್ಲಿ ದೊರೆಯಲಾರಂಭಿಸುತ್ತದೆ.

ಇಷ್ಟಾದರೂ ಈ ಜನ ಸರಕಾರಕ್ಕೆ ತೆರಿಗೆ ಕಟ್ಟಬೇಕಾದ್ದಿಲ್ಲ. ಆಮದು ಮಾಡಿಕೊಂಡ ವಸ್ತುಗಳಿಗೆ ಸುಂಕ ತೆರಬೇಕಾದ್ದಿಲ್ಲ. ಶಿಕ್ಷಣಕ್ಕಾಗಿ, ಆರೋಗ್ಯದ ಸಲುವಾಗಿ ಈ ಜನ ಹಣ ಖರ್ಚು ಮಾಡಬೇಕಾದಿಲ್ಲ. ಸರಕಾರ ಆರೋಗ್ಯ ಮತ್ತು ಶಿಕ್ಷಣಗಳನ್ನು ಬದುಕಿನ ಆದ್ಯ ಅವಶ್ಯಕತೆಗಳೆಂದು ಪರಿಗಣಿಸಿದ್ದರಿಂದ ಅವುಗಳಿಗಾಗಿ ಪ್ರಜೆಗಳಿಂದ ಹಣ ಕೇಳುವುದಿಲ್ಲ.

[illegible] ಅವರ ತಲಾ ಆದಾಯ ಅಮೆರಿಕನ್ನರಿಗಿಂತ ಎರಡು ಪಟ್ಟು. ಅಂತೆಯೇ ಅವರಿಗೆ ಕಷ್ಟಪಟ್ಟು ಕೆಲಸಗಳನ್ನು ಮಾಡುವುದೆಂದರೆ ಮರ್ಯಾದೆಗೆ ಕುಂದು. ಆಳುಗಳನ್ನು ಹೊರದೇಶಗಳಿಂದಲೇ ಕರೆಯಿಸಿಕೊಳ್ಳುವಂಥ ಪ್ರತಿಷ್ಠಿತರು. ಸಂಜೆ ಮುಂಜಾವಗಳಲ್ಲಿ ಕುಟುಂಬದವರೆಲ್ಲ ತಮ್ಮದೇ ಕಾರುಗಳಲ್ಲಿ ಹೋಗಿ ಸಮುದ್ರದಡದಲ್ಲಿ ಕುಳಿತು ಸ್ವರ್ಣಕಿರಣಗಳನ್ನು ಮೈಗೆ ಸೋಕಿಸಿಕೊಳ್ಳುತ್ತ ಸ್ವರ್ಗಾನಂದವನ್ನು ಅನುಭವಿಸುತ್ತಾರೆ...

ಆದರೂ ಇವರಿಗೆ ಉಣ್ಣಲು ಆಹಾರ, ಕುಡಿಯಲು ನೀರು ಬರಬೇಕಾದದ್ದು ಹೊರದೇಶಗಳಿಂದಲೇ! ಉಳಿದೆಲ್ಲ ಐಭೋಗಗಳಿಗೆ ಹಣವನ್ನು ನೀರಿನಂತೆ ಖರ್ಚು ಮಾಡುವ ಇವರು ನೀರನ್ನು ಮಾತ್ರ ಅಲಭ್ಯ ವಸ್ತುವೆಂಬಂತೆ ಖರ್ಚು ಮಾಡಬೇಕು. ಈ ಪ್ರದೇಶದಲ್ಲಿ ಭಾಷ್ಪೀಕರಣ ಹೆಚ್ಚು. ಹೀಗಾಗಿ ನೀರು ಸಂಗ್ರಹ ಎಲ್ಲಿಯೂ ಅಸಾಧ್ಯ. ನೀರು ಮತ್ತು ಆಹಾರ ವಸ್ತುಗಳು ಆಮದಾಗುತ್ತವೆ. ಆದರೆ ಸರ್ಕಾರ ಅದಕ್ಕೆ ಧನಸಹಾಯ ನೀಡುವುದರಿಂದ ಆಹಾರ ವಸ್ತುಗಳ ಬೆಲೆ ತುಟ್ಟಿ ಎನಿಸುವುದಿಲ್ಲ. ಆದ್ದರಿಂದಲೇ-ನಮ್ಮಲ್ಲಿ ಹಿಂದೊಮ್ಮೆ ಪ್ರಚಲಿತವಿದ್ದ "ನೀರಿಲ್ಲದೂರು ನರಗುಂದ"ವೆಂಬ ಗಾದೆಯಂತೆ-ಸುತ್ತಲಿನ ರಾಷ್ಟ್ರಗಳಿಂದ "ನೀರು ಕೊಳ್ಳುವ ದೇಶ"ವೆಂದು ಕರೆಯಿಸಿಕೊಳ್ಳುತ್ತಿದೆ ನಾಉರು.

ಹಲವಾರು ಕಾರಣಗಳಿಂದ ವಿಶಿಷ್ಟ ಈ ದೇಶ ಜಗತ್ತಿನ ಅತಿ ಚಿಕ್ಕ ಸ್ವತಂತ್ರ ರಾಷ್ಟ್ರ. ಗಾತ್ರ

ದಲ್ಲಿ ಇದೆಷ್ಟು ಚಿಕ್ಕದೆಂದರೆ ಜಾಗತಿಕ ನಕ್ಷೆಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ಸಿಗದಂಥದು. ಬಹುಶಃ ಇಲ್ಲೇ ಇರಬಹುದೆಂದು ಸುತ್ತಮುತ್ತಲಿನ ರಾಷ್ಟ್ರಗಳ ಜಾಡು ಹಿಡಿದು ಹುಡುಕತೊಡಗಿದಿರೋ ಒಂದು ಪೂರ್ಣ ವಿರಾಮದಂತೆ-ಬಹುಶಃ ಕಲಾವಿದನ ಕುಂಚದಿಂದ ಸಿಡಿದ ಮಸಿಯ ಹನಿಯೇನೋ ಎಂಬ ಭಾವನೆ ಬರುವಂತೆ-ಕಾಣುತ್ತದೆ.

ಬಟಾಟೆಯಂತೆ ಕಾಣುವ ನಾಉರು ವಿಸ್ತೀರ್ಣದಲ್ಲಿ ಬೆಂಗಳೂರು ನಗರಕ್ಕಿಂತ ಕಿರಿದು. ಶಾಂತಸಾಗರದಲ್ಲಿ 21 ಚದರ ಕಿಲೋಮೀಟರ್ (ಎಂಟು ಚದರ ಮೈಲು) ಭೂಭಾಗವುಳ್ಳ ಈ ದ್ವೀಪದಲ್ಲಿ ಸಸ್ಯಸಂಪತ್ತು ಇಲ್ಲವೇ ಇಲ್ಲ ಎಂಬಷ್ಟು ವಿರಳವಾಗಿ ಗಿಡಮರಗಳು, ಅದೂ ಕರಾವಳಿಯಲ್ಲಿ ಮಾತ್ರ ಕಾಣುತ್ತವೆ. ಭೂಮಧ್ಯ ರೇಖೆಯಿಂದ ದಕ್ಷಿಣಕ್ಕೆ 40 ಕಿಲೋಮೀಟರ್ ದೂರದಲ್ಲಿರುವ ನಾಉರುಗೆ ಸಮೀಪದ ದೇಶಗಳೆಂದರೆ ಹವಾಯಿ ದ್ವೀಪಗಳು ಮತ್ತು ಆಸ್ಟ್ರೇಲಿಯ. ಟೋಕಿಯೋದಿಂದ 5,000 ಹಾಗೂ ಸಿಡ್ನಿಯಿಂದ 3,500 ಕಿಲೋಮೀಟರ್ ಅಂತರದ ಮೇಲಿರುವ ನಾಉರು ಇನ್ನೈದು ವರ್ಷಗಳವರೆಗೆ ಸಾಕಷ್ಟು ಹಣವನ್ನು ಸಂಪಾದಿಸಲಿದೆ.

ಈ ದೇಶದ ಸಂಪತ್ಸಮೃದ್ಧಿಗೆ ಕಾರಣವಾದದ್ದು ಆಧುನಿಕ ಕೃಷಿಗೆ ಅತ್ಯುತ್ಕೃಷ್ಟವಾದ ಗೊಬ್ಬರವೆನಿಸಿದ ಫಾಸ್ಫರಿಕ್ ಆಮ್ಲದ ಲವಣ ಸಂಗ್ರಹ. ನಾಉರು ದ್ವೀಪದ ಮುಕ್ಕಾಲು ಪಾಲು ಭೂಮಿಯಲ್ಲಿ ಈ 'ಹೊಳೆಯುವ ಉಪ್ಪು' ಬಂಡೆಗಳ ರೂಪದಲ್ಲಿ ಸಿಗುತ್ತದೆ. ಸರಕಾರದ ಒಡೆತನಕ್ಕೆ ಹಾಗೂ ವ್ಯಕ್ತಿಗಳ ಖಾಸಗಿ ಸ್ವತ್ತಿಗೆ ಸೇರಿರುವ ಭೂಮಿಯಲ್ಲಿ ಈ ಬಂಡೆಗಳಿಗಾಗಿ ನಿರಂತರ ಅಗೆತ ನಡೆದೇ ಇರುತ್ತದೆ. ಈವರೆಗೂ ವಾರ್ಷಿಕ ಇಪ್ಪತ್ತು ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಇಂಥ ಲವಣ ಸಂಗ್ರಹವನ್ನು ರಫ್ತು ಮಾಡಲಾಗುತ್ತಿದ್ದು ಇತ್ತೀಚೆಗೆ ಉತ್ಪಾದನೆಯ ಪ್ರಮಾಣದಲ್ಲಿಯೂ ಗಣನೀಯ ಇಳಿಮುಖವಾಗುತ್ತಿದೆ.

ದಶಕಗಳಿಂದ ಈ ವೈಜ್ಞಾನಿಕ ಉಪ್ಪನ್ನು ನಾಉರುದಿಂದ ತರಿಸಿಕೊಳ್ಳುತ್ತಿರುವ ಆಸ್ಟ್ರೇಲಿಯ, ಜಪಾನ್, ದ. ಕೋರಿಯ ಹಾಗೂ ನ್ಯೂಜಿಲೆಂಡ್‌ಗಳ ಕೃಷಿ ಭೂಮಿ ಫಲಭರಿತವಾಗಿದ್ದು ನಂದನವನದಂತೆ ಕಂಗೊಳಿಸುತ್ತವೆ. ತನ್ನ ನೈಸರ್ಗಿಕ ಸಂಪತ್ತಾದ ಈ ವೈಜ್ಞಾನಿಕ ಉಪ್ಪನ್ನು ಹೊರದೇಶಗಳಿಗೆ ಮಾರುವ ನಾಉರು ಕೆಲವೇ ವರ್ಷಗಳಲ್ಲಿ ಬರಡು ಭೂಮಿಯಾಗಲಿದೆಯಾದರೂ ಈ ಜನಕ್ಕೆ ಅದರ ಕುರಿತು ಯೋಚನೆಯಿಲ್ಲ. ಸದ್ಯ ಮಾರುವ ಪ್ರತಿ ಟನ್ ಫಾಸ್ಫರಿಕ್ ಆಮ್ಲದ ಲವಣ ಸಂಗ್ರಹದಿಂದ ಬರುವ ಹಣದಲ್ಲಿ 1/5 ದಷ್ಟನ್ನು ಅವರು ತಮ್ಮ ರಾಷ್ಟ್ರೀಯ ಖಜಾನೆಯಲ್ಲಿ ಕಡ್ಡಾಯವಾಗಿ ಕೂಡಿ ಹಾಕುತ್ತಿದ್ದಾರೆ. ಈ ರೀತಿ ಕೂಡಿ ಹಾಕಿದ ಹಣ 1995ರಷ್ಟೊತ್ತಿಗೆ ನಾಲ್ಕು ನೂರು ಕೋಟಿ ರೂಪಾಯಿಗಳಷ್ಟಾಗುತ್ತದೆ. ಅದರ ಬಡ್ಡಿಯೇ ಸಾಕು ಅವರಿಗೆಲ್ಲ ಸುಖವಾಗಿರಲು. ಅಲ್ಲದೆ ಸರಕಾರ ವಿದೇಶಗಳಲ್ಲೂ ಹಣ ತೊಡಗಿಸುತ್ತಿದೆ.

ಹದಿನೆಂಟನೆಯ ಶತಮಾನದವರೆಗೆ ಯಾರಿಗೂ ಇಂಥದೊಂದು ದ್ವೀಪವಿದೆಯೆಂಬುದೇ ಗೊತ್ತಿರಲಿಲ್ಲ. 1798ರಲ್ಲಿ ಜಾನ್‌ಫರ್ನ್ ಎಂಬ ಬ್ರಿಟಿಷ್ ನಾವಿಕನೊಬ್ಬ ಆಕಸ್ಮಿಕವಾಗಿ ಈ ದ್ವೀಪವನ್ನು ಕಂಡುಹಿಡಿದ. ಆತ ಅತಿ ದೊಡ್ಡ ಮೀನುಗಳನ್ನು ಹಿಡಿಯುವ ತಂಡವೊಂದರ ಮುಖಂಡನಾಗಿ ಆ ಪ್ರದೇಶಕ್ಕೆ ಬಂದಿದ್ದ. ಈ ದ್ವೀಪವನ್ನು ಕಂಡ ಅವನಿಗೆ ಆನ ಆನಂದಕ್ಕೆ ಪಾರವೇ ಇರಲಿಲ್ಲ.

ಮುಂದೆ ಬಹುಕಾಲದವರೆಗೆ ಈ ದ್ವೀಪ ಶಾಂತಮಹಾಸಾಗರದಲ್ಲಿ ಪ್ರಯಾಣ ಮಾಡುವ ನಾವಿಕರಿಗೆ ವಿಶ್ರಾಂತಿ ಧಾಮವಾಯಿತು. ಹೊರಗಿನ ಜನ ಹೆಚ್ಚು ಸಂಖ್ಯೆಯಲ್ಲಿ ಬರತೊಡಗಿದಂದಿನಿಂದ ಇಲ್ಲಿಯ ಮೂಲನಿವಾಸಿಗಳಿಗೆ ತೊಂದರೆ ಪ್ರಾರಂಭವಾಯಿತು. ಹೀಗಾಗಿ ಆ ಜನ ಪ್ರಯಾಣಿಕ ನಾವಿಕರಿಗೆ ಚಳ್ಳೆಹಣ್ಣು ತಿನ್ನಿಸತೊಡಗಿದರು. ಇದು ಹೀಗೆಯೇ ಮುಂದೆ ನೂರು ವರ್ಷಗಳವರೆಗೂ ನಡೆಯಿತು. 1888ರಲ್ಲಿ ಜರ್ಮನಿಯವನ್ನೊಬ್ಬನ ಕೈಮೇಲಾಗಿ ಮೂಲನಿವಾಸಿಗಳು ತಣ್ಣಗಾಗಬೇಕಾಯಿತು.

ಹದಿನೇಳು ವರ್ಷಗಳ ನಂತರ 1905ರಲ್ಲಿ ಜರ್ಮನ್ ಸರಕಾರದೊಂದಿಗೆ ನ್ಯೂಜಿಲೆಂಡ್ ವ್ಯಾಪಾರಿಯೊಬ್ಬ ಒಂದು ಒಪ್ಪಂದವನ್ನು

ನಾಉರು

ಮಾಡಿಕೊಂಡ. ನಾಉರುದ ಫಾಸ್ಫೇಟ್ ಆಮ್ಲದ ಲವಣವನ್ನು ಒಳ್ಳೆಯ ಗೊಬ್ಬರವಾಗಿ ಬಳಸಬಹುದೆಂದು ಅದಾಗಲೇ ಅರಿತಿದ್ದ ಆ ವ್ಯಾಪಾರಿ ಜರ್ಮನಿಗೆ ಅದನ್ನು ಕಳಿಸುವ ಗುತ್ತಿಗೆಯನ್ನು ಪಡೆದ.

ಮೊದಲ ಮಹಾಯುದ್ಧದ ನಂತರ ನಾಉರುದ ಮಹತ್ವವನ್ನರಿತ ಲೀಗ್ ಆಫ್ ನೇಶನ್ಸ್ ಸಂಸ್ಥೆ ಈ ದ್ವೀಪವನ್ನು ಆಸ್ಟ್ರೇಲಿಯ, ಬ್ರಿಟನ್ ಮತ್ತು ನ್ಯೂಜಿಲೆಂಡ್‌ಗಳ ಅಧಿಕಾರಕ್ಕೆ ಒಪ್ಪಿಸಿತು. ಎರಡನೆ ಮಹಾಯುದ್ಧದ ವೇಳೆಗಾಗಲೆ ಜಪಾನು ಈ ದೇಶದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿತ್ತು. ಶಾಂತ ಸಾಗರದ ಸೈನಿಕ ನೆಲೆಯೂ ಇಲ್ಲೇ ಇದ್ದು, ಬಾಂಬು ದಾಳಿಯಿಂದ ಇಲ್ಲಿಯ ಬಹುತೇಕ ಜನ ಪ್ರಾಣ ಕಳೆದುಕೊಂಡರು. ಉಳಿದವರು ಕೇವಲ 4350 ಜನ ಮಾತ್ರ.

ಸ್ವಾತಂತ್ರ್ಯದ ಗಾಳಿ ಎಲ್ಲೆಡೆ ಬೀಸಲಾರಂಭಿಸಿದಾಗ ನಾಉರು ನಿವಾಸಿಗಳಲ್ಲೂ ಆ ಪ್ರಜ್ಞೆ ಜಾಗರಗೊಂಡಿತು. ಸಂಯುಕ್ತ ರಾಷ್ಟ್ರ ಸಂಘಕ್ಕೆ ಅವರು ವಿರೋಧಿ ರಾಷ್ಟ್ರಗಳ ವಿರುದ್ಧ ಯುದ್ಧ [illegible] ವಿಷಯವನ್ನು ತಿಳಿಸಿದರು "ನಾಉರು ಸ್ವತಂತ್ರವಾಗುವವರೆಗೂ ಯುದ್ಧ ಮುಂದುವರಿಸುವ ನಿರ್ಧಾರ" ಅವರದಾಗಿತ್ತು. ಸಂಯುಕ್ತ ರಾಷ್ಟ್ರ ಸಂಘ ಈ ದ್ವೀಪವನ್ನು ಆಸ್ಟ್ರೇಲಿಯದ ಸುಪರ್ದಿಗೆ ಕೊಟ್ಟು, ರಕ್ಷಿಸುವಂತೆ ಹೇಳಿತು. ಕೊನೆಗೆ 1968ರ ಜನವರಿ 31 ರಂದು ಸ್ವತಂತ್ರವಾದ ನಾಉರು ಸಣ್ಣ ಮಗುವಿನೋಪಾದಿಯಲ್ಲಿ ಪ್ರಗತಿಯ ಹೆಜ್ಜೆಗಳನ್ನಿಡಲಾರಂಭಿಸಿತು.

ಎಂಟೂವರೆ ಸಾವಿರ ಜನಸಂಖ್ಯೆಯನ್ನುಳ್ಳ ನಾಉರು ಗಣತಂತ್ರ ಪದ್ಧತಿಯ ಆಡಳಿತವುಳ್ಳದ್ದು. ಸಂಸತ್ತಿದೆ. ರಾಷ್ಟ್ರಪತಿ ದೇಶದ ಪ್ರಥಮ ಪ್ರಜೆ. ಹ್ಯಾಮರ್ ಡಿ ರೊಬರ್ಟ್ ಈ ದ್ವೀಪದ ರಾಷ್ಟ್ರಪತಿಯಾಗಿ ನಾಲ್ಕು ಬಾರಿ ಚುನಾಯಿತರಾಗಿದ್ದಾರೆ. ದ್ವೀಪವನ್ನು ಆಡಳಿತದ ದೃಷ್ಟಿಯಿಂದ ಹದಿನಾಲ್ಕು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಸಂಸತ್ತಿನಲ್ಲಿ ಹದಿನೆಂಟು ಜನ ಚುನಾಯಿತ ಪ್ರತಿನಿಧಿಗಳಿರುತ್ತಾರೆ. ಇವರು ಸಭೆ ಸೇರುವುದು ವರ್ಷದಲ್ಲಿ ನಲವತ್ತು ಸಲ. ರಾಷ್ಟ್ರಪತಿಗಳ ಸಹಾಯಕ್ಕೆ ಎಂಟು ಜನ ಮಂತ್ರಿಗಳಿರುತ್ತಾರೆ. ಈ ಮಂತ್ರಿಗಳಿಗೆ ಆರು ಜನ ಬ್ರಿಟಿಷ್ ಹಾಗೂ ಆಸ್ಟ್ರೇಲಿಯನ್



"ಫೋನ್ ಮಾಡಿದ್ರೆ ಯಾರಾದ್ರೂ ಕದ್ದು ಕೇಳ್ತಾರೆ ಅಂತ ನಾನೇ ಬಂದೇರಿ...!!"

ಕಾರ್ಯದರ್ಶಿಗಳಿರುತ್ತಾರೆ. ಉಳಿದೆಲ್ಲ ಇಲಾಖೆಗಳಿಗಾಗಿ 550 ಜನ ಅಧಿಕಾರಿಗಳಿದ್ದು ಇವರೆಲ್ಲ ನಾಉರು ಮೂಲದವರು. ವಿದೇಶೀ ಆಕ್ರಮಣದ ಭಯ ತುಂಬ ಇರುವುದರಿಂದ ಈ ದ್ವೀಪಗಳಿಗೆ ವಿದೇಶೀಯರು ಪ್ರವೇಶಿಸುವುದು ತುಂಬ ದುಸ್ತರ ಕಾರ್ಯ. ದ್ವೀಪ ಪ್ರವೇಶಕ್ಕೆ ಸರಕಾರದ ಪೂರ್ವಾನುಮತಿ ಅತ್ಯಗತ್ಯ.

ಕೇವಲ ಏಳು ಊರುಗಳಿರುವ ಈ ದ್ವೀಪದ ರಾಜಧಾನಿ ಯಾರೆನ್. ದಕ್ಷಿಣ ತುದಿಗಿರುವ ಇಲ್ಲಿ ಸಂಸತ್ತು ಹಾಗೂ ಸರಕಾರಿ ಕಟ್ಟಡಗಳಿವೆ. ಅಲ್ಲದೆ ಒಂದು ವಿಮಾನ ನಿಲ್ದಾಣವೂ ಇಲ್ಲಿದೆ. ಮೊದಲು ಫಿಜಿಯಿಂದ ಇಲ್ಲಿಗೆ ಪ್ರವಾಸಿಗರ ವಿಮಾನ ವಾರಕ್ಕೊಂದು ಸಲ ಯಾನ ಮಾಡುತ್ತಿತ್ತು. ಯಾರೆನ್ ನಗರದ ಜನಸಂಖ್ಯೆ 450. ಇದಲ್ಲದೆ ಯಾಂಗೊರ್, ಯುಆಬೊ, ಅನ್ನಾ, ಅನಾಬಾರ್, ಅನಿಬಾರೆಗಳು ಈ ದ್ವೀಪದ ನಾಲ್ಕು ದಿಕ್ಕಿಗೂ ಹರಡಿರುವ ಚಿಕ್ಕ ಊರುಗಳು.

ಈ ದ್ವೀಪದ ಮೂಲನಿವಾಸಿಗಳು ಪೊಲಿನೇಸಿಯನ್, ಮೈಕ್ರೋ ನೇಸಿಯನ್ ವಂಶಜರು. 500 ಜನ ಯುರೋಪಿಯನ್ನರೂ 1000 ಚೀನಿಯರೂ ಇಲ್ಲಿ ವಾಸಿಸುತ್ತಾರೆ. ನಾಉರುನ್ ಇಲ್ಲಿಯ ಪ್ರಮುಖ ಮತ್ತು ಆಡಳಿತ ಭಾಷೆ. ಪ್ರೊಟೆಸ್ಟಂಟ್ ಮತ್ತು ರೋಮನ್ ಕ್ಯಾಥಲಿಕ್‌ರು ಇಲ್ಲಿ ಬಹ್ವಂಶರಿದ್ದಾರೆ. 2000ದಷ್ಟು ಇತರ ದೇಶಗಳಿಂದ ಬಂದ ಕಾರ್ಮಿಕರು ಇವರಲ್ಲಿ ಹೆಚ್ಚು.

ಐದೂವರೆ ಮೈಲುದ್ದದ ಒಂದು ರೈಲು ರಸ್ತೆ ಈ ದ್ವೀಪದಲ್ಲಿದೆ. ಅದು ಹೆಚ್ಚಾಗಿ ಬಳಸಲ್ಪಡುವುದು ಫಾಸ್ಫರಿಕ್ ಲವಣಾಂಶ ಸಂಗ್ರಹವನ್ನು ಸಾಗಿಸಲು ಮಾತ್ರ. 21 ಕಿಲೋಮೀಟರ್ ಉದ್ದದ ರಸ್ತೆಯಿದೆ.

ನಾಉರು ಪ್ರತಿವರ್ಷ ಆಸ್ಟ್ರೇಲಿಯದಿಂದ 15 ಕೋಟಿ ಲೀಟರುಗಳಷ್ಟು ನೀರನ್ನು ತರಿಸಿಕೊಳ್ಳುತ್ತದೆ. ದೇಶದಾದ್ಯಂತ ಲವಣಾಂಶಕ್ಕಾಗಿ ನಡೆದ ಅಗೆತದ ಪರಿಣಾಮವಾಗಿ ದೊಡ್ಡ ಕಂದಕಗಳುಂಟಾಗಿವೆ. ಈ ಕಂದಕಗಳನ್ನು ಆಸ್ಟ್ರೇಲಿಯದಿಂದ ಮಣ್ಣು ಕಲ್ಲು ತರಿಸಿ ತುಂಬಬೇಕೆಂಬ ಯೋಜನೆ ರೂಪಿಸಲ್ಪಟ್ಟಿತ್ತಾದರೂ ತುಂಬಾ ಖರ್ಚಿನ ಕೆಲಸವೆಂದು ಅದನ್ನು ಕೈಬಿಡಲಾಯಿತು. ಈ ಚಿಕ್ಕ ದ್ವೀಪದ ತುಂಬ ಈಗ ಕಂದಕಗಳಿದ್ದರೆ ಸುತ್ತ ಒತ್ತುವ ನೀರಿದೆ. ನೀರಿನ ಒತ್ತಡಕ್ಕೆ ಈ ಭೂಮಿ ತಡೆದೀತೆ? ಒಂದಿಲ್ಲೊಂದು ದಿನ ಈ ದ್ವೀಪ ಇಂಥಲ್ಲಿತ್ತು ಎಂದು ಗುರುತಿಸುವುದೂ ಕಷ್ಟವಾದೀತು.

ನಾಉರು ಜನಕ್ಕೆ ನಾಳಿನ ಚಿಂತೆಯಿಲ್ಲ. ಯಾಕೆಂದರೆ ಆ ದ್ವೀಪವೇ ಸ್ಥಿರವಲ್ಲವೆಂಬುದವರಿಗೆ ಚೆನ್ನಾಗಿ ಮನದಟ್ಟಾಗಿದೆ. ಹೀಗಾಗಿ ಜೀವನವನ್ನು ತುಂಬ ಉತ್ಸಾಹದಿಂದ ಬದುಕುತ್ತಾರವರು. ಮನೆಯಲ್ಲಿ ಎಲ್ಲ ಆಧುನಿಕ ಸೌಲಭ್ಯಗಳನ್ನು ಪಡೆದಿರುವ ಈ ಜನ ಇಪ್ಪತ್ತೊಂದು ಕಿಲೋಮೀಟರ್ ಉದ್ದದ ದ್ವೀಪವನ್ನು ವಾರಕ್ಕೊಮ್ಮೆಯಾದರೂ ಕಾರಿನಲ್ಲಿ ಸುತ್ತಿಬರುತ್ತಾರೆ. ಸಾಕಷ್ಟು ದಾನ ಮಾಡುತ್ತಾರೆ. ಹಾಡುತ್ತಾರೆ. ಕುಣಿಯುತ್ತಾರೆ. ಯಾರಾದರೂ ಯಾವುದಾದರೂ ವಸ್ತುವನ್ನು ಹೊಗಳಿದರೆ ಅವರಿಗೇ ದಾನಮಾಡಿಬಿಡುವ ನಾಉರು ಜನ ಇದಕ್ಕೇನು ಕಾರಣ ಕೊಡುತ್ತಾರೆ ಗೊತ್ತೆ?

"ನಾಳೆ ಏನು ಕಾದಿದೆ ಎಂಬುದು ನೆಚ್ಚಿಗೆಯಿಲ್ಲ." ●

(ವಿವಿಧ ಮೂಲಗಳಿಂದ)

ಸಹೃದಯ ವೈದ್ಯ

ಡಾ. ಕೌಲಗುಡ್ಡ

● ಡಾ|| ಸುನಂದಾ ಕುಲಕರ್ಣಿ ●

ಬಹುಮುಖ ಪ್ರತಿಭೆಯುಳ್ಳ ಒಬ್ಬ ಆತ್ಮೀಯನ ಕುರಿತು ಬರೆಯುವುದು ತುಂಬ ಕಷ್ಟದ ಸಂಗತಿ. ಆದರೆ ಬರೆಯದೇ ಇರುವುದು ಅದಕ್ಕಿಂತಲೂ ಕಷ್ಟದ ಸಂಗತಿ. ಈಚೆಗಷ್ಟೆ ಮೈಸೂರಿನಲ್ಲಿ (ದಿ.27-6-88) ನಮ್ಮನ್ನಗಲಿದ ಸ್ತ್ರೀರೋಗ ತಜ್ಞ, ಆದರ್ಶಗುರು, ಮಾನವೀಯ ಹೃದಯದ ವೈದ್ಯ ಡಾ|| ಶ್ರೀನಿವಾಸ ನರಸಿಂಗ ಕೌಲಗುಡ್ಡ. ಅಂಥ ಆತ್ಮೀಯ ವ್ಯಕ್ತಿ.



"ಹುಟ್ಟುವಾಗ ನೀನು ಅಳುತ್ತ ಬರುತ್ತೀ, ಜನ ನಗುತ್ತ ಸ್ವಾಗತಿಸುತ್ತಾರೆ. ಆದರೆ ಹೋಗುವಾಗ ನೀನು ನಗುತ್ತ ಹೋಗಬೇಕು. ಜನ ಅಳುತ್ತ ಬೀಳ್ಕೊಡುತ್ತಾರೆ" ಎಂಬ ಫಕೀರನೊಬ್ಬನ, ಮಾತನ್ನು ಪದೇ ಪದೇ ಹೇಳುತ್ತಿದ್ದರು ಡಾ|| ಕೌಲಗುಡ್ಡ. ಅವರ ಈ ಮಾತಿಗೆ ಉತ್ತರ ಅವರ ಮೃತ್ಯುವಿನಲ್ಲೇ ದೊರೆಯಿತು. ಅವರು ನಗುನಗುತ್ತಲೇ ಹೋಗಿಬಿಟ್ಟರು...

ನರಗುಂದದವರಾದ ಡಾ|| ಕೌಲಗುಡ್ಡರದು ವೈದ್ಯಕೀಯ ಮನೆತನವೇ. ಅವರ ತಂದೆ ಡಾ|| [illegible] ಕಾಲದ [illegible] ವೈದ್ಯರು. ಮನೆಗೆ ಹಿರಿಯ ಮಗನಾಗಿ ಜನಿಸಿದ ಶ್ರೀನಿವಾಸರು ಬಾಲ್ಯವನ್ನು ಕಳೆದದ್ದು ಅಥಣಿ, ಬಾಗಲಕೋಟೆ, ಚಿಕ್ಕೋಡಿ ಮುಂತಾದೆಡೆಗಳಲ್ಲಿ. [illegible] ಅಲ್ಲಿಯೇ ಎಂ.ಬಿ.ಬಿ.ಎಸ್. ಮತ್ತು ಎಂ.ಡಿ. ಮುಗಿಸಿದರು. ಆಗಲೇ ತಂದೆಯನ್ನು ಕಳೆದುಕೊಂಡು ಮನೆತನದ ಜವಾಬ್ದಾರಿಯು [illegible]

★ 1982 ಜುಲೈ ಸಂಚಿಕೆಯಲ್ಲಿ ಪ್ರಕಟವಾದ ವಸಂತ ಚಂದ್ರ ಅವರ "ಡಾ|| ಶ್ರೀನಿವಾಸ ಕೌಲಗುಡ್ಡ" ಲೇಖನವನ್ನು ನೋಡಿ.

ಅದೇ ತಾನೇ ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡಿದ್ದ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇರಿ ಶೀಘ್ರದಲ್ಲೇ ಅಲ್ಲಿ ಆದರು. ಪ್ರಾಧ್ಯಾಪಕರಾಗಿ ಅವರು ತುಂಬ ಜನಪ್ರಿಯರಾದರು. ವಿದ್ಯಾರ್ಥಿಗಳೊಂದಿಗೆಂದೂ ಅವರು ಗಂಟು ಮುಖದಿಂದ ಮಾತಾಡಿದ್ದನ್ನು ನಾನು ಕಂಡಿಲ್ಲ. ಅವರಿಗೆ ಡಾ|| ಕೌಲಗುಡ್ಡರೆಂದರೆ. ಫ್ರೆಂಡ್ ಗೈಡ್ ಆ್ಯಂಡ್ ಫಿಲಾಸಫರ್. ಯಾವುದೇ ಸಂದರ್ಭದಲ್ಲಿ, ಯಾವುದೇ ಸಮಸ್ಯೆಯನ್ನು, ಯಾವ ವಿದ್ಯಾರ್ಥಿ ಅವರೆದುರು ಇಟ್ಟರೂ ಅದಕ್ಕೆ ಸೂಕ್ತ ಪರಿಹಾರ ಸಿಗುತ್ತಿದ್ದುದು ಖಂಡಿತ. ಡಾ|| ಕೌಲಗುಡ್ಡರ ಇನ್ನೊಂದು ದೊಡ್ಡ ಗುಣವೆಂದರೆ . ತಮಗಿಂತ ಎಷ್ಟೇ ಕಿರಿಯರೊಂದಿಗೂ ಅವರು ಆಟವಾಡುತ್ತಿದ್ದುದು. ನನ್ನೊಂದಿಗೆ ಅವರಾಡುತ್ತಿದ್ದ ಚಿಣಿಪಣಿ, ಕಣ್ಣು ಮುಚ್ಚಾಲೆ, ಕುಂಟಾಟಗಳು ನಿನ್ನೆಯೋ ಮೊನ್ನೆಯೋ ನಡೆದ ಘಟನೆಗಳಂತೆ ಇನ್ನೂ ಕಣ್ಣೆದುರು ಬಂದು ನಿಲ್ಲುತ್ತವೆ. ಕೇವಲ ಮಕ್ಕಳಾಟವೆಂದು ಅವರಿಗಿಂತ ಎಷ್ಟೋ ಚಿಕ್ಕವರಾದ ನಾವು ಅಂದುಕೊಳ್ಳುತ್ತಿದ್ದ ದಿನಗಳಲ್ಲಿಯೂ ಡಾ|| ಕೌಲಗುಡ್ಡರು ಮನೆಯ ಅಕ್ಕಪಕ್ಕದ ಚಿಕ್ಕಮಕ್ಕಳೊಂದಿಗೆ ಈ ಆಟಗಳಲ್ಲಿ ತೊಡಗಿರುತ್ತಿದ್ದುದು ನನಗೆ ಕೆಲವೊಮ್ಮೆ ಅಚ್ಚರಿಯುಂಟುಮಾಡುತ್ತಿತ್ತು. ಅವರು ಮಕ್ಕಳೊಂದಿಗೆ ಮಗುವಾಗಿ ಬಿಡುತ್ತಿದ್ದರು. (ನನ್ನ ತಂದೆಯೂ ಇದೇ ವೈದ್ಯಕೀಯ ಕಾಲೇಜಿನಲ್ಲಿಯೇ ಪ್ರಾಧ್ಯಾಪಕರಾಗಿದ್ದರಿಂದ ಡಾ|| ಕೌಲಗುಡ್ಡರೂ ನಾವೂ ನೆರೆಹೊರೆಯುವರಾಗಿದ್ದೆವು).

ಅವರ ವ್ಯಕ್ತಿತ್ವದ ಅತ್ಯಂತ ಮಹತ್ವದ ಅಂಶವಾದ ಉತ್ತಮ ಗುರುವಿನ ದರ್ಶನವಾದದ್ದು. ನಾನು ಅವರ ವಿದ್ಯಾರ್ಥಿನಿಯಾದಾಗಲೇ. ವಿದ್ಯಾರ್ಥಿಗಳಿಗೆಲ್ಲ ಅವರು ಸ್ಫೂರ್ತಿಯ ಸೆಲೆ, ಆಸರೆಯ ನೆಲೆ. ಆಪರೇಶನ್ ಥಿಯೇಟರಿನಲ್ಲಿ ನನ್ನ ಹಿಂದೆ ನಿಂತು ಕೈ ಹಿಡಿದು "ನೀನು ಈ ಆಪರೇಶನ್ ಮಾಡು. ನೀನು ಖಂಡಿತ ತಪ್ಪುವುದಿಲ್ಲ ನೀನೇನಾದರೂ ತಪ್ಪಿದಲ್ಲಿ ನಾನು ಅದನ್ನು ಸರಿಪಡಿಸುವೆ" ಎನ್ನುತ್ತಿದ್ದುದು ನನಗೆ ಚಿಕ್ಕಂದಿನಲ್ಲಿ ಮನೆಯ ಹಿರಿಯರು ಕೈಹಿಡಿದು ಅಕ್ಷರಾಭ್ಯಾಸ ಮಾಡಿಸುತ್ತಿದ್ದುದರ ನೆನಪು ತರುತ್ತಿತ್ತು. ಅವರು ತಮ್ಮ ವಿದ್ಯಾರ್ಥಿಗಳಲ್ಲಿ ತುಂಬುತ್ತಿದ್ದ ಆತ್ಮವಿಶ್ವಾಸ, ಸ್ಫೂರ್ತಿಗಳು ಇಂದು ಕರ್ನಾಟಕವಷ್ಟೇ ಅಲ್ಲ, ದೇಶ-ವಿದೇಶಗಳಲ್ಲಿ ನೆಲೆಸಿರುವ ಸಾವಿರಾರು ಉತ್ತಮ ವೈದ್ಯರ ತಂಡವನ್ನೇ ನಿರ್ಮಿಸಿವೆ. ಇಂಥ ಮಾತನ್ನು ಹೇಳಲು ಅವರು ನನ್ನೊಬ್ಬಳನ್ನೇ ಆಯ್ಕೆ ಮಾಡಿದ್ದರೆಂದೇನಿಲ್ಲ. ತಮ್ಮ ಪ್ರತಿಯೊಬ್ಬ ವಿದ್ಯಾರ್ಥಿ-ವಿದ್ಯಾರ್ಥಿನಿಯಲ್ಲಿ ಆತ್ಮವಿಶ್ವಾಸವನ್ನು ತುಂಬುವ ಕಲೆ ಅವರಿಗೆ ಅದೆಂತು ಅವಗತವಾಗಿತ್ತು ಎಂಬುದಕ್ಕೆ ಇದೊಂದು ನಿದರ್ಶನ ಮಾತ್ರ.

ಡಾ|| ಕೌಲಗುಡ್ಡರ ಮಾನವೀಯತೆಗೆ ಸಾವಿರಾರು ನಿದರ್ಶನಗಳು ನಮಗೆ ಸಿಕ್ಕುತ್ತವೆ. ಅನೇಕ ಬಡರೋಗಿಗಳಿಗೆ ತಾವೇ ಸ್ವಸಂತೋಷದಿಂದ ರಕ್ತದಾನ ಮಾಡಿದ್ದುಂಟು. 56 ವರ್ಷಗಳ ಬದುಕಿನಲ್ಲಿ ಅವರು ಒಟ್ಟು ರಕ್ತದಾನ ಮಾಡಿದ್ದು 50ಕ್ಕೂ ಹೆಚ್ಚು ಬಾರಿ. ಬಡರೋಗಿಗಳ ಸ್ಥಿತಿಗೆ ಮರುಗುತ್ತಿದ್ದ ಡಾ|| ಕೌಲಗುಡ್ಡರು ಯಾರ ಕಣ್ಣಲ್ಲಾದರೂ ಕಂಬನಿ ಕಂಡರೆ ಕೂಡಲೇ ಕರಗಿ ಬಿಡುತ್ತಿದ್ದರು. ಕಂಬನಿ ಒರೆಸಿ ಆ ಮುಖದಲ್ಲಿ ಸಮಾಧಾನ ಆಗುವಂತೆ ಶ್ರಮಿಸುತ್ತಿದ್ದರು. ಎಷ್ಟೋ ಸಲ ತಮ್ಮಿಂದ ಶುಶ್ರೂಷೆ ಪಡೆದ ಬಡ ರೋಗಿಗಳಿಗೆ ಔಷಧಿಗೆ, ಪ್ರಯಾಣವೆಚ್ಚಕ್ಕೆ ತಮ್ಮ ಸಂಬಳದ ಹಣವನ್ನು ಕೊಟ್ಟು ಬಿಡುತ್ತಿದ್ದ ಅವರು ತಮ್ಮ ವಿದ್ಯಾರ್ಥಿಗಳಿಗೆ, ಪ್ಯೂನ್-ಅಟೆಂಡರ್‌ಗಳಿಗೆ ಕೂಡ ಧನಸಹಾಯ ಮಾಡುತ್ತಿದ್ದುದನ್ನು ನಾನು ಕಂಡಿದ್ದೇನೆ.

ಉದರದರ್ಶಕ (ಲ್ಯಾಪ್ರೊಸ್ಕೋಪ್) ಶಸ್ತ್ರ ಚಿಕಿತ್ಸೆಯಲ್ಲಿ ಡಾ|| ಕೌಲಗುಡ್ಡ ಸಿದ್ಧಹಸ್ತರು. ಹುಬ್ಬಳ್ಳಿಯ ರೋಟರಿ ಕ್ಲಬ್ ವತಿಯಿಂದ ಅವರು ತಮ್ಮ ಏಳು ಜನ ಸಹೋದ್ಯೋಗಿಗಳೊಂದಿಗೆ ಇಂಥ 1.5 ಲಕ್ಷ ಶಸ್ತ್ರ ಚಿಕಿತ್ಸೆಗಳನ್ನು ಕರ್ನಾಟಕವಷ್ಟೇ ಅಲ್ಲ. ಮಹಾರಾಷ್ಟ್ರ-ತಮಿಳುನಾಡು-ಕೇರಳಗಳ ಹಳ್ಳಿಗಳಲ್ಲಿ ಮಾಡಿದ್ದಾರೆ. ಇದನ್ನು ಗಮನಿಸಿದ ಕರ್ನಾಟಕ ಸರಕಾರ 1983ರಲ್ಲಿ ಅವರನ್ನು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು.

ಸಾಮಾನ್ಯವಾಗಿ ವೈದ್ಯರೆಂದರೆ, ಅದರಲ್ಲೂ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರೆಂದರೆ ಹಣ ಗಳಿಸುವ ಮಶಿನ್ನುಗಳು ಎಂಬ

ಅಭಿಪ್ರಾಯವುಂಟು. ಆದರೆ ಕೌಲಗುಡ್ಡರು ಮಾತ್ರ ಇದಕ್ಕೆ ಅಪವಾದವಾಗಿದ್ದರು. ಹಣ ಗಳಿಸಿದರೆ ಶೋಕಿಯ ಜೀವನದತ್ತ ಮನಸ್ಸು ವಾಲುತ್ತದೆ. ನಂತರ, ಅವೆರಡೂ ಒಂದನ್ನೊಂದು ಮೀರಿಸು ವಂತೆ ವರ್ತಿಸುತ್ತ ಜೀವನವನ್ನೇ ಹಾಳುಮಾಡಿ ಬಿಡುತ್ತವೆಂದು ಅವರು ಬಲವಾಗಿ ನಂಬಿ ದ್ದರು. ಮನೆ ಕಟ್ಟುವ ಹವ್ಯಾಸ, ನರ್ಸಿಂಗ್ ಹೋಂ ನಡೆಸುವ ಚಪಲ ಗಳೆಂದೂ ಡಾ|| ಕೌಲ ಗುಡ್ಡರನ್ನು ಕಾಡಲಿಲ್ಲ. ತಾನು ಬಹಳ ತಿಳಿದವ ನೆಂದು ಅವರೆಂದೂ ಅಂದುಕೊಳ್ಳಲಿಲ್ಲ. ತಮ್ಮ ಸಹಾಯಕ ಡಾಕ್ಟರು ಗಳಿಗೇನಾದರೂ ಎರ ಡೆರಡು ದಿನ ರಾತ್ರಿ ಪಾಳಿ ಕೆಲಸ ಬಂದರೆ ಅವುಗಳಲ್ಲೊಂದು ರಾತ್ರಿ ತಾವು ಅವರ ಬದಲಿ ಕೆಲಸ ಮಾಡಲು ಮುಂದಾಗು ತ್ತಿದ್ದರು. ತಮ್ಮ ಸಹಾಯಕ ಡಾಕ್ಟರುಗಳ ಬಗ್ಗೆ ಅವರಿಗೆ ತುಂಬ ಅಭಿಮಾನ. ಆಕಸ್ಮಿಕವಾಗಿ ತಾವೆಲ್ಲಾದರೂ ಬೇರೆಡೆ ಊರಿಗೆ ಹೋಗುವ ಪ್ರಸಂಗ ಬಂದರೆ, "ನಾನಿಲ್ಲದಿದ್ದರೂ ನನ್ನ ಅಸಿಸ್ಟಂಟ್ಸ್ ಇದ್ದಾರೆ. ಅವರು ನನಗಿಂತ ಚೆನ್ನಾಗಿ ನಿಮ್ಮನ್ನು ನೋಡಿಕೊಳ್ಳುತ್ತಾರೆ" ಎಂದು ರೋಗಿಗಳಿಗೆ ಹೇಳುತ್ತಿದ್ದರು. ನಮ್ಮ ಮೇಲೆ ಅವರು ಈ ರೀತಿ ನೈತಿಕ ಹೊಣೆ ಹೊರಿಸುತ್ತಿದ್ದರು.

ಪ್ರಸೂತಿ ಹಾಗೂ ಸ್ತ್ರೀರೋಗ ವಿಷಯಗಳಲ್ಲಿ ತಾವು ಎಂಥ ಜಟಿಲ ಶಸ್ತ್ರಚಿಕಿತ್ಸೆ ಮಾಡ ಬೇಕಾಗಿ ಬಂದಾಗಲೂ ಅದನ್ನು ತಮ್ಮೆಲ್ಲ ಸಹ ಕಾರಿಗಳಿಗೆ ವಿವರಿಸುತ್ತಿದ್ದರು. A good teacher never dies ಎಂಬ ಮಾತಿನ ಸಾಕಾರವೇ ಡಾ|| ಕೌಲಗುಡ್ಡ.

ಹಿಂದೂಸ್ತಾನಿ ಸಂಗೀತ ಹಾಗೂ ರಂಗ ಭೂಮಿ ಡಾಕ್ಟರರ ಮುಖ್ಯ ಒಲವುಗಳು. ಸಿತಾರ್ ವಾದನದಲ್ಲಿ ತುಂಬ ಆಸಕ್ತಿ. ರಾಗಗಳನ್ನು ಗುರುತಿಸುವುದರಲ್ಲಿ ಅವರು ತುಂಬ ನಿಪುಣರು. [illegible] ಗಂಧರ್ವ ಕಲಾಮಂದಿರಕ್ಕೆ ಅವರು ಮಿತ್ರರೊಂದಿಗೆ ಸೇರಿ ನೀಡಿದ 'ಕಾಣಿಕೆ'ಗಳ ಕುರಿತೂ ಇಲ್ಲಿ ಉಲ್ಲೇಖಿಸಲೇಬೇಕು. ಶ್ರೀರಂಗರ 'ಪ್ರಪಂಚ ಪಾಣಿಪತ್ತು', ಮುಂತಾದ ನಾಟಕಗಳಲ್ಲಿ ಅವರು ಸ್ವತಃ ಅಭಿನಯಿಸಿಯೂ ಇದ್ದರು. ಸಾಹಿತ್ಯ ಅವರ ಇನ್ನೊಂದು ಹವ್ಯಾಸ. ಸಾಹಿತ್ಯ ಚರ್ಚೆಗಳೆಂದರೆ ಇದ್ದ ಕೆಲಸ ಬಿಟ್ಟು ಮುಂದಾಗುತ್ತಿದ್ದರು. ಸಾಮಾನ್ಯವಾಗಿ ಡಾಕ್ಟರರು ಬರೆದುಕೊಟ್ಟಿದ್ದೆಲ್ಲ ಬ್ರಹ್ಮಲಿಪಿ ಎಂಬುದಿದೆ. ಆದರೆ ಡಾ|| ಕೌಲಗುಡ್ಡ ಸುಂದರ ವಾಗಿ ಸ್ಫುಟವಾಗಿ ಪ್ರಿಸ್ಕ್ರಿಪ್ಶನ್ ಬರೆಯು ತ್ತಿದ್ದರು. ಪಗಡೆಯಾಟದಲ್ಲಂತೂ ಅವರು ನಿಸ್ಸೀಮ.

ಸಮಾನತಾದೃಷ್ಟಿಗಿನ್ನೊಂದು ಹೆಸರು ಅವರು. ಅವರ ಒ.ಪಿ.ಡಿ.ಯಲ್ಲಿ ಶಿಸ್ತು ನೋಡುವಂತಿರುತ್ತಿತ್ತು. ಬಡವ ಬಲ್ಲಿದ ಭೇದವಿಲ್ಲದೆ ಎಲ್ಲರನ್ನೂ ಸಾಲಿನಲ್ಲಿ ನಿಂತು ಸರತಿಯಂತೆ ಬರಹೇಳುತ್ತಿದ್ದರು. ಒಮ್ಮೆ ಅವರ ಧರ್ಮಪತ್ನಿಯೇ ಉದ್ದದ ಕ್ಯೂದ ಕೊನೆಯಲ್ಲಿ ನಿಂತುಕೊಂಡದನ್ನು ನೋಡಿ ನಾನು ಅಚ್ಚರಿಪಟ್ಟಿದ್ದೇನೆ.

ಅವರ ಮಗಳು ವೈದ್ಯೆ. ಮಗ ಇಂಜನಿಯರ್. ತಾವು ಏರಿಸಿದ ಧ್ವಜವನ್ನು ಮಕ್ಕಳು ಹೆಮ್ಮೆ ಯಿಂದ ಹಾರಿಸುವುದನ್ನು ಅವರು ನೋಡ ಬೇಕಿತ್ತು. ಮೈಸೂರಲ್ಲಿ ಅಖಿಲಭಾರತ ಮಟ್ಟದ ಗೈನಾಕಾಲಜಿ ಕಾನ್ಫರೆನ್ಸ್ ಮಾಡಬೇಕೆಂಬುದು ಅವರ ಇಚ್ಛೆಯಾಗಿತ್ತು.

ಆದರೆ ಬಯಸುತ್ತಿದ್ದ 'ಅನಾಯಾಸೇನ ಮರಣಂ' ಅವರಿಗೆ ದೊರೆತುದು ವಿಧಿಯ ಇಚ್ಛೆಯೇ ಸರಿ. ಅವರನ್ನು ಬಾಚಿಕೊಂಡ ವಿಧಿ ಶ್ರೀಮಂತವಾಗಿರಬಹುದೇನೋ. ಆದರೆ ಸಾವಿರ ಸಾವಿರ ಸಂಖ್ಯೆಯಲ್ಲಿರುವ ಅವರ ಶಿಷ್ಯರು, ಅಭಿಮಾನಿಗಳು ಖಂಡಿತ ಬಡವಾಗಿ ದ್ದಾರೆ. ●

ಮಾತೃಭಾಷೆಯ ಬಳಕೆಯಲ್ಲಿ [illegible] ಉತ್ತಮ ಮಟ್ಟ, ಹಾಗೂ [illegible]

– [illegible]

ನೋವು ನಲಿವೆಂಬುದು ಹಗಲು ರಾತ್ರಿ



ದಿನ ದಿನವು ಅದೇ ಮೊರೆತ ಅದೇ ಕೊರೆತ
ಬೆಳಗುಬೈಗುಗಳೆಂಬ ಭರತ ಇಳಿತ
ಜೀವದುನ್ಮಾದದಲ್ಲಿ ತುದಿಯಿರದ ಚಲನೆಯಲಿ
ನೋವು ನಲಿವೆಂಬುವುದು ಹಗಲು ರಾತ್ರಿ

ಇದ್ದಲ್ಲೆ ಬಿದ್ದಲ್ಲೆ ಬದುಕು ಚಲಿಸುವುದಲ್ಲ
ಉರುಳುರುಳಿ ಸಾಗುತ್ತ ಹೆಜ್ಜೆಯನ್ನು ಮೂಡಿಸುತ
ಗೆಜ್ಜೆ ಪಲುಕಿನ ಉಲುಹ ಹೊರಹೊಮ್ಮಿಸುತ್ತ
ಸಾಗುತ್ತ ಸಾಗುವುದು ಸವಿಸೂಡ ನೀಡುವುದು
ಈಡುವುದು ಈಡಾಡುವುದು ಫಳಿಲು ಫಳಿಲೆಂದು

ಎಲ್ಲಿ ಎಲ್ಲಿ ಮಿಡಿಯಿತು ಭಾವ
ಹೇಗೆ ಹೇಳುವುದಯ್ಯೋ ಒಡಲ ಮಿಡಿತ
ಇಂದು ನಿನ್ನಿನದಲ್ಲ ನಾಳೆ ಆಚೆನ ನಾಳೆ
ನಿತ್ಯ ನಿರಂತರ

ಇಲ್ಲ ಅದಕೆ ಸಾವು ಬದುಕಿನ ಅಂತರ
ಈ ನಡುವೆ ಹುಟ್ಟಿರುವ ಹುಟ್ಟಲ್ಲೇ ಬೆಳೆದಿರುವ
ಎಲೆ ಜೀವ ಏನಿಷ್ಟು ದೊಂಬರಾಟ
ಪಕ್ಕಂತ ಪಡೆಯುವುದು ಗಕ್ಕಂತ ನುಂಗುವುದು

ನುಂಗು ಗಂಟಲಲ್ಲಿ ನುಂಗಲಾರದ ತುತ್ತು
ಇರಬಹುದೆ ತುತ್ತಿಗೂ ಒದಗುವಾಪತ್ತು
ಇಲ್ಲವೆಂದರೆ ನಾನು ಇರುವುದೆ ಸುಳ್ಳಲ್ಲ
ಹೌದೆಂದರೆ ನೀನು ಒಪ್ಪುವುದು ಬೇಕಲ್ಲ.

● ಪೊರೆಯಾಲ ದೊರೆಸ್ವಾಮಿ.

ಒಂದು ಸೈನಿಕ ಕಾರ್ಯಾಚರಣೆ

ನಾಗಾ

• ರೇಣುಕ •



ಹದಿನೈದು ದಿನಗಳ ಹಿಂದೆ ಬೆಂಗಳೂರಿನ ರೆಸಿಡೆನ್ಸಿ ರಸ್ತೆಯಲ್ಲಿರುವ ನಿವೃತ್ತ ಸೈನಿಕರ 'ಕಲ್ಯಾಣ ಮತ್ತು ಮರು ವಸತಿ' ಕಾರ್ಯಾಲಯಕ್ಕೆ ಹೋಗಿದ್ದಾಗ ಬಿಳಿಗೂದಲಿನ ಮಧ್ಯ ವಯಸ್ಕನೊಬ್ಬ ನನ್ನ ಗುರುತು ಹಿಡಿದು ಮಾತನಾಡಿಸಿದ. ನನಗೆ ಆತನ ಗುರುತು ಸಿಗಲು ಕೆಲವೇ [illegible] ಬೇಕಾದವು.

'ಕೆಂಪೇಗೌಡ ಸಾರ್. ಮರ್ತುಬಿಟ್ರಾ' ತನ್ನ ಹೆಸ[illegible] ಘಟನೆ[illegible]ಗಳ ನೆನಪುಗಳು ಮನಸ್ಸಿನ ಭಿತ್ತಿಯ ಮೇಲೆ ಮೂಡತೊಡಗಿದವು. ಕೆಂಪೇಗೌಡನನ್ನು ನಾನು ಕೊನೆಯ ಸಲ ಕಂಡದ್ದು ಇಪ್ಪತ್ತು ಮೂರು ವರ್ಷಗಳ ಹಿಂದೆ. ಆಗಿನ್ನೂ ಆತನ ತಲೆಗೂದಲು ಕಪ್ಪಾಗಿದ್ದು ದಷ್ಟಪುಷ್ಟನಾಗಿದ್ದ.


ಇಬ್ಬರೂ ಸಮೀಪದಲ್ಲಿದ್ದ ಕಾಕಾ ಹೋಟೆಲಿಗೆ ಹೋಗಿ ಟೀ ಕುಡಿಯತೊಡಗಿದೆವು. ಮಿಲಿಟರಿಯಲ್ಲಿ ಕುಡಿಯುತ್ತಿದ್ದ ಗಟ್ಟಿ ಟೀ ನೆನೆಸಿಕೊಂಡು "ಇನ್ನೆಲ್ಲಿ ಸಾರ್ ಅಂಥ ಕಾಲ ನಾವು ನೋಡ್ತೋಂದು" ಎಂದು ನೊಂದು ಸು[illegible] [illegible] ಕ್ಷೇಮ ಸಮಾಚಾರದ [illegible]

ಗುಡ್ಡಗಾಡಿನಲ್ಲಿ.....

ಮಾತು ಈ ಮಾತು ಆಡುತ್ತಾ, ತಾನು ಸೇನೆಯಿಂದ ನಿವೃತ್ತಿ ಹೊಂದಿ ಹುಟ್ಟೂರಾದ ಮುತ್ತುಗದಹಳ್ಳಿಯಲ್ಲಿ ಬೇಸಾಯಗಾರನಾಗಿ ನೆಲೆಯೂರಿದ್ದನ್ನು ಹೇಳಿದ. ನಾಗಾ ಗುಡ್ಡಗಾಡಿನಲ್ಲಿ ಜೊತೆಯಾಗಿ ಕಳೆದ ದಿನಗಳು. ಭಾಗವಹಿಸಿದ ಸೈನಿಕ ಕಾರ್ಯಾಚರಣೆಗಳನ್ನು ಇಬ್ಬರೂ ಮೆಲುಕು ಹಾಕಿದೆವು. ಅನಂತರ ಗೌಡ ತನ್ನೂರಿನ ಬಸ್ ಹಿಡಿಯಲು ತಡವಾಗುವುದೆಂದು ವಿದಾಯ ಹೇಳಿ ಹೊರಟುಹೋದ.

'ಬಿ' ಕಂಪನಿಯಲ್ಲಿ ನಾನು ನಾಯಕ ಆಗಿದ್ದಾಗ ಕೆಂಪೇಗೌಡ ಸಿಪಾಯಿ ಆಗಿದ್ದ. ನಾವಿಬ್ಬರೂ ನಾಗಾ ಗುಡ್ಡಗಾಡಿನಲ್ಲಿ ಭಾಗವಹಿಸಿದ್ದ ಸೈನಿಕ ಕಾರ್ಯಾಚರಣೆಯೊಂದರಲ್ಲಿ ಲೆಫ್ಟಿನೆಂಟ್ ಉಧೇಸಿಂಗರಿಗೆ 'ಅಶೋಕ ಚಕ್ರ' ಪ್ರಶಸ್ತಿ ದೊರೆತಿತ್ತು. ಆ ಕಾರ್ಯಾಚರಣೆಯ ನೆನಪುಗಳು ಮರುಕಳಿಸತೊಡಗಿದವು.

ಇಪ್ಪತ್ತೈದು ವರ್ಷಗಳ ಹಿಂದಿನ ಪ್ರಕರಣ. ಸಾಲು ಬೆಟ್ಟಗಳ ಮೇಲೆ ಸಂಜೆಯ ಮಳೆ 'ಧೋ' ಎಂದು ಧಾರಾಕಾರವಾಗಿ ಸುರಿಯುತ್ತಿತ್ತು. ಅದೇ ಸಮಯದಲ್ಲಿ ಲಜಾಮಿ ಹಳ್ಳಿಯ ಗಾಪ್‌ನರಬುರ (ಗ್ರಾಮದ ಮುಖಂಡ) ಅಕಲುಸೇಮ ಜಿಬಿರು ಚಾಪೆಯ ಗೊಪ್ಪೆಯನ್ನು ಹೊದ್ದು ಈಟಿಗಳನ್ನು ಹಿಡಿದಿದ್ದ ಇಬ್ಬರು ನಾಗಾ ಬಂಟರೊಂದಿಗೆ ಮಳೆಯಲ್ಲೇ ನೆನೆ



ಯುತ್ತಾ ಪೊಗೊಬೊಟೊ ಗುಡ್ಡದ ಮೇಲಿನ ನಮ್ಮ ಶಿಬಿರಕ್ಕೆ ಬಂದ. ಅವರ ಮುಖಗಳ ಮೇಲೆ ಗಾಬರಿ, ಕಳವಳಗಳು ಎದ್ದು ಕಾಣುತ್ತಿದ್ದುವು. ಶಿಬಿರದ ದ್ವಾರದಲ್ಲಿ ಕಾವಲಿದ್ದ ಸಿಪಾಯಿಗೆ ಶಿಬಿರಾಧಿಕಾರಿಯನ್ನು ಕೂಡಲೇ ಕಾಣಬೇಕಾಗಿರುವುದಾಗಿ ಅವರು ತಿಳಿಸಿದರು. ನಾಗಾ ವಿದ್ರೋಹಿಗಳ ಚಲನವಲನಗಳ ಬಗ್ಗೆ ಅಕಲು ಸೇಮ ಆಗಾಗ ಉಪಯುಕ್ತ ಮಾಹಿತಿಗಳನ್ನು ನಮಗೆ ಒದಗಿಸುತ್ತಿದ್ದ.

ಕಾವಲು ಸಿಪಾಯಿ ಅಕಲು ಸೇಮನನ್ನು ಅವನೊಡನಿದ್ದ 'ದುಭಾಷಿ' ಯೊಂದಿಗೆ ಶಿಬಿರಾಧಿಕಾರಿಯ ಬಳಿ ಕರೆದುಕೊಂಡು ಹೋದ. ಶಿಬಿರಾಧಿಕಾರಿಯನ್ನು ಕಂಡು ಬಾಗಿ ನಮಸ್ಕರಿಸಿದ. ಅಕಲು ಸೇಮ ತಾನು ತಂದಿದ್ದ ಸಮಾಚಾರವನ್ನು ತಿಳಿಸಿದ. ಅವನೊಡನಿದ್ದ ದುಭಾಷಿ ಅಕಲು ಹೇಳಿದುದನ್ನು ಹಿಂದಿಯಲ್ಲಿ ಹೇಳಿದ. ಸುಮಾರು ಇಪ್ಪತ್ತು ಮಂದಿ ವಿದ್ರೋಹಿಗಳ ಗುಂಪೊಂದು ಲಜಾಮಿ ಗ್ರಾಮವನ್ನು ಮುತ್ತಿ ಮನೆಗಳನ್ನು ಲೂಟಿ ಮಾಡಿ ಸಿಕ್ಕಿದ ನಗನಾಣ್ಯ ದವಸಧಾನ್ಯಗಳನ್ನು ದೋಚಿಕೊಂಡು ಸಿರುಹಿ ಗುಡ್ಡದಭಿಮುಖವಾಗಿ ಹೋಗಿದ್ದರಂತೆ. ಅಲ್ಲದೆ ಗ್ರಾಮದ ಯುವಕರು ರಾತ್ರಿಯ ಸಮಯದಲ್ಲಿ ತಂಗುವ 'ಮೊರಂಗ್'ನಿಂದ ಇಬ್ಬರು ಯುವಕರನ್ನು ಅಪಹರಿಸಿಕೊಂಡು ಹೋಗಿರುವುದಾಗಿಯೂ ಅಕಲು ಸೇಮ ತಿಳಿಸಿದ. ಸುರಿಯುತ್ತಿರುವ ಮಳೆಯಲ್ಲಿ ಲೂಟಿಯನ್ನು ಹೊತ್ತು ವಿದ್ರೋಹಿಗಳು ಬಹುದೂರ ಹೋಗಿರಲಾರರೆಂದೂ, ಆ ದಿನ ರಾತ್ರಿ ಎಲ್ಲಾದರೂ ತಂಗಿದ್ದು ಬೆಳಗಿನ ಜಾವದಲ್ಲಿ ತಮ್ಮ ಪಯಣವನ್ನು ಮುಂದುವರಿಸಬಹುದೆಂದೂ ಅಕಲು ಸೇಮ ಹೇಳಿದ. ಅವರು ಲೂಟಿ ಮಾಡಿದ ವಸ್ತುಗಳಲ್ಲಿ ಒಂದು ಮೂಟೆ ಅಕ್ಕಿಯೂ ಇದ್ದುದರಿಂದ ಅದನ್ನೆಲ್ಲಾ ಹೊತ್ತು ವಿದ್ರೋಹಿಗಳು ಬಹಳ ದೂರ ಸಾಗಿರಲಾರರೆಂದು ಊಹಿಸಿದ ಶಿಬಿರಾಧಿಪತಿ, ವಿದ್ರೋಹಿಗಳನ್ನು ಹಿಂಬಾಲಿಸಲು ಕೂಡಲೆ ಲೆಫ್ಟಿನೆಂಟ್ ಉದೇಸಿಂಗರ ನೇತೃತ್ವದಲ್ಲಿ ಒಂದು ಪ್ಲಾಟೂನನ್ನು ಕಳುಹಿಸಿದರು.

ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ಸುಮಾರು ನಲವತ್ತು ಮಂದಿಯಿದ್ದ ನಮ್ಮ ಪ್ಲಾಟೂನು ವಿದ್ರೋಹಿಗಳು ಸಾಗಿದ ಜಾಡನ್ನು ಅರಸುತ್ತಾ ಸಿರುಹಿ ಗುಡ್ಡಾಭಿಮುಖವಾಗಿ ಸಾಗಿತು. ನಮಗೆ ಮಾರ್ಗದರ್ಶನ ಮಾಡಲು ಲಜಾಮಿ ಹಳ್ಳಿಯ ಗಾವ್‌ನಬುರ್ ಒಬ್ಬ ನಾಗಾಬಂಟನನ್ನು ಕಳುಹಿಸಿದ್ದ.

'ಲಜಾಮಿ' ಗುಡ್ಡದ ಮೇಲಿನ ಸುಮಾರು ಒಂದು ಸಾವಿರ ಜನ ಸಂಖ್ಯೆಯ ಗ್ರಾಮ.' ನಮ್ಮ ಶಿಬಿರಕ್ಕೂ ಆ ಗ್ರಾಮಕ್ಕೂ ಸುಮಾರು ಮೂರು ಮೈಲುಗಳ ಅಂತರ. ನಮ್ಮ ಪಡೆ ನಾಗಾ ಗುಡ್ಡಗಾಡಿಗೆ ಬಂದು ಆರು ತಿಂಗಳು ಕಳೆದಿತ್ತು. ಅಂದಿನಿಂದಲೂ ನಾವು ಪೊಗೊಬೊಟೊವಿನಲ್ಲಿಯೇ ಇದ್ದೆವು. ನಮ್ಮ ಶಿಬಿರಕ್ಕೆ ಸಮೀಪವಾಗಿ ಲಜಾಮಿ, ತಮಕದಿಮ, ಕಿದಿಮಾ ಗ್ರಾಮಗಳಿದ್ದವು. ಅಲ್ಲಿನ ನಾಗಾ ಜನರು ಬೆಟ್ಟದ ಇಳಿಜಾರನ್ನು ಕಡಿದು ಮಾಡಿದ ಸಮತಟ್ಟಾದ ಸ್ಥಳಗಳಲ್ಲಿ ಭತ್ತವನ್ನು ಬೆಳೆಯುತ್ತಿದ್ದರು. ಲಜಾಮಿ ಗ್ರಾಮದಲ್ಲಿ ಸಹಕಾರ ಸಂಘವೊಂದಿತ್ತು. ಸುತ್ತಲ ಹತ್ತಾರು ಹಳ್ಳಿಗಳ ನಾಗಾಗಳು ಮನೆಯಲ್ಲಿ ನೇಯುತ್ತಿದ್ದ ಬಣ್ಣಬಣ್ಣದ ಶಾಲುಗಳನ್ನು ಮತ್ತು ಅಡವಿಯಲ್ಲಿ ಧೂಪದ ಮರಗಳಿಂದ ಸಂಗ್ರಹಿಸಿದ ಸಾಂಬ್ರಾಣಿ, ಜೇನು ತುಪ್ಪ ಮೊದಲಾದ ಅಡವಿಯ ಉತ್ಪನ್ನಗಳನ್ನು ಸಹಕಾರಿ ಸಂಘದ ಮೂಲಕ ಇಂಫಾಲ ಮತ್ತು ದಿಮಾಪುರಗಳಲ್ಲಿ ವಿಲೇವಾರಿ ಮಾಡುತ್ತಿದ್ದುದರಿಂದ ಸೇಮ ಪ್ರದೇಶದ ಇತರೆ ಹಳ್ಳಿಗಳಿಗಿಂತ ಲಜಾಮಿ ಗ್ರಾಮ ಆರ್ಥಿಕವಾಗಿ ಹೆಚ್ಚು ಸುಸ್ಥಿತಿಯಲ್ಲಿತ್ತು. ಅಲ್ಲದೆ ಈ ಪ್ರದೇಶದ ಹಳ್ಳಿಗರು ಫಾಪಿಸಾಂಗ್, ಲೋಥಾ, ಅವೋ, ಅಂಗಾಮಿ ನಾಗಾಗಳಂತೆ ವಿದ್ರೋಹಿಗಳಿಗೆ ಹೆಚ್ಚು ಇಂಬು ಕೊಡುತ್ತಿರಲಿಲ್ಲ.

ನಮ್ಮ ಪಡೆ ನಾಗಾಲ್ಯಾಂಡಿನ ಸೇಮ ಪ್ರದೇಶಕ್ಕೆ ಬಂದಾಗಿನಿಂದಲೂ ನಮ್ಮ ವ್ಯಾಪ್ತಿಗೆ ಒಳಪಟ್ಟ ಈ ಗ್ರಾಮಗಳು ನಾಗಾ ವಿದ್ರೋಹಿಗಳ ದಾಳಿಗೆ ಸಿಲುಕಿರಲಿಲ್ಲ. ಅನಿರೀಕ್ಷಿತವಾಗಿ ಹಗಲಿನಲ್ಲೇ ನಡೆದ ಲಜಾಮಿ ಹಳ್ಳಿಯ ಕೊಳ್ಳೆಯಿಂದ ಸುತ್ತಮುತ್ತಲಿನ ಗ್ರಾಮಗಳ ನಾಗಾಗಳು ಭಯಗ್ರಸ್ತರಾಗಿದ್ದರು.

ನಾಗಾ ವಿದ್ರೋಹಿಗಳು ಲಜಾಮಿ ಹಳ್ಳಿಯನ್ನು ಕೊಳ್ಳೆ ಹೊಡೆದು ಎರಡು ಗಂಟೆಗಳಿಗೂ ಹೆಚ್ಚು ಸಮಯವಾಗಿರಲಿಲ್ಲ. ಅವರು ಸಾಗಿ ಹೋದ ಕಾಡು ದಾರಿಯಲ್ಲಿ ಅಲ್ಲಲ್ಲಿ

ಹೆಜ್ಜೆಯ ಗುರುತುಗಳು ಸ್ಪಷ್ಟವಾಗಿ ಮೂಡಿದ್ದುವು. ಆದರೆ ರಾತ್ರಿಯಲ್ಲಿ ಹೆಜ್ಜೆಯ ಗುರುತುಗಳನ್ನೇ ಹುಡುಕುತ್ತಾ ವಿದ್ರೋಹಿಗಳನ್ನು ಹಿಂಬಾಲಿಸುವುದು ವ್ಯವಹಾರಿಕವಾಗಿರಲಿಲ್ಲ. ಸತತವಾಗಿ ಸುರಿಯುತ್ತಿದ್ದ ಮಳೆ ನಮ್ಮ ಮುನ್ನಡೆಯನ್ನು ಕುಂಠಿತಗೊಳಿಸುತ್ತಿತ್ತು. ವಿದ್ರೋಹಿಗಳು ಸಹ ಸುರಿಯುವ ಮಳೆಯಲ್ಲಿ ನೆನೆಯುತ್ತಾ ಬಹುದೂರ ಹೋಗಿರಲಾರರೆಂದು ಊಹಿಸಿದೆವು.

ಕತ್ತಲೆ ಮುಸುಕಿದಂತೆ ಆ ಗೊಂಡಾರಣ್ಯದಲ್ಲಿ ದಾರಿ ಹುಡುಕಿಕೊಂಡು ಮುಂದುವರಿಯುವುದೇ ಕಷ್ಟವಾಯಿತು. ನಮ್ಮ ಜೊತೆಯಲ್ಲಿದ್ದ ನಾಗಾ ಮಾರ್ಗದರ್ಶಿ ನಮಗೆ ಮಾರ್ಗದರ್ಶನ ಮಾಡುತ್ತಿದ್ದ. ಆ ಸಮಯದಲ್ಲಿ ಆತನಿಲ್ಲದಿದ್ದರೆ ನಾವು ಗೊತ್ತು ಗುರಿಯಿಲ್ಲದೆ ಎತ್ತ ಹೋಗಿ ಸೇರುತ್ತಿದ್ದೆವೋ! ಹಾದಿಯಲ್ಲಿ ವಿದ್ರೋಹಿಗಳ ಬಗ್ಗೆ ಖಚಿತವಾದ ಮಾಹಿತಿಗಳನ್ನು ನೀಡಲು ನಮಗೆ ಯಾರೂ ಸಿಗುವ ಸಾಧ್ಯತೆ ಇರಲಿಲ್ಲ. ಮಳೆಯಲ್ಲಿ ನೆನೆದು ಚಳಿಯಿಂದ ನಡುಗುತ್ತಿದ್ದ ನಮ್ಮ ಸೈನಿಕರಿಗೆ ಲೆಫ್ಟಿನೆಂಟ್ ಉಧೇಸಿಂಗರು ತಮ್ಮ ಮಾತುಕತೆಗಳಿಂದ ಹುರಿದುಂಬಿಸುತ್ತಾ ಅಡವಿಯಲ್ಲಿ ಮುನ್ನಡೆದಿದ್ದರು.

ಹಾದಿಯಲ್ಲಿ ಚಿಕ್ಕ ಗುಡ್ಡವೊಂದು ಎದುರಾಯಿತು. ಗುಡ್ಡದ ಮೇಲೆ ಒಂದು ಕಡೆ ಬೆಂಕಿ ಉರಿಯುತ್ತಿದ್ದುದು ಕಂಡು ಬಂತು. ಜೀರುಂಡೆಗಳ ವಿಚಿತ್ರ ದನಿಯ ಸದ್ದಿನ ಏಕತಾನದ ನಡುವೆ ಆಗಾಗ ನರಿಗಳ ಊಳು ಕೇಳಿಬರುತ್ತಿತ್ತು. ಸಮೀಪದ ಕಣಿವೆಯಲ್ಲಿ ಕಾಡಾನೆಯೊಂದು ಭಯಂಕರವಾಗಿ ಘೀಳಿಟ್ಟಾಗ ನಮ್ಮ ಹೃದಯಗಳು ಕಂಪಿಸಿದವು. ನಾವೆಲ್ಲಾ ಬಹು ಎಚ್ಚರದಿಂದ ಒಬ್ಬರ ಹಿಂದೆ ಒಬ್ಬರಂತೆ ನಡೆಯುತ್ತಾ ಗುಡ್ಡದ ನಡುಭಾಗಕ್ಕೆ ಬಂದಾಗ ಚಾಚು ಬಂಡೆಯೊಂದರ ಕೆಳಗೆ ಬೆಂಕಿ ಉರಿಯುತ್ತಿತ್ತು. ಅರೆಬೆತ್ತಲಾಗಿದ್ದ ಇಬ್ಬರು ನಾಗಾಗಳು ರೆಕ್ಕೆ ಪುಕ್ಕಗಳನ್ನು ಕಿತ್ತ ದೊಡ್ಡ ಹದ್ದೊಂದನ್ನು ಉದ್ದನೆಯ ಕೋಲೊಂದರ ನಡುವೆ ಕಟ್ಟಿದ್ದರು. ಇಬ್ಬರೂ ಕೋಲಿನ ಒಂದೊಂದು ಕೊನೆಯನ್ನು ಹಿಡಿದುಕೊಂಡು ತಿರುಗಿಸುತ್ತಾ ಉರಿಯುತ್ತಿದ್ದ ಬೆಂಕಿಗೆ ಅದನ್ನೊಡ್ಡಿ ಹದವಾಗಿ ಬೇಯಿಸುತ್ತಿದ್ದರು. ಬಂಡೆಯ ಮೇಲೆ ಅವರ ಬಿಲ್ಲು, ಬಾಣ, ಭರ್ಜಿಗಳಿದ್ದವು.

ನಮ್ಮ ಸೈನಿಕರನ್ನು ಕಂಡು ಅವರು ಗಾಬರಿಯಿಂದ ಎದ್ದು ನಿಂತರು. ಲೆಫ್ಟಿನೆಂಟ್ ಉಧೇಸಿಂಗರು ನಾಗಾಗಳಿಗೆ ಬಿಸ್ಕತ್ತಿನ ಪೊಟ್ಟಣ ಮತ್ತು ಸಿಗರೇಟುಗಳನ್ನು ಕೊಟ್ಟಾಗ ಅವರಿಗೆ ಸಂತೋಷವಾಯಿತು. ನಮ್ಮ ನಾಗಾ ಮಾರ್ಗದರ್ಶಿ ಅವರೊಡನೆ ಸೇಮಾ ಭಾಷೆಯಲ್ಲಿ ಮಾತನಾಡಿದ. ಅವರು ಹಕ್ಕಿಗಳ ಬೇಟೆಗೆಂದು ಬಂದಿದ್ದ ಆವೋ ನಾಗಾ ಆದಿವಾಸಿಗಳೆಂದು ತಿಳಿಯಿತು. ಉಧೇಸಿಂಗರ ಸೂಚನೆಯಂತೆ ನಮ್ಮ ಮಾರ್ಗದರ್ಶಿ ಬೇಟೆಗಾರರಿಬ್ಬರನ್ನು ಕುರಿತು, ಕೆಲವು ತಾಸುಗಳ ಹಿಂದೆ ನಾಗಾ ವಿದ್ರೋಹಿಗಳೇನಾದರೂ ಹಾದು ಹೋದರೆ? ಎಂದು ವಿಚಾರಿಸಿದಾಗ ಅವರ ಮುಖಗಳು ಇದ್ದಕ್ಕಿದ್ದಂತೆ ಕಳೆಗೆಟ್ಟು ಉತ್ತರಿಸಲು ಅನುಮಾನಿಸಿದರು. ಅನಂತರ ನಮ್ಮ ಮಾರ್ಗದರ್ಶಿ ಅವರಿಬ್ಬರನ್ನು ನಯವಾಗಿ ಮನವೊಲಿಸಿದಾಗ ಅವರು ಬಾಯಿಬಿಟ್ಟರು. ಕೆಲವು ತಾಸುಗಳ ಮೊದಲು ಹಕ್ಕಿಗಳ ಗೂಡಿಗಾಗಿ ಅವರು ಕಾಡಿನಲ್ಲಿ ಅಲೆದಾಡುತ್ತಿದ್ದಾಗ ಬಂದೂಕು ಧಾರಿಗಳಾದ, ವಿದ್ರೋಹಿಗಳ ಗುಂಪೊಂದು ಎದುರಾಯಿತೆಂದೂ, ತಮ್ಮಿಬ್ಬರ ಮೇಲೆ ಅಕ್ಕಿಯ ಮೂಟೆಗಳನ್ನು ಹೊರಿಸಿಕೊಂಡು ಎರಡು ಮೈಲು ದೂರದ ಸಿರುಹಿ ಗುಡ್ಡದ ಬಳಿಗೆ ಕರೆದುಕೊಂಡು ಹೋದರೆಂದೂ, ಗುಡ್ಡದ ಇಳಿಜಾರಿನಲ್ಲಿನ 'ಬಾಷಾ' (ದಪ್ಪ ಮಣ್ಣಿನ ಗೋಡೆಗಳ ಗುಡಿಸಲು)ಗಳಲ್ಲಿ ಅವರು ತಂಗಿರುವುದಾಗಿ ತಿಳಿಸಿದರು. ನಮಗೆ ಅಗತ್ಯವಾದ ಮಾಹಿತಿ ಸುಲಭವಾಗಿ ದೊರೆತಂತಾಯಿತು.

ಅಗಲೆ ಮಧ್ಯರಾತ್ರಿ ಕಳೆದಿತ್ತು. ಬೇಟೆಗಾರರಿಬ್ಬರು ತೋರಿಸಿದ ಹಾದಿಯಲ್ಲಿ ವೇಗವಾಗಿ ನಡೆಯಲಾರಂಭಿಸಿದೆವು. ನಾವು ವೇಗವಾಗಿ ನಡೆದಷ್ಟೂ ಪೋಟಿಯಂತೆ ಮಳೆ ಜೋರಾಗಿ ಬೀಳತೊಡಗಿತು. ಎರಡು ಚಿಕ್ಕ ಗುಡ್ಡಗಳನ್ನು ಹತ್ತಿಳಿದು, ಒಂದು ಎತ್ತರವಾದ ಗುಡ್ಡವನ್ನು ಹತ್ತಲಾರಂಭಿಸಿದೆವು. ಆ ಗುಡ್ಡ ಒತ್ತಾಗಿ ಬೆಳೆದ ಗಿಡಮರಗಳಿಂದ ಆವೃತವಾಗಿತ್ತು. ಬೇಟೆಗಾರರು ತಿಳಿಸಿದ ಸಿರುಹಿಗುಡ್ಡ ಅದೇ ಆಗಿತ್ತು. ಅತಿ ಎಚ್ಚರದಿಂದ ಸಪ್ಪಳ ಮಾಡದೆ ಒಬ್ಬರ

ಒಂದೆ ಒಬ್ಬರಂತೆ ಸಾಗುತ್ತಾ ಬೆಟ್ಟದ ತುದಿಯನ್ನು ತಲುಪಿದೆವು. ಬೆಟ್ಟದ ಮತ್ತೊಂದು ಬದಿಯ ಇಳಿಜಾರಿನಲ್ಲಿ ಕಾಡನ್ನು ಕಡಿದು ಮಾಡಿದ ಗದ್ದೆಯ ತುಂಡುಗಳು ಕಂಡು ಬಂದವು. ಕೆಳಗಿನ ಕಣಿವೆಯಲ್ಲಿ ಚಿಕ್ಕ ತೊರೆಯೊಂದು ಹರಿಯುತ್ತಿತ್ತು. ಕಾಡಿಗೆ ಹೊಂದಿಕೊಂಡಂತೆ ಗದ್ದೆಗಳ ಅಂಚಿನಲ್ಲಿ ಹತ್ತು ಹದಿನೈದು ಗುಡಿಸಲುಗಳು ಕಂಡು ಬಂದವು. ಬಿದಿರಿನ ಛಾವಣಿಗೆ ಆನೆ ಹುಲ್ಲು ಹೊದಿಸಿದ್ದ ದಪ್ಪ ಮಣ್ಣಿನ ಗೋಡೆಗಳ ಆ ಗುಡಿಸಲುಗಳನ್ನು ನಾಗಾಗಳು 'ಬಾಷಾ' ಎಂದು ಕರೆಯುತ್ತಿದ್ದರು. ಬೇಸಾಯದ ಕಾಲದಲ್ಲಿ ಬಿಸಿಲು ಮಳೆಗಳಿಂದ ಆಗಾಗ ವಿಶ್ರಾಂತಿ ಪಡೆಯಲು ಬೆಳೆಯ ಕಾವಲು ಕಾಯಲು 'ಬಾಷಾ'ಗಳನ್ನು ಗದ್ದೆಗಳ ಅಂಚಿನಲ್ಲಿ ನಿರ್ಮಿಸುತ್ತಿದ್ದರು.

ಲೆಫ್ಟಿನೆಂಟ್ ಉಧೇಸಿಂಗರು ಬೇಟೆಗಾರರು ಹೇಳಿದ ಗುಡಿಸಲುಗಳು ಇವುಗಳೇ ಇರಬಹುದೆಂದು ಊಹಿಸಿ ದುರ್ಬಿನುಗಳ ಮೂಲಕ ಗುಡಿಸಲುಗಳೆಡೆಗೆ ನೋಡಿದಾಗ ಯಾವುದೇ ಚಲನವಲನಗಳು ಕಂಡು ಬರಲಿಲ್ಲ. ಆಗ ಬೆಳಗಿನ ಜಾವದ ಸಮಯ. ವಿದ್ರೋಹಿಗಳು ಗುಡಿಸಲಿನಲ್ಲಿ ನಿದ್ರಿಸುತ್ತಿರಬಹುದೆಂದು ಊಹಿಸಿದೆವು. ನಮ್ಮ ಪ್ಲಾಟೂನನ್ನು ಎರಡು ಭಾಗಗಳನ್ನಾಗಿ ವಿಭಾಗಿಸಿ ಗುಡಿಸಲುಗಳನ್ನು ಎರಡೂ ಕಡೆಯಿಂದ ಸುತ್ತುವರಿಯಬೇಕೆಂದು ನಿರ್ಧರಿಸಲಾಯಿತು. ನಮ್ಮ ಪ್ಲಾಟೂನಿನ ತುಕಡಿಯೊಂದು ಬೆಟ್ಟ ಇಳಿದು ಸ್ವಲ್ಪ ದೂರು ಬಳಸು ದಾರಿಯಲ್ಲಿ ನಡೆದು ಕಣಿವೆಯ ಮೇಲ್ಭಾಗದಲ್ಲಿ ಆಯಕಟ್ಟಿನ ತಾಣದಲ್ಲಿ ಕಾರ್ಯಾಚರಣೆಗೆ ಸಿದ್ಧವಾಗಿ ನಿಂತಿತು. ಬೆಟ್ಟದ ಮೇಲಿದ್ದ ನಮ್ಮ ತುಕಡಿ ನೇರವಾಗಿ ಗುಡಿಸಲುಗಳ ಮೇಲೆ ಆಕ್ರಮಣವೆಸಗಿದೊಡನೆ ಕೆಳಗಿನ ತುಕಡಿಯೂ ದಾಳಿಯನ್ನಾರಂಭಿಸಿ ವಿದ್ರೋಹಿಗಳನ್ನು ಸೆರೆ ಹಿಡಿಯಬೇಕೆಂದು ನಿರ್ಧರಿಸಲಾಯಿತು.

ಗುಡ್ಡದ ತುದಿಯಲ್ಲಿದ್ದ ನಮ್ಮ ತುಕಡಿ ಗುಡಿಸಲುಗಳಿಗೆ ಅಭಿಮುಖವಾಗಿ ಎತ್ತರದಿಂದ ಇಳಿಯತೊಡಗಿತು. ಕೆಲವೇ ಕ್ಷಣಗಳಲ್ಲಿ ಗುಡಿಸಲುಗಳ ಪಕ್ಕದಲ್ಲಿನ ಮರಗಳ ಮೇಲಿನ ಅಟ್ಟಣೆಗಳಿಂದ ನಮ್ಮತ್ತ ಒಂದೇ ಸಮನೆ ಗುಂಡುಗಳು ಹಾರತೊಡಗಿ ನಾವೆಲ್ಲಾ ನೆಲಕ್ಕುರುಳಿದೆವು. ತಕ್ಷಣ ಬಂಡೆಗಳ ಮತ್ತು ದೊಡ್ಡ ಮರಗಳ ಮರೆಯಲ್ಲಿ ಅಡಗಿಕೊಂಡು ಗುಡಿಸಲುಗಳ ಮೇಲೆ ಗುಂಡು ಹಾರಿಸಲಾರಂಭಿಸಿದೆವು. ಅಟ್ಟಣೆಯ ಮೇಲೆ ಕಾವಲಿದ್ದ ವಿದ್ರೋಹಿಗಳ ವೀಕ್ಷಕ ನಮ್ಮ ಚಲನವಲನಗಳನ್ನು ಗಮನಿಸಿದನೆಂದು ಅನಂತರ ತಿಳಿದುಬಂತು. ಗುಂಡಿನ ಸದ್ದು ಕೇಳಿದೊಡನೆ ಗುಡಿಸಲಿನೊಳಗೆ ಮಲಗಿದ್ದ ವಿದ್ರೋಹಿಗಳು ಗಾಬರಿಯಿಂದ ತಮ್ಮ ಆಯುಧಗಳೊಂದಿಗೆ ಗುಡಿಸಲುಗಳಿಂದ ಹೊರಬಿದ್ದು ಬೆಟ್ಟದ ಕೆಳಗಿನ ಕಣಿವೆಯತ್ತ ಓಡಲಾರಂಭಿಸಿದಾಗ ಇಳಿಜಾರಿನಲ್ಲಿ ಸಿದ್ಧವಾಗಿದ್ದ ನಮ್ಮ ಮತ್ತೊಂದು ತುಕಡಿಯ ಆಕ್ರಮಣಕ್ಕೆ ತುತ್ತಾಗಿ ಅಡಕತ್ತರಿಯಲ್ಲಿ ಸಿಕ್ಕಿಕೊಂಡಂತಾಗಿ ಗಾಬರಿಗೊಂಡರು. ಪಲಾಯನ ಮಾಡಲು ಅವರಿಗೆ ಬೇರೆದಾರಿಯೇ ಇರಲಿಲ್ಲ. ಆ ಸಮಯದಲ್ಲಿ ವಿದ್ರೋಹಿಗಳ ಮುಖಂಡ ತನ್ನ ಹಿಂಬಾಲಕರನ್ನು ಹುರಿದುಂಬಿಸುತ್ತಿದ್ದುದು ಮೇಲಿದ್ದ ನಮಗೆ ಕಾಣಿಸಿತು. ವಿದ್ರೋಹಿಗಳ ಗುಂಪು ಎರಡು ತುಕಡಿಗಳಾಗಿ ಬೆಟ್ಟದ ಮೇಲಿನ ಮತ್ತು ಕೆಳಗಿನ ನಮ್ಮೆರಡು ಪಡೆಗಳನ್ನು ಧೈರ್ಯದಿಂದ ಎದುರಿಸಲಾರಂಭಿಸಿತು.

ಲೆಫ್ಟಿನೆಂಟ್ ಉಧೇಸಿಂಗರು ಸಾಧ್ಯವಾದಷ್ಟು ರಕ್ತಪಾತವಿಲ್ಲದೆ ವಿದ್ರೋಹಿಗಳನ್ನು ಸೆರೆ ಹಿಡಿಯಬೇಕೆಂದು ಉದ್ದೇಶಿಸಿ ಮಾರಕಾಸ್ತ್ರಗಳನ್ನು ಪ್ರಯೋಗಿಸುವುದನ್ನು ತಡೆಹಿಡಿದಿದ್ದರು. ಕ್ರಮೇಣ ಕತ್ತಲೆಯ ತೆರೆ ಸರಿಯತೊಡಗಿದಾಗ ವಿದ್ರೋಹಿಗಳು ಎಡಬಲಗಳಲ್ಲಿದ್ದ ಬಿದಿರು ಮೆಳೆಗಳತ್ತ ಸರಿಯತೊಡಗಿದರು. ವಿಳಂಬ ಮಾಡುವುದರಿಂದ ವಿದ್ರೋಹಿಗಳಿಗೆ ತಪ್ಪಿಸಿಕೊಳ್ಳಲು ಅನುಕೂಲವಾಗುವುದೆಂದು ಊಹಿಸಿ ಉಧೇಸಿಂಗರು ತಮ್ಮ ವೈಯಕ್ತಿಕ ಸುರಕ್ಷತೆಯನ್ನು ಅಲಕ್ಷಿಸಿ 'ಬಯೊನೆಟ್ ಚಾರ್ಜ್' ಮಾಡಲು ತುಕಡಿಗೆ ಆಜ್ಞೆ ಇತ್ತು ತಾವೇ ಎಲ್ಲರಿಗೂ ಮುಂದಾಗಿ ಮಿಂಚಿನ ವೇಗದಲ್ಲಿ ಗುಡಿಸಲುಗಳತ್ತ ಓಡತೊಡಗಿದರು. ನಮ್ಮ ಸೈನಿಕರೆಲ್ಲಾ ತಾವು ಅಡಗಿದ್ದ ನೆಲೆಗಳಿಂದ ಹೊರಬಿದ್ದು ಸಂಗೀನು ಜೋಡಿಸಿದ ಕೋವಿಗಳೊಂದಿಗೆ ಉಧೇಸಿಂಗರ ಹಿಂದೆ ಓಡಿದರು.

ಈ ಕ್ಷಿಪ್ರದಾಳಿಯನ್ನು ನಿರೀಕ್ಷಿಸದ ವಿದ್ರೋಹಿ

ಗಳು ಗಾಬರಿಯಿಂದ ಚೆಲ್ಲಾಪಿಲ್ಲಿಯಾಗಿ ಓಡ ಲಾರಂಭಿಸಿದರು. ಕೆಳಗಿನಿಂದ ನಮ್ಮ ಇನ್ನೊಂದು ತುಕಡಿಯೂ ಮೇಲೆ ಬರಲಾರಂಭಿಸಿತು. ಬಹುಮಂದಿ ವಿದ್ರೋಹಿಗಳು ಪ್ರತಿರೋಧವಿಲ್ಲದೆ ತಮ್ಮ ಆಯುಧಗಳನ್ನು ಕೆಳಗೆ ಹಾಕಿ ಶರಣಾದರು. ಆರು ಜನ ವಿದ್ರೋಹಿಗಳು ಹತರಾಗಿದ್ದರು. ಕೆಲವರು ಕಾಡಿನಲ್ಲಿ ಪರಾರಿಯಾದರು. ನಮ್ಮಲ್ಲಿ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದುವು. ಉಧೇಸಿಂಗರ ಬಲಭುಜಕ್ಕೆ ಗುಂಡು ತಾಗಿ ರಕ್ತ ಸ್ರಾವವಾಗುತ್ತಿತ್ತು. ಆದರೂ ಅವರು ತಮಗಾದ ಗಾಯವನ್ನು ಲೆಕ್ಕಿಸದೆ ಇತರೆ ಸೈನಿಕ ಗಾಯಾಳುಗಳ ಕ್ಷೇಮ ವಿಚಾರಿಸುತ್ತಿದ್ದರು.

ವಿದ್ರೋಹಿಗಳು ತಂಗಿದ್ದ ಗುಡಿಸಲುಗಳನ್ನು ಶೋಧಿಸಿದಾಗ ಇಬ್ಬರು ಯುವ ನಾಗಾ ಬಂಧಿಗಳಿದ್ದರು. ಅವರ ಕೈಕಾಲುಗಳನ್ನು ಬಿಚ್ಚಿ ವಿಚಾರಿಸಿದಾಗ ಲಜಾಮಿ ಹಳ್ಳಿಯಿಂದ ಅಪಹೃತರಾದ ಯುವನಾಗಾಗಳು ಅವರೆಂದು ತಿಳಿದು ಬಂತು. ಜೀವಭಯದಿಂದ ಅವರ ಮುಖಗಳು ವಿವರ್ಣವಾಗಿದ್ದವು. ಮದ್ದು ಗುಂಡುಗಳು, ಚೀನಿ ಗುರುತಿನ ಸ್ವಯಂ ಚಾಲಿತ ರೈಫಲುಗಳು ದೊರೆತವು. ಲಜಾಮಿಯಿಂದ ಲೂಟಿ ಮಾಡಿಕೊಂಡು ಬಂದಿದ್ದ ಅಕ್ಕಿಯ ಕೊರೆಗಳೂ ಅಲ್ಲಿಯೇ ಬಿದ್ದಿದ್ದುವು. ನಮಗೆ ಸೆರೆಸಿಕ್ಕಿದ್ದ ವಿದ್ರೋಹಿಗಳಲ್ಲಿ ಅವರ ಮುಖಂಡನಾದ ಸ್ವಯಂ ಘೋಷಿತ ಬ್ರಿಗೇಡಿಯರ್ ಸೆವಟೋ ಸೇಮಸೂ ಒಬ್ಬ. ಅವನು ಚೀನಾದಲ್ಲಿ ತರಬೇತಿ ಪಡೆದು ಬಂದಿದ್ದ. ಅವನ ಬಳಿ ಕೆಲವು ರಹಸ್ಯ ಕಾಗದ ಪತ್ರಗಳು ಮತ್ತು ಜೋಡು ನಳಿಗೆಯ ಎರಡು ರಿವಾಲ್ವರ್ ದೊರೆತವು. ಅಲ್ಲದೆ ಎರಡು ಸಾವಿರ ರೂಪಾಯಿಗಳಷ್ಟು ಹಣವಿದ್ದ ಚಿಕ್ಕ ಚೀಲವೊಂದು ಸಿಕ್ಕಿತು.

ಹಿಂದೆ ನಡೆದ ಹಲವಾರು ಕಾರ್ಯಾಚರಣೆಗಳಲ್ಲಿ ವಿದ್ರೋಹಿಗಳು ನಮ್ಮ ಸೈನಿಕರನ್ನು ಕಂಡೊಡನೆ ಹೆಚ್ಚು ಪ್ರತಿರೋಧವನ್ನು ತೋರದೆ ಪಲಾಯನ ಮಾಡುತ್ತಿದ್ದರು. ಆದರೆ ಈ ಸಲ ವಿದ್ರೋಹಿಗಳ ಗುಂಪು ಒಂದು ಗಂಟೆಯ ಕಾಲ ನಮ್ಮೆರಡು ಸೈನಿಕ ತುಕಡಿಗಳನ್ನು ಯಶಸ್ವಿಯಾಗಿ ತಡೆ ಹಿಡಿದದ್ದು ನಮಗೆ ವಿಸ್ಮಯವನ್ನುಂಟು ಮಾಡಿತು.

ನಾಗಾಗಳು ಒಳ್ಳೆಯ ಕೂಟ ಯೋಧರೆಂಬುದು ನಿಜ. ಆದರೆ ಯಾವುದೇ ಪ್ರತಿಕೂಲ ಪರಿಸ್ಥಿತಿಯಲ್ಲಿ ನಿರ್ಲಕ್ಷ್ಯ ಭಾವದೊಡನೆ ಪ್ರಾಣವನ್ನು ಮುಡಿಪಾಗಿಟ್ಟು ಹೋರಾಡುವ ಸೈನಿಕರ ಸಾಹಸದೊಡನೆ ನಾಗಾಗಳನ್ನು ಹೋಲಿಸುವುದು ಸಲ್ಲದು. ಆಂಗ್ಲ ಲೇಖಕ ಹೈಮನ್ ಡಾರ್ಫ್ ಅವರ ಅಭಿಪ್ರಾಯದಂತೆ ನಾಗಾಗಳ ಪರಾಕ್ರಮ ಸದಾ ಎಚ್ಚರಿಕೆಯಿಂದ ಕೂಡಿರುತ್ತದೆ. ಯುದ್ಧದಲ್ಲಿ ಸತ್ತರೆ ಸತ್ಕೀರ್ತಿ ಲಭಿಸುವುದೆಂದು ಅವರು ಭಾವಿಸುವುದಿಲ್ಲ. ಶತ್ರುಗಳಿಂದ ಹತನಾದರೆ ಆತ್ಮದ ವಿನಾಶ ಖಂಡಿತವೆಂದೂ, ಅವನ ಕುಟುಂಬಕ್ಕೆ ಅವಮಾನವೆಂದೂ ಭಾವಿಸುತ್ತಾರೆ. ಸತ್ತವನ ಆತ್ಮ ಅಶಾಂತಿಯಿಂದ ಭೂಮಿಗೇ ಅಂಟಿಕೊಂಡಿರುವುದೆಂದೂ ಅವನನ್ನು ಕೊಂದ ಜಯಶಾಲಿ ಸತ್ತನಂತರ ಆತ್ಮವು ಆ ವ್ಯಕ್ತಿಯನ್ನು ಗುಲಾಮನಂತೆ ಹಿಂಬಾಲಿಸಿ ಮುಂದಿನ ಲೋಕಕ್ಕೆ ಹೋಗುವುದೆಂದೂ ನಾಗಾಗಳು ನಂಬುತ್ತಾರೆ. ಶತ್ರುವಿನಿಂದ ಅಪಾಯಕರ ರೀತಿಯಲ್ಲಿ ಹತನಾಗುವುದಕ್ಕಿಂತ ಅವನ ಕೈಗೆ ಸಿಕ್ಕದೆ ತಪ್ಪಿಸಿಕೊಳ್ಳುವುದೇ ದೊಡ್ಡ ಸಾಹಸವೆಂಬುದು ನಾಗಾಗಳ ಭಾವನೆ.


"ಎಲ್ಲಾ ಸರಿಯಾದಲ್ಲಿ ನಾಗಾಗಳು ಸಾಹಸಿಗಳೇ. ಆದರೆ ತಮ್ಮ ಯೋಜನೆ ಮುರಿದು ಬಿದ್ದಲ್ಲಿ ಅವರು ವಿಪರೀತ ಗಾಬರಿಗೊಳ್ಳುತ್ತಾರೆ." ಎಂದು ನಾಗಾಗಳ ಸ್ವಭಾವವನ್ನು ಕುರಿತು ಮಿಲ್ಸ್ 'ಅವೊ ನಾಗಾಸ್' ಎಂಬ ತನ್ನ ಒಂದು ಗ್ರಂಥದಲ್ಲಿ ಹೇಳಿದ್ದಾನೆ.

ಈ ಸೈನಿಕ ಕಾರ್ಯಾಚರಣೆಯಲ್ಲಿ ಲೆಫ್ಟಿನೆಂಟ್ ಉಧೇಸಿಂಗರು ತೋರಿದ ಕರ್ತವ್ಯ ಪ್ರಜ್ಞೆ ಮತ್ತು ಧೈರ್ಯ ಸಾಹಸಗಳಿಗಾಗಿ ಭಾರತ ಸರಕಾರ ವೀರ ಚಕ್ರಕ್ಕೆ ಸಮನಾದ ಅಶೋಕ ಚಕ್ರವನ್ನಿತ್ತು ಅವರನ್ನು ಗೌರವಿಸಿತು. ■



ಇತರ ಎಲ್ಲಾ ಡೈಗಳನ್ನು ಒಟ್ಟು ಬಳಸುವ ಜನಕ್ಕಿಂತ ಅಧಿಕ ಜನರು ಗೋದ್ರೆಜ್ ತಂತಾನೆ ಹರಡುವ ಹೇರ್ ಡೈ ಬಳಸುತ್ತಿದ್ದಾರೆ.

ಇಲ್ಲಿವೆ ಮೂರು ಕಾರಣಗಳು.




2 ಸ್ವಾಭಾವಿಕ ಬಣ್ಣಗಳಲ್ಲಿ ಲಭ್ಯ— ನ್ಯಾಚುರಲ್ ಬ್ಲ್ಯಾಕ್ ಹಾಗೂ ಡಾರ್ಕ್ ಬ್ರೌನ್.

1 ತಂತಾನೆ-ಹರಡುವ ಗೋದ್ರೆಜ್ ಹೇರ್ ಡೈ ಕೂದಲಿಗೆ ಸ್ವಾಭಾವಿಕ ಬಣ್ಣವನ್ನು ಹಾಗೂ ಸೊಬಗನ್ನು ನೀಡುತ್ತದೆ. ಅದರಲ್ಲಿರುವ 'ಬಿಲ್ಟ್ ಇನ್ ಕಂಡಿಶನರ್' ಕೂದಲನ್ನು ಮೃದುವಾಗಿ ಹಾಗೂ ನಿಮಗೆ ಒಪ್ಪುವಂತೆ ಇಡುತ್ತದೆ.
ನಿಜವಾಗಿಯೂ, ನೀವು ಹೇಳದಿದ್ದರೆ ಇತರರಿಗೆ ತಿಳಿಯುವುದಿಲ್ಲ.

2 ತಂತಾನೆ-ಹರಡುವ ಗೋದ್ರೆಜ್ ಹೇರ್ ಡೈ ಬಳಸಲು ಸುಲಭವಾಗಿದೆ ಹಾಗೂ ಅನುಕೂಲವಾಗಿದೆ. ಇತರ ಹೇರ್ ಡೈಗಳಂತೆ ಇಲ್ಲ.
ಅಹುದು, ಇದು ಕೂದಲನ್ನು ಶಾಂಪೂಗೊಳಿಸುವಷ್ಟೇ ಸುಲಭ.

3 ತಂತಾನೆ-ಹರಡುವ ಗೋದ್ರೆಜ್ ಹೇರ್ ಡೈಯು ಉತ್ತಮ ಗುಣದ ಬಗೆ ನೀವು ನಿಶ್ಚಿಂತರಾಗಿರಬಹುದು. ಕಾರಣ ನಿಮ್ಮ ಕೂದಲು ಹಾಗೂ ತ್ವಚೆಯ ರಕ್ಷಣೆಗಾಗಿ ಇದನ್ನು ವಿಶೇಷವಾಗಿ ಸೂತ್ರೀಕರಿಸಲಾಗಿದೆ.
ಸಂಪೂರ್ಣ ಸುರಕ್ಷೆ—ಅದುವೆ ಗೋದ್ರೆಜ್ ವಾಗ್ದಾನ.

ಗೋದ್ರೆಜ್® ತಂತಾನೆ ಹರಡುವ ಪರ್ಮನೆಂಟ್ ಹೇರ್ ಡೈ.



ಇಂಗ್ಲೀಷ್ ಮೂಲ: ಗ್ಯಾರಿ ಟಾವ್‌ಬೆಸ್
ಅನುವಾದ: ಎ. ನರಹರಿ

ಗಗನದಲ್ಲೊಂದು

ಬೆಳಕಿನಮಾಲೆ

ಜಗತ್ತಿನ ಅದ್ಭುತಗಳಲ್ಲಿ ಒಂದಾದ ಪ್ಯಾರಿಸ್‌ನ ಐಫೆಲ್ ಟಾವರಿನ ನಿರ್ಮಾಣ 1887ರಲ್ಲಿ ಆರಂಭವಾದಾಗ ಫ್ರಾನ್ಸಿನ ಬುದ್ಧಿಜೀವಿಗಳು, ಈ ನಿರುಪಯೋಗಿ ಗೋಪುರ ಪ್ಯಾರಿಸ್ ನಗರವನ್ನು ಅಂದಗೆಡಿಸಿಬಿಟ್ಟಿದೆ ಎಂದು ಟೀಕಿಸಿದ್ದರು.

ಆದರೆ ಅದನ್ನು ನಿರ್ಮಿಸಿದ ಅಲೆಕ್ಸಾಂಡರ್ ಗುಸ್ತಾವ್ ಐಫೆಲ್ "ತನ್ನ ಈ ಸೃಷ್ಟಿಗೆ ಅದರದೇ ಆದ ಸೌಂದರ್ಯವಿದೆ-ಇಜಿಪ್ಟಿನಲ್ಲಿ ಇದೇ ರೀತಿಯ ಪಿರಾಮಿಡ್‌ಗಳು ಸೌಂದರ್ಯದ ಪ್ರತೀಕಗಳೆನಿಸಿರುವಾಗ ಪ್ಯಾರಿಸ್‌ನಲ್ಲೇಕೆ ಅದು ಅಸಹ್ಯವಾಗಿ ತೋರುತ್ತದೆ?" ಎಂದು ಮರುಸವಾಲು ಹಾಕಿದ. ಹೊಸ ಪೀಳಿಗೆಯೂ ಐಫೆಲ್‌ನಿಗೆ ಬೆಂಬಲ ನೀಡಿದ್ದರಿಂದ ಅವನ ಕನಸು ನನಸಾಯಿತು. ನಂತರ "ಐಫೆಲ್ ಟಾವರ್ ಪುರೋಭಿವೃದ್ಧಿ ನವಸಂಸ್ಥೆ"ಯು ಹುಟ್ಟಿಕೊಂಡಿತು.

ಈಗ ಈ ಸಂಸ್ಥೆ ಐಫೆಲ್ ಟಾವರಿನ ಶತಮಾನೋತ್ಸವ ಆಚರಣೆಯ ಅಂಗವಾಗಿ ಬರುವ ವರ್ಷ "ಆಕಾಶದಲ್ಲಿ ಐಫೆಲ್ ಟಾವರ್" ಎಂಬ ಹೆಸರಿನ ಉಪಗ್ರಹವೊಂದನ್ನು ಹಾರಿಬಿಡಲು ಉದ್ದೇಶಿಸಿದೆ. "ಐಫೆಲ್ ಟಾವರ್-20ನೇ ಶತಮಾನದ ಸಂಕೇತವಾಗಿತ್ತು. ಈಗ ಈ ಉಪಗ್ರಹ 21ನೇ ಶತಮಾನದ ಸಂಕೇತವಾಗಲಿದೆ" ಎಂದು ಸಂಸ್ಥೆಯ ವಕ್ತಾರ ಫಿಲಿಪ್ ಗಿಲ್ಲಿರಾನ್ ಹೇಳುತ್ತಾರೆ. 15 ಮೈಲು ಸುತ್ತಳತೆಯ ಪ್ಲಾಸ್ಟಿಕ್ ಕುಣಿಕೆಯಲ್ಲಿ ಪೋಣಿಸಲಾದ 18 ಅಡಿಗಳಷ್ಟು ವ್ಯಾಸವುಳ್ಳ 100 ಮೈಲಾರ್ ಬಲೂನುಗಳ ಕಂಠೀಹಾರವೇ ಈ ಉಪಗ್ರಹ. ಹಾರಿಬಿಟ್ಟ ಮೂರು ವರ್ಷಗಳ ನಂತರ ಈ ಉಪಗ್ರಹ ತನ್ನ ಕಕ್ಷೆಯಿಂದ ಜಾರಿ ಉರಿದು ಹೋಗುವ ಮುನ್ನ ಪ್ರತಿಯೊಂದು ಬಲೂನೂ ಸೂರ್ಯನ ಬೆಳಕನ್ನು ಪ್ರತಿಫಲಿಸುತ್ತ ಧ್ರುವನಕ್ಷತ್ರಕ್ಕಿಂತ ಹೆಚ್ಚು ಪ್ರಕಾಶಮಾನವಾಗಿ ತೋರುತ್ತದೆ. ಸೂರ್ಯ ಮತ್ತು ಚಂದ್ರನ ನಂತರ ಇವು ಆಕಾಶದಲ್ಲಿ ಅತ್ಯಂತ ಕಣ್ಸೆಳೆಯುವ ವಸ್ತುಗಳಾಗಲಿವೆ.

ಈ ಯೋಜನೆ ಕೇವಲ ತಾಂತ್ರಿಕವಾದುದಲ್ಲ, ಕಲಾತ್ಮಕವಾದದ್ದೂ ಹೌದು. ಇದರಿಂದ ಪ್ರಪಂಚದ ಜನತೆಗೆಲ್ಲ ಮನೆಯಲ್ಲೇ ಕುಳಿತು ಶತಮಾನೋತ್ಸವದಲ್ಲಿ ಭಾಗವಹಿಸುವ ಅವಕಾಶ ಸಿಗುತ್ತದೆ. ಒಂದು ಪತ್ರಿಕೆಯಂತೂ "ಈ ಉಪಗ್ರಹದ ಉಡ್ಡಾಣ ವೈಭವಯುತವಾದ, ಕಲಾತ್ಮಕ ಯೋಜನೆಯಾಗಿದ್ದು ನೀರಸ ಆಕಾಶದಲ್ಲಿ ಇಂಥ ಅಲಂಕಾರಕ ವಸ್ತುಗಳು ಅವಶ್ಯ" ಎಂದು ಕೊಂಚ ಅತಿಶಯವಾಗಿ ಹೊಗಳಿದೆ.

ಆದರೆ ಬಹುತೇಕ ಖಗೋಳ ಶಾಸ್ತ್ರಜ್ಞರು ಇದನ್ನು ಒಪ್ಪುವುದಿಲ್ಲ. ಕಳೆದ ಎಷ್ಟೋ ದಶಕಗಳಿಂದ ಪ್ರಪಂಚದ ಮೂಲೆ ಮೂಲೆಗಳಲ್ಲಿ ದೂರದರ್ಶಕಗಳನ್ನು ಸ್ಥಾಪಿಸಿರುವ ಅವರು ಈ ಉಪಗ್ರಹದಿಂದ ಹೊರಡುವ ಬೆಳಕಿನ ಪ್ರಖರತೆ ದೂರದರ್ಶಕ ಹಾಗೂ ಇತರ ಉಪಕರಣಗಳ ಕೆಲಸಕ್ಕೆ ಅಡ್ಡಿಯಾಗುವುದೆಂದು ಕಳವಳಕ್ಕೀಡಾಗಿದ್ದಾರೆ. ಇದು ಇನ್ನೂ ಇಂತಹ ಅಸಂಬದ್ಧ ಘಟನೆಗಳಿಗೆ ದಾರಿಮಾಡಿಕೊಡಬಹುದಾಗಿದ್ದು ಅದರಿಂದ ತಮ್ಮ ಸಂಶೋಧನೆ

ಸಂಭ್ರಮ

ರಕ್ತದಲ್ಲಿ ಎಲುಬಿನಲಿ
ಮಜ್ಜದಲಿ ಬೆರೆಯದೆ
ಬದುಕು ಸಾಗಿದೆ.
ಅರ್ಥ-ಅನರ್ಥಗಳು
ಅರ್ಥ ಕಳೆದುಕೊಂಡು
ಬದುಕು ಮುಲುಗಿದೆ.
ಕಾಲ ಕಾಲವನು ನುಂಗುತ
ಆಸೆ ನಿರಾಸೆಗಳ ಸಂಗದಲಿ
ಬದುಕು ಸವೆದಿದೆ.
ರಾಗದ್ವೇಷಗಳ
ಕುತ್ಸಿತ ಭೀಭತ್ಸ ಭಾವಗಳ ಮೇಳದಲಿ
ಬದುಕು ಅರ್ಥ ಕಳೆದುಕೊಂಡಿದೆ.
ಕಣ್ಣಂಚಿನ ಮಿಂಚು
ಬಾನನ್ನ ನೋಡುತಿದೆ.
ದುಃಖದ ಟೊಂಗೆ
ಭೂಮಿಯತ್ತ ಎಳೆಯುತಿದೆ.

● ಜಿ. ಎಚ್. ಬಾಲಕೃಷ್ಣ ●

ಗಳಿಗೆ ವ್ಯತ್ಯಯವುಂಟಾಗಬಹುದೆಂದು ಅನೇಕ ಪತ್ರಿಕೆಗಳ ಮೂಲಕ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಆಕಾಶದಲ್ಲಿ ಸಾಕಷ್ಟು ನಿಷ್ಪ್ರಯೋಜಕ ವಸ್ತುಗಳು ಖಗೋಲ ವೀಕ್ಷಣೆಗೆ ಅಡ್ಡ ಬರುತ್ತಿವೆ. ಸುಮಾರು ಒಂಭತ್ತು ಸಾವಿರ ತುಣುಕುಗಳಷ್ಟು ಯಂತ್ರದ ಭಾಗಗಳು, ಅವಶೇಷಗಳು ಭೂಮಿಗೆ ಪ್ರದಕ್ಷಿಣೆ ಹಾಕುತ್ತಿವೆ.

ಒಂದು ನೂರು ವಿನ್ಯಾಸಗಳ ಸ್ಪರ್ಧೆಯಲ್ಲಿ ಕೊನೆಗೆ ಫ್ರೆಂಚರು ಈ ಉಪಗ್ರಹವನ್ನು ಆಯ್ಕೆ ಮಾಡಿದರು. (ನೂರು ವರ್ಷಗಳ ಹಿಂದೆ ಐಫೆಲ್ಲನೂ ಇದೇ ರೀತಿಯ ಸ್ಪರ್ಧೆಯೊಂದರಲ್ಲಿ ಐಫೆಲ್ ಟಾವರ್ ನಿರ್ಮಿಸುವ ಹಕ್ಕು ಪಡೆದುಕೊಂಡಿದ್ದ) ನಿರ್ಣಾಯಕರ ತಂಡದಲ್ಲಿ ಬಾಹ್ಯಾಕಾಶ ವಿಜ್ಞಾನಿಗಳು ಇದ್ದರು. ಅವರು ಆಕಾಶಮಾಲಿನ್ಯದ ಅಂಶವನ್ನು ಗಣನೆಗೆ ತೆಗೆದುಕೊಂಡ ನಂತರವೇ ಈ ನಿರ್ಣಯಕೆಗೊಳ್ಳಲಾಯಿತು. ಆದರೆ ಆರು ಸಾವಿರ ಜನ ಸದಸ್ಯರಿರುವ ಅಂತಾರಾಷ್ಟ್ರೀಯ ಖಗೋಳ ಶಾಸ್ತ್ರಜ್ಞರ ಒಕ್ಕೂಟದ ಕಾರ್ಯದರ್ಶಿ ಜೀನ್ ಪಿಯರಿ ಸ್ವಿಂಗ್, ತಮ್ಮ ಒಕ್ಕೂಟದ ಮುಖ್ಯ ಕಚೇರಿ ಪ್ಯಾರಿಸ್‌ನಲ್ಲೇ ಇದ್ದರೂ ಈ ಬಗ್ಗೆ ಯಾರೂ ತಮ್ಮನ್ನು ಸಂಪರ್ಕಿಸಿಲ್ಲವೆಂದು ಹೇಳಿದ್ದಾರೆ. ಈಗ ಈ ಒಕ್ಕೂಟ ಖಗೋಲ ವೀಕ್ಷಣೆಗೆ ತಡೆಯುಂಟಾಗುವುದೆಂಬ ಕಾರಣದಿಂದ ಈ ಉಪಗ್ರಹ ಉಡ್ಡಯನವನ್ನು ವಿರೋಧಿಸುತ್ತಿದೆ.

ಐಫೆಲ್‌ನ ನಿರ್ಮಾಣದಷ್ಟೇ ಅದ್ಭುತವಾದ ತಾಂತ್ರಿಕತೆಯನ್ನು ಒಳಗೊಂಡ ಮತ್ತು ಸಾಧ್ಯವಿದ್ದಷ್ಟು ದೇಶಗಳಲ್ಲಿ ಬರಿಕಣ್ಣಿಗೆ ಕಾಣಿಸಬಹುದಾದಂಥ ಉಪಗ್ರಹದ ವಿನ್ಯಾಸವೊಂದನ್ನು ಆಯ್ಕೆ ಮಾಡುವುದು ಮೇಲೆ ಹೇಳಿದ ಸ್ಪರ್ಧೆಯ ಉದ್ದೇಶವಾಗಿತ್ತು. ಅಲ್ಲದೆ ಅದು ಅಗ್ಗದ ಯೋಜನೆಯಾಗಿದ್ದು, ಯುರೋಪಿಯನ್ ವ್ಯೋಮ ಸಂಸ್ಥೆಯ ಏರಿಯಾನ್ ರ್‍ಯಾಕೆಟ್‌ನಲ್ಲಿ ಕಕ್ಷೆಗೆ ಹಾರಿಸಲು ಬರುವಂಥದ್ದಾಗಿರಬೇಕಾಗಿತ್ತು.

ಕೊನೆಗೆ ಆಯ್ಕೆಯಾದ 'ಬೆಳಕಿನ ಉಂಗುರ'ದ ಉಪಗ್ರಹದ ವಿನ್ಯಾಸವನ್ನು ರೂಪಿಸಿದವರು ಕೆಲ ಯುವ ವಾಸ್ತು ಶಾಸ್ತ್ರಜ್ಞರು ಮತ್ತು ಫ್ರೆಂಚ್ ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಕೇಂದ್ರದ ಬಲೂನ್ ಇಂಜಿನೀಯರ್ ಜೀನ್ ಪಿಯರಿ ಪೊಮೇರಿ. ಹಾರಿಸುವಾಗ ಈ ಉಂಗುರದ ತೂಕ ಕೇವಲ 1200 ಪೌಂಡುಗಳಷ್ಟಿದ್ದು. ಅವನ್ನು ಮೂರು ಅಡಿ ಸುತ್ತಳತೆಯುಳ್ಳ ಪೆಟ್ಟಿಗೆಯೊಳಗೆ ಇಡಬಹುದಾಗಿದೆ. ಹಾರಿಸುವ ಮುನ್ನ ಮೈಲಾರ್ ಬಲೂನುಗಳಲ್ಲಿ ನೀರು ತುಂಬಲಾಗುವುದು. ಕಕ್ಷೆಯ ಶೂನ್ಯ ಸೇರಿದಾಗ ಈ ನೀರು ಆವಿಯಾಗಿ ಬಲೂನುಗಳು ಪೂರ್ಣ ಗಾತ್ರಕ್ಕೆ ಉಬ್ಬಿಕೊಳ್ಳುತ್ತವೆ. ನಂತರ ಈ ಹೊಳೆಯುವ ಬಲೂನುಗಳ ಸರವನ್ನು ಪೃಥ್ವಿಯ ಯಾವುದೇ ಸ್ಥಳದಿಂದ ನಿತ್ಯ ರಾತ್ರಿ ನಾಲ್ಕು ಬಾರಿ ನೋಡಬಹುದಾಗಿದ್ದು, ಅದು ಚಂದ್ರನಷ್ಟೇ ಗಾತ್ರದ್ದಾಗಿರುತ್ತದೆ.

ದಿನ ನಿತ್ಯ ಹದಿನಾರು ಬಾರಿ ಭೂಮಿಗೆ ಪ್ರದಕ್ಷಿಣೆ ಹಾಕುವ ಈ ಉಪಗ್ರಹ ಸರಾಸರಿ ಒಂದು ನೂರು ಪ್ರದಕ್ಷಿಣೆಯಲ್ಲಿ ಒಮ್ಮೆ ಖಗೋಳ

ಶಾಸ್ತ್ರಜ್ಞರ ವೀಕ್ಷಣೆಗೆ ಅಡ್ಡಬರುತ್ತದೆ.ಕೇವಲ ಅಡ್ಡಬರುವುದಷ್ಟೇ ಆಗಿದ್ದರೆ ಇದೊಂದು ದೊಡ್ಡ ಸಮಸ್ಯೆಯಾಗುತ್ತಿದ್ದಿಲ್ಲ. ಆದರೆ ಪ್ರತಿಯೊಂದು ಬಲೂನಿನ ಬೆಳಕು ಬಹಳ ಪ್ರಖರವಾಗಿದ್ದು ಅದರಿಂದ ಖಗೋಳಶಾಸ್ತ್ರಜ್ಞರ ವೀಕ್ಷಣಾ ಉಪಕರಣಗಳು ಸುಟ್ಟು ಹೋಗುವ ಸಂಭವವಿದೆ. ಉದಾಹರಣೆಗೆ ಚಂದ್ರನ ಮೇಲೆ ಒಂದು ಮೋಂಬತ್ತಿಯನ್ನು ಉರಿಸುತ್ತಿರುವಂತೆ ತೋರುವ ಕ್ವಾಸಾರ್‌ಗಳನ್ನು ಅಭ್ಯಸಿಸಲು ಖಗೋಳಶಾಸ್ತ್ರಜ್ಞರು ಬೆಳಕಿನ ಸಂವೇದನೆಗಳನ್ನು ಒಂದು ಕೋಟಿ ಪಟ್ಟು ಹೆಚ್ಚಿಸಬೇಕಾಗುತ್ತದೆ. ಆಗ ಅಕಸ್ಮಾತ್ತಾಗಿ ಸಂವೇದನಾ ಉಪಕರಣಗಳ ಮೇಲೆ ಈ ಬಲೂನುಗಳ ಬೆಳಕು ಬಿದ್ದರೆ ಆ ಉಪಕರಣಗಳು ಸುಟ್ಟು ಹೋಗುತ್ತವೆ ಎಂದು ಮುರ್ಡಿನ್ ಎಂಬ ತಜ್ಞರು ಹೇಳುತ್ತಾರೆ.

ಈ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಅಂಶವೆಂದರೆ ಈ ಉಪಗ್ರಹದ ಕಕ್ಷೆಯ ಬಗೆಗಿರುವ ಅನಿಶ್ಚಿತತೆ. ಸೌರ ಗಾಳಿಯ ಬಿರುಸು ಮತ್ತು ಈ ಭಾರಿ ಉಪಗ್ರಹದ ಮೇಲಿರುವ ಕಡಿಮೆ ಸಾಂದ್ರತೆಯ ವಾತಾವರಣದಿಂದ ಈ ಬಲೂನಿನ ಸರ ಯಾವ ಕ್ಷಣದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಹಾಯ್ದುಹೋಗುತ್ತದೆ ಎಂದು ಹೇಳುವುದು ಕಷ್ಟ. ಅದನ್ನು ಸರಿಯಾಗಿ ನಿರ್ಧರಿಸಲು ಬರುವಂತಿದ್ದರೆ ಅದು ಆ ನಿರ್ದಿಷ್ಟ ಸ್ಥಳಕ್ಕೆ ಬಂದಾಗ ಖಗೋಳ ಶಾಸ್ತ್ರಜ್ಞರು ತಮ್ಮ ಸೂಕ್ಷ್ಮ ಉಪಕರಣಗಳನ್ನು ರಕ್ಷಿಸುವ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿತ್ತು. (ಆದರೆ ಖಗೋಳಶಾಸ್ತ್ರಜ್ಞರು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು, ತಾವೇ ನಿರ್ಮಿಸಿದ ಉಪಕರಣಗಳ ಸಾಮರ್ಥ್ಯದ ಬಗ್ಗೆ ಉದ್ದೇಶಪೂರ್ವಕವಾಗಿ ಜನರಲ್ಲಿ ಸಂಶಯ ಹುಟ್ಟಿಸುತ್ತಿದ್ದಾರೆಂದು ಉಪಗ್ರಹದ ಬೆಂಬಲಿಗರು ವಾದಿಸುತ್ತಾರೆ). ಜಾಡ್ರಲ್ ಬ್ಯಾಂಕ್ ವೀಕ್ಷಣಾಲಯದ ಮುಖ್ಯಸ್ಥ ಸರ್ ಫ್ರಾನ್ಸಿಸ್ ಗ್ರಹಾಂ ಸ್ಮಿಥ್ ಹೇಳುವಂತೆ, "ಒಮ್ಮೆ ಹಾಳಾದದ್ದನ್ನು ಹಣ ಖರ್ಚು ಮಾಡಿ ಸರಿಪಡಿಸುವ ವಿಷಯ ಇದಲ್ಲ. ಖಗೋಳಶಾಸ್ತ್ರದ ಭವಿತವ್ಯವೇ ಇದರ ಮೇಲೆ ಅವಲಂಬಿತವಾಗಿದೆ. ಒಮ್ಮೆ ಆಕಾಶ ಮಾಲಿನ್ಯ ಆರಂಭವಾಯಿತೆಂದರೆ ಖಗೋಳ ವೀಕ್ಷಣೆಯನ್ನೇ ಕೈಬಿಡಬೇಕಾಗಬಹುದು!

ಆದರೆ "ಐಫೆಲ್ ಟಾವರ್ ಪುರೋಭಿವೃದ್ಧಿ ನವಸಂಸ್ಥೆ" ಇದನ್ನು ಒಪ್ಪಿಕೊಳ್ಳುವುದಿಲ್ಲ. ಐಫೆಲ್ ಟಾವರ್‌ನ ನಿರ್ಮಾಣಕ್ಕೂ ಮೊದಲು ಇದೇ ರೀತಿಯ ಟೀಕೆ-ಟಿಪ್ಪಣೆಗಳು ಬಂದಿದ್ದನ್ನೂ, ಅವುಗಳಲ್ಲಿ ಯಾವುದೇ ಹುರುಳಿಲ್ಲದಿದ್ದನ್ನೂ ಅವರು ಎತ್ತಿತೋರಿಸುತ್ತಾರೆ. ಈಗ ಖಗೋಳಶಾಸ್ತ್ರಜ್ಞರು ಆಕಾಶವೇ ತಮ್ಮದೆನ್ನುವಂತೆ ವರ್ತಿಸುತ್ತಿದ್ದಾರೆ. ಉಳಿದ ಮಾನವ ಕುಲಕ್ಕೆ ಅದರ ಮೇಲೆ ಯಾವುದೇ ಹಕ್ಕಿಲ್ಲವೆಂಬ ಧೋರಣೆ ಅವರದು" ಎಂದು ಗಿಲ್ಲಿರಾನ್ ಆರೋಪಿಸುತ್ತಾರೆ.

ಏತನ್ಮಧ್ಯೆ ನವಸಂಸ್ಥೆ ಭೂಮಿಯ ಮೇಲೆಯೇ ಶತಮಾನೋತ್ಸವ ಆಚರಿಸಬಲ್ಲಂಥ ತಾತ್ಪೂರ್ತಿಕ ಯೋಜನೆಯೊಂದನ್ನು ಹಾಕಿಕೊಂಡಿದೆ. ಈ ಯೋಜನೆಯ ಪ್ರಕಾರ ಉಪಗ್ರಹ ಉಡ್ಡಯನವಾಗಲಿ, ಬಿಡಲಿ ಪ್ಯಾರಿಸ್‌ನ ಸುತ್ತ ವೃತ್ತಾಕಾರದಲ್ಲಿರುವ ಮಾರ್ಗದುದ್ದಕ್ಕೂ ಮೈಲಾರ್ ಬಲೂನಿನ ಸರ ಕಟ್ಟಿ ಶತಮಾನೋತ್ಸವದ ಆಚರಣೆಯಾಗಲಿದೆ.

ಈ ಸಂಸ್ಥೆ ಫ್ರಾನ್ಸಿನ ಖಗೋಳ ಶಾಸ್ತ್ರಜ್ಞರ ಸಹಾಯದಿಂದ ಬಲೂನಿನ ಸರದ ಉಪಗ್ರಹದಿಂದ ಆಗುವ ಪರಿಣಾಮಗಳ ಬಗ್ಗೆಯೂ ಅಧ್ಯಯನ ನಡೆಸಲಿದೆ. ಜೊತೆಗೆ ಉಪಗ್ರಹ ನಿರ್ಮಾಣ, ಉಡ್ಡಯನ, ವಿಮೆ ಹಾಗೂ ಇತರ ವೆಚ್ಚಗಳಿಗಾಗಿ ಅವಶ್ಯವಿರುವ 3.2 ಕೋಟಿ ಡಾಲರ್ (ಸುಮಾರು 41.6 ಕೋಟಿ ರೂಪಾಯಿ)ಗಳಷ್ಟು ಹಣವನ್ನು ಚಂದಾ ಎತ್ತಲು ಯೋಚಿಸಲಾಗಿದೆ. ಉಪಗ್ರಹ ಉಡ್ಡಯನಕ್ಕಾಗಿ ಅಮೆರಿಕದ ರಾಕೆಟ್ಟನ್ನು ಉಪಯೋಗಿಸುವ ಅವಕಾಶವಿದೆಯಾದರೂ ಬಹಳ ವೆಚ್ಚದ್ದಾಗುವುದರಿಂದ ಅದು ಸಾಧ್ಯವಾಗಲಿಕ್ಕಿಲ್ಲ. ಇನ್ನು ರಶಿಯದ ರಾಕೆಟ್ ಉಪಯೋಗಿಸಬೇಕೆಂದರೆ ಅದರಿಂದುಂಟಾಗುವ ರಾಜಕೀಯ ಪರಿಣಾಮಗಳು ಮತ್ತು ಅದಕ್ಕಿಂತ ಮುಖ್ಯವಾಗಿ ರಶಿಯದ ರಾಕೆಟ್‌ಗಳ ಕಾರ್ಯಕ್ಷಮತೆಯ ಬಗೆಗಿರುವ ಅಪನಂಬಿಕೆಗಳು ಅಡ್ಡ

ಬರುತ್ತವೆ. ಆದ್ದರಿಂದ ಯುರೋಪಿಯನ್ ವ್ಯೋಮ ಉಪಗ್ರಹ ಉಡ್ಡಯನಕ್ಕೆ ತನ್ನ ಏರಿಯಾನ್ ರಾಕೆಟ್ ನೀಡಲು ನಿರಾಕರಿಸಿದರೆ ಬಹುತೇಕವಾಗಿ ಜಪಾನ್ ಅಥವಾ ಚೀನದ ರಾಕೆಟ್‌ಗಳನ್ನು ವ್ಯಾಪಾರಿ ತಳಹದಿಯ ಮೇಲೆ ಉಪಯೋಗಿಸಬೇಕಾಗುತ್ತದೆ.

ಐಫೆಲ್ ಟಾವರ್ ಶತಮಾನೋತ್ಸವಕ್ಕಾಗಿ ನಡೆದ ವಿನ್ಯಾಸಗಳ ಸ್ಪರ್ಧೆಯಲ್ಲಿ ಎರಡನೇಯ ಸ್ಥಾನ ಪಡೆದ ಅರ್ಸಾಟ್ ಸಹ ಗಾಳಿ ಪಟದ ಶೈಲಿಯ ಒಂದು ಭಾರಿ ಗಾತ್ರದ ಉಪಗ್ರಹ. ಅದು ಮೇಲೆ ಹಾರಿ ಕಕ್ಷೆ ಸೇರಿದ ನಂತರ ಶಿಲುಬೆಯಾಕಾರದಲ್ಲಿ ಸೂರ್ಯನ ಬೆಳಕನ್ನು ಬಿಂಬಿಸುವುದು. ಈ ಬೆಳಕು ಹುಣ್ಣಿಮೆಯ ಚಂದ್ರನಿಗಿಂತ ಹತ್ತು ಪಟ್ಟು ಹೆಚ್ಚು ಪ್ರಖರವಾಗಿರುತ್ತದೆ. "ಅರ್ಸಾಟ್‌ನ ವೆಚ್ಚ ಒಂದು ಕೋಟಿ ಡಾಲರ್‌ಗಳಿಗಿಂತ ಕಡಿಮೆಯಾಗಿರುವುದರಿಂದ ಜಾಗತಿಕ ಮಹತ್ವದ ಘಟನೆಗಳು ಸಂಭವಿಸಿದಾಗಲೆಲ್ಲ ಅದನ್ನು ಸೂಚಿಸುವುದಕ್ಕಾಗಿ, ಅರ್ಸಾಟ್ ಉಪಗ್ರಹ ಹಾರಿಬಿಡಬಹುದು" ಎಂದು ಅದರ ಸೃಷ್ಟಿಕರ್ತ ಪಿಯರಿ ಕಾಮ್ಟೆ ಹೇಳುತ್ತಾರೆ. ಯಾವುದೇ ದೊಡ್ಡ ಸಂಸ್ಥೆ ತನ್ನ ಉತ್ಪಾದನೆಗಳ ಪ್ರಚಾರಕ್ಕಾಗಿ ಇದನ್ನು ಬಳಸಬಹುದೆಂಬ ಕಾರಣದಿಂದ ಇದು ಖಗೋಳ ಶಾಸ್ತ್ರಜ್ಞರಷ್ಟೇ ಅಲ್ಲ ಸದಭಿರುಚಿಯುಳ್ಳ ಇತರರಲ್ಲೂ ಆತಂಕ ಹುಟ್ಟಿಸಿದೆ. ನಾವು ಪತ್ರಿಕೆಗಳಲ್ಲಿ ನೋಡುವ ಕೋಕಾಕೋಲಾ ಪಾನೀಯದಂಥ ಜಾಹೀರಾತುಗಳು ಗಗನದಲ್ಲಿ ರಾರಾಜಿಸಲಾರಂಭಿಸಬಹುದು. ಅಷ್ಟೆ ಏಕೆ, ಯಾವುದೇ ಒಂದು ಚಿಕ್ಕ ರಾಷ್ಟ್ರ ಸಹ ತನ್ನ ನಾಯಕನ ಗೌರವಾರ್ಥ ಇಂಥ ಉಪಗ್ರಹವನ್ನು ಹಾರಿಬಿಡಬಹುದು.

ಈಗಾಗಲೇ ಅಮೆರಿಕದಲ್ಲಿ ಸತ್ತವರ ಅಸ್ಥಿಗಳನ್ನು ಪಟ್ಟಣ ಕಟ್ಟಿ ಇಂಥ ಉಪಗ್ರಹದಲ್ಲಿಟ್ಟು ಹಾರಿಬಿಡಲು 'ಸೆಲೆಸ್ಟಿಸ್ ಗ್ರುಪ್' ಎಂಬ ಸಂಸ್ಥೆ ಅಮೆರಿಕ ಸರಕಾರದ ಅನುಮತಿ ಪಡೆದುಕೊಂಡಿದೆ. ಒಟ್ಟು 15,000 ಜನರ ಅಸ್ಥಿಗಳನ್ನು ಈ ರೀತಿ ಇಟ್ಟು ಹಾರಿಸುವ ಯೋಜನೆಯಿದ್ದು, ಸತ್ತ ಮೇಲಾದರೂ ಈ ಜನ ಸ್ವರ್ಗಕ್ಕೆ ಸಮೀಪದಲ್ಲಿರಲಿ ಎಂಬುದೇ ಇದರ ಉದ್ದೇಶವಾದಂತೆ ಕಾಣುತ್ತದೆ!

ಈ ಹುಚ್ಚಾಟವನ್ನೆಲ್ಲ ಗಮನಿಸಿ 1985ರಲ್ಲಿ ಅಂತಾರಾಷ್ಟ್ರೀಯ ಖಗೋಳ ಶಾಸ್ತ್ರಜ್ಞರ ಒಕ್ಕೂಟ "ಅಂತಾರಾಷ್ಟ್ರೀಯವಾಗಿ ಸಂಪೂರ್ಣ ಅಧ್ಯಯನ ನಡೆದು ಒಪ್ಪಿಗೆ ದೊರೆತ ಹೊರತು ಯಾವ ಸಂಸ್ಥೆಗೂ ಭೂಮಿಯ ವಾತಾವರಣವನ್ನು ಯಾವುದೇ ರೀತಿಯಲ್ಲಿ ಬದಲಿಸುವ ಹಕ್ಕು ಇಲ್ಲ" ಎಂದು ಸಾರಿದೆ. ಆಕಾಶ ಮಾಲಿನ್ಯದ ಬಗೆಗೆ ಅದು ಒಂದು ಕರಪತ್ರವನ್ನು ತಯಾರಿಸಿದ್ದು ಅಮೆರಿಕವನ್ನೊಳಗೊಂಡಂತೆ ಪ್ರಪಂಚದಾದ್ಯಂತ ಎಲ್ಲ ರಾಷ್ಟ್ರಗಳ ಸರಕಾರಗಳಿಗೂ ಇದನ್ನು ಕಳಿಸಿಕೊಡಲಾಗುವುದು.

ಆದರೆ "ಬಾಹ್ಯಾಕಾಶವೆಂದರೆ ಯಾವ ರಾಷ್ಟ್ರಕ್ಕೂ ಸೇರದ ಸಮುದ್ರ ಪ್ರದೇಶದಂತೆ ಅಲ್ಲಿ ಯಾರು ಏನು ಬೇಕಾದರೂ ಮಾಡಲು ಸ್ವತಂತ್ರರು" ಎಂಬ ಅಭಿಪ್ರಾಯ ಹೊಂದಿದ ಐಫೆಲ್ ಟಾವರ್ ಪುರೋಭಿವೃದ್ಧಿ ನವಸಂಸ್ಥೆಯಂಥ ಗುಂಪುಗಳಿರುವಾಗ ಖಗೋಳತಜ್ಞರ ವಾದ ಎಷ್ಟರಮಟ್ಟಿಗೆ ಪರಿಣಾಮಕರವಾದೀತೆಂಬುದನ್ನು ಹೇಳುವುದು ಕಷ್ಟ. ●

("ಡಿಸ್ಕವರಿ"ಯಿಂದ)

"ಸಾವಿರಾರು ವರ್ಷಗಳಿಂದಲೂ 'ಹೌದು' ಎಂದು ಹೇಳಬೇಕಾದಲ್ಲೆಲ್ಲ 'ಅಲ್ಲ' ಎಂದು ನಮ್ಮ ಹೆಂಗಸರು ಹೇಳುತ್ತಲೇ ಬಂದಿರುವುದು ಏನನ್ನು ತೋರಿಸುತ್ತದೆ ಗೊತ್ತೆ?"

"ಭಾಷಾ ಭೇದವನ್ನು, ಭಿನ್ನಾಭಿಪ್ರಾಯವನ್ನು."

— ಫೈಬರ್ ನೆಬೆಲ್.

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ತಕ್ಕೂರ್ಮೆ
ಅ) ಘನತೆ
ಆ) ಒಂದೇ ಸಲ
ಇ) ತಬ್ಬಿಕೊಳ್ಳುವುದು
ಈ) ದೊಡ್ಡ ಜಾತಿಯ ಆಮೆ

2. ವಿಸಟ
ಅ) ಜಗಳಗಂಟ
ಆ) ಪಿಶಾಚಿ
ಇ) ಚೆಲ್ಲಿಕೊಟ್ಟ ಪದಾರ್ಥ
ಈ) ಸ್ವೇಚ್ಛಾಚಾರ

3. ಪ್ರಪನ್ನ
ಅ) ಒಲಿದವ
ಆ) ಹೊಂಡದಲ್ಲಿ ಬಿದ್ದವ
ಇ) ಮೊರೆ ಹೊಕ್ಕವನು
ಈ) ಸಾಧನೆ

4. ಬಿಕ್ಕಲು
ಅ) ದುಃಖ
ಆ) ತಡೆತಡೆದು ಶ್ವಾಸ ಬಿಡುವುದು
ಇ) ಕಳೆಗುಂದಿದ್ದು
ಈ) ಗಡ್ಡೆ

5. ಮುಳುವು
ಅ) ಒಣಹುಲ್ಲ ರಾಶಿ
ಆ) ಕಂಟಕ
ಇ) ಕಂತಿದ್ದು
ಈ) ಹೆಗಲು

6. ಸುಸೂತ್ರ
ಅ) ಸರಿಯಾದ ಉಪಾಯ
ಆ) ತಳಕಟ್ಟು
ಇ) ಜನಿವಾರ
ಈ) ಸಲೀಸು

7. ವತನ
ಅ) ವಂಶಪರಂಪರೆಯಿಂದ ಬಂದ ಆಸ್ತಿ
ಆ) ಬೀಳುವಿಕೆ
ಇ) ಜಾಗ್ರತೆ
ಈ) ಮುಖ

8. ದಿಙ್ಮೂಢ
ಅ) ಬಲು ಹೆಡ್ಡ
ಆ) ಅಹಂಕಾರಿ
ಇ) ಕಂಗೆಟ್ಟ
ಈ) ಧಿಕ್ಕಾರಕ್ಕೊಳಗಾದ

9. ಅಯಾಲು
ಅ) ಬಟಾಟೆ
ಆ) ಕಬ್ಬಿಣದಿಂದ ಮಾಡಿದ
ಇ) ಕುದುರೆಯ ಕೊರಳ ಕೂದಲು
ಈ) ಕಟ್ಟೆ

10. ಪರಿಪುಷ್ಟ
ಅ) ಸಂಕೋಚ ಹೊಂದಿದ
ಆ) ಸಂತೋಷಪಟ್ಟ
ಇ) ಪ್ರಶ್ನೆ ಕೇಳಲ್ಪಟ್ಟ
ಈ) ಮೈದುಂಬಿದ

11. ರಸಕಸಿ
ಅ) ತಿಕ್ಕಾಟ
ಆ) ಒಂದು ತರದ ಮೇಲೋಗರ
ಇ) ತಘೂಪೆ
ಈ) ಸೌಮ್ಯವಾದ ನೋವು

12. ರವಷ್ಟು
ಅ) ರದ್ದಿ
ಆ) ತೀರ ಸ್ವಲ್ಪ
ಇ) ಸೂಕ್ಷ್ಮತರ
ಈ) ಬಿರುಸುತನ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ತಕ್ಕೂರ್ಮೆ
ಅ) ಹಿರಿತನ, ಘನತೆ, ದೊಡ್ಡಸ್ತಿಕೆ. ಉದಾ: ಮರ್ಯೋಧನ ಕೆಲವೊಮ್ಮೆ ತಕ್ಕೂರ್ಮೆಯನ್ನು ತೋರಿಸುತ್ತಿದ್ದ. (ದೇ.ತಕ್ಕು= ಹಿರಿಮೆ+ಊರ್ಮೆ=ಶ್ರೇಷ್ಠತೆ, ತಮಿಳು-ತಕ್ಕೂರ್ಮೈ)

2. ವಿಸಟ
ಈ) ಸ್ವೇಚ್ಛಾಚಾರ, ಮನಬಂದಂತಿರುವಿಕೆ. ಉದಾ: ಉತ್ಸಾಹದಿಂದ ವಿಸಟಂಬರಿದನು = ಸಿಕ್ಕಾಪಟ್ಟೆ ಓಡಾಡಿದನು. ವಿಶ್ವತಃ (ಸಂ. ವಿಶ್ವತಃ:ಎತ್ತೆತ್ತಲೂ-ಶಬ್ದದ ತದ್ಭವ)

3. ಪ್ರಪನ್ನ
ಇ) ಮೊರೆ ಹೊಕ್ಕವ, ಶರಣಾಗತ, ಸಂಪೂರ್ಣವಾಗಿ ಒಪ್ಪಿಸಿಕೊಂಡ ಭಕ್ತ. ಉದಾ: ಪ್ರಪನ್ನಜನರಕ್ಷಕನಾದ ಪರಮಾತ್ಮ (ಸಂ.)

4. ಬಿಕ್ಕಲು
ಅ) ತಡೆತಡೆದು ಶ್ವಾಸ ಬಿಡುವುದು, ಗದ್ಗದ, ತೇಕು, ಮೇಲುಸಿರು, ತಡೆತಡೆದು ಅಳುವುದು. ಉದಾ: ಅವಳ ಬಿಕ್ಕಲು ಬಹುಕಾಲ ಸಾಗಿತ್ತು. (ದೇಶ್ಯ-ಬಿಕ್ಕು = ತಡೆತಡೆದು ಅಳು+ಲು)

5. ಮುಳುವು
ಅ) ಕಂಟಕ, ಅಪಾಯ, ಸಂಕಟ, ವಿಪತ್ತು. ಉದಾ: ಅವನು ದುರ್ಬುದ್ಧಿಯೇ ಅವನಿಗೆ ಮುಳುವಾಯಿತು. (ದೇಶ್ಯ-ಮುಳ್=ಕಂಟಕದಿಂದ)

6. ಸುಸೂತ್ರ
ಈ) ಸಲೀಸು, ಸರಾಗ, ವಿಘ್ನವಿಲ್ಲದಿರುವಿಕೆ, ವ್ಯವಸ್ಥಿತ. ಉದಾ: ಸುಸೂತ್ರವಾಗಿ ಕೆಲಸವಾಯಿತು. (ಸಂ. ಸು=ಒಳ್ಳೆಯ+ಸೂತ್ರ = ನೂಲು)

7. ವತನ
ಅ) ವಂಶಾನುಗತ ಭೂಮಿ, ಅದರ ಹಕ್ಕು, ಸರ್ಕಾರದಿಂದ ಇನಾಮಾಗಿ ಬಂದ ಭೂಮಿ, ಜಹಗೀರು. ಉದಾ: ನವಾಬನು ವತನ ಹಾಕಿಕೊಟ್ಟ ಜಮೀನು (ಮರಾಠಿ=ವತನ, ಅರಬಿ- ವತನ್=ಜನ್ಮಭೂಮಿ)

8. ದಿಜ್ಮೂಢ
ಇ) ದಿಕ್ಕು ತಪ್ಪಿದವ, ಏನು ಮಾಡುವುದೆಂದು ತಿಳಿಯದೆ ಕಂಗೆಟ್ಟವ. ಉದಾ: ಸುದ್ದಿ ಕೇಳಿ ದಿಜ್ಮೂಢನಾದ. (ಸಂ.ದಿಕ್ = ದಿಕ್ಕು+ ಮೂಢ=ತಿಳಿಯದವ)

9. ಅಯಾಲು
ಇ) ಕುದುರೆ, ಸಿಂಹ ಮೊದಲಾದವುಗಳ ಕೊರಳ ಕೂದಲು. ಉದಾ: ಕುದುರೆಯ ಅಯಾಲು ಕತ್ತರಿ ಸುತ್ತಿರಬೇಕು (ಮರಾಠಿ ಅಯಲ, ಅಯಾಳ-ಪಾರಸೀಕ ಅಯಾಲ್)

10. ಪರಿಪುಷ್ಟ
ಈ) ಮೈದುಂಬಿದ, ಚೆನ್ನಾಗಿ ಬೆಳೆದ. ಉದಾ: ಪರಿಪುಷ್ಟವಾದ ಕಲ್ಪನೆ (ಸಂ.ಪರಿ= ಸುತ್ತಲೂ+ಪುಷ್ಟ=ಬೆಳೆದ)

11. ರಸಕಸಿ
ಅ) ತಿಕ್ಕಾಟ, ಮಾತಿಗೆ ಮಾತು ಕೊಡುವಿಕೆ, ಮಾತಿನ ಚಕಮಕಿ. ಉದಾ: ಗಂಡಹೆಂಡಿರಲ್ಲಿ ರಸಕಸಿಯಾಯಿತು. (ಮರಾಠಿ-ರಸಕಸ್)


12. ರವಷ್ಟು
ಅ) ತೀರ ಸ್ವಲ್ಪ, ಅತ್ಯಲ್ಪ. ಉದಾ: ರವಷ್ಟು ಬೆಲ್ಲ ಹಾಕಿದರೆ ರುಚಿ ಹೆಚ್ಚುತ್ತದೆ (ರವೆ-ಹಿಂದಿ ರವಾ=ಸಜ್ಜಿಗೆ+ಅಷ್ಟು)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ

ಶೈಲಚಿತ್ರ ಸಂಶೋಧಕ



ವಿ. ಶ್ರೀ. ವಾಕಣಕರ್

● ಮನಸಾ ●

ನಮ್ಮನ್ನೆಲ್ಲ ನಿಬ್ಬೆರಗುಗೊಳಿಸಿದ ಮಧ್ಯ ಪ್ರದೇಶದ ಶೈಲಚಿತ್ರಗಳ ಸಂಸ್ಕೃತಿ ಕಾಲಗಳನ್ನು ನಿರ್ಣಯಿಸಿ, ಜೀವ ತುಂಬಿ ಪ್ರಸಿದ್ಧಿಗೆ ಕಾರಣರಾದ ವ್ಯಕ್ತಿ ಪದ್ಮಶ್ರೀ ಡಾ॥ ವಿಷ್ಣು ಶ್ರೀಧರ ವಾಕಣಕರ್.

ಭಾರತ, ಯೂರೋಪ್, ಅಮೆರಿಕಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಚಿತ್ರಿತ ಶಿಲಾಶ್ರಯಗಳನ್ನು ಶೋಧಿಸಿದ ಕೀರ್ತಿ ವಾಕಣಕರರಿಗೆ ಸಲ್ಲುತ್ತದೆ. ವಾಕಣಕರರು ಮಧ್ಯ ಪ್ರದೇಶದ ಭೀಂಬೇಟ್ಕಾ ಶೈಲಚಿತ್ರಗಳು, ವೈದಿಕ ನದಿ ಸರಸ್ವತಿಯ ಸಂಚಾರ ಮಾರ್ಗದ ಸಂಪೂರ್ಣ ಶೋಧ, ಸರಸ್ವತಿ ಕುರಿತ ಭಾರತೀಯ ಜನಮಾನಸದ ಬಗ್ಗೆ ದೀರ್ಘ ಸಂಶೋಧನೆ, ಕಾಳಿದಾಸನ ಕಾಲನಿರ್ಣಯ, ಶಿಲಾಶ್ರಯಗಳ ಆಧಾರದ ಮೇಲೆ-ಕಾಳಿದಾಸ, ಉಜ್ಜಯಿನಿ, ಗುಪ್ತ, ಮಾಳ್ವ ನಾಗರಿಕರಿಗಿದ್ದ ನಂಟನ್ನು ಸ್ಪಷ್ಟಪಡಿಸಿ ಪುರಾತತ್ವ ಕ್ಷೇತ್ರದಲ್ಲಿ ಭಾರತವನ್ನು ಉನ್ನತ ಮಟ್ಟದಲ್ಲಿರಿಸಿದ್ದಾರೆ.

ವಿರಳ ಪುರುಷ:

ಪದ್ಮಶ್ರೀ ಡಾ॥ ವಿಷ್ಣು ಶ್ರೀಧರ ವಾಕಣಕರರು ವಂದನೆಗೆ ಹಾಗೂ ಆದರಗಳಿಗೆ ಪಾತ್ರರಾದ ವಿರಳ ಪುರುಷರಲ್ಲೊಬ್ಬರು. ಅವರಿಂದು ಸಂತರ, ವಿದ್ವಾಂಸರ ಹಾಗೂ ಆಚಾರ್ಯರ ಪರಂಪರೆಗೆ ಸೇರಿಹೋಗಿದ್ದಾರೆ. ಸರ್ವ ಸುಖಗಳನ್ನು ತ್ಯಜಿಸಿ ಸಾಹಿತ್ಯ, ಸಂಸ್ಕೃತಿ ಹಾಗೂ ಪುರಾತತ್ವದ ಉಳಿವಿಗಾಗಿ ತಮ್ಮ ಇಡೀ ಜೀವನವನ್ನು ಅರ್ಪಿಸಿದ ಆದರ್ಶ ವ್ಯಕ್ತಿ ಅವರು. ತ್ಯಾಗ, ಉತ್ಸಾಹ ಹಾಗೂ ಸಂವೇದನಾಶೀಲ

ತೆಯ ಮಹಾನ್ ಪರಿಕಲ್ಪನೆಯ ಸಾಕ್ಷಾತ್ ಸ್ವರೂಪ ವಾಕಣಕರರು. 'ಸರಳ ಜೀವನ, ಉನ್ನತ ವಿಚಾರ' ಎಂಬ ಮಾತನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರು.

ಪುರಾತತ್ವ ಕ್ಷೇತ್ರದಲ್ಲಿ ಮಾತ್ರವಲ್ಲದೆ ವಾಕಣಕರರು ಕಲಾಚಾರ್ಯರಾಗಿ, ಮುದ್ರಾ ಶಾಸ್ತ್ರಜ್ಞರಾಗಿ, ಸಾಹಿತಿಗಳಾಗಿ, ಭಾಷಾ ವಿದ್ವಾಂಸರಾಗಿ, ಸಮಾಜ ಸೇವಕರಾಗಿ ತಮ್ಮ ಹೆಸರನ್ನು ಅಮರವಾಗಿರಿಸಿಕೊಂಡವರು. ಅವರು ಆಧಾರ ಸ್ತಂಭವಾಗಿದ್ದ ಸಂಘ-ಸಂಸ್ಥೆಗಳು ಅನೇಕ. ಭಾರತೀ ಕಲಾ ಭವನ, ಲಲಿತಾಕಲಾ ಸಂಸ್ಥಾನ ಹಾಗೂ ಶೈಲಚಿತ್ರ ಶೋಧ ಸಂಸ್ಥಾನ, ಉಜ್ಜಯಿನಿಯ ಸಂಚಾಲಕರಾಗಿ, ಥಿಯಸಫಿಕಲ್ ಸೊಸೈಟಿ, ವಿಶಾಲ ಶೋಧ ಪರಿಷದ್ ಹಾಗೂ ವಾಕಣಕರ್ ಭಾರತೀ ಸಂಸ್ಕೃತಿ ಅನ್ವೇಷಣೆಯ ಅಧ್ಯಕ್ಷರಾಗಿ, ಮಧ್ಯಪ್ರದೇಶದ ಉಜ್ಜಯಿನಿಯ ವಿಕ್ರಮ ವಿಶ್ವವಿದ್ಯಾಲಯದ ಪುರಾತತ್ವ ಉತ್ಖನನ ವಿಭಾಗದ ಸಂಸ್ಥಾಪಕ ಸಂಚಾಲಕರಾಗಿ, 'ಸಂಸ್ಕಾರ ಭಾರತಿ'ಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ, ಮಧ್ಯಪ್ರದೇಶ ವಿದ್ಯಾರ್ಥಿ ಪರಿಷದ್‌ನ ಸ್ಥಾಪಕ ಅಧ್ಯಕ್ಷರಾಗಿ, ವೈದಿಕ ಸರಸ್ವತಿ ಶೋಧ ಅಭಿಯಾನ ದಳ ಹಾಗೂ ಬಾಬಾ ಸಾಹೇಬ್ ಆಪ್ಟೆ ಇತಿಹಾಸ ಸಂಕಲನ ಸಮಿತಿಯ ಪ್ರಮುಖರಾಗಿ, ಅಖಿಲ ಭಾರತೀಯ ಕಾಳಿದಾಸ ಚಿತ್ರ ಹಾಗೂ ಉಜ್ಜಯಿನಿಯ ಮೂರ್ತಿ ಕಲಾ ಪ್ರದರ್ಶನದ ಸಂಸ್ಥಾ ರಾಗಿ ಡಾ|| ವಾಕಣಕರ್ ಸಕ್ರಿಯ ಪಾತ್ರ ವಹಿಸಿದ್ದಾರೆ.

ಮಹಾನ್ ಜ್ಞಾನ ತಪಸ್ವಿ ಹಾಗೂ ಸತ್ಯ ಶೋಧಕ ಇದೇ ಏಪ್ರಿಲ್ 2 ರಂದು ಕಣ್ಮರೆಯಾದರು. ಏಷ್ಯಾ-ಪೆಸಿಫಿಕ್ ಭೂಭಾಗದ ಪ್ರಪ್ರಥಮ ಹಿಂದೂ ಸಮ್ಮೇಳನಕ್ಕೆ ವಿಶೇಷ ಆಮಂತ್ರಿತರಾಗಿ ಸಿಂಗಾಪುರಕ್ಕೆ ಹೋಗಿದ್ದ ವಾಕಣಕರರು ಸಿಂಗಾಪುರದ ರೇಖಾಚಿತ್ರಗಳನ್ನು ಬಿಡಿಸುತ್ತಿದ್ದ ಹಾಗೆಯೇ ಹಠಾತ್ ಹೃದಯಾಘಾತದಿಂದ ನಿಧನರಾದರು.

ಮಹತ್ವದ ಅನ್ವೇಷಣೆ:

ಈಗ ವಿಶ್ವಪ್ರಸಿದ್ಧಿಯಾಗಿರುವ ಭೀಂಬೇಟ್ಕಾ ಸ್ಥಳದ ಅನ್ವೇಷಣೆ, ಪರೀಕ್ಷೆ, ಉತ್ಖನನ, ಅಧ್ಯಯನ ದೊರೆತ ಉಪಕರಣಗಳ ವರ್ಗೀಕರಣ, ಕಲ್ಲುಗಳ ಕಾಲನಿರ್ಣಯಕ್ಕಾಗಿ ತಮ್ಮ ಜೀವನದ ಅನೇಕ ವರ್ಷಗಳನ್ನು ಮುಡಿಪಾಗಿಟ್ಟವರು ಡಾ|| ವಾಕಣಕರ್. ಅವರು ಆ ಶೈಲಚಿತ್ರಗಳ ಸ್ಥಾನವನ್ನು ಪತ್ತೆಮಾಡಿದ್ದು ತಮ್ಮ ಅಂತಃಸ್ಫೂರ್ತಿಯಿಂದ; ಪ್ರೇರಣಾಶಕ್ತಿಯಿಂದ. ನಾಗಪುರದಲ್ಲಿ ನಡೆಯಲಿದ್ದ ಸಮಾವೇಶವೊಂದಕ್ಕಾಗಿ ಅವರು ರೈಲಿನಲ್ಲಿ ಹೊರಟಿದ್ದರು. ಪತ್ತಿರದಲ್ಲೆಲ್ಲೋ ಅಪಘಾತವಾದ ಕಾರಣ ಉಬೇದುಲ್ಲಾಗಂಜ್ ಎಂಬಲ್ಲಿ ಅವರಿದ್ದ ರೈಲು ದೀರ್ಘಕಾಲ ನಿಲ್ಲಬೇಕಾಯಿತು. ರೈಲಿನಿಂದಿಳಿದ ವಾಕಣಕರರು ಅಲ್ಲಿನ ಪರ್ವತ ಶ್ರೇಣಿಗಳನ್ನು ಪರಿಶೀಲಿಸಿದರು. ಅಲ್ಲಿ ಶೈಲಚಿತ್ರಗಳು ಇವೆಯೆಂದು ಅವರ ಅಂತರ್ವಾಣಿ ನುಡಿಯಿತು. ನಾಗಪುರದಿಂದ ಹಿಂತಿರುಗಿದ ನಂತರ ಆ ಸ್ಥಳವನ್ನು ಶೋಧಿಸಿದಾಗ ಅವರ ಊಹೆ ನಿಜವಾಯಿತು. ಅಲ್ಲಿ ಅಪೂರ್ವ ಶೈಲಚಿತ್ರಗಳು ಕಂಡುಬಂದವು. ಈ ಭೀಂಬೇಟ್ಕಾ ಶೈಲಚಿತ್ರಗಳ ಸಂಶೋಧನೆಗಾಗಿಯೇ ಮುಂದೆ ಅವರು 1975ರಲ್ಲಿ ಭಾರತದ ರಾಷ್ಟ್ರಾಧ್ಯಕ್ಷರಿಂದ 'ಪದ್ಮಶ್ರೀ'ಯನ್ನು ಪಡೆದರು.

ಅನೇಕ ವರ್ಷಗಳ ಶ್ರಮದ ನಂತರ 1972-73ರಲ್ಲಿ ವಾಕಣಕರ್ ತಮ್ಮ ಶೋಧ ಪ್ರಕಟಿಸಿ ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರರಾದರು. ಆಗ ಭೀಂಬೇಟ್ಕಾವನ್ನು ಪ್ರಾಗೈತಿಹಾಸಿಕ ಸ್ಥಳ

ಬಂಡೆಗಳ ಮೇಲೆ ನಮ್ಮ ಪೂರ್ವಜರು ಬರೆದಿರುವ ಚಿತ್ರಗಳೇ ಶೈಲಚಿತ್ರಗಳು. 'ಶಿಲಾಚಿತ್ರ'ದ ಮೇಲಿಂದ ಈ 'ಶೈಲಚಿತ್ರ' ಎಂಬ ಪದ ಬಂದಿರಬೇಕು. (ಶೈಲ=) ಶಿಖರಗಳಲ್ಲಿ ಬರೆದಿರುವ ಚಿತ್ರಗಳೆಂದೂ ಅರ್ಥೈಸಬಹುದು. ಶಿಲಾಶ್ರಯಗಳಲ್ಲಿ ವಾಸಿಸುತ್ತಿದ್ದ ಪ್ರಾಗೈತಿಹಾಸಿಕ ಕಾಲದ ಮಾನವ ತನ್ನ ಕಲಾಭಿವ್ಯಕ್ತಿಗೆ ಆಯ್ಕೆ ಮಾಡಿಕೊಂಡ ಈ ಸಹಜ ಕ್ಯಾನ್‌ವಾಸ್‌ಗಳು ಆ ಕಾಲದ ಅವರ ಬದುಕನ್ನು, ಯೋಚನೆಯ ರೀತಿಯನ್ನು ನಮ್ಮೆದುರು ತೆರೆದಿಡುತ್ತವೆಯಷ್ಟೇ ಅಲ್ಲ. ನಾವು ನಡೆದು ಬಂದ ದಾರಿಯನ್ನೂ ತೋರಿಸುತ್ತವೆ.

ವೆಂದು ಸರ್ಕಾರ ನಿರ್ದೇಶಿಸಿತು. ಇಲ್ಲಿ 15,000 ದಿಂದ 70,000 ವರ್ಷಗಳಷ್ಟು ಪ್ರಾಚೀನ ಮಾನವ ನಿವಾಸದ ಕುರುಹು ಹಾಗೂ ಉಪಕರಣಗಳು ದೊರೆತವು. ಕಳೆದ 30 ವರ್ಷಗಳಲ್ಲಿ ಒಟ್ಟಾರೆ 4,000ಕ್ಕೂ ಹೆಚ್ಚು ಶೈಲಚಿತ್ರ ಸ್ಥಾನಗಳು ಸಿಕ್ಕಿವೆ. ವಾಕಣಕರರು ಸ್ವತಃ ಪತ್ತೆಹಚ್ಚಿದ ಚಿತ್ರಸ್ಥಾನಗಳು 1,700ಕ್ಕೂ ಹೆಚ್ಚು.

ಭೀಂಬೇಟ್ಕಾದಿಂದ ಭೋಪಾಲ್‌ವರೆಗೆ ದೊರೆತಿರುವ 200 ಶಿಲಾಸ್ಥಾನಗಳು, ನರಸಿಂಹಗಢ-ಚಂಬಲ್‌ವರೆಗಿನ ಪ್ರದೇಶದ 1,500 ಸ್ಥಾನಗಳು, ಕನ್ನೀ, ಮರ್ಜಾಪುರ, ವಾರಾಣಸಿ ಪ್ರದೇಶದ 500 ಸ್ಥಾನಗಳು ಹಾಗೂ ದಕ್ಷಿಣದ ಬದಾಮಿ-ಪಟ್ಟದಕಲ್ ಭಾಗದ 200 ಸ್ಥಾನಗಳು, 40,000 ವರ್ಷದಿಂದ 50,000 ವರ್ಷ ಹಿಂದಿನದಾಗಿದ್ದು ಹೆಚ್ಚಿನ ಶೈಲಚಿತ್ರಗಳು ಬೇಟೆ ಮತ್ತು ನೃತ್ಯಕ್ಕೆ ಸಂಬಂಧಪಟ್ಟಿವೆ.

ಹಂದಿ, ಹೋರಿ, ಖಡ್ಗಮೃಗ, ಮೀನಿನ ಬೇಟೆ, ಆಮೆ, ನಟರಾಜ, ತಾಯಿ-ಮಗು, ಆನೆ ಮುಖವಾಡ, ಆಸ್ಟ್ರಿಚ್ ಪಕ್ಷಿಯ ಮೊಟ್ಟೆ ಕವಚದಿಂದ ಮಾಡಿದ ಸರ, ಏಡಿಯನ್ನು ಹಿಡಿಯುತ್ತಿರುವ ಹೋರಿ, ಸಾಮೂಹಿಕ ನರ್ತನದಂತಹ ಅನೇಕ ಸನ್ನಿವೇಶಗಳ ಶೈಲಚಿತ್ರಗಳನ್ನು ಭೀಂಬೇಟ್ಕಾ ಹಾಗೂ ಇತರ ಶಿಲಾಸ್ಥಾನಗಳಲ್ಲಿ ವಾಕಣಕರರು ಪತ್ತೆಹಚ್ಚಿದ್ದಾರೆ.

ಭೀಂಬೇಟ್ಕಾ ಉತ್ಖನನದಲ್ಲಿ 21 ಲಕ್ಷಕ್ಕೂ ಹೆಚ್ಚು ಸಣ್ಣ ಸಣ್ಣ ಕಲ್ಲು ಸ್ಮಾರಕಗಳು, ಪಚ್ಚೆ ಕಲ್ಲುಗಳು ಹಾಗೂ ವಿವಿಧಾಕಾರಗಳ ಕಲ್ಲುಗಳು ಸಿಕ್ಕಿವೆ. ಉತ್ತರ ಹಾಗೂ ಪೂರ್ವ ಪುರಾಶ್ಮೀಯ ಯುಗ ಹಾಗೂ ಮಧ್ಯಯುಗದ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಲಾಗಿದೆ. ಉತ್ಖನನದಲ್ಲಿ ದೊರೆತ ಉಪಕರಣಗಳು ಸ್ಫಟಿಕ ಶಿಲೆಯವು. ಇವು ಉದಯಪುರ, ಪ್ರತಾಪಗಢ, ಬಾನ್ಸ್‌ವಾಡಾ, ದಕ್ಷಿಣದ ಅರ್ಬುದಾಂಬಲಗಳಲ್ಲಿ ತಯಾರಾದವು ಎಂದು ಖಚಿತಪಟ್ಟಿದೆ. ಮುಂದಿನ ಅಧ್ಯಯನಕ್ಕಾಗಿ ಪುರಾತತ್ವ ಶೋಧಕರಿಗೆ ವೈಜ್ಞಾನಿಕ ಉಪಕರಣಗಳಿಂದ ಈ ಕಾಲ ನಿರ್ಣಯವನ್ನು ಸಮರ್ಥಿಸಲು ಸೂಚನೆ ನೀಡಿದ್ದಾರೆ. ಭೀಂಬೇಟ್ಕಾ ಶೈಲಚಿತ್ರಗಳ ಬಗೆಗೆ ಈಗಾಗಲೇ ನೂರಕ್ಕೂ ಹೆಚ್ಚು ಶೋಧಪತ್ರಗಳು ಪ್ರಕಟವಾಗಿವೆ.

ಭೀಂಭೇಟ್ಕಾ ಎಂಬುದು 'ಭೀಮ ಬೈಠಕಾ' ಎಂಬುವರ ಅಪಭ್ರಂಶ ರೂಪ. ಭೀಮನ ಬಂಡೆ, ಭೀಮನ ತಟ್ಟೆ, ಭೀಮನ ಜಾರುಬಂಡೆ ಎಂದು ಕರ್ನಾಟಕದ ಕೆಲವೆಡೆ ತೋರಿಸುವ ಹಾಗೆಯೆ ಇದು ಈ 'ಭೀಮಬೈಠಕಾ' ಅಥವಾ ಭೀಮನು ಕೂಡುತ್ತಿದ್ದ ಜಾಗ.

ಸರಸ್ವತಿಯ ಸಂಶೋಧಕ:

ವಾಕಣಕರರ ಅದ್ವಿತೀಯ ಸಂಶೋಧನೆಗಳು ಒಂದೆರಡಲ್ಲ. ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಆಸಕ್ತಿ ಹೊಂದಿ ಅವರು 'ಆರ್ಯ' ಹಾಗೂ 'ವೈದಿಕ' ಪದಗಳ ವ್ಯತ್ಯಾಸ, ಅದರ ಉತ್ಪತ್ತಿಯ ಬಗ್ಗೆ ಆಧಾರಸಹಿತ ವಿವರಿಸಿದ್ದರು. ಅವರು "ವಾಸ್ತವಿಕವಾಗಿ 'ವೈದಿಕ' ಎಂಬ ಪದಕ್ಕೆ 'ಆರ್ಯ' ಎಂಬ ತಪ್ಪು ಕಲ್ಪನೆ ಉಂಟಾಗಿದೆ. ಏಕೆಂದರೆ ವೈದಿಕ ಸಾಹಿತ್ಯದಲ್ಲಿ ಆರ್ಯ ಜಾತಿಯ ವಿಶೇಷ ಉಲ್ಲೇಖವಿಲ್ಲ. 'ಆರ್ಯ' ಎಂಬ ಪದ ಮನುವಿನ ಕಾಲದಿಂದ ಬಂದು ಅದು ಮಧ್ಯಪ್ರದೇಶದಲ್ಲಿರುವುದನ್ನು ಮಾತ್ರ ಸೂಚಿಸುತ್ತದೆ" ಎಂದು ಸಮರ್ಥಿಸಿದ್ದಾರೆ.

'ಸರಸ್ವತೀ ಪುತ್ರ'ರಾದ ವಾಕಣಕರರು ಸರಸ್ವತಿಯ ಮೂಲ ರೂಪವನ್ನು ಕಂಡುಹಿಡಿಯಲು ಪ್ರಯತ್ನಿಸಿದರು. ಸರಸ್ವತಿಯ ಉಪಾಸನೆ ಭಾರತೀಯ ಜೀವನದ ಒಂದು ಮುಖ್ಯ ಅಂಗ. ಸರಸ್ವತಿ ಭಾರತೀಯ ಜೀವನಧಾರೆಯ ಪೋಷಕ; ಜ್ಞಾನದೇವತೆ. ವಿಭಿನ್ನ ಗ್ರಂಥಗಳ ಆಧಾರದ ಮೇಲೆ ಸರಸ್ವತಿಯ ರೂಪ ಹಾಗೂ ಗುಣಗಳನ್ನು ಸ್ಪಷ್ಟಪಡಿಸಲು ಸಂಶೋಧನೆ ನಡೆಸಿದರಲ್ಲದೆ ಅಕ್ಷರ ದೇವತೆಯಾದ ಸರಸ್ವತಿ ಕ್ರಮೇಣ ಭಾವನಾತ್ಮಕವಾಗಿ ವೇದ ಪುರಾಣಗಳಲ್ಲಿ ಹೇಗೆ ವರ್ಣಿತಳಾಗಿದ್ದಾಳೆ ಎಂದೂ ಅವಲೋಕಿಸಿದ್ದಾರೆ. ಅಕ್ಷರ ಸ್ವರೂಪಳೆಂದು ಪ್ರಾರಂಭಿಸಿ ಸರ

ಸ್ವತಿಯ ಕಲ್ಪನೆಯನ್ನು ಮೂರ್ತಿರೂಪದಲ್ಲಿ ಬಿಂಬಿಸಲು ಈ ಸಂಶೋಧನೆ ಪ್ರೇರೇಪಿಸುತ್ತದೆ.

ಸರಸ್ವತಿ ನದಿ ಅಗೋಚರ ಗುಪ್ತಗಾಮಿನಿಯಾಗಿ ತ್ರಿವೇಣಿ ಸಂಗಮವನ್ನು ಸೇರುತ್ತಾಳೆ ಎಂಬುದು ಪ್ರಚಲಿತವಾದ ಮಾತು. ಈ ನದಿಯ ಪ್ರಸ್ತಾಪ ವೇದಗಳಲ್ಲಿ ಮಾತ್ರ ಉಂಟು. ಆದ್ದರಿಂದಲೇ ಇವಳು ವೈದಿಕ ಸರಸ್ವತಿ. ಈ ಲುಪ್ತ ವೈದಿಕ ಸರಸ್ವತಿ ನದೀ ಪಾತ್ರವನ್ನು ಗುರುತಿಸಲು ಹರಿಯಾಣದಿಂದ ಸೋಮನಾಥದವರೆಗೆ 4,000 ಮೈಲಿಗಳ ಉದ್ದಕ್ಕೂ ನಡೆಸಿದ ಅಸಮಾನ ಯಾತ್ರೆ ವಾಕಣಕರರ ಜ್ಞಾನ ಯಾತ್ರೆಯೂ ಹೌದು.

ಮುದ್ರಾಶಾಸ್ತ್ರಜ್ಞರೂ ಆದ ವಿ.ಶ್ರೀ. ವಾಕಣಕರ್ ಅವರು ಪ್ರತಿಯೊಂದು ಉತ್ಖನನದಲ್ಲೂ ದೊರೆಯುತ್ತಿದ್ದ ವಿವಿಧ ಮುದ್ರೆಗಳ ಕುರಿತು ಅಧ್ಯಯನ ನಡೆಸುತ್ತಿದ್ದರು. ಪುರಾತತ್ತ್ವಾತ್ಮಿಕ ಉತ್ಖನನದಿಂದ ಬುದ್ಧಪೂರ್ವಕಾಲ, ಅಂದರೆ 100 ರಿಂದ 600 ವಿಕ್ರಮ ಪೂರ್ವಾಕಾಲದಲ್ಲಿ ಮುದ್ರೆಗಳ ನಿರ್ಮಾಣ ಪ್ರಾರಂಭವಾಯಿತು ಎಂಬುದು ನಿಶ್ಚಿತ. 8000 ಮುದ್ರೆಗಳ ಅಧ್ಯಯನ ಮಾಡಿದ ನಂತರ ವಾಕಣಕರರು ಐತಿಹಾಸಿಕ ರಾಜರುಗಳ ಸಂಬಂಧ ಹಾಗೂ ಕಾಲಗಳನ್ನೂ ನಿಶ್ಚಯಿಸಿದರು. ಅವರ ಸಂಶೋಧನೆಯ ಪ್ರಕಾರ ಅವಂತಿ ಪ್ರದೇಶದಲ್ಲಿ ಅಶೋಕನ ನಂತರ ಮೌರ್ಯರ ಆಧಿಪತ್ಯ ಅಂತ್ಯ. ಕಾಳಿದಾಸನ ಕವಿತ್ವಗಳಿಂದ ಉಜ್ಜಯಿನಿ ಬಹಳ ಸುಂದರವೆಂಬ ವಿಚಾರ ಕಂಡುಬರುತ್ತದೆ. ಉಜ್ಜಯಿನಿಯ ಪರಿಪೂರ್ಣತೆಯ ವಿಶ್ಲೇಷಣೆಯನ್ನು ಮಾಡಬೇಕಾದರೆ ಗ್ರಂಥಗಳಿಂದ ಮಾತ್ರ ಸಾಧ್ಯವಿಲ್ಲವೆಂಬುದನ್ನು ಖಚಿತಪಡಿಸಿ ಪುರಾತತ್ತ್ವಕ್ಕೆ ಆಧಾರವಾಗಿರುವ ಶೈಲಚಿತ್ರಗಳ ಪ್ರಾಮುಖ್ಯವನ್ನು ಅವರು ಜನರಿಗೆ ತಿಳಿಸಿಕೊಟ್ಟರು.

ಅವರ ಪ್ರತಿಭೆ, ಕೀರ್ತಿ ಇಷ್ಟೆಲ್ಲ ವಿಸ್ತಾರವಾದ್ದರೂ ಸರಳತೆ ಅವರಲ್ಲಿ ಎದ್ದು ಕಾಣುತ್ತಿದ್ದ ಗುಣ. ಸಾದಾ ಉಡುಪು, ಸದಾ ಮೇಲೆ ಮಂದಹಾಸ, ಉದ್ದ ಮೂಗು, ಕೆದರಿದ ಗುಂಗುರು ಕೂದಲು, ಅತಿ ನಮ್ರತೆ ಅವರ ವ್ಯಕ್ತಿತ್ವದ ವೈಶಿಷ್ಟ್ಯ. ವಿದ್ವಾಂಸರೊಡನೆ ಮಾತನಾಡುವಷ್ಟು ಶ್ರದ್ಧೆಯಿಂದಲೇ ಮಕ್ಕಳೊಡನೆಯೂ ಬೆರೆಯುತ್ತಿದ್ದರು. ಅವರ ಕಾರ್ಯಶ್ರದ್ಧೆ, ಬಹುಮುಖಾಸಕ್ತಿ ಹಾಗೂ ಪರಿಣತಿಯನ್ನು ಕಂಡು ಪ್ರಸಿದ್ಧ ಪುರಾತತ್ತ್ವವೇತ್ತ ರಾಬರ್ಟ್ ಬ್ರೂಕ್ಸ್ 'ಎ ರಿನೈಸಾನ್ಸ್ ಮ್ಯಾನ್' ಎಂದೇ ವಾಕಣಕರರನ್ನು ವರ್ಣಿಸಿದ್ದಾರೆ.

ಭಾರತ ಒಂದೆಡೆಯಲ್ಲೇ ಅಲ್ಲದೆ ಯೂರೋಪ್ ಅಮೇರಿಕಗಳಲ್ಲಿ ಶೋಧಕಾರ್ಯ ಕೈಗೊಂಡು ಅಲ್ಲಿನ ವಿದ್ಯಾಲಯಗಳಲ್ಲಿ ವಾಕಣಕರರು ಭಾರತೀಯ ಸಂಸ್ಕೃತಿ-ನಾಗರಿಕತೆಗಳ ಬಗ್ಗೆ ಹಾಗೂ ಶೈಲಾಶ್ರಿತ ಚಿತ್ರಕಲೆಯ ಬಗ್ಗೆ ಉಪನ್ಯಾಸ ನೀಡಿ ಮನ್ನಣೆ ಗಳಿಸಿದ್ದರು. 1961 ರಿಂದ 1963ರವರೆಗೆ ಫ್ರಾನ್ಸ್ ಸರ್ಕಾರದ ಆಹ್ವಾನದ ಮೇರೆಗೆ ಅಲ್ಲಿ ಶೋಧಕಾರ್ಯ ನಡೆಸಿದ್ದರು. 1966, 1981 ಹಾಗೂ 1984ರಲ್ಲಿ ಅಮೆರಿಕದಿಂದ ಆಹ್ವಾನಿತರಾಗಿ ಶೈಲಾಶ್ರಯಗಳ ಅಧ್ಯಯನ ಮಾಡಿದ್ದರು. 1981ರಲ್ಲಿ ಇಟಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಪುರಾತತ್ತ್ವ ವಿದ್ವಾಂಸರ ಗೋಷ್ಠಿಯಲ್ಲಿ ತಮ್ಮ ಶೋಧ ಪ್ರಬಂಧವನ್ನು ಮಂಡಿಸಿದ್ದರು. ಅಲ್ಲದೆ, ಆಸ್ಟ್ರೇಲಿಯದ ಶೈಲಾಶ್ರಿತ ಕಲಾ ಅಧ್ಯಯನ ಸಂಸ್ಥೆಗೂ ಪ್ರತಿನಿಧಿಯಾಗಿ ನಿಯುಕ್ತರಾಗಿದ್ದರು.

ಭಾರತೀ ಕಲಾ ನಿಕೇತನದ ಮೂಲಕ ಡಾ|| ವಿಷ್ಣು ಭಟ್ನಾಗರ್, ಡಾ|| ಸುರೇಂದ್ರ ಕುಮಾರ್ ಆರ್ಯ, ಡಾ|| ನಾಗದೇವ್, ಡಾ|| ರವೀಂದ್ರ ಭಾರತೀಯಂತಹ ಇನ್ನೂ ಅನೇಕ ಗಣ್ಯ ಸಂಶೋಧಕರನ್ನು ತರಬೇತುಗೊಳಿಸಿದವರು ವಾಕಣಕರ್. ಅಂತಹ ಶಿಷ್ಯರಿಂದು ವಾಕಣಕರರು ಹಾಕಿದ ಅಭಿಪ್ರಾಯವನ್ನು ಅವಲಂಬಿಸಿ ಶೋಧಕಾರ್ಯ ಮುಂದುವರಿಸಿ ಪ್ರಖ್ಯಾತಿಗೆ ಪಾತ್ರರಾಗಿದ್ದಾರೆ. ವಾಕಣಕರ್ ನೀಡಿದ ಮಾರ್ಗದರ್ಶನ ಪುರಾತತ್ತ್ವ ಕ್ಷೇತ್ರದಲ್ಲಿರುವವರಿಗೆಲ್ಲ ಖಂಡಿತಕ್ಕೂ ಸ್ಫೂರ್ತಿದಾಯಕವಾಗಿದೆ.

ಇಷ್ಟೆಲ್ಲಾ ಸಾಧಿಸಿದ್ದರೂ ವಾಕಣಕರರು ಮುಗುಳ್ನಗೆಯಿಂದ ಹೇಳುತ್ತಿದ್ದುದು ಹೀಗೆ: "ನನ್ನಿಂದ ಭೀಂಬೇಟ್ಕಾಗೆ ಪ್ರಸಿದ್ಧಿ ದೊರೆತಿಲ್ಲ; ಬದಲಾಗಿ ಭೀಂಬೇಟ್ಕಾದ ಕಾರಣ ನನಗೆ ಪದ್ಮಶ್ರೀ ಹಾಗೂ ಭಾರತಕ್ಕೆ ಜಗತ್ತಿನಲ್ಲಿ ಸ್ಥಾನ ದೊರೆತಿದೆ." ●

(ಪೆನ್ ಫ್ರೆಂಡ್)

ಹೊಲಿಗೆ ಯಂತ್ರದ ಹುಟ್ಟು

ಹೊಲಿಗೆ ಯಂತ್ರ ಕಂಡುಹಿಡಿದ ಎಲಿಯಾಸ್ ಹೋವೆ ಹುಟ್ಟಿನಿಂದ ದುರ್ಬಲ. ಒಂದು ಕಾಲು ಬೇರೆ ಕುಂಟು. ಹುಟ್ಟಿದ್ದು *(1819ರ ಜುಲೈ 9 ರಂದು)* ಮೆಸಾಚುಸೆಟ್ಸ್‌ನ ಸ್ಪೆನ್ಸರ್ ಎಂಬಲ್ಲಿ. ಬಾಲಕನಾಗಿದ್ದಾಗಲೇ ತಂದೆಯ ಸಹಾಯಕನಾಗಿ ಧಾನ್ಯದ ಮಿಲ್‌ನಲ್ಲಿ ದುಡಿದ. ಹದಿನಾರನೆ ವಯಸ್ಸಿಗೆ ಲೋವೆಲ್‌ನ ಕಾರ್ಖಾನೆಯ ಕೆಲಸಗಾರನಾಗಿ ಸೇರಿದ. ಅಲ್ಲಿನ ಭಯದ ವಾತಾವರಣದಲ್ಲಿ ಕೆಲಸ ಮಾಡಲಾಗದೆ ನೌಕರಿ ಕಳೆದುಕೊಂಡ. ಬೋಸ್ಟನ್‌ಗೆ ಹೋಗಿ ಯಂತ್ರಚಾಲಕನಾಗಿ ಸೇರಿಕೊಂಡ.

ಇಪ್ಪತ್ತೊಂದನೆ ವಯಸ್ಸಿಗೆ ಮದುವೆಯಾದ. ಕೆಲವೇ ವರ್ಷಗಳಲ್ಲಿ ಮೂರು ಮಕ್ಕಳ ತಂದೆಯಾದ. ಅನಾರೋಗ್ಯ, ಬಡತನ ಅವನ ಖಾಯಂ ಜತೆಗಾರರಾದರು. ಖಾಯಿಲೆ ಮಲಗಿದಾಗ ಸಂಸಾರ ನಿರ್ವಹಣೆಗೆ ಹೆಂಡತಿ ಬಟ್ಟೆ ಹೊಲಿದು ಸಂಪಾದನೆ ಮಾಡುತ್ತಿದ್ದಳು.

ಒಮ್ಮೆ ಖಾಯಿಲೆ ಮಲಗಿದ್ದಾಗ ಹೋವೆಗೆ, ತನ್ನ ಹೆಂಡತಿ ಕೈಯಲ್ಲಿ ಹೊಲಿಗೆ ಹಾಕುತ್ತಾ ಕಷ್ಟಪಡುವುದು ನೋಡಿ ಮರುಕ ಹುಟ್ಟಿತು. ಹೊಲಿಗೆ ನಿರ್ವಹಿಸುವ ಯಂತ್ರವೊಂದನ್ನು ಕಂಡು ಹಿಡಿಯುವ ಮಹದಾಸೆ ಮೂಡಿತು. ಅದರಿಂದ ಸಪಿರಾರು ಮಹಿಳೆಯರ ಜೀವನ ಸುಗಮವಾದೀತೆಂದು ಅವನ ಹಂಬಲ. ಹಾಸಿಗೆಯಲ್ಲಿ ಮಲಗಿದ್ದೇ ಹೊಲಿಗೆ ಯಂತ್ರದ ವಿನ್ಯಾಸ ರೂಪಿಸಿದ. ಆರೋಗ್ಯ ಸುಧಾರಿಸಿದ ಮೇಲೆ ಯಂತ್ರದ ಮಾದರಿಯನ್ನೂ ತಯಾರಿಸಿದ.

ಹೋವೆ ನಿರ್ಮಿಸಿದ ಹೊಲಿಗೆ ಯಂತ್ರಗಳನ್ನು ಮಾರುವ ಜವಾಬ್ದಾರಿಯನ್ನು ಆತನ ಸ್ನೇಹಿತನೊಬ್ಬ ವಹಿಸಿಕೊಂಡ. ಟೇಲರ್‌ಗಳು ಮತ್ತು ಬಟ್ಟೆ ತಯಾರಕರು ಗಾಬರಿಗೊಂಡರು. ಈ ಯಂತ್ರ ತಮ್ಮ ಅನ್ನವನ್ನೇ ಕಸಿದುಕೊಳ್ಳುತ್ತದೆಂದು ಭಯ. ಯಾರೂ ಹೊಲಿಗೆ ಯಂತ್ರಗಳನ್ನು ಕೊಳ್ಳಲು ಮುಂದೆ ಬರಲಿಲ್ಲ. ಯಂತ್ರ ವ್ಯಾಪಾರ ವಹಿಸಿಕೊಂಡಿದ್ದ ಸ್ನೇಹಿತನೂ ಸೋತು ಹಿಂದೆ ಸರಿದ. ಯಂತ್ರಗಳಿಗೆ ಲಂಡನ್‌ನಲ್ಲಿ ಒಳ್ಳೆ ಮಾರುಕಟ್ಟೆ ಸಿಗಬಹುದೆಂದು ಹೋವೆ ಸಂಸಾರವನ್ನು ಕರೆದುಕೊಂಡು ಅಲ್ಲಿಗೆ ಹೋದ. ಆದರೆ ಅಲ್ಲಿಯೂ ಅವನಿಗೆ ನಿರಾಸೆಯೇ.

ನಿರಾಸೆಗೊಂಡ ಹೋವೆ ತಂದೆಯ ಮನೆ ಸೇರಿದ. ಕೆಲವೇ ದಿನಗಳಲ್ಲಿ ಆತನ ಹೆಂಡತಿಯೂ ಅನಿರೀಕ್ಷಿತವಾಗಿ ಮರಣ ಹೊಂದಿದಳು. ಸಂಸಾರ ನಿರ್ವಹಣೆಗೆ ಅನಿವಾರ್ಯವಾಗಿ ಆತ ಕೆಲಸಕ್ಕೆ ಸೇರಿದ. ಅಮೇರಿಕದ ಮೊದಲ ರೇಲ್ವೇ ರಸ್ತೆ ನಿರ್ಮಾಣ ಕಾರ್ಯ ನಡೆದಿತ್ತು. ಆದರ ಕಾರ್ಯ ನಿರ್ವಹಿಸುತ್ತಿದ್ದ ಎಂಜಿನಿಯರ್ ಬಳಿ ಸಹಾಯಕನಾಗಿ ಹೋವೆ ಸೇರಿದ.

ಈ ನಡುವೆ ಆತನ ಸ್ನೇಹಿತನೊಬ್ಬ ಹೊಲಿಗೆ ಯಂತ್ರ ಮಾರಾಟದಲ್ಲಿ ಆಸಕ್ತಿ ವಹಿಸಿದ. ನ್ಯೂಯಾರ್ಕ್ ನಗರದಲ್ಲಿ ಮಾರಾಟಕ್ಕೆ ಯತ್ನ ನಡೆಸುವುದಾಗಿ ಆಸೆ ಹುಟ್ಟಿಸಿದ. ನ್ಯೂಯಾರ್ಕ್‌ನಲ್ಲಿ ಹೋವೆಯ ಯಂತ್ರದ ಮಾದರಿಯಲ್ಲೇ ತಯಾರಾದ ಹೊಲಿಗೆ ಯಂತ್ರಗಳು ಮಾರಾಟವಾಗುತ್ತಿದ್ದುದು ಕಂಡು ಅವನಿಗೆ ಆಶ್ಚರ್ಯವಾಯಿತು. ಅಂಥ ಮಾರಾಟಗಾರರ ಮೇಲೆ ಮೊಕದ್ದಮೆ ಹೂಡಿ ಆತ ಜಯಗಳಿಸಿದ. ಹೊಲಿಗೆ ಯಂತ್ರ ನಿರ್ಮಾಪಕರು ಹೋವೆಗೆ ಗೌರವಧನ ನೀಡಬೇಕೆಂದು ನ್ಯಾಯಾಲಯ ತೀರ್ಪಿತ್ತಿತು.

ಪರಿಣಾಮವೆಂದರೆ ಹೋವೆ ಅಮೇರಿಕದ ಶ್ರೀಮಂತರಲ್ಲೊಬ್ಬನಾದ. ಐವತ್ತು ವರ್ಷ ಬದುಕಿದ್ದ ಈತನಿಗೆ ಹಲವು ಗೌರವ, ಪದಕ, ಪ್ರಶಸ್ತಿಗಳೂ ಸಂದವು.

ಹೆಂಡತಿಯ ಕಷ್ಟ ನೋಡಲಾರದೇ ನಿರ್ಮಿಸಿದ ಯಂತ್ರವೊಂದು ವಿಶ್ವದ ಮಹಿಳೆಯರಿಗೆ ಬಹುದೊಡ್ಡ ಉಪಕಾರವಾಯಿತು. *

● ಜೆ.ವಿ. ಶಶಿಧರ ●

ಸಂಗಾತಿ ಯಾರಿಗೆ?

● ರವೀಂದ್ರ ಎಸ್. ●

ಕಾರ್ಗತ್ತಲೆ ಎಲ್ಲೆಡೆ ಕವಿದಿತ್ತು. ಬೀದಿಯ ದೀಪಗಳು ಮಂದವಾಗಿ ಅಲ್ಲೊಂದು, ಇಲ್ಲೊಂದು ಮಾತ್ರ ಉರಿಯುತ್ತಿದ್ದವು. ರಜನಿಯ ಕಾಲುಗಳು ಮನೆಯತ್ತ ವೇಗವಾಗಿ ಹೆಜ್ಜೆ ಹಾಕಿದ್ದವು. ಮೌನವಾಗಿದ್ದ ಆ ವಾತಾವರಣವನ್ನು ಮುರಿದಿದ್ದು ಆಕೆಯ ಬಳಿ ಬಂದು ನಿಂತ ಮೋಟಾರ್ ಬೈಕ್‌ನ ಸದ್ದು. ರಜನಿ ಆ ವ್ಯಕ್ತಿಯತ್ತ ನೋಡಿದಳು.

"ನಾನು ರವಿ ಅಂತ, ಕತ್ತಲಲ್ಲಿ ನಡೆದುಕೊಂಡು ಏಕೆ ಹೋಗುವಿರಿ? ಬನ್ನಿ, ಮನೆಯವರೆಗೂ ಬಿಡುತ್ತೇನೆ." ಸಿನಿಮ್ಮಾ ನಟರು ಸಂಭಾಷಣೆಯನ್ನು ಹೇಳುವಂತೆ ನುಡಿದ. ಅವನ ಧ್ವನಿಯಲ್ಲಿದ್ದ ಆಕರ್ಷಣೆ, ಸೆಳೆತ ರಜನಿಯನ್ನು ಯಾವುದೋ ಲೋಕಕ್ಕೆ ಕರೆದೊಯ್ದಂತಿತ್ತು. ನಡೆಯಬೇಕಿದ್ದ ದೂರ ಅವಳನ್ನು ಎಚ್ಚರಿಸಿ ಅವನೊಂದಿಗೆ ಕುಳಿತುಕೊಳ್ಳುವಂತೆ ಪ್ರೇರೇಪಿಸಿತು.

"ನಿಮ್ಮ ಹೆಸರು?" ರವಿ ಪ್ರಶ್ನಿಸಿದ.


"ರಜನಿ."

"ಏನು ಮಾಡುತ್ತಿರುವಿರಿ?"

"ಡಿಗ್ರಿ ಮುಗಿಯಿತು. ಅಕ್ಕ ದುಡಿದು ನನ್ನನ್ನೂ, ಅಮ್ಮನನ್ನೂ ನೋಡಿಕೊಳ್ಳುತ್ತಿದ್ದಾಳೆ. ಅವಳ ಮದುವೆಯ ನಂತರ ಮನೆಯ ಜವಾಬ್ದಾರಿ ನನ್ನದಾಗುತ್ತದೆ, ಕೆಲಸಕ್ಕೆ ಸೇರಬೇಕಾಗುತ್ತದೆ." ಅವಳ ಮಾತು ಪರಿಚಿತ ವ್ಯಕ್ತಿಯೊಂದಿಗೆ ಆಡಿದಂತಿತ್ತು. ಮೂರು ನಾಲ್ಕು ನಿಮಿಷಗಳಲ್ಲೇ ರಜನಿ ಮನೆ ಬಂದಿತೆಂದು ಹೇಳಿದಾಗ ರವಿ ಬೈಕ್ ನಿಲ್ಲಿಸಿದ. ರಜನಿ ಮನೆಯೊಳಗೆ ನಡೆದಳು. ರವಿ ಗುಡ್‌ನೈಟ್ ಹೇಳುತ್ತಾ ಬೈಕ್ ಸ್ಟಾರ್ಟ್ ಮಾಡಿದ.

"ಯಾರಿಗೇ ಅದು ಥ್ಯಾಂಕ್ಸ್ ಹೇಳುತ್ತಿದ್ದೆಯಲ್ಲಾ?" ಅಮ್ಮ ಪ್ರಶ್ನಿಸಿದಾಗ ರಶ್ಮಿಯೂ ತಂಗಿಯತ್ತ ಕುತೂಹಲದಿಂದ ನೋಡುತ್ತಿದ್ದಳು.

"ಲತಾಳ ಮನೆಯಲ್ಲಿ ತಡವಾಯಿತು. ಒಂದು ಆಟೋ ಕೂಡ ಸಿಗಲಿಲ್ಲ. ಯಾರೋ ಆ ವ್ಯಕ್ತಿ ಗೊತ್ತಿಲ್ಲ, ಹೆಸರು ರವಿ ಅಂತೆ. ಮನೆಯವರೆಗೂ ಬಿಟ್ಟು ಹೋದರು. ಇಲ್ಲದಿದ್ದರೆ ಮನೆ ಸೇರುವುದು ಇನ್ನೂ ತಡವಾಗುತ್ತಿತ್ತು" ರಜನಿ ಉತ್ತರಿಸಿದಳು.



"ರಜನಿ ನೀನು ಮಾಡಿದ್ದು ಸರಿಯಲ್ಲ, ಪರಿಚಯವಿಲ್ಲದ ವ್ಯಕ್ತಿ ಕರೆದ ಕೂಡಲೇ ಹೋಗಿಬಿಡುವುದೇ? ಇನ್ನು ಮುಂದೆ ಎಲ್ಲಿಗಾದರೂ ಹೋದರೆ ಬೇಗ ಮನೆಗೆ ಬಂದುಬಿಡು" ತಂಗಿಯನ್ನು ಎಚ್ಚರಿಸಿದಳು ರಶ್ಮಿ. ಅವಳ ಮಾತಿನಲ್ಲಿ ಯಾವುದೋ ವೇದನೆ ತುಂಬಿದಂತಿತ್ತು.

ಹದಿಹರೆಯದ ರಜನಿ ರವಿಯ ಮೊದಲ ನೋಟಕ್ಕೆ ಮರುಳಾಗಿ ಹೋಗಿದ್ದಳು. ಅವನು ತನ್ನ ಜೀವನ ಸಂಗಾತಿಯಾದಂತೆ ಕನಸು ಕಾಣುತ್ತಿದ್ದಳು. ಮತ್ತೊಮ್ಮೆ ಬಂದರೆ ಅವನಿಗೆ ತನ್ನ ಮನಸ್ಸಿನ ಭಾವನೆಗಳನ್ನು ತಿಳಿಸಬೇಕು ಎಂದು ತವಕಿಸುತ್ತಿದ್ದಳು. ಅವಳು ನಿರೀಕ್ಷಿಸುತ್ತಿದ್ದ ದಿನ ಕಡೆಗೂ ಬಂದಿತು. ಮನೆಯ ಮುಂದೆ ರವಿ ನಿಂತಿದ್ದಾನೆ. ಅವಳಿಗೆ ತನ್ನ ಕಣ್ಣುಗಳನ್ನೇ ನಂಬಲು ಆಗುತ್ತಿಲ್ಲ.

"ಸ್ವಲ್ಪ ಹೊರಗೆ ಬನ್ನಿ, ನಿಮ್ಮ ಜೊತೆ ಮಾತನಾಡಬೇಕು." ರವಿ ನುಡಿದಾಗ ರಜನಿ ಮೆಲ್ಲಗೆ ಅವನನ್ನು ಹಿಂಬಾಲಿಸಿದಳು. "ನಾನು ಬಂದಿರುವುದು ನಿಮಗೆ ಆಶ್ಚರ್ಯವಾಗಿರಬಹುದು. ಆದರೆ ನಿಮ್ಮನ್ನು ನೋಡಿದಾಗಿನಿಂದ ನನ್ನ ಮನಸ್ಸು ಸ್ಥಿಮಿತದಲ್ಲಿಲ್ಲ. ಮನದ ತುಂಬಾ ನೀವೇ ತುಂಬಿರುವಿರಿ. ಐ ಲವ್.ಯು ರಜನಿ" ರವಿ ತನ್ನ ಮನಬಿಚ್ಚಿ ನುಡಿದ. ತನ್ನ ಮನದಲ್ಲಿರುವುದೇ ಅವನ ಮನದಲ್ಲೂ ಇರುವುದನ್ನು

ಕಂಡು ಬೆರಗಾದ ರಜನಿ ನುಡಿದಳು "ನಿಮ್ಮನ್ನು ನೋಡಿದ ಕ್ಷಣದಿಂದ ನನ್ನ ಹೃದಯದಲ್ಲಿ ನೀವೇ ತುಂಬಿರುವಿರಿ. ಆ ದಿನ ನಿಮ್ಮ ಬಗ್ಗೆ ಏನು ಕೇಳಲೂ ಆಗಲಿಲ್ಲ."

"ನಾನು ಬಿಸಿನೆಸ್ ಸಲುವಾಗಿ ಈ ಊರಿಗೆ ಬಂದಿದ್ದೇನೆ. ಸದ್ಯಕ್ಕೆ ರೂಂ ಮಾಡಿಕೊಂಡಿದ್ದೇನೆ." ರವಿ ತನ್ನನ್ನು ಇನ್ನಷ್ಟು ಪರಿಚಯಿಸಿಕೊಂಡ. ಅವನ ತೋಳುಗಳು ಆಕೆಯನ್ನು ಬಳಸಿದವು. ರವಿಯ ವಿಳಾಸ ತೆಗೆದುಕೊಂಡ ರಜನಿ "ಸರಿ ಬರುತ್ತೇನೆ. ಮನೆಯಲ್ಲಿ ಹೇಳಿ ಬಂದಿಲ್ಲ" ಎಂದು ನುಡಿದಳು.

ರಜನಿ ಮನೆಯಲ್ಲಿ ಗೆಳತಿಯ ಮನೆಗೆ ಹೋಗುತ್ತೇನೆ ಎಂದು ಹೇಳಿ ರವಿಯ ಜೊತೆಗೆ ಸುತ್ತಾಡುವುದು ದಿನಚರಿಯಾಗಿ ಹೋಯಿತು.

"ರವಿ ನಾವಿಬ್ಬರೂ ಎಷ್ಟು ದಿನಗಳು ಹೀಗೆಯೇ ಇರುವುದು? ಬೇಗ ಮದುವೆಯಾಗಿ ಬಿಡೋಣ" ರಜನಿ ಒಮ್ಮೆ ಹೇಳಿದಳು.

"ರಜನಿ, ನಿಮ್ಮ ಅಕ್ಕನ ಮದುವೆಯಾಗದೇ ನಮ್ಮ ಮದುವೆಗೆ ಮನೆಯಲ್ಲಿ ಒಪ್ಪುತ್ತಾರೆಯೆ?" ರವಿ ಪ್ರಶ್ನಿಸಿದ.

"ಅಕ್ಕ ಮದುವೆಯ ಬಗ್ಗೆ ಮಾತನಾಡಿದಾಗಲೆಲ್ಲಾ ವಿಷಯವನ್ನೇ ಬದಲಿಸಿಬಿಡುತ್ತಾಳೆ. ಏಕೆ ಹೀಗೆ ವರ್ತಿಸುತ್ತಾಳೆ ಎಂಬುದೇ ಗೊತ್ತಿಲ್ಲ" ರಜನಿ ಉತ್ತರಿಸಿದಳು.

ರಜನಿ ತಾನು ಹೇಳಿದ ಸಮಯಕ್ಕೆ ಅಂದು ಬರದಿದ್ದರಿಂದ ರವಿ ರಜನಿಯ ಮನೆಗೆ ಹೋದ. ಅವನ ಆಗಮನ ರಜನಿಗೆ ಆನಂದವನ್ನು ನೀಡಿತ್ತು. ರವಿಯ ಮಾತುಗಳು ಒಳಗಡೆಯಿದ್ದ ರಶ್ಮಿಗೆ ಯಾವುದೋ ಪರಿಚಿತ ಧ್ವನಿಯಂತೆ ತೋರಿದವು. ಹೊರಬಂದು ದಿಗ್ಭ್ರಮೆಯಿಂದ ಕ್ಷಣಕಾಲ ನಿಂತಳು. ಅದೇ ವ್ಯಕ್ತಿ. ಅನುಮಾನವೇ ಇಲ್ಲ. ಅವಳಿಗರಿವಿಲ್ಲದಂತೆಯೇ ಕಾಫಿಯ ಕಪ್ ಕೆಳಗೆ ಬಿತ್ತು.

"ನಾನು ಹೇಳುತ್ತಿದ್ದೆನಲ್ಲಾ ರವಿ ಅಂತಾ, ಈ ದಿನ ಮನೆಗೆ ಬಂದಿದ್ದಾರೆ" ರಜನಿ ಅಕ್ಕನಿಗೆ, ಅಮ್ಮನಿಗೆ ಪರಿಚಯಿಸಿದಳು. "ರಶ್ಮಿ" ತನಗರಿವಿಲ್ಲದಂತೆಯೇ ರವಿ ನುಡಿದಿದ್ದ. ರಶ್ಮಿ ಯಾವ ಮಾತನ್ನೂ ಆಡದೆ ಬಿರುಸಾಗಿ ಒಳಗೆ ನಡೆದಳು. ರಜನಿಗೆ ಏನಾಯಿತೆಂದು ತಿಳಿಯದೆ ವಿಸ್ಮಯದಿಂದ ರವಿಯನ್ನೇ ನೋಡುತ್ತಿದ್ದಳು.

ರಶ್ಮಿಯ ಮನಸ್ಸು ಐದಾರು ವರ್ಷಗಳ ಹಿಂದೆ ಹೋಯಿತು. ರಜನಿ ಪ್ರೀತಿಸಿರುವ ರವಿಯೇ ತನ್ನ ಬಾಳನ್ನು ಈ ಸ್ಥಿತಿಗೆ ತಂದದ್ದು. ರವಿಯೊಡನೆ ಕಳೆದ ಆ ದಿನಗಳು ಮರೆಯಾಗಿದ್ದ ನೆನಪಿನ ಅಂಗಳದಲ್ಲಿ ಮತ್ತೆ ನರ್ತಿಸಲಾರಂಭಿಸಿದ್ದವು. ಬೇಗ ಹಿಂತಿರುಗಿ ಬಿಡುತ್ತೇನೆ ಎಂದು ಮಾತು ಕೊಟ್ಟಿದ್ದ ಅವನು ಬಂದಿರುವುದು ಈಗಲೇ. ಅದೂ ತನಗಾಗಿ ಅಲ್ಲ, ರಜನಿಗಾಗಿ. ರಶ್ಮಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ತನ್ನ ಬಾಳಿನಂತೆ ರಜನಿಯ ಬಾಳನ್ನೂ ಕತ್ತಲಲ್ಲಿ ಕಳೆಯುವಂತೆ ಮಾಡುತ್ತಿದ್ದಾನೆ. ರಜನಿ ಚಿಕ್ಕವಳು ಎಂದು ಯಾವ ವಿಷಯವನ್ನೂ ಹೇಳದಿದ್ದುದು, ರವಿಯನ್ನು ಅವಳಿಗೆ ಪರಿಚಯಿಸದಿದ್ದುದೇ ಈ ಅನರ್ಥಕ್ಕೆ ಕಾರಣವಾಯಿತೆಂದುಕೊಳ್ಳುತ್ತಾಳೆ ರಶ್ಮಿ.

"ನನ್ನ ಜೊತೆಗೆ ಬನ್ನಿ. ಕೆಲವು ವಿಷಯಗಳನ್ನು ನಿಮಗೆ ತಿಳಿಸಬೇಕು." ರವಿ ನುಡಿದಾಗ ರಜನಿ ಮೂಕವಿಸ್ಮಿತಳಾಗಿ ಹಿಂಬಾಲಿಸಿದಳು. ಆಕೆಗೆ ಮನಸ್ಸಿನ ಉದ್ವೇಗವನ್ನು ತಡೆಯಲಾಗುತ್ತಿಲ್ಲ. ರವಿ ಹೇಳಲಾರಂಭಿಸಿದ. "ನನಗೆ ನೀವು ರಶ್ಮಿಯ ತಂಗಿ ಎಂದು ತಿಳಿದಿರಲಿಲ್ಲ. ನಾನು ರಶ್ಮಿಯನ್ನು ಪ್ರೀತಿಸುತ್ತಿದ್ದೆ. ಮದುವೆಯಾಗಲು ನಿರ್ಧರಿಸಿದೆ. ಬಿಸಿನೆಸ್ ಸಲುವಾಗಿ ಬೇರೆ ಊರಿಗೆ ಹೋಗಬೇಕಾಯಿತು. ಅಲ್ಲಿ ಸಂಭವಿಸಿದ ಅಪಘಾತದಲ್ಲಿ ಪೆಟ್ಟು ಬಿದ್ದು ಆಸ್ಪತ್ರೆಯನ್ನು ಸೇರಿದೆ. ಚೇತರಿಕೆಗೆ ಬಹಳ ದಿನಗಳು ಬೇಕಾದವು. ಸ್ವಲ್ಪ ದಿನಗಳಲ್ಲೇ ರಶ್ಮಿಗೆ ಕಾಗದಗಳನ್ನು ಬರೆದೆ. ಉತ್ತರವೇ ಬರಲಿಲ್ಲ. ಇಲ್ಲಿಗೆ ಬಂದಾಗ ಮನೆ ಬದಲಾಯಿಸಿದಳು. ಎಲ್ಲಿದ್ದಾಳೆ ಎಂಬುದೇ ತಿಳಿದಿರಲಿಲ್ಲ. ಅವಳನ್ನು ಈಗಲೇ ನೋಡುತ್ತಿರುವುದು." ರವಿ ಬಲವಂತವಾಗಿ ತಡೆದುಕೊಂಡ ಕಣ್ಣೀರು ರಜನಿಯ ಮನದ ಮೇಲೆ ಪ್ರಭಾವ ಬೀರುವುದರಲ್ಲಿ ಯಶಸ್ವಿಯಾಯಿತು. ರಶ್ಮಿ ಮದುವೆಯಾಗಲು ಹಿಂಜರಿಯುತ್ತಿದ್ದಳೇಕೆ ಎಂಬುದು ಅವಳಿಗೆ ಅರಿವಾಯಿತು.

"ರಜನಿ ನನಗೇನು ಮಾಡಬೇಕೋ ತಿಳಿಯುತ್ತಿಲ್ಲ. ರಶ್ಮಿಗೆ ನಡೆದುದೆಲ್ಲವನ್ನೂ ಹೇಳಬೇಕೆಂದುಕೊಂಡೆ. ಅವಳು ಅವಕಾಶವನ್ನೇ ಕೊಡಲಿಲ್ಲ. ನನ್ನ ಸ್ಥಿತಿ ಅವಳಿಗೆ ಹೇಗೆ ಹೇಳಲಿ?" ರವಿ ಚಿಂತಾಕ್ರಾಂತನಂತೆ ಕುಳಿತು

ಕೊಂಡಾಗ ರಜನಿಗೆ ಅವನ ಬಗ್ಗೆ ಕನಿಕರ ಉಂಟಾಯಿತು. ತಾನು ಎಲ್ಲಾ ವಿಷಯವನ್ನು ರಷ್ಮಿಗೆ ತಿಳಿಸುವುದಾಗಿಯೂ, ಅವರಿಬ್ಬರೂ ಒಂದಾಗಬೇಕೆಂದು ಹೇಳಿ ಮನೆಗೆ ನಡೆದಳು. ಅನೀರಿಕ್ಷಿತ ಘಟನೆಗಳಿಂದ ಆಕೆಯ ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು. ರವಿಯನ್ನು ತಾನು ಮದುವೆಯಾದರೆ ತಪ್ಪೇನು? ರಷ್ಮಿಗಾಗಿ ತನ್ನ ಬಾಳನ್ನು ತ್ಯಾಗಮಾಡಬೇಕೆ ಎಂಬ ಯೋಚನೆ ಅವಳ ಮನದಲ್ಲಿ ಮೂಡಿದರೂ ಮುಂದುವರೆಯಲಿಲ್ಲ. ಇಷ್ಟು ದಿನಗಳಿಂದ ತನ್ನನ್ನು ಪ್ರೀತಿಯಿಂದ ಬೆಳೆಸಿರುವ ಅಕ್ಕನಿಗಾಗಿ ಈ ತ್ಯಾಗವನ್ನು ಮಾಡದಿದ್ದರೆ ಬಾಳೇ ವ್ಯರ್ಥ ವೆನಿಸಿತು.

ರಜನಿ ರಷ್ಮಿಗೆ ನಡೆದ ಘಟನೆಗಳನ್ನೆಲ್ಲಾ ವಿವರಿಸಿ "ನೀನು ಮತ್ತು ರವಿ ಒಂದಾಗುವ ಶುಭ ಸಮಯ ಈಗ ಬಂದಿದೆ" ಎಂದಳು. "ನಿನ್ನ ಈ ಉಪಕಾರವನ್ನು ಎಂದಿಗೂ ಮರೆಯುವುದಿಲ್ಲ. ನನ್ನ ಬಾಳಿನಲ್ಲಿ ಆರಿಹೋಗಿದ್ದ ಜ್ಯೋತಿಯನ್ನು ಮತ್ತೆ ಬೆಳಗಿಸುತ್ತಿರುವೆ" ಎನ್ನುತ್ತಾ ತಂಗಿಯನ್ನು ಆಲಂಗಿಸುತ್ತಾಳೆ ರಷ್ಮಿ.

ರವಿಯನ್ನು ತಪ್ಪು ತಿಳಿದಿದ್ದಕ್ಕೆ, ಅವನು ಮಾತನಾಡಲು ಇಷ್ಟಪಟ್ಟಾಗ ತಿರಸ್ಕರಿಸಿದ್ದಕ್ಕಾಗಿ ರಷ್ಮಿ ಪರಿತಪಿಸುತ್ತಿದ್ದಳು. ಒಂದು ರೀತಿಯ ಉದ್ವೇಗದಿಂದೊಡಗೂಡಿದ ಸಂತೋಷ ಆಕೆಯದಾಗಿತ್ತು.

ರಜನಿ ರವಿಯನ್ನು ಭೇಟಿಯಾಗಿ ನುಡಿದಳು. "ಜೀವನವೇ ವಿಚಿತ್ರ. ಯಾವ ತಿರುವನ್ನು ಬೇಕಾದರೂ ಪಡೆಯಬಹುದು. ನೀವು ರಷ್ಮಿ ಒಂದಾಗುತ್ತಿರುವುದು ನನಗೆ ಸಂತೋಷವನ್ನು ತಂದಿದೆ. ಆಕೆ ಇಷ್ಟು ದಿನಗಳಿಂದ ಏನನ್ನೂ ಹೇಳದೆ ಮೂಕ ವೇದನೆಯನ್ನು ಅನುಭವಿಸುತ್ತಿದ್ದಳು. ರಷ್ಮಿಯನ್ನು ನಿಮ್ಮ ರೂಂಗೆ ಕರೆದುಕೊಂಡು ಬರುತ್ತೇನೆ. ನೀವೇ ಮಾತನಾಡಿ."

"ರಜನಿ ನಾನು ಏನು ಹೇಳಬೇಕೋ ತಿಳಿಯುತ್ತಿಲ್ಲ. ನನ್ನನ್ನು ರಷ್ಮಿಯೊಂದಿಗೆ ಸೇರುವಂತೆ ಮಾಡಿದೆ. ನನ್ನಿಂದಾದ ತಪ್ಪುಗಳನ್ನು ಕ್ಷಮಿಸಿಬಿಡು." ರವಿ ಹೇಳುತ್ತಾನೆ.

ರಜನಿ ಅಕ್ಕನ ಮುಖದಲ್ಲಿ ಹೊಸದಾಗಿ ಗೆಲುವಿನ ಛಾಯೆ ಮತ್ತು ಕಣ್ಣುಗಳಲ್ಲಿ ತೇಜಸ್ಸು ಮೂಡಿರುವುದನ್ನು ಗಮನಿಸುತ್ತಾಳೆ.

ಇಷ್ಟು ದಿನಗಳ ನಂತರ ರವಿಯೊಂದಿಗೆ ಮಾತನಾಡುತ್ತಿರುವುದು. ಮೊದಲಿನಂತೆ ಸಲಿಗೆಯಿಂದ ಮಾತನಾಡಲು ಸಾಧ್ಯವಾಗುವುದೇ? ಒಂದು ವೇಳೆ ರವಿ ರಜನಿಯನ್ನೇ ಮದುವೆಯಾಗುತ್ತೇನೆ ಎಂದು ಹೇಳಿದರೇ? ರಷ್ಮಿಯ ಯೋಚನೆ ಸಾಗಿತ್ತು. ಹೃದಯದ ಬಡಿತ ಕ್ಷಣದಿಂದ ಕ್ಷಣಕ್ಕೆ ಹೆಚ್ಚುತ್ತಿತ್ತು.

ರವಿಯ ರೂಮ್ ಅನ್ನು ಸಮೀಪಿಸುತ್ತಾರೆ. ಬಾಗಿಲಿಗೆ ಬೀಗ ಹಾಕಿರುವುದು ಕಂಡು ಆಶ್ಚರ್ಯವಾಗುತ್ತದೆ. "ಹತ್ತಿರದಲ್ಲೇ ಎಲ್ಲಿಗಾದರೂ ಹೋಗಿರುತ್ತಾರೆ. ಈಗ ಬಂದುಬಿಡುತ್ತಾರೆ" ರಜನಿ ಅಕ್ಕನಿಗೆ ಹೇಳುತ್ತಾಳೆ. ಗಡಿಯಾರದ ಮುಳ್ಳು ಮುಂದಕ್ಕೆ ಹೋಗುತ್ತಿತ್ತೇ ವಿನಾ ರವಿ ಬರುವ ಸುಳುಹು ಕಾಣಲೇ ಇಲ್ಲ. ರಜನಿಯ ಮನಸ್ಸು ಕಳವಳಕ್ಕೀಡಾಗಿತ್ತು. "ರಷ್ಮಿ, ನೀನಿಲ್ಲೆ ಇರು, ಪಕ್ಕದ ಮನೆಗೆ ಹೋಗಿ ಕೇಳಿಕೊಂಡು ಬರುತ್ತೇನೆ" ಎನ್ನುತ್ತಾ ಹೊರಟಳು.


"ರವಿ ಎಲ್ಲಿಗೆ ಹೋಗಿದ್ದಾರೆ? ಏನಾದರೂ ಹೇಳಿದ್ದಾರಾ?" ರಜನಿ ಪ್ರಶ್ನಿಸಿದಳು.

"ಬೆಳಿಗ್ಗೆಯೇ ಹೆಂಡತಿಯ ಜೊತೆ, ಮನೆ ಖಾಲಿ ಮಾಡಿಕೊಂಡು ಹೋದರಲ್ಲಾ!" ಉತ್ತರಿಸಿದಳು ಪಕ್ಕದ ಮನೆಯಾಕೆ.

"ಅವರು... ಹೆಂಡತಿಯ ಜೊತೆಗೆ?" ದಿಗ್ಭ್ರಮೆಯಿಂದ ಕೇಳಿದಳು ರಜನಿ.

"ಹೆಂಡತಿಯೋ ಯಾರೋ ಗೊತ್ತಿಲ್ಲ. ಜೊತೆಗೇ ಇರುತ್ತಿದ್ದಳು." ಉತ್ತರ ಬಂದಾಗ ರಜನಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ●

"ತೂಕ ಕಡಿಮೆ ಮಾಡ್ಕೋಳ್ಳೀಮ್ಮಾ. ಅಂದ್ರೆ ತಪ್ಪುತ್ತೆ ತೊಂದ್ರೆ."
"ತೂಕ ಸರ್‍ಯಾಗೇ ಇದೇ ಡಾಕ್ಟ್ರೆ. ಎತ್ತರಾ ಜಾಸ್ತಿ ಮಾಡ್ಕೋಬೇಕು ತೂಕಕ್ಕೆ ತಕ್ಕ ಹಾಗೆ."



ಜ್ಯೋತಿಷ ಸುಳ್ಳೆಂದು ತಿರಸ್ಕರಿಸುವ ಮೊದಲು ಇದನ್ನೋದಿರಿ

ಅದ್ಭುತ ಭೃಗುಸಂಹಿತೆಗಳು

● ಕನ್ಹಯ್ಯಲಾಲ ಮುನಶಿ ●

ನನಗೆ ಜ್ಯೋತಿಷ ಗೊತ್ತಿಲ್ಲ. ಯಾವ ಕೆಲಸ ಮಾಡುವುದಕ್ಕೂ ನಾನು ಗ್ರಹಗತಿಯನ್ನು ನೋಡಿ ಪ್ರವೃತ್ತನಾಗುವುದಿಲ್ಲ. ಜ್ಯೋತಿಷಿಗಳನ್ನು ಕೇಳಿ ಕಾರ್ಯ ಮಾಡುವುದು ದುರ್ದೈವಿ ಪದ್ಧತಿಯೆಂದು ನನ್ನೆಣಿಕೆ. ಏಕೆಂದರೆ ಮೇಲಿಂದ ಮೇಲೆ ನಿಮಿತ್ತ ಕೇಳುವುದರಿಂದ ಮನುಷ್ಯನ ಜೀವನ ದೃಷ್ಟಿ ವಿಕೃತವಾಗಿ ಅವನ ಕ್ರತುಶಕ್ತಿ ಕುಂಠಿತವಾಗುತ್ತದೆ.

ಆದರೂ ಜ್ಯೋತಿಷ್ಯ ನನ್ನನ್ನು ಮುಗ್ಧಗೊಳಿಸದೆ ಬಿಟ್ಟಿಲ್ಲ. ಮಿತ್ರರೂ, ಜ್ಯೋತಿಷಿಗಳೂ ಜನನ ಕಾಲದ ಗ್ರಹಸ್ಥಿತಿಯನ್ನು ಅಭ್ಯಸಿಸುವುದನ್ನು ಮೊದಲಿಂದಲೂ ನಾನು ಆಸಕ್ತಿಯಿಂದ ನೋಡುತ್ತ ಬಂದಿದ್ದೇನೆ. ಈ ವಿದ್ಯೆಯ ಬಗ್ಗೆ ನನಗೆ ತಿರಸ್ಕಾರವಿಲ್ಲ.

ಜ್ಯೋತಿಷವನ್ನು ಯೋಚನೆಯಿಲ್ಲದೆ ಖಂಡಿಸಿದರೆ ನಾವು ಜ್ಞಾನದೃಷ್ಟಿಯುಳ್ಳ ಒಂದು ವಿಜ್ಞಾನದ ಪ್ರಯೋಜನಗಳಿಗೆರವಾಗುತ್ತೇವೆ. ಅದನ್ನು ಸಹನೆ, ಪ್ರಾಮಾಣಿಕತೆ ಜಾಣ್ಮೆಗಳಿಂದ ಆಮೂಲಾಗ್ರವಾಗಿ ಅಭ್ಯಸಿಸಿದರೆ ಜೀವನ-ದಿಂದ ಮರಣವನ್ನೂ ವರ್ತಮಾನದಿಂದ ಭವಿಷ್ಯತ್ತನ್ನೂ ಬೇರ್ಪಡಿಸುವ ಗೋಡೆಯನ್ನು ಭೇದಿಸಲು ನಮಗೆ ಸಾಧ್ಯವಾಗಬಹುದು.

ಆದರೆ ನಾನೀಗ ಜ್ಯೋತಿಷ್ಯ ವೃತ್ತಿಯನ್ನು ಚರ್ಚಿಸದೆ (ಕೆಲ ಸಮರ್ಥ ಜ್ಯೋತಿಷಿಗಳನ್ನು ನಾನು ಕಂಡಿದ್ದರೂ) "ಸಂಹಿತೆ"ಗಳನ್ನು ಕುರಿತು ಹೇಳುತ್ತೇನೆ.

ಸಂಹಿತೆಗಳೆಂದರೆ ಅಸಂಖ್ಯ ಜನ್ಮ ಕುಂಡಲಿಗಳ ಫಲಗಳನ್ನೊಳಗೊಂಡ ಭಾರಿ ಭವಿಷ್ಯ ಕೋಶಗಳು. ಉತ್ತರದಲ್ಲಿ ಅವುಗಳನ್ನು ಭೃಗು ಸಂಹಿತೆಗಳೆನ್ನುತ್ತಾರೆ. ಭೃಗು ಋಷಿ ಈ ವಿದ್ಯೆಯ ಮೂಲ ಪುರುಷನಂತೆ. ಅನೇಕ ಭೃಗು ಸಂಹಿತೆಗಳಿದ್ದು ಅವುಗಳ ವ್ಯಾಪ್ತಿ ಶೈಲಿ ಮತ್ತು ಯೋಗ್ಯತೆ ಒಂದೇ ತೆರನಾಗಿಲ್ಲ. ಕೆಲವೇ ರೂಪಾಯಿಗಳಿಗೆ ಸಿಗುವ ಮುದ್ರಿತ ಭೃಗು ಸಂಹಿತೆಗಳುಂಟು. ಹಾಗೆಯೇ ಸಾವಿರಾರು ಜಾತಕಗಳ ಫಲ ಹೇಳುವ ಸಂಹಿತೆಗಳೂ ಉಂಟು. ದಕ್ಷಿಣದಲ್ಲಿ ಹೆಚ್ಚಾಗಿ ತಮಿಳು ಗ್ರಂಥ ಲಿಪಿಯಲ್ಲಿ ಬರೆದ ಅನೇಕ ಸಂಸ್ಕೃತ (ಮತ್ತು

1961ರ ಜನವರಿ ಸಂಚಿಕೆಯಲ್ಲಿ ಪ್ರಕಟವಾದದ್ದು

ಕೆಲ ತಮಿಳು) "ನಾಡಿ" ಸಂಹಿತೆಗಳು ವಿವಿಧ ಋಷಿ ದೇವತೆಗಳ ಹೆಸರಲ್ಲಿ ಪ್ರಚಲಿತವಾಗಿವೆ.

ಈವರೆಗೆ ನನಗೆ ಇಂಥ 11 ಸಂಹಿತೆಗಳ ಪರಿಚಯವಾಗಿದೆ. ಅವುಗಳಲ್ಲಿ ಒಂದು ಹೊರತು ಉಳಿದೆಲ್ಲ ಸಂಸ್ಕೃತದಲ್ಲಿವೆ ಲಿಪಿ ಮಾತ್ರ. ಮೂರರದು ತಮಿಳು ಗ್ರಂಥ ಲಿಪಿ. ಒಂದು ಟಿಬೇಟಿ ಲಿಪಿ, ಉಳಿದದ್ದೆಲ್ಲ ದೇವನಾಗರಿ.

ಪ್ರತಿಯೊಂದು ಸಂಹಿತೆಯನ್ನೂ ನಾನು ಕೆಲ ಪರೀಕ್ಷೆಗಳಿಗೊಳಪಡಿಸಿದೆ. ಮೊದಲನೆಯದಾಗಿ, ಅವುಗಳ ಕಾಲವನ್ನು ನಾನು ಪರಿಶೀಲಿಸಿದೆ. ಹಳೇ ಗ್ರಂಥದಿಂದ ಪ್ರತಿ ಮಾಡಿದ ಒಂದು ಸಂಹಿತೆಯನ್ನು ಹೊರತು ಉಳಿದೆಲ್ಲವೂ ಕನಿಷ್ಠ ಒಂದು ಶತಮಾನ ಹಳೆಯವೆಂದು ಖಚಿತವಾಯಿತು.

ಪ್ರತಿಯೊಂದರಲ್ಲೂ ನನ್ನ ಅಥವಾ ನನ್ನ ಮಿತ್ರರ ಜೀವನದ ಬಗ್ಗೆ ಹೇಳಲಾದ ಪ್ರತಿ ಗತ ಘಟನೆಯ ಸತ್ಯತ್ವವನ್ನು ತಾಳೆ ನೋಡಿದೆ. ಪುನಃ ಪುನಃ ಓದಿಸಿ ಕೇಳಿ ತಪ್ಪು ತಡೆಗಳನ್ನು ಗುರುತು ಹಾಕಿಕೊಂಡೆ. ನನ್ನ ಜೀವನದ ಮುಖ್ಯ ಘಟನೆಗಳು ಪ್ರಸಿದ್ಧವಾಗಿರುವುದರಿಂದ ಧೂರ್ತ ಜ್ಯೋತಿಷಿಗಳು ಅದರ ಪ್ರಯೋಜನ ಹೊಂದುವರೆಂದುಕೊಂಡು ಕ್ಷುದ್ರ ಘಟನೆಗಳ ಸತ್ಯತ್ವವನ್ನೇ ಒರೆಗೆ ಹಚ್ಚಿದೆ. ಗಮನಾರ್ಹ ಫಲಗಳ ವಿಷಯದಲ್ಲಿ ಪುಸ್ತಕವು ನಾಗರಿ ಲಿಪಿಯಲ್ಲಿದ್ದರೆ ಸ್ವತಃ ನಾನೇ ಅದನ್ನು ಓದಿದೆ; ತಿಳಿಯದ ಲಿಪಿಯಾಗಿದ್ದರೆ ಬಲ್ಲವರಿಂದ ಓದಿಸಿ ಖಾತ್ರಿ ಮಾಡಿಕೊಂಡೆ.

ಈ ಎಲ್ಲ ಪರೀಕ್ಷೆಗಳಲ್ಲಿ "ಮರತಸ" ಮತ್ತು "ವರಣಸ" ಎಂಬ ಸಂಹಿತೆಗಳು ಸಂಪೂರ್ಣ ತೇರ್ಗಡೆಯಾದವು.

ಎಲ್ಲ ಭೃಗು ಸಂಹಿತೆಗಳೂ ಭೃಗು ಋಷಿಗಳೂ ಅವನ ಮಗ ಶುಕ್ರಾಚಾರ್ಯನಿಗೂ ನಡೆದ ಸಂವಾದದ ರೂಪದಲ್ಲಿವೆ. ನಾನು ಸಂಹಿತೆಗಳಲ್ಲಿ ಮಾಡಿದ ನಾಲ್ಕು ಗುಂಪುಗಳ ಪೈಕಿ ನಾಲ್ಕನೇ ಗುಂಪಿನ ಪುಸ್ತಕಗಳಲ್ಲಿ ಮಗನು ಕುತೂಹಲದಿಂದ ಈ ಮನುಷ್ಯ ಹೀಗೇ ಏಕೆ ವರ್ತಿಸುತ್ತಾನೆ? ಬೇರೆಯಾಗಿ ಏಕಿಲ್ಲ ಎಂದು ನಡುನಡುವೆ ಪ್ರಶ್ನೆಗಳನ್ನು ಕೂಡ ಕೇಳಿ ಸಮಾಧಾನ ಪಡೆಯುತ್ತಾನೆ.

ಮೊದಲನೇ ಗುಂಪನ್ನು ಬಿಟ್ಟು ಉಳಿದೆಲ್ಲವುಗಳಲ್ಲಿ ಜನ್ಮ ದಿನ ಉಲ್ಲೇಖವಿದೆ. ಭೃಗು ಸಂಹಿತೆಗಳಲ್ಲಿ ತಂದೆ ತಾಯಿಗಳು (ಪ್ರಶ್ನೆ ಕಾಲದಲ್ಲಿ) ಬದುಕಿರುವರೋ, ಅಣ್ಣ-ತಮ್ಮ ಅಕ್ಕ-ತಂಗಿ, ಹೆಣ್ಣು ಗಂಡು ಮಕ್ಕಳೆಷ್ಟು ಎಂದೂ ಹೇಳುತ್ತವೆ. ಪ್ರಶ್ನಕರ್ತನ ಜಾತಿ ಧರ್ಮಗಳನ್ನೂ ಕೊಟ್ಟಿದೆ. ನಾಲ್ಕನೆಯ ಗುಂಪಿನ ಸಂಹಿತೆಗಳಲ್ಲಿ ಜಾತಿಯನ್ನು ಮುಸ್ಲಿಮನಾದರೆ "ಮ್ಲೇಂಛ', ಇಂಗ್ಲೀಷನಾದರೆ "ಯವನ" (ದಕ್ಷಿಣದ ಸತ್ಯ ಸಂಹಿತೆಯಲ್ಲಿ "ಹೂಣ" "ಕ್ರಿಸ್ತಿ" ಎಂಬ ಪದಗಳಿವೆ) ಎಂದೂ ಹೇಳಿದೆ.

ಸ್ವತಃ ನನ್ನ ವಿಚಾರವನ್ನೇ ನೋಡಿರಿ. ಕೊನೆಯ ಮೂರು ಗುಂಪುಗಳಲ್ಲಿ, ನಾನು ಒಂದು ನದಿಯ ತೀರದಲ್ಲಿ ಹುಟ್ಟಿದೆ. ಸಮುದ್ರ ತೀರದಲ್ಲಿ ಬೆಳೆದೆ ಎಂದು ಬರೆದಿದೆ. ಕೊನೆಯ ಗುಂಪಿನವುಗಳಲ್ಲಿ ನನ್ನ ಜನ್ಮಸ್ಥಾನ ಭಡೋಚವೆಂದೂ ನಾನು ಮ-ನಗರದಲ್ಲಿ (ಮುಂಬಯಿ) ಯಲ್ಲಿ ವಾಸಿಸಿದ್ದೇನೆಂದೂ ಹೇಳಲಾಗಿದೆ.

ಎಲ್ಲ ಭೃಗು ಸಂಹಿತೆಗಳಲ್ಲೂ, ತಮಿಳಿನ ಅಗಸ್ತ್ಯ ಸಂಹಿತೆಯಲ್ಲೂ ವರ್ತಮಾನ ಕಾಲದ ವಿಷಯ ಬಲು ಸರಿಯಾಗಿ ಹೇಳಲ್ಪಟ್ಟಿದೆ. ಕೆಲವೇಳೆ ಇಂಥಲ್ಲಿ ಇಂಥ ವರ್ಷ ಇಂಥ ತಿಂಗಳು ಇಂಥ ದಿನವೇ ನಾನೀ ಫಲವನ್ನು ಓದಿಸಿ ಕೇಳುತ್ತೇನೆಂದು ಕೂಡ ಬರೆದಿಟ್ಟಿದೆ.

ವರ್ತಮಾನ ವಿಷಯದಲ್ಲಿ "ಮರತಸ" ಸಂಹಿತೆ ಅದ್ಭುತವಾಗಿದೆ. ಮೊದಲು ಸ್ಥೂಲವಾಗಿ ಭೂತ ವರ್ತಮಾನ ಭವಿಷ್ಯತ್ತುಗಳನ್ನು ವಿವರಿಸಿ ಹೆಚ್ಚಿನ ವಿವರಗಳಿಗೆ ಬೇರೆ ಅಧ್ಯಾಯಗಳನ್ನು ನಿರ್ದೇಶಿಸಲಾಗಿದೆ. ನೈನಿತಾಲದಲ್ಲಿ ನಾನೊಮ್ಮೆ ಸಂಹಿತೆಯನ್ನೋದಿಸಿದಾಗ ಪರ್ವತ ವೃಕ್ಷಗಳ ಮತ್ತು ನೈನಿದೇವಿಯ ದೇವಾಲಯದ ವರ್ಣನೆ ಬಂದದ್ದು ನೋಡಿ ಬೆರಗಾದೆ. ಕೆಲ ಅಧ್ಯಾಯಗಳಲ್ಲಿ ವಾಚನ ಸ್ಥಳದಲ್ಲಿ ಅದೇ ನಡೆದ ಅಥವಾ ನಡೆಯುತ್ತಿರುವ ಘಟನೆಗಳನ್ನು ಹೇಳಿ ಇನ್ನು ನಡೆಯಲಿರುವುದನ್ನೂ ನಿಮ್ಮ ಮನಸ್ಸಿನ ವಿಚಾರಗಳನ್ನೂ ಹೊರಗೆಡಹಲಾಗಿದೆ.

ಒಂದು ಸಲ ನಾನು ಸಂಹಿತೆಯನ್ನೋದಿಸುತ್ತಿದ್ದಾಗ 10ನೇ ಅಧ್ಯಾಯದ ಪ್ರಸ್ತಾಪ ಬಂತು. ಅಷ್ಟರಲ್ಲಿ ನನ್ನ ಕಾರ್ಯದರ್ಶಿ ಬಂದು ಕಾಶ್ಮೀರ ಮಹಾರಾಜರಿಗೆ ಪತ್ರ ಬರೆಯಬೇಕೆಂದಿದ್ದು

ದನ್ನು ನೆನಪು ಮಾಡಿಕೊಟ್ಟು ಹೋದ. ಓದು ಮುಂದುವರಿಯಿತು.

"ಇದನ್ನೋದುತ್ತಿರುವಾಗ ಜಾತಕನ ಕಾರ್ಯದರ್ಶಿ ಬಂದು ಕುಂಕುಮ ದೇಶದ ದೊಡ್ಡ ಅಧಿಕಾರಿಯೊಬ್ಬನಿಗೆ ಪತ್ರ ಬರೆಯುವ ಪ್ರಸ್ತಾಪ ಪೆತ್ತಿದರೆ ಮಾತ್ರ 10ನೇ ಅಧ್ಯಾಯವನ್ನೋದು. ಕಾರ್ಯದರ್ಶಿ ಪಂಜಾಬಿ. ಶಿಕ್ಷಣ ಬರ್ಮಾದಲ್ಲಿ. ಈಗ ಆರ್ಯಾವರ್ತದಲ್ಲಿ ನೌಕರಿ ಮಾಡುತ್ತಾನೆ. ಅವನ ಹೆಂಡತಿಯೂ ತಂದೆಯೂ ಡಾಕ್ಟರರು..." ನಾನು ಪುಸ್ತಕವನ್ನು ಇಸಿದುಕೊಂಡು ಸ್ವತಃ ನೋಡಿದೆ. ಓದಿದ್ದೆಲ್ಲ ಅಲ್ಲಿತ್ತು.

ಇನ್ನೊಮ್ಮೆ ನನ್ನ ಹೆಂಡತಿಯ ಫಲ ಓದಿಸಿದಾಗ ಅವಳಿರುವ ರಾಜ್ಯದ ವಿಷಯ ಬಂತು. "ನಿನ್ನ ಗಂಡನ ರಾಜ್ಯದಲ್ಲಿ ಬ್ರಾಹ್ಮಣ ಮಂತ್ರಿ ಹೋಗಿ ಕಾಯಸ್ಥ ಮಂತ್ರಿ ಬರುತ್ತಾನೆ. ಅವನಿಗೆ ವೈಶ್ಯ ಮಂತ್ರಿ ಸಹಕಾರಿಯಾಗುತ್ತಾನೆ. ಇದು ಇವಳ 56ನೇ ವಯಸ್ಸಿನ 2ನೇ ತಿಂಗಳ 25ನೇ ದಿನದೊಳಗೆ ಘಟಿಸುತ್ತದೆ" ಎಂಬ ಭವಿಷ್ಯ ಬಂತು. ಅದೇ ಸುಮಾರಿಗೆ ಮುಖ್ಯಮಂತ್ರಿ ಪಂಡಿತ ಪಂತರು ದಿಲ್ಲಿಗೆ ಹೋಗಬೇಕಾದುದರಿಂದ ಕಾಯಸ್ಥರಾದ ಸಂಪೂರ್ಣಾನಂದರು ಮುಖ್ಯಮಂತ್ರಿಯಾಗಿಯೂ ವೈಶ್ಯರಾದ ಚಂದ್ರಭಾನು ಗುಪ್ತರು ಉಪ ಮುಖ್ಯಮಂತ್ರಿಯಾಗಿಯೂ ನನ್ನ ಹೆಂಡತಿಯ 56ನೇ ವಯಸ್ಸಿನ 2ನೇ ತಿಂಗಳ 22ನೇ ದಿನ ನನ್ನೆದುರು ಪ್ರತಿಜ್ಞೆ ಸ್ವೀಕರಿಸಿದರು.

ಕೆಲ ಸಂಹಿತೆಗಳಲ್ಲಿ ಪ್ರಶ್ನೆ ಕೇಳುವವನ ಜನನ ದಿನ, ಕಾಲ ಕೂಡ ಕೊಡಲ್ಪಡುತ್ತದೆ. ಅವನು ಪ್ರಶ್ನೆ ಕೇಳಲು ಬರುವಾಗಿನ ವಯಸ್ಸು ದಿನ, ತಿಂಗಳು, ಅವನ ಜಾತಿ, ಬಣ್ಣ ಎತ್ತರಗಳನ್ನು ವರ್ಣಿಸಿ ಅವನ ಜೀವನದ ಕೆಲ ವಿಚಿತ್ರ ಘಟನೆಗಳನ್ನೂ ವಿವರಿಸಲಾಗುತ್ತದೆ. ನನ್ನ ವಿಚಾರದಲ್ಲೇ ಒಂದು ಸಂಹಿತೆಯಲ್ಲಿ ಬಂದ ಸಂಗತಿಗಳನ್ನು ನೋಡಿ.

ಶುಕ್ರಾಚಾರ್ಯ ಕೇಳುತ್ತಾನೆ:

"ಋಷಿಗಳೇ ನಿಮ್ಮ ಭೃಗುವಂಶದಲ್ಲಿ ಹುಟ್ಟುವ (ನಾನು ಭಾರ್ಗವ ಗೋತ್ರದ ಬ್ರಾಹ್ಮಣ) ಈತ ವೈಶ್ಯ ರಮಣಿಯನ್ನೇಕೆ ಮದುವೆಯಾಗುತ್ತಾನೆ?"

ಭೃಗುವಿನ ಉತ್ತರ.

"ಮಗೂ, ಈತ 26ನೇ ವಯಸ್ಸಿನಲ್ಲಿ ಒಂದು ಕಾದಂಬರಿ (ರಂಗಮಾಯಿ ಕಥಾ) ಬರೆಯುವನು. ಅದರ ನಾಯಿಕೆ ವೈಶ್ಯ ಜಾತಿಯವಳಿರುತ್ತಾಳೆ. ಆದ್ದರಿಂದ 39ನೇ ವಯಸ್ಸಿಗೆ (26ಕ 13) ಅವನೊಬ್ಬ ವೈಶ್ಯಳನ್ನು ಮದುವೆಯಾಗುತ್ತಾನೆ."

ಕಾರಣ ವಿಚಿತ್ರವೇ ಸೈ, ಆದರೆ ಅದು ನಡೆದದ್ದು ಅಕ್ಷರಶಃ ನಿಜ.

"ವರಣಸ" ಸಂಹಿತೆಯಂತೂ ಅದ್ಭುತವಾಗಿದೆ. ಅದು ಜಾತಕನ, ಅವನ ಹೆಂಡತಿ ಮಕ್ಕಳ, ತಂದೆ ತಾಯಿಗಳ, ಕೆಲವೇಳೆ ಹೆಂಡತಿಯ ಸಂಬಂಧಿಕರ ಅವನ ಮಾವ ಅತ್ತೆಯರ ಅವಳ ಅಕ್ಕತಂಗಿಯರ ಮತ್ತು ಅವರ ಮಕ್ಕಳ, ಮತ್ತು ಅವನ (ಮಹಿಳೆಯರ ಸಹಿತ) ಮಿತ್ರರ ಹೆಸರುಗಳನ್ನೂ ಕೊಡುತ್ತದೆ.

ನನ್ನ ಆತ್ಮಚರಿತ್ರವನ್ನೆಲ್ಲ ಹುಡುಕಿದರೂ ನಿಮಗೆ ಈ ಕೆಳಗಿನ ವಿವರಗಳು ಸಿಗಲಾರವು.

"ಈ ಶಿಶು ಸ್ವತಂತ್ರದಲ್ಲಿದ್ದಾನೆ. ನರು ಅವನ ಮಿತ್ರ. ಅವನು ಮೊಂಗಿಣೆಯಲ್ಲಿ ಸುರಾಪಾನ ಮಾಡಿದ್ದಾನೆ. ಅವನ ಪ್ರೀತಿಯ ಹೆಸರು ಕನು. ತಾರಾ, ಧಾನು, ಜಾಧವ ಇವರು ಅಕ್ಕತಂಗಿಯರು. ತಂದೆ ಮಣೀಕ. ತಾಯಿ ತಾಪಿ; ತುಲಜಾ ಅವನ ತಂದೆಯ ಅಕ್ಕ (ನಾನು ಹುಟ್ಟುವ ಮೊದಲೇ ಸತ್ತಿದ್ದರವರು) ಮಾಖನ ದಾಸ ಇದ್ದರು. ಅವರ ಮಕ್ಕಳೇ ಮೂಲ ಚಂದ, ಚಿಮಣ ಮತ್ತು ಬಾಲು. ಚಿಮಣನಿಗೆ ಮೂವರು ಹೆಂಡಂದಿರು. ಅವನ ಮಗಳು ತಾಪಿ. ಅವಳ ತಾಯಿಯ ಹೆಸರು ಕೇಸರ್. ಅವಳು ರೂಪಾನ ಮಗಳು." -ಹೀಗೆ 250 ವರ್ಷಗಳ ಹಿಂದಿನವರೆಗೂ ಹೋಗಿತ್ತು ಪೂರ್ವ 3ರ ನಾಮಮಾಲೆ. ನನಗೆ ಗೊತ್ತಿದ್ದ ಪ್ರತಿಯೊಂದು ಹೆಸರೂ ಸರಿಯಾಗಿತ್ತು. ಅವರಲ್ಲಿ ಕೆಲವರ ಕಾರ್ಯಗಳನ್ನು ಚುಟುಕಾಗಿ, ಆದರೆ ಚಿತ್ರವತ್ತಾಗಿ ವರ್ಣಿಸಿತ್ತು.

ನಾನು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಕೇಳಿದ 50-60 ಜನರ ಫಲವಾಚನದಲ್ಲಿ ಬಂದ ಹೆಸರುಗಳಲ್ಲಿ ಒಂದೇ ಒಂದು ತಪ್ಪಾಗಿಲ್ಲ. ಎಷ್ಟೋ ಸಲ ನಾನು ಸಂಹಿತೆಯನ್ನಿಟ್ಟುಕೊಂಡ ಪಂಡಿತರಿಗೆ ಪೂರ್ವ ಸೂಚನೆ ಕೊಡದೆ ಓದಿಸಿದ್ದುಂಟು.

ಒಬ್ಬ ಅಪರಿಚಿತ ಅಮೇರಿಕನ್ನನ ಜನನ ಸಮಯ ಹೇಳಿದೊಡನೆ ಅವನ ಫಲ ತೆಗೆದು ಓದಲಾಯಿತು. ಒಂದೆರಡು ಸಲ ಹೆಸರುಗಳು ತಪ್ಪೆನಿಸಿದರೂ ವಿಚಾರಿಸಿದಾಗ ಆಯಾ ವ್ಯಕ್ತಿಯ ನಾಮಕರಣದ ಹೆಸರು ಅದೇ ಇತ್ತೆಂದು ತಿಳಿದು ಬಂತು.

ಈ ಸಂಹಿತೆಯ ಪ್ರತಿಯೊಂದು ವಾಚನದ ವ್ಯವಸ್ಥೆ ಹೀಗಿದೆ:- ಯೋಗದೃಷ್ಟಿಯಿಂದ ಋಷಿಯು ತಾನು ಹೇಳತಕ್ಕದ್ದನ್ನು ಜಾತಕನು ಯಾವಾಗ ಕೇಳಲಿರುವನೋ ಆ ಕಾಲವನ್ನು ಗಾಢವಾಗಿ ಅವಲೋಕಿಸುತ್ತಾನೆ. ಮತ್ತು ತನಗಾಗ ಕಾಣುವುದನ್ನು ಉಸುರುತ್ತಾನೆ.

ಉದಾಹರಣೆಗೆ ನೈನಿತಾಲದಲ್ಲಿ ಸಂಹಿತೆಯನ್ನು ಓದಿಸಿದಾಗ, ಜಾತಕನು ನೈನಿತಾಲದಲ್ಲಿದ್ದಾನೆ. ಆ ದೇಶದ ಪ್ರಧಾನ ಮಂತ್ರಿ ತನ್ನ ತಂಗಿ ಯಾವ ದೇಶದಲ್ಲಿ ಪೇಚಿಗೆ ಸಿಕ್ಕಿದ್ದಾಳೋ (ರಶಿಯಾದ) ಆ ದೇಶಕ್ಕೆ ಹೋಗಿದ್ದಾನೆ ಎಂಬ ಉಲ್ಲೇಖ ಬಂತಲ್ಲದೆ ಅವನನ್ನೆದುರಿಸಿರುವ ಸಮಸ್ಯೆಗಳು, ಅವುಗಳನ್ನು ಬಿಡಿಸುವ ರೀತಿ ಎಲ್ಲ ವಿವರಗಳೂ ಹೊರಟವು.

ಇಂಥ ಎಷ್ಟೋ ವಾಚನಗಳನ್ನು ಕೇಳಿದ ಮೇಲೆ, ಈ ಗ್ರಂಥಗಳನ್ನು ಯಾರೇ ಬರೆದಿರಲಿ, ಯಾವಾಗಲೇ ಬರೆದಿರಲಿ, ಅವನು, ಜಾತಕನು ಯಾವ ಕ್ಷಣದಲ್ಲಿ ಈ ಫಲವನ್ನು ಕೇಳಲು ಬರುವನೋ ಆ ಕ್ಷಣವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಬರೆದಿದ್ದಾನೆಂದು ನನಗೆ ತೋರಿತು. ತಾನು ಬರೆದ್ದದನ್ನು ವಿಶಿಷ್ಟ ವ್ಯಕ್ತಿ, ವಿಶಿಷ್ಟ ಪರಿಸರದಲ್ಲಿ, ವಿಶಿಷ್ಟ ಘಟನೆಯ ಒತ್ತಡದಲ್ಲಿ ಕೇಳಬೇಕೆಂದು ಅವನ ಉದ್ದೇಶವಿರಬೇಕು. ಋಷಿಯು ತನ್ನ ಅಪರೋಕ್ಷ ಜ್ಞಾನದಿಂದಲೇ ಆಯಾ ವ್ಯಕ್ತಿಯ ಜೀವನದ ವಿಶಿಷ್ಟ ಕ್ಷಣವನ್ನು ಆಗುಹೋಗುಗಳ ಸಮೇತವಾಗಿ ಕಾಣಲು ಸಮರ್ಥನಾಗಿದ್ದನೆಂದು ಹೇಳಬೇಕಾಗುತ್ತದೆ.

"ವರಣಸ"ದಲ್ಲಿ ಉದಾಹರಣೆಗೆ, ವರ್ತಮಾನ ಎಂದರೆ ಜಾತಕನು ಪ್ರಶ್ನೆ ಕೇಳಿ ಫಲ ಓದಿಸುವ ಕ್ಷಣ, ಆ ಕ್ಷಣದ ಹಿಂದಿನ ಘಟನೆಗಳನ್ನು ವಿವರವಾಗಿ ಚರ್ಚಿಸುವುದಲ್ಲದೆ ಅವನ ಮಿತ್ರರು ಮತ್ತು ಅವರು ಮಿತ್ರರಾದ ಬಗೆ ಇವುಗಳನ್ನೂ ವರ್ಣಿಸಲಾಗುತ್ತದೆ.

ಒಂದು ವಾಚನದಲ್ಲಿ ನನ್ನ ಹೆಂಡತಿಗೂ ನನಗೂ ಆದ ಪ್ರಥಮ ಪರಿಚಯದ ವಿಚಾರ ಹೇಳಲ್ಪಟ್ಟಿತು. ಎಲ್ಲಿಯೂ ದಾಖಲೆಯಿಲ್ಲದ ಮತ್ತು ನಾವು ಕೂಡ ಮರೆತುಬಿಟ್ಟ ಸಂಗತಿಗಳನ್ನು ಕೊಡಲಾಯಿತು. ನಾವು ಭೆಟ್ಟಿಯಾದ ಕಟ್ಟಡದ ಹೆಸರೂ ಬಂತು. ಈ ಪುಸ್ತಕ ಬರೆಯಲ್ಪಟ್ಟಾಗ ಆ ಕಟ್ಟಡ ಇದ್ದಿಲ್ಲವಷ್ಟೇ ಅಲ್ಲ, ಅದರ ಒಡೆಯನ ಅಜ್ಜ ಕೂಡ ಹುಟ್ಟಿರಲಿಕ್ಕಿಲ್ಲ. ಆಮೇಲೆ ನಾವು ಪಟ್ಟಪಾಡು, ನಾವು ಮದುವೆಯಾದ ಮನೆ, ಕನ್ಯಾದಾನ ಮಾಡಿದವರ ಹೆಸರು ಎಲ್ಲವೂ ಬಂತು.

ಎರಡು ಸಂಹಿತೆಗಳ ಬೇರೆ ಬೇರೆ ಅಧ್ಯಾಯಗಳಲ್ಲಿ ದಿಲ್ಲಿಯ ಆಗು ಹೋಗುಗಳ ವಿಚಾರವಿತ್ತು. ಸಂಬಂಧಪಟ್ಟ ವ್ಯಕ್ತಿಗಳ ಸತ್ಯವಾದ ವ್ಯಕ್ತಿಚಿತ್ರವಿತ್ತು. "ಮರತಸ"ದಲ್ಲೊಂದೆಡೆ ಒಬ್ಬಳ ಹೆಸರಿನ ವ್ಯಂಜನಗಳನ್ನು ಹೇಳಿ ಅವಳು ವಿದೇಶಿ ಗೂಢಚಾರಿಣಿ ಎಂದಿತ್ತು. ಅವಳ ಚಟುವಟಿಕೆಗಳ ವಿವರವೂ ಇತ್ತು. ಆಗ ಅಂಥ ವ್ಯಕ್ತಿ ಇದ್ದದ್ದೇ ನನಗೆ ಗೊತ್ತಿದ್ದಿಲ್ಲ. ಉಚ್ಚಾಧಿಕಾರಿಯೊಬ್ಬನನ್ನು ಕೇಳಿದಾಗ ಆತ ಅವಳ ಪೂರ್ಣ ಹೆಸರು ಮತ್ತು ವಿವರಗಳನ್ನು ನನಗೊದಗಿಸಿದ. ಕೆಲವೊಮ್ಮೆ ಈ ಸಂಹಿತೆಗಳು ನಮ್ಮ ಮಿತ್ರರ ಒಳಗುಟ್ಟುಗಳನ್ನು ಕೊಟ್ಟು ನಮ್ಮನ್ನು ತುಂಬ ಪೇಚಿಗೊಳಪಡಿಸುವುದೂ ಉಂಟು.

ಮುಖ್ಯ ಸಂಹಿತೆಗಳಲ್ಲಿ ಒಬ್ಬನ ಬಗ್ಗೆಯೆ ಒಂದಕ್ಕಿಂತ ಹೆಚ್ಚು ಕಡೆ ಬೇರೆ ಬೇರೆ ಉಲ್ಲೇಖಗಳಿರುವುದುಂಟು. ಪ್ರತಿಯೊಂದನ್ನೂ ಜೀವನದ ವಿಶೇಷ ಮುಹೂರ್ತದಲ್ಲೇ ಓದಬೇಕೆಂಬುದು ನಿರ್ಬಂಧ.

ಓದುವ ಗಳಿಗೆಯವರೆಗಿನ ಘಟನೆಗಳು ವಿವರವಾಗಿಯೂ ಸರಿಯಾಗಿಯೂ ಇರುತ್ತವೆ. ಭವಿಷ್ಯತ್ತು ಮಾತ್ರ ಸ್ಥೂಲ ನಿರ್ದೇಶಾತ್ಮಕವಾಗಿಯೇ ಇರುತ್ತದೆ. ಇಂದಿನ ಅವಸ್ಥೆಯಿಂದ ಮುಂದಿನದರ ಅರ್ಥ ಮಾಡಬೇಕಷ್ಟೆ.

ಕಾಲಾಂತರದಲ್ಲಿ ಹೊಸ ಮುಹೂರ್ತದಲ್ಲಿ ಆ ಮುಹೂರ್ತದ ಫಲ ಓದಿಸಿದಾಗ ಹಿಂದಿನ ವಾಚನದಲ್ಲಿ ಹೇಳಿದ ಫಲ ಒಟ್ಟಿನ ಮೇಲೆ ಸರಿಯಾಗಿದ್ದರೂ ಕೆಲವು ಘಟನೆಗಳು ವ್ಯತ್ಯಸ್ತವಾಗಿರುವುದು ಕಾಣಬರುವುದುಂಟು. ಆದರೆ ಓದಿಸಿದ ಕ್ಷಣದವರೆಗಿನ ಘಟನೆಗಳು ಮತ್ತೆ ಸರಿ

ಯಾಗಿಯೇ ಇರುತ್ತವೆ. ಮತ್ತೆ ಆ ಕ್ಷಣದ ಮುಂದಿನ ಭವಿಷ್ಯ ಅಸ್ಪಷ್ಟವಾಗಿಯೇ ಹೇಳಲ್ಪಟ್ಟಿರುತ್ತದೆ.

ಇದನ್ನೆಲ್ಲ ನೋಡಿ ನನಗೊಮ್ಮೆ ಈ ಪಂಡಿತ ನಿಜವಾಗಿ ಪುಸ್ತಕದಲ್ಲಿರುವುದನ್ನು ಓದದೆ ಪರೇಂಗಿತ ಜ್ಞಾನದ ಶಕ್ತಿಯಿಂದ ಆತ ಹಿಂದಿನದನ್ನು ಹೇಳುತ್ತಿದ್ದಾನೆಂದೂ ಆದ್ದರಿಂದಲೇ ಅವನ ಭೂತಕಾಲದ ಕಥೆ ಸರಿಯಾಗಿದ್ದರೂ ಭವಿಷ್ಯ ಮಸುಕಾಗಿರುತ್ತದೆಂದೂ ಸಂಶಯ ಬಂತು. ಅದಕ್ಕಾಗಿ ಅವನನ್ನು ಪರೀಕ್ಷಿಸಲು ನನ್ನ ಭಾವಿ ಮುಹೂರ್ತಗಳ ಫಲಗಳನ್ನೋದಲು ಕೇಳಿಕೊಂಡೆ.

ಸಾಮಾನ್ಯವಾಗಿ ಆತ ಇದಕ್ಕೊಪ್ಪುವುದಿಲ್ಲ. ಆದರೆ ಬಹಳ ಹೇಳಿಕೊಂಡ ಮೇಲೆ ಭವಿಷ್ಯತ್ತಿನ ಮುಹೂರ್ತದ ಕೆಲ ಪುಟಗಳನ್ನು ಓದಲು ಆತ ಸಿದ್ಧನಾದ. 1959 ಆಗಸ್ಟಿನ ಒಂದು ಮಹೂರ್ತದ ನನ್ನ ಫಲ ಓದಿಸಿದಾಗ ಆಗಸ್ಟಿನಿಂದ ಡಿಸೆಂಬರ್‌ವರೆಗಿನ ಫಲ ಅಸ್ಪಷ್ಟವಾಗಿತ್ತು. ಬಳಿಕ ಬರಲಿದ್ದ ಡಿಸೆಂಬರಿನ ಮುಹೂರ್ತದ ಫಲವನ್ನು ಓದಿಸಿದೆ. ಡಿಸೆಂಬರಿನವರೆಗಿನ ನನ್ನ ಜೀವನದ ಘಟನೆಗಳು ಅದರಲ್ಲಿ ಹೇಳಿದಂತೆಯೇ ಮುಂದೆ ಘಟಿಸಿದವು.

ಹೀಗಾಗಲು ಕಾರಣವೇನು? ಜಾತಕನ ಜೀವನದ ವಿಶಿಷ್ಟ ಕ್ಷಣದ ಮೇಲೆ ಋಷಿಯು ಮನಸ್ಸನ್ನು ಕೇಂದ್ರಿಸಿದಾಗ ಆ ಕ್ಷಣದ ಹಿಂದಿನ ಘಟನೆಗಳು ಅವನಿಗೆ ಸ್ಪಷ್ಟಗೋಚರವಾದರೂ ಭವಿಷ್ಯತ್ತಿನದ್ದು ಅಸ್ಪಷ್ಟವಾಗಿಯೇ ಕಾಣಿಸುತ್ತಿರಬೇಕು. ಅಥವಾ ಜಾತಕನ ಭವಿಷ್ಯತ್ತಿನ ಸುಖ ಕಷ್ಟಗಳೆಲ್ಲದರ ವಿವರವನ್ನು ಮುಂಚಿತವಾಗಿಯೆ ಕೊಟ್ಟು ಅವನ ಉತ್ಸಾಹವನ್ನು ಅಪಹರಿಸುವುದು ತರವಲ್ಲೆಂದೂ ಅವನಿಗೆ ಪ್ರಯತ್ನಶೀಲನಾಗಲೆಡೆಯಿರಲೆಂದೂ ಸ್ಥೂಲ ಭವಿಷ್ಯವನ್ನಷ್ಟೇ ಹೇಳುವುದು ಋಷಿಯ ಉದ್ದೇಶವಿರಬೇಕು.

ಇದನ್ನೆಲ್ಲ ನೋಡಿದರೆ ಈ ಕೆಳಗಿನ ಸಿದ್ಧಾಂತಗಳು ಹೊರಡುತ್ತವೆ.

1. ಜನನ ಕಾಲದ ಗ್ರಹಗಳ ಸ್ಥಿತಿಯನ್ನು ನೋಡಿ ಮನುಷ್ಯನ ಜೀವನದ ಘಟನೆಗಳನ್ನು ಊಹಿಸಲು ಸಾಧ್ಯವಿದೆ. ಅರ್ಥಾತ್ ಗ್ರಹಗಳು ಜೀವನದ ಮೇಲೆ ಪ್ರಭಾವ ಬೀರುತ್ತವೆ.

2. ಯೋಗಶಕ್ತಿಯಿಂದಾಗಲಿ ಇನ್ನಾವ ಶಕ್ತಿಯಿಂದಾಗಲಿ ಜನನ ಮುಹೂರ್ತದ ಗ್ರಹ ಸಂಪತ್ತಿನ ಆಧಾರದಿಂದ ವ್ಯಕ್ತಿಯ, ಅವನ ಪೂರ್ವಜರ, ಬಂಧುಬಾಂಧವ ಮಿತ್ರರ ಹೆಸರುಗಳನ್ನು ಸರಿಯಾಗಿ ಊಹಿಸುವುದು ಸಾಧ್ಯವುಂಟು.

3. ಜಾತಕವನ್ನು ಯೋಗದೃಷ್ಟಿಯಿಂದ ನೋಡಿ ಸಾಮಾನ್ಯ ಜ್ಯೋತಿಷ್ಯ ಶಾಸ್ತ್ರದಲ್ಲಿ ಹೇಳಿರದ ಯಾವುದೋ ವಿಧಾನದಿಂದ ವ್ಯಕ್ತಿಯ ಜೀವನದ ವಿಶಿಷ್ಟ ಮುಹೂರ್ತದಿಂದ ಹಿಡಿದು ಗತ ಘಟನೆಗಳನ್ನೂ ಭಾವಿ ಘಟನೆಗಳನ್ನೂ ಕಾಣಲು ಸಾಧ್ಯವಿದೆ.

4. ಯಾವುದೊಂದು ವಿಶಿಷ್ಟ ಮುಹೂರ್ತದಲ್ಲಿ ಹಿಂದಿನ ಘಟನೆಗಳಷ್ಟು ಸ್ಪಷ್ಟವಾಗಿ ಮುಂದಿನ ಘಟನೆಗಳು ಋಷಿಗೆ ಗೋಚರವಾಗುವುದಿಲ್ಲ.

5. ಒಟ್ಟಿನ ಮೇಲೆ ಮನಸ್ಸನ್ನು ಯಾವುದಾದರೊಂದು ಭವಿಷತ್ ಮುಹೂರ್ತದಲ್ಲಿ ಕೇಂದ್ರೀಕರಿಸಿ ಆವರೆಗೆ ನಡೆಯಲಿರುವುದನ್ನು ಸರಿಯಾಗಿ ಕಾಣುವ ಉಪಾಯಗಳು ಈವರೆಗೆ ನಮಗೆ ಗೊತ್ತಿಲ್ಲದಿದ್ದರೂ– ಇವೆ.

ಆದ್ದರಿಂದ ಇದು ಬರಿ ಭವಿಷ್ಯ ಹೇಳುವ ಪ್ರಶ್ನೆಯಲ್ಲ. ಭವಿಷ್ಯತ್ತನ್ನು ನೋಡುವುದರ ಸಾಧ್ಯತೆಯ ಪ್ರಶ್ನೆಯೆಂದು ಬಗೆದು ವಿಜ್ಞಾನಿಗಳು ಈ ಆಶ್ಚರ್ಯಕರ ವಿದ್ಯೆಯನ್ನು ತಿರಸ್ಕರಿಸುವುದನ್ನು ತೊರೆಯುವುದವಶ್ಯವೆಂದು ನನ್ನ ಭಾವನೆ. ●



ಹೊನ್ನು ತೂಗುವ ತಕ್ಕಡಿ ಹೊನ್ನಿಂಗೆ ಸರಿಯಪ್ಪುದೆ?

– ಅಲ್ಲಮಪ್ರಭು

ಕಂಪಾಲಾದಿಂದ ಪಾರು

● ಡಾ. ಪ್ರಕಾಶ ಕೊಣ್ಣೂರ ●

1979ನೆಯ ವರ್ಷದ ಮಾರ್ಚ್ ತಿಂಗಳ ಕೊನೆಯ ವಾರ. ಯುಗಾಂಡಾದ ರಾಜಧಾನಿ ಕಂಪಾಲಾದ ಮಾಧ್ಯಮಿಕ ಶಾಲೆಯೊಂದರ ಸಭಾಂಗಣ. ನೆರೆದವರು ಕಂಪಾಲಾದಲ್ಲಿ ನೆಲ ಸಿದ್ದ ಭಾರತೀಯರು: ಮಹಿಳೆಯರು ಮತ್ತು ಮಕ್ಕಳನ್ನು ಒಳಗೊಂಡು ಒಟ್ಟು ಸುಮಾರು ಒಂದು ನೂರಾ ಐವತ್ತು ಜನ. ಅಂದು ಪ್ರತಿ ವರ್ಷದಂತೆ ಹೋಳಿ ಹಬ್ಬದ ಆಚರಣೆಯ ಸಮಾರಂಭ. ಯುಗಾಂಡಾದಲ್ಲಿಯ ಭಾರತದ ರಾಯಭಾರಿ ಸರ್ದಾರ್ ಮದನ್‌ಜಿತ್‌ಸಿಂಗರ ಉಪಸ್ಥಿತಿ.

ಮಾರ್ಚ್ ತಿಂಗಳಿನಲ್ಲಿ ಪೂರ್ವ ಆಫ್ರಿಕದಲ್ಲಿ ಮಳೆಗಾಳಿ. ಜೂನ್ ತಿಂಗಳಲ್ಲಿ ಭಾರತವನ್ನಾವರಿಸುವ ಮನ್ಸೂನಿನ ಮೋಡಗಳು ಮಾರ್ಚ್-ಏಪ್ರಿಲ್‌ನಲ್ಲಿ ಹಿಂದೂ ಮಹಾಸಾಗರದ ಆಚೆಯ ದಂಡೆಯ ಪ್ರದೇಶದ ಮೇಲೆ ಸುರಿದು ಈ ಕಡೆಗೆ ಪಯಣಿಸುತ್ತವೆ. ಆ ಅಪರಾಹ್ನ ಕಂಪಾಲಾದ ಆಕಾಶವೆಲ್ಲ ದಟ್ಟವಾದ ಮೋಡಗಳಿಂದ ಆವೃತವಾಗಿತ್ತು. ವಾತಾವರಣದಲ್ಲಿ ಒಂದು ರೀತಿಯ ಕರಾಳತೆ ನಿರ್ಮಾಣಗೊಂಡಿತ್ತು.

ಸಮಾರಂಭದಲ್ಲಿ ಕೂಡಿದ ಜನರು ಪರಸ್ಪರವಾಗಿ ಹಬ್ಬದ ಶುಭಾಶಯಗಳನ್ನು ವಿನಿಮಯಿಸಿಕೊಂಡರು. ವಾಡಿಕೆಯಂತೆ ಪ್ರತಿ ವರ್ಷವೂ ಹೋಳಿ ಬಣ್ಣವಾಡುವ ಕಾರ್ಯಕ್ರಮವನ್ನು ಅಂದು ರದ್ದುಗೊಳಿಸಲಾಗಿತ್ತು. ಅನಂತರ ಮದನಜಿತ್‌ಸಿಂಗರು ಮಾತನಾಡಲು ಎದ್ದರು. ಎತ್ತರದ ನಿಲುವಿನ, ಗೌರವರ್ಣದ, ಅಚ್ಚುಕಟ್ಟಾದ ಮೈಕಟ್ಟಿನ ಮದನಜಿತ್‌ಸಿಂಗ್ ಕಂಪಾಲಾದ ಭಾರತೀಯರಿಗೆ ಅಚ್ಚುಮೆಚ್ಚಿನ ವ್ಯಕ್ತಿ. ಫಾರಿನ್ ಸರ್ವೀಸಿನಲ್ಲಿಯ, ನುಣ್ಣನೆಯ ಮುಖದ ಈ ಸರ್ದಾರ್‌ಜಿ ಭಾರತೀಯ ಮತ್ತು ಇಟಾಲಿಯನ್ ವರ್ಣಚಿತ್ರಗಳ ವಿಶೇಷಜ್ಞನೆಂದು ಹೆಸರು ಪಡೆದವರು. ವರ್ಣಚಿತ್ರಕಲೆಯ ಬಗೆಗೆ ಹಲವಾರು ಪುಸ್ತಕಗಳನ್ನು ಬರೆದವರು. ಸಾಮಾನ್ಯವಾಗಿ ಹರ್ಷಚಿತ್ತರಾಗಿಯೇ ಇರುತ್ತಿದ್ದ ಮದನ್‌ಜಿತ್‌ಸಿಂಗ್ ಅಂದು ಗಂಭೀರರಾಗಿದ್ದರು. "ಸೋದರ-ಸೋದರಿಯರೇ, ಈ ವರ್ಷದ ಹೋಳಿಹಬ್ಬ ಪ್ರತಿಸಲದಂತಿಲ್ಲ. ನಾವಿರುವ ಈ ದೇಶದ ರಾಜಕೀಯ ವಾತಾವರಣದ ಬಗೆಗೆ ಬಿಡಿಸಿ ಹೇಳುವುದು ಉಚಿತವಾಗಲಾರದು. ಬಹುಶಃ ಮುಂದಿನ ಒಂದು ವಾರದಲ್ಲಿ ನಮ್ಮ ಸುತ್ತಲೂ ಮಹತ್ತರ ಬದಲಾವಣೆಗಳಾಗುವ ಸಾಧ್ಯತೆಯಿದೆ. ನಮಗೆ ಬಂದಿರುವ ಸುದ್ದಿಗಳ ಪ್ರಕಾರ ಟಾಂಝಾನಿಯಾದ ಪಡೆಗಳು ಕಂಪಾಲಾದಿಂದ ಕೇವಲ ಇಪ್ಪತ್ತು ಕಿಲೋಮೀಟರುಗಳ ದೂರದಲ್ಲಿದ್ದು ರಾಜಧಾನಿಯ ಸುತ್ತಲೂ ಯುದ್ಧ ಭೀಕರ ಸ್ವರೂಪವನ್ನು ತಳೆಯುತ್ತಿದೆ. ಆದರೆ ನೀವೆಲ್ಲ ಅಧೀರರಾಗಬಾರದು. ಈ ಯುದ್ಧವು ಕಂಪಾಲಾವನ್ನು ತಲುಪಿದರೆ ನಿಮ್ಮನ್ನೆಲ್ಲ ಸುರಕ್ಷಿತವಾಗಿ ಇಲ್ಲಿಂದ ವಿಮಾನದ ಮೂಲಕ ಭಾರತಕ್ಕೆ ಸಾಗಿಸುವ ಯೋಜನೆಗಳನ್ನು ಈಗಲೇ



ಮಾಡಲಾಗಿದೆ. ಅದರಲ್ಲಿ ನಿಮಗೆ ಯಾವುದೇ ಸಮಸ್ಯೆ ಎದುರಾದರೂ ರಾಯಭಾರೀ ಕಚೇರಿಯನ್ನು ಸಂಪರ್ಕಿಸಿರಿ" ಎನ್ನುತ್ತ ತಮ್ಮ ಚಿಕ್ಕ ಭಾಷಣವನ್ನು ಮುಗಿಸಿದರು.

ಸಮಾರಂಭವನ್ನು ಮುಗಿಸಿಕೊಂಡು ಮನೆಗೆ ಮರಳುವಾಗ ಅಂದು ರಾತ್ರಿಯೇ ಕಂಪಾಲಾದ ಮೇಲೆ ದಾಳಿ ಪ್ರಾರಂಭವಾಗುತ್ತದೆಂಬ ಕಲ್ಪನೆ ನಮಗಿರಲಿಲ್ಲ. ಒಂಭತ್ತೂವರೆಯ ಸುಮಾರಿಗೆ ಕಮೋಂಜಾ ಬಡಾವಣೆಯಲ್ಲಿದ್ದ ನನ್ನ ಸರಕಾರೀ ಮನೆಯಲ್ಲಿ ಊಟ ಮಾಡಿ ಮನೆಯ ತೋಟದಲ್ಲಿ ಸ್ವಲ್ಪ ಹೊತ್ತು ಕಳೆಯೋಣವೆಂದು ಹೊರಗೆ ಬಂದ ನನಗೆ ದೂರದಿಂದ ತೋಫುಗಳ ಸಪ್ಪಳ ಕೇಳಿಬಂತು. ಟಾಂಝಾನಿಯಾದ ಲಾಂಗ್‌ರೇಂಜ್ ಆರ್ಟಿಲರಿ ಪಡೆಗಳು ಕಂಪಾಲಾದ ಮೇಲೆ ತೋಫು ದಾಳಿಯನ್ನಾರಂಭಿಸಿದ್ದವು. ಸುಮಾರು ಹದಿನೈದು ಕಿಲೋಮೀಟರುಗಳ ಅಂತರದಿಂದ ಬರುತ್ತಿದ್ದ ತೋಫಿನ ಗುಂಡುಗಳು ಕಂಪಾಲಾದ ಆಯಕಟ್ಟಿನ ಸ್ಥಳಗಳ ಮೇಲೆ ತಮ್ಮ ಸುರಿಮಳೆಯನ್ನು ಪ್ರಾರಂಭಿಸಿದವು. ಯುಗಾಂಡಾ ಟೆಲಿವಿಜನ್ ತನ್ನ ನಿಯಮಿತ ಪ್ರಸಾರವನ್ನು ನಿಲ್ಲಿಸಿ ನಾಗರಿಕರಿಗೆ ಹೆದರದಿರಲು ಕೇಳಿಕೊಂಡಿತು. "ವೈರಿಗೆ ಯುಗಾಂಡಾದ ಸೈನಿಕರು ಸೂಕ್ತ ಉತ್ತರವೀಯುತ್ತಿದ್ದು ಕಂಪಾಲಾದ ಜನರಿಗೆ ಯಾವುದೇ ಅಪಾಯವಿಲ್ಲ" ಎಂದು ಮತ್ತೆ ಮತ್ತೆ ಬಿತ್ತರಿಸಲಾಯಿತು. ಆದರೆ ರಾತ್ರಿ ಕಳೆದಂತೆ ತೋಫುಗಳ ಸಪ್ಪಳ ಹೆಚ್ಚಾಗುತ್ತಲೇ ಹೋಯಿತು. ಕಂಪಾಲಾ ಗುಡ್ಡಗಳ ನಗರ. ನಮ್ಮ ಮನೆ ಕುಲಾಗೋ ಗುಡ್ಡದ ಮೇಲಿತ್ತು. ಅಲ್ಲಿಂದ ಸುತ್ತಲೂ ನೋಡಿದರೆ ರಾತ್ರಿಯ ಆಕಾಶದಲ್ಲಿ ಹಲವಾರು ಕಡೆ ಧಗಧಗಿಸುತ್ತಿರುವ ಬೆಂಕಿ ಮತ್ತು ಸುತ್ತಲೂ ಆವರಿಸಿದ ಹೊಗೆ ಕಾಣಿಸುತ್ತಿತ್ತು. ನಾವು ರಾತ್ರಿಯನ್ನು ಹೆಚ್ಚು ಕಡಿಮೆ ನಿದ್ರೆಯಿಲ್ಲದೆಯೇ ಕಳೆದವು.

ಮುಂಜಾನೆ 10 ಗಂಟೆಯ ಸುಮಾರಿಗೆ ಕಂಪಾಲಾದ ಮೇಲೆ ಟಾಂಝಾನಿಯದ ವೈಮಾನಿಕ ಪಡೆಗಳು ದಾಳಿಯನ್ನಾರಂಭಿಸಿದವು. ಪ್ರತಿಸಾರಿ ಮೂರು ಮೂರು ವಿಮಾನಗಳು ಕೂಡಿ ಬಂದು ನಗರದ ಆಯಕಟ್ಟಿನ ಸ್ಥಳಗಳ ಮೇಲೆ ಬಾಂಬ್ ಎಸೆಯತೊಡಗಿದವು. ನಮ್ಮ ಮನೆಯ ಎದುರುಗಡೆಯ ಗುಡ್ಡದ ಮೇಲೆಯೇ ಇದಿ ಅಮೀನನ ಯುದ್ಧ ನಿರ್ದೇಶನ ಕಚೇರಿಯಿದ್ದುದರಿಂದ ಅದು ವಿಮಾನ ದಾಳಿಗಳ ಮುಖ್ಯ ಗುರಿಯಾಗಿತ್ತು. ಅಂದು ಬೆಳಿಗ್ಗೆ ಹತ್ತರಿಂದ ಹನ್ನೆರಡು ಗಂಟೆಗಳ ಅವಧಿಯಲ್ಲಿ ಐದಾರು ಬಾರಿಯಾದರೂ ವಿಮಾನಗಳು ಅದರ ಮೇಲೆ ದಾಳಿಯಿಟ್ಟವು. ಆದರೆ ಅಮೀನನ ಕಟ್ಟಡಕ್ಕೆ ಹೆಚ್ಚಿನ ಧಕ್ಕೆಯಾದಂತೆ ಕಾಣಲಿಲ್ಲ.

ಕಂಪಾಲಾದ ಮೇಲಿನ ಬಾಂಬು ದಾಳಿ ತೀವ್ರವಾಗುತ್ತಿದ್ದಂತೆ ಅಲ್ಲಿಯ ನಗರವಾಸಿಗಳಲ್ಲಿ ಸಹಜವಾಗಿಯೇ ಹೆದರಿಕೆ ಹೆಚ್ಚಿ ಹಿಂಡುಗಟ್ಟಲೆ ಜನ ತಮಗೆ ಸಿಕ್ಕ ವಾಹನಗಳ ಮೂಲಕ –ಕೆಲವರು ಕಾಲುನಡಿಗೆಯಿಂದ– ತಮಗೆ ಸಾಧ್ಯವಿದ್ದಷ್ಟು ವಸ್ತುಗಳನ್ನು ಹೇರಿಕೊಂಡು ಊರು ಬಿಡತೊಡಗಿದರು. ಆ ಇಡೀ ದಿನ ನಮ್ಮ ಮನೆಯ ಸುತ್ತಲಿನ ರಸ್ತೆಗಳೆಲ್ಲ ಇಂತಹ ಜನರಿಂದಲೇ ತುಂಬಿ ಹೋಗಿದ್ದವು. ದುಗುಡಗೊಂಡಿದ್ದ ನಾನು ಸಹಜವಾಗಿಯೇ ಭಾರತೀಯ ರಾಯಭಾರೀ ಕಚೇರಿಗೆ ಫೋನು ಮಾಡಿದಾಗ "ನಿಮ್ಮ ವ್ಯವಸ್ಥೆಯಾಗಿದೆ ನಿಮ್ಮನ್ನು ಶೀಘ್ರದಲ್ಲಿಯೇ ಸಂಪರ್ಕಿಸುತ್ತೇವೆ" ಎಂಬ ಉತ್ತರ ಬಂತು. ನಾವು ಸಮೀಪದ ಅಂಗಡಿಗಳಿಗೆ ಹೋಗಿ ಸಿಕ್ಕಷ್ಟು ಖಾದ್ಯ ಪದಾರ್ಥಗಳನ್ನು ತಂದು ಶೇಖರಿಸಿಟ್ಟೆವು. ಸುದೈವದಿಂದ ಈ ಎಲ್ಲ ಅವಾಂತರದ ನಡುವೆ ಕಂಪಾಲಾದ ವಿದ್ಯುಚ್ಛಕ್ತಿ ಮತ್ತು ನೀರಿನ ಪೂರೈಕೆಗೆ ಯಾವ ವ್ಯತ್ಯಯವೂ ಆಗಲಿಲ್ಲ.

ಮರುದಿನ ಬೆಳಿಗ್ಗೆ ಯುದ್ಧ ಇನ್ನೂ ತೀವ್ರಗೊಂಡಿತು. ಆತಂಕಿತನಾದ ನಾನು ರಾಯಭಾರೀ ಕಚೇರಿಗೆ ಮತ್ತೆ ಫೋನು ಮಾಡೋಣವೆಂದುಕೊಳ್ಳುತ್ತಿರುವಾಗ ರಾಯಭಾರೀ ಕಚೇರಿಯ ಕಾರು ನಮ್ಮ ಮನೆಯ ಮುಂದೆ ಬಂದು ನಿಂತಿತು. ರಾಯಭಾರೀ ಕಚೇರಿಯಲ್ಲಿ ಕಮರ್ಶಿಯಲ್ ಅಟ್ಯಾಚಿ ಆಗಿದ್ದ ದೀಪಕ್ ಮಿಶ್ರಾ ಕಾರಿನಿಂದ ಇಳಿದು ಆತುರಾತುರವಾಗಿ ಮನೆಯನ್ನು ಪ್ರವೇಶಿಸಿ "ಈಗ ಜಾಸ್ತಿ ಮಾತನಾಡಲು ವೇಳೆಯಿಲ್ಲ. ಎರಡು ಸೂಟ್‌ಕೇಸುಗಳಲ್ಲಿ ನಿಮಗೆ ಬೇಕಾದ ವಸ್ತುಗಳನ್ನು ತುಂಬಿಕೊಂಡು ಒಂದು ಗಂಟೆಯ ಒಳಗಾಗಿ ಸಿದ್ಧವಾಗಿರಿ. ಇದೀ ಅಮೀನ್ ಮತ್ತು ಅವನ ಮಂತ್ರಿಗಳೆಲ್ಲ ಕಂಪಾಲಾ ಬಿಟ್ಟು ಓಡಿಹೋಗಿದ್ದು ಎಂಟೆಬ್ಬೆಯ ವಿಮಾನ ನಿಲ್ದಾಣ ಪೂರ್ತಿಯಾಗಿ ಮುಚ್ಚಲ್ಪಟ್ಟಿದೆ. ದಿಲ್ಲಿಯಿಂದ ಬರುವ ವಿಮಾನಕ್ಕೆ ಇಳಿಯಲು ಅನುಮತಿ ಕೊಟ್ಟಿಲ್ಲ. ನಿಮ್ಮನ್ನೆಲ್ಲ ರಸ್ತೆಯ ಮೂಲಕ ಯುಗಾಂಡಾ ದಾಟಿಸಿ ನೈರೋಬಿಗೆ ಸಾಗಿಸುತ್ತಿದ್ದೇವೆ" ಎನ್ನುತ್ತ ಕಾರಿನಲ್ಲಿ ತಿರುಗಿ ಹೋದರು.

ನಾವು ಎರಡೇ ಸೂಟ್‌ಕೇಸು ಆಗುವಷ್ಟು ಸಾಮಾನುಗಳನ್ನು ತುಂಬಿಕೊಂಡು ಬೆಲೆಬಾಳುವ ರಿಫ್ರಿಜರೇಟರ್ ಮುಂತಾದುವನ್ನು ಒಂದು ಕೋಣೆಯಲ್ಲಿ ಇಟ್ಟು ಬೀಗ ಹಾಕಿದವು. ಈ ಯುದ್ಧ ಮುಗಿದು ನಾವು ಯುಗಾಂಡಾಕ್ಕೆ ಮರಳುವ ಸಾಧ್ಯತೆ ಕಡಿಮೆಯೇ ಎನಿಸಿತು. ಆದ್ದರಿಂದ ಈ ಬೆಲೆಬಾಳುವ ವಸ್ತುಗಳು ಆಗಲೇ ಕಳೆದುಹೋದಷ್ಟು ವಿಷಾದ ನನಗಾಯಿತು.

ಸುಮಾರು ಅರ್ಧಗಂಟೆಯ ನಂತರ ದೀಪಕ್ ಮಿಶ್ರಾ, ಒಂದು ಮರ್ಸಿಡೀಸ್ ಮಿನಿ ಬಸ್ಸಿನೊಂದಿಗೆ ಹಾಜರಾದ. ಬಸ್ಸಿನಲ್ಲಿ ರಾಯಭಾರೀ ಕಚೇರಿಯ ಸಿಬ್ಬಂದಿಯ ಕುಟುಂಬಗಳ ಜನರೂ ಇದ್ದರು. ಇಂಥವೇ ಇನ್ನೂ ಮೂರು ಮಿನಿ ಬಸ್ಸುಗಳು ಭಾರತೀಯರನ್ನು ತುಂಬಿಕೊಂಡು ನೈರೋಬಿಗೆ ಮುಂಜಾನೆಯೇ ಹೋಗಿರುವುದಾಗಿ ಹೇಳಿದ.

ಮದನ್‌ಜಿತ್‌ಸಿಂಗರ ರಕ್ಷೆಯಲ್ಲಿಯೇ ಹೋಗಬೇಕಾಗಿದ್ದರಿಂದ ನಾವು ಅವರ ಬಂಗಲೆಗೆ ಹೋದೆವು. ಬಂಗಲೆಯ ಆವಾರವನ್ನು ನಮ್ಮ ಬಸ್ಸು ಪ್ರವೇಶಿಸುತ್ತಿದ್ದಂತೆಯೇ ಅವರು ತಮ್ಮ ಹೆಂಡತಿಯೊಡನೆ ಹೊರಗೆ ಬಂದರು. ಒಂದು ರೀತಿಯ ಆತಂಕ ಅವರ ಮುಖವನ್ನಾವರಿಸಿತ್ತು. "ಈಗ ಎರಡೇ ನಿಮಿಷಗಳ ಹಿಂದೆ ಪಾಕಿಸ್ತಾನಿ ರಾಯಭಾರಿಗಳ ಫೋನು ಬಂತು. ಜಿಂಜಾದ ಹತ್ತಿರ ನೈಲ್ ನದಿಗೆ ಅಡ್ಡವಾಗಿ ಕಟ್ಟಿರುವ ಓವನ್‌ಫಾಲ್ಸ್ ಅಣೆಕಟ್ಟೆಗೆ ಬಾಂಬು

ಹಾಕಿ ಅದನ್ನು ಒಡೆದಿರುವ ಸುದ್ದಿ ಬಂದಿದೆ" ಎಂದರು. ಈ ಅಣೆಕಟ್ಟಿನ ಮೇಲೆಯೇ ಕಂಪಾಲಾ-ನೈರೋಬಿಯ ರಸ್ತೆ ಹೋಗುವುದ ರಿಂದ ಅದು ನಿಜವಾಗಿಯೂ ಒಡೆದಿದ್ದರೆ ನಮಗೆ ನೈರೋಬಿಗೆ ಹೋಗುವುದು ಸಾಧ್ಯ ವಾಗಲಿಕ್ಕಿಲ್ಲ ಎಂದು ಅವರು ವಿಷಾದದಿಂದ ಹೇಳಿ ದರು. "ಆದರೂ ಅಲ್ಲಿಯವರೆಗೆ ಹೋಗಿ ಬರೋಣ. ನಮ್ಮೆಲ್ಲರ ದೈವವೂ ಚೆನ್ನಾಗಿದ್ದರೆ ಅದು ಸುರಕ್ಷಿತವಾಗಿರಲೂಬಹುದು" ಎಂದು ತಮ್ಮ ಕಾರಿನಲ್ಲಿ ಕುಳಿತು ನಮಗೆ ಬಸ್ಸಿನಲ್ಲಿ ಹಿಂಬಾಲಿಸಲು ಹೇಳಿದರು. ಬಾಂಬು ದಾಳಿಯಿಂದ ತಪ್ಪಿಸಿಕೊಳ್ಳಲು ಮುಖ್ಯ ರಸ್ತೆಗಳನ್ನು ಬಿಟ್ಟು ಅಡ್ಡ ರಸ್ತೆಗಳ ಮೂಲಕ ಕಂಪಾಲಾ ನಗರವನ್ನು ದಾಟಿ ನೈರೋಬಿಯ ರಸ್ತೆಗೆ ಸೇರಿಕೊಂಡೆವು. ಮೂರೇ ದಿನಗಳ ಹಿಂದೆ ಅಚ್ಚುಕಟ್ಟಾಗಿ ಸುಂದರವಾಗಿದ್ದ ಕಂಪಾಲಾ ಈಗ ಧಗಧಗ ಉರಿಯುತ್ತಿತ್ತು.

ಎಂಭತ್ತು ಕಿಲೋಮೀಟರು ದಾರಿ ಕ್ರಮಿಸಿ ನೈಲ್ ನದಿಯ ಉಗಮಸ್ಥಾನದ ಹತ್ತಿರದಲ್ಲಿಯೇ ಅದಕ್ಕೆ ಅಡ್ಡಲಾಗಿ ಕಟ್ಟಿರುವ ಓವನ್ ಫಾಲ್ಸ್ ಅಣೆಕಟ್ಟು ಮುಟ್ಟಿದೆವು. ಈ ಅಣೆಕಟ್ಟು ಇಡೀ ಯುಗಾಂಡಾ ಅಲ್ಲದೆ ಕೀನ್ಯಾದ ಕೆಲ ಭಾಗಗಳಿಗೂ ವಿದ್ಯುಚ್ಛಕ್ತಿಯನ್ನು ಪೂರೈಸುತ್ತದೆ. ಸುದೈವದಿಂದ ಭಾರೀ ಸೈನಿಕ ಕಾವಲಿನಲ್ಲಿದ್ದ ಅಣೆಕಟ್ಟು ಸುರಕ್ಷಿತವಾಗಿತ್ತು. ಭಾರತದ ಧ್ವಜವನ್ನು ಹಾರಿಸುತ್ತಾ ಮದನ್ ಜಿತ್‌ಸಿಂಗರ ಕಾರು ಸಮೀಪಿಸಿದೊಡನೆ ಕಾವಲಿಗಿದ್ದ ಯುಗಾಂಡಾ ಸೈನಿಕರು ಸಲಾಮು ಹಾಕಿದರು. ಮದನ್‌ಜಿತ್‌ಸಿಂಗರು ಪ್ರತಿಯಾಗಿ ತಮ್ಮೊಡನೆ ತಂದಿದ್ದ ಸಿಗರೇಟುಗಳ ಒಂದು ಕಾರ್ಟನ್ನನ್ನು ಸೈನಿಕರ ಕಡೆಗೆ ಕಾಣಿಕೆಯಾಗಿ ಎಸೆದರು. ಸಿರಾಮುಖರಾದ ನಮ್ಮೆಲ್ಲರಿಗೆ ಬಂದು ನಮ್ಮ ವಸ್ತುಗಳನ್ನು ಲೂಟಿ ಮಾಡುವ ಆಸೆ ಸೈನಿಕರಿಗೆ ಆಗದಿರಲಿ ಎಂದು ಅವರನ್ನು ದೂರವೇ ಇರಿಸಲು ನಮ್ಮ ರಾಯಭಾರಿಗಳು ಕೈಕೊಂಡ ಉಪಾಯವಿದು. ನಾವು ಯುಗಾಂಡಾ ಗಡಿ ದಾಟುವವರೆಗೆ ಸೈನಿಕ ಚೆಕ್‌ಪೋಸ್ಟ್‌ಗಳು ಬಂದಾಗಲೆಲ್ಲ ಮದನ್ ಜಿತ್‌ಸಿಂಗ್ [illegible] ಸಿಗರೇಟು ಕಾರ್ಟನ್‌ಗಳ ಮೂಲಕ ಈ ಸೈನಿಕರ ಅಪಾಯದಿಂದ ನಮ್ಮನ್ನು ಸುರಕ್ಷಿತವಾಗಿಟ್ಟರು.

ಸುಮಾರು ನಾಲ್ಕು ಗಂಟೆಗಳಲ್ಲಿ ಎರಡು ನೂರು ಕಿಲೋಮೀಟರುಗಳನ್ನು ಕ್ರಮಿಸಿ ನಾವು ಯುಗಾಂಡಾದ ಗಡಿಯ ಊರಾದ ಟೊರೋರೋ ತಲುಪಿದೆವು. ಈ ಊರಿನಲ್ಲಿ ಬಿರ್ಲಾ ಗುಂಪಿಗೆ ಸೇರಿದ ಸಣಬಿನ ಚಿಕ್ಕ ಕಾರಖಾನೆಯಿದೆ. ಅದರಲ್ಲಿ ಸುಮಾರು ಹತ್ತು ಜನ ಭಾರತೀಯ ಎಂಜಿನಿಯರುಗಳು ಕೆಲಸ ಮಾಡುತ್ತಿದ್ದರು. ಅಂದು ಸಂಜೆಯಾಗಿದ್ದರಿಂದ ಮಾರನೇ ದಿನ ಗಡಿದಾಟಿ ಕೀನ್ಯಾದೊಳಗೆ ಪ್ರವೇಶಿಸುವ ನಿರ್ಧಾರ ಮಾಡಿ ಅಂದಿನ ರಾತ್ರಿಯನ್ನು ಡೇ ಎಂಬ ಬಂಗಾಲೀ ಎಂಜಿನಿಯರರ ಆತಿಥ್ಯದಲ್ಲಿ ಕಳೆದೆವು.

ಮರುದಿನ ಕೀನ್ಯಾದ ಗಡಿಯಲ್ಲಿ ಕಸ್ಟಮ್ಸ್ ವಿಧಾನಗಳನ್ನು ಪೂರೈಸಿ ಆ ದೇಶದೊಳಗೆ ಕಾಲಿಟ್ಟೆವು. ಗಡಿಯಿಂದ ಸ್ವಲ್ಪ ದೂರದಲ್ಲಿ ಪ್ಯಾನ್ ಆಫ್ರಿಕನ್ ಪೇಪರ್ ಮಿಲ್ ಎಂಬ ಬಿರ್ಲಾರವರದೇ ಒಂದು ದೊಡ್ಡ ಕಾಗದ ಕಾರಖಾನೆಯಿದೆ. ಅವರು ನಮ್ಮನ್ನು ಕರೆತರಲು ತಮ್ಮ ಮೆಟಡೋರ್ ವಾಹನವನ್ನು ಕಳಿಸಿದ್ದರು.

ನೂರಾರು ಕೆಲಸಗಾರರು ದುಡಿಯುವ ಈ ಕಾಗದ ಕಾರಖಾನೆಯ ಜನರಲ್ ಮ್ಯಾನೇಜರರು ಯುದ್ಧದಿಂದ ನಮಗೆ ವಿಶೇಷ ತೊಂದರೆಯಾಗದಿದ್ದುದನ್ನು ಕಂಡು ಸಮಾಧಾನಪಟ್ಟರು. ಕಾರಖಾನೆಯ ಐಷಾರಾಮೀ ಅತಿಥಿಗೃಹದಲ್ಲಿ ನಮಗೆಲ್ಲ ಉಳಿಯುವ ವ್ಯವಸ್ಥೆಯಾಯಿತು. ಇದೇ ಕಾರಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಬ್ಯಾಹಟ್ಟಿಯ ಕನ್ನಡಿಗ ಹಿರೇಗೌಡರ ಅವರ ಸಹಾಯ ಮತ್ತು ಆತ್ಮೀಯತೆಯನ್ನು ನಾನು ಈಗಲೂ ನೆನೆಸುತ್ತೇನೆ.

ಕಾಗದ ಕಾರಖಾನೆಯಲ್ಲಿ ಎರಡು ದಿನ ಕಳೆದ ನಂತರ ಯುದ್ಧ ಮುಗಿಯುವವರೆಗೆ ನೈರೋಬಿ [illegible] ವಿಚಾರವನ್ನು ದೃಢಪಡಿಸಿದ್ದರಿಂದ ಕಾರಖಾನೆಯ ಕಾರು ಕೊಟ್ಟು ನಮ್ಮನ್ನು ನೈರೋಬಿಗೆ ಕಳುಹಿಸಲಾಯಿತು. 1979ರ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಇದಿ ಅಮೀನ್ ಯುದ್ಧವನ್ನು ಪೂರ್ಣ ಸೋತು ಸೌದಿ ಅರೇಬಿಯಕ್ಕೆ ಓಡಿಹೋದ. ಯುಗಾಂಡದಲ್ಲಿ ಹೊಸ ಸರಕಾರ ಸ್ಥಾಪನೆಗೊಂಡಿತು. ಆಗ ನಮಗೆ ಕಂಪಾಲಾಕ್ಕೆ ಮರಳಲು ದಾರಿ ಮುಕ್ತವಾಯಿತು. ●

ಇದುವೇ ಜೀವ ಇದು ಜೀವನ

ಸುಮಾರು ಹದಿನೆಂಟು ವರ್ಷದ ಮಗನನ್ನು ಚಿಕಿತ್ಸೆಗಾಗಿ, ತಾಯಿ ಕರೆದುಕೊಂಡು ಬಂದಿದ್ದಳು. ಚಿಕಿತ್ಸೆ ಮುಗಿದ ನಂತರ ಸಹಜವಾಗಿ ಹುಡುಗನ ತಂದೆ ಏನು ಕೆಲಸ ಮಾಡುತ್ತಾನೆಂದು ಕೇಳಿದೆ. "ಕೃಷಿ ಇಲಾಖೆಯಲ್ಲಿ ಜವಾನನಾಗಿದ್ದಾನೆ, ಬಹಳ ಕುಡಿದು ಆರೋಗ್ಯ ಕೆಡಿಸಿಕೊಂಡಿದ್ದಾನೆ, ಸರಿಯಾಗಿ ಡ್ಯೂಟಿಗೆ ಹೋಗುವುದಿಲ್ಲ, ಮನೆ ಖರ್ಚಿಗೆ ಕೊಡುವುದಿಲ್ಲ" ಎಂದು ತನ್ನೆಲ್ಲ ಕಷ್ಟವನ್ನು ಅಳುತ್ತಾ ಹೇಳಿದಳು.

"ನಿನ್ನ ಮಗ ಏನಾದರೂ ಓದಿದ್ದಾನೋ ಹೇಗೆ?" ಎಂದೆ. "ಇಲ್ರೀ ಏಳನೆಯ ಕ್ಲಾಸ್ ವರೆಗೆ ಕಲಿಯುವುದೇ ದೊಡ್ಡದಾಗಿತ್ತು. ನಂತರ ಅಭ್ಯಾಸದಲ್ಲಿ ಆಸಕ್ತಿ ತೋರಿಸಲಿಲ್ಲ. ಸ್ಕೂಲ್ ಬಿಡಿಸಿ ಬಿಟ್ಟೆವು. ಈಗ ಸುಮ್ಮನೆ ಅಲೆದಾಡ್ತಾ ಇರ್ತಾನೆ" ಎಂದಳು.

"ನಿನ್ನ ಗಂಡನಿಗೆ ಆರಾಮವಿಲ್ಲ, ಮನೆ ಖರ್ಚಿಗೆ ಕೊಡೋದಿಲ್ಲ ಅಂತಾ ಹೇಳ್ತಾ ಇದ್ದಿ, ಗಂಡನ ಆರೋಗ್ಯ ಇನ್ನು ಕೆಟ್ಟು, ಹೆಚ್ಚು ಕಡಿಮೆ ಆದ್ರೆ, ಮನೆ ನಡೆಸುವುದು ತ್ರಾಸ ಆಗಬಹುದು. ಹೀಗಿರುವಾಗ ಮಗನಿಗಾದ್ರೂ ಹೆಚ್ಚಿನ ಶಿಕ್ಷಣ ಕೊಡಿಸಿದ್ದರೆ, ಒಳ್ಳೆ ನೌಕರಿ ಸಿಕ್ಕು ನಿಮಗೆ ಅನುಕೂಲವಾಗುತ್ತಿತ್ತು." ನಾನೆಂದೆ.

ನನ್ನ ಈ ಸಲಹೆಗೆ ಆ ತಾಯಿಯ ಉತ್ತರ ದಿಗ್ಭ್ರಮೆಗೊಳಿಸಿತು. "ಸಾಹೇಬ್ರೆ ನನ್ನ ಮಗನಿಗೆ ನೌಕರಿ ಸಿಗುವುದು ಭಾಳ ಸುಲಭ ಐತ್ರಿ. ಯಾಕೆಂದರೆ ಸರಕಾರಿ ನೌಕರಿಯಲ್ಲಿರುವವರು ತೀರಿಕೊಂಡರೆ ಅವರ ಮಗನಿಗೆ ನೌಕರಿ ಕೊಡಬೇಕೆಂತ ಕಾಯ್ದೇನೆ ಇದೆ. ಏಳನೇ ಕ್ಲಾಸ್ ವರೆಗೆ ಮಗ ಕಲಿತಿದ್ದಾನೆ. ನನ್ನ ಗಂಡನ ಜೀವಕ್ಕೆ ಏನಾದ್ರೂ ಆದ್ರೆ ಅಪ್ಪನ ಜವಾನ ನೌಕರಿಯಂತೂ ಸಿಕ್ಕೆ ಸಿಗ್ತದೆ. ಮಗನಿಗೆ ಹೆಚ್ಚಿಗೆ ಓದಿಸಲು ಸುಮ್ಮನೆ ಯಾಕ ತ್ರಾಸ ತಗೋಬೇಕ್ರಿ."

ಸರಕಾರಿ ಸವಲತ್ತುಗಳನ್ನು ಯಾವ ರೀತಿ ಉಪಯೋಗಿಸುತ್ತೇವೆ ಎಂಬುದಕ್ಕೆ ಇದೊಂದು ನಿದರ್ಶನ ಅಷ್ಟೆ.

ಡಾ॥ ಎಂ.ಡಿ. ಸೂರ್ಯಕಾಂತ

ಈ ಘಟನೆಯು ಸಂಭವಿಸಿ ಎರಡು ವರ್ಷಗಳೇ ಉರುಳಿದ್ದರೂ ನನ್ನ ನೆನಪಿನ ಭಿತ್ತಿಯಿಂದ ಮಾತ್ರ ಅದು ಇನ್ನೂ ಮಾಸಿಲ್ಲ.

ಒಂದು ದಿನ ಮಂಗವೊಂದು ಕಾಡಿನಿಂದ ಹೇಗೋ ತಪ್ಪಿಸಿಕೊಂಡು ನಮ್ಮ ಬೀದಿಗೆ ಬಂದಿತು. ಅದನ್ನು ಕಂಡ ನಾಯಿಗಳು ಜೋರಾಗಿ ಬೊಗಳುತ್ತಾ ಅಟ್ಟಿಸಿಕೊಂಡು ಓಡತೊಡಗಿದವು. ಗಾಬರಿಯಾದ ಮಂಗ ನಾಯಿಗಳಿಂದ ತಪ್ಪಿಸಿಕೊಳ್ಳಲು ಸರಸರನೆ ವಿದ್ಯುತ್ ಕಂಬವನ್ನು ಏರಿತು. ಅಪಾಯ ಎನ್ನುವುದರ ಅರಿವಿಲ್ಲದ ಮಂಗ ವಿದ್ಯುತ್ ತಂತಿಗೆ ಜೋತು ಬಿದ್ದದ್ದೇ ತಡ ಷಾಕ್ ಹೊಡೆದು ಕಿರುಚುತ್ತಾ ನೆಲದ ಮೇಲೆ ಬಿದ್ದಿತು. ಮಂಗದ ಸ್ಮೃತಿ ತಪ್ಪಿತು. ಜನರೆಲ್ಲಾ ಗುಂಪಾಗಿ ಸೇರಿ ಛೆ! ಛೆ! ತ್ಸು! ತ್ಸು! ಪಾಪ ಎಂಬ

ಉಪ್ಕಾರಗಳನ್ನು ತೆಗೆದರೇ ಹೊರತು ಅದನ್ನು ಉಪಚರಿಸುವ ಬಗ್ಗೆ ಮಾತ್ರ ಯಾರೂ ಯೋಚಿಸಲಿಲ್ಲ. ಅಷ್ಟರಲ್ಲಿಯೇ ನಮ್ಮ ಬೀದಿಯವನಾದ ರುದ್ರಪ್ಪ ಎನ್ನುವವನು ಬಂದ. ಅದರ ಸ್ಥಿತಿಯನ್ನು ನೋಡಿ ತಕ್ಷಣವೇ ಮನೆಯಿಂದ ನೀರನ್ನು ತಂದು ಮಂಗದ ಮುಖಕ್ಕೆ ಚಿಮುಕಿಸಿದ. ಅದನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡು ಗಾಳಿ ಹಾಕುತ್ತಾ ಮಧ್ಯೆ ಮಧ್ಯೆ ಬಾಯಿಗೆ ಗುಟುಕು ನೀರನ್ನು ಬಿಡತೊಡಗಿದ. ಸ್ವಲ್ಪ ಹೊತ್ತಿನ ನಂತರ ಮಂಗ ಚೇತರಿಸಿಕೊಂಡಿತು. ರುದ್ರಪ್ಪ ಪ್ರೀತಿಯಿಂದ ಅದರ ಮೈದಡವಿದ. ಸುತ್ತುವರಿದ ಜನರನ್ನು ನೋಡಿ ಗಾಬರಿಯಾದ ಮಂಗ ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡಿತು. ಇಷ್ಟೆಲ್ಲಾ ಆಗುವ ಹೊತ್ತಿಗೆ ಸಂಜೆ ಗತ್ತಲೆ ಕವಿಯಿತು. ರುದ್ರಪ್ಪನು ಮಂಗವನ್ನು ಹತ್ತಿರದಲ್ಲಿಯೇ ಇದ್ದ ತನ್ನ ಮನೆಗೆ ಕರೆದುಕೊಂಡು ಹೋದ. ಅದು ಮಗುವಿನಂತೆ ಅವನ ಹೆಗಲ ಮೇಲೆ ಕುಳಿತಿತ್ತು. ಮಾರನೇ ದಿನ ಬೆಳಿಗ್ಗೆ ನಾನು ಕುತೂಹಲದಿಂದ ಅವನ ಮನೆಗೆ ಹೋದೆ. ನನ್ನ ಹಾಗೆ ಕೆಲವರು ಅಲ್ಲಿಗೆ ಬಂದಿದ್ದರು. ರಾತ್ರಿಯೆಲ್ಲ ಅದು ನಿದ್ರಿಸದೆ ಅವನ ಹತ್ತಿರವೇ ಕುಳಿತಿತ್ತೆಂದು ರುದ್ರಪ್ಪ ಹೇಳಿದ.

ಮಾತು ಬಾರದ ಮಂಗ ತನ್ನ ಕೃತಜ್ಞತೆಯನ್ನು ಈ ರೀತಿ ತೋರಿಸಿಕೊಂಡಿತ್ತು. ಶಬ್ದದಿಂದ ಹೇಳಲಾಗದ, ಶಬ್ದದ ಹಿಡಿತಕ್ಕೆ ಸಿಲುಕದ ಪ್ರೀತಿ ಆ ಮಂಗನ ಅಪ್ಪುಗೆಯಲ್ಲಿತ್ತು. 'ಮಾನವೀಯ' ಅಂತಃಕರಣವನ್ನು ಅದು ಮೆರೆಯಿತು.

ಜಗದೀಶ ಮಠಪತಿ

ಒಂದು ದಿನ ನನ್ನ ಗೆಳೆಯನ ಮನೆಗೆ ಹೋಗಿದ್ದೆ. ಎಲ್ಲರೂ ಮಾತನಾಡುತ್ತಾ ಕುಳಿತಿದ್ದೆವು. ಆಗ ಮಾತಿನ ಸಂದರ್ಭದಲ್ಲಿ ಹಿರಿಯರೊಬ್ಬರು 'ಕೆಲವೊಮ್ಮೆ ಎಲ್ಲವೂ ಆಗುವುದು ಒಳ್ಳೆಯದಕ್ಕೆ' ಎನ್ನುತ್ತಿದ್ದಂತೆ ನನ್ನ ಗೆಳೆಯನ ಮುತ್ತಜ್ಜ ತಮ್ಮ ವಿದ್ಯಾರ್ಥಿ ಜೀವನದ ಸ್ವಾರಸ್ಯಪೂರ್ಣ ಘಟನೆಯೊಂದನ್ನು ನೆನಪಿಸಿಕೊಂಡರು.

ಅವರ ಮುಖ್ಯೋಪಾಧ್ಯಾಯರು ತುಂಬ ಶಿಸ್ತಿನ ಸ್ವಭಾವದವರು. ಅವರು ಚೆನ್ನಾಗಿ ಪಾಠ ಕಲಿಸುತ್ತಿದ್ದರು. ಆದರೆ ಅವಿಧೇಯರಾದ ಆಲಸಿ ವಿದ್ಯಾರ್ಥಿಗಳಿಗೆ ನಿರ್ದಾಕ್ಷಿಣ್ಯವಾಗಿ ನಾಗರಬೆತ್ತದಿಂದ ಬಾರಿಸುತ್ತಿದ್ದರು. ಬೆಂಚಿನ ಮೇಲೆ ನಿಲ್ಲಿಸುವುದು. ಕಿವಿ ಹಿಡಿದುಕೊಂಡು ಕೂತು ಏಳಿಸುವುದು, ಒಂಟಿಕಾಲಿನಲ್ಲಿ ನಿಲ್ಲಿಸುವುದು ಮುಂತಾದ ಶಿಕ್ಷೆಗಳನ್ನು ವಿಧಿಸುತ್ತಿದ್ದರು. ತಪ್ಪು ಮಾಡಿದ ಮಕ್ಕಳನ್ನು ತರಗತಿಯ ಹೊರಗೆ ಆಟದ ಬಯಲಿನಲ್ಲಿ ಮಣ್ಣಿನ ಮೇಲೆ ಮೊಣಕಾಲೂರಿಸುವುದು ಅವರು ವಿಧಿಸುತ್ತಿದ್ದ ಇನ್ನೊಂದು ಸಾಮಾನ್ಯ ಶಿಕ್ಷೆ.

ಒಂದು ದಿನ ಅವರು ಕೇಳಿದ ಇಂಗ್ಲಿಷ್ ಪ್ರಶ್ನೆಯೊಂದಕ್ಕೆ ಇಡೀ ತರಗತಿಯಲ್ಲಿ ಯಾರೂ ಉತ್ತರ ಕೊಡಲಿಲ್ಲ. ಮುಖ್ಯೋಪಾಧ್ಯಾಯರು ಎಲ್ಲರಿಗೂ ನಾಗರಬೆತ್ತದಿಂದ ಬಲವಾಗಿ ಎರಡೆರಡು ಪೆಟ್ಟು ಕೊಟ್ಟರು. ತರಗತಿಯ ಹೊರಗೆ ಮಣ್ಣಿನ ಮೇಲೆ ಮೊಣಕಾಲೂರಿ ಕುಳಿತುಕೊಂಡು ಪ್ರಶ್ನೋತ್ತರವನ್ನು ಬಾಯಿಪಾಠ ಕಲಿತು ಒಪ್ಪಿಸಿದ ಮೇಲೆ ಮಾತ್ರ ನಿಮಗೆ ತರಗತಿಯೊಳಗೆ ಪ್ರವೇಶ' ಎಂದು ಆಜ್ಞಾಪಿಸಿ ಎಲ್ಲ ವಿದ್ಯಾರ್ಥಿಗಳನ್ನು ಹೊರಗೆ ಕಳಿಸಿದರು.

ಆಗ ಇದ್ದಕ್ಕಿದ್ದಂತೆ ಜೋರಾಗಿ ಬಿರುಗಾಳಿಯೊಂದು ಬೀಸಿತು. ಶಾಲೆಯ ಕಿಟಕಿ ಬಾಗಿಲುಗಳು ಟಪಟಪನೆ ಬಡಿದುಕೊಂಡವು. ಶಾಲೆಯ ಹಿಂದಿನ ತೆಂಗಿನ ಮರವೊಂದು ಅತ್ತಿತ್ತ ಓಲಾಡಿತು. ಒಂದು ಒಣರೆಂಬೆ ಶಾಲೆಯ ಹೆಂಚಿನ ಮಾಡಿನ ಮೇಲೆ ಮುರಿದು ಬಿದ್ದಿತು. ಎರಡು ತೆಂಗಿನ ಕಾಯಿಗಳು ನೇರವಾಗಿ ಅವರ ತರಗತಿಯೊಳಗೇ ಬಂದು ಬಿದ್ದವು. ಹೆಂಚುಗಳು ಚೂರುಚೂರಾಗಿ ಒಡೆದು ತರಗತಿಯೊಳಗೆ ಸಿಡಿದವು.

ಒಂದು ವೇಳೆ ಅಲ್ಲಿ ಮಕ್ಕಳೆಲ್ಲ ಎಂದಿನಂತೆ ಕುಳಿತುಕೊಂಡಿದ್ದರೆ? ಆಗ ಆಗುತ್ತಿದ್ದ ಸಾವು-ನೋವು, ದುರಂತ ಮುಖಗಳೆಲ್ಲ ತಪ್ಪಿಹೋದದ್ದು ಶಿಕ್ಷಕರು ನೀಡಿದ ಶಿಕ್ಷೆಯಿಂದಲೇ ಅಲ್ಲವೆ?

'ನಾನು ನಿಮಗೆ ವಿಧಿಸಿದ ಶಿಕ್ಷೆ ನಿಮ್ಮ ಜೀವ ಉಳಿಸಿದ ರಕ್ಷೆಯಾಯಿತು. ಕೆಲವೊಮ್ಮೆ ಎಲ್ಲವೂ ಆಗುವುದು ಒಳ್ಳೆಯದಕ್ಕೆ' ಎಂದು ಆ ಶಿಕ್ಷಕರು ಯಾವಾಗಲೂ ಹೇಳುತ್ತಿದ್ದರಂತೆ.

'ಮಧುಕರ'

ಕೃತ್ತಿಕಾ ನಕ್ಷತ್ರ ಪುಂಜ


ಕುಚ್ಚದಲ್ಲಿ ಸೌಂದರ್ಯ

●ಎಸ್.ಎನ್. ಲಕ್ಷ್ಮೀಪತಿ

"ನಾಟಕವ ನೋಡು ಬ್ರಹ್ಮಾಂಡ ರಂಗಸ್ಥಲದಿ. ಕೋಟಿ ನಟರಂತಿಹರು ಚಿತ್ರ ಪಾತ್ರಗಳ. ಆಟಕ್ಕೆ ಕಥೆಯಲ್ಲಿ ಮೊದಲಿಲ್ಲ, ಕಡೆಯಿಲ್ಲ, ನೋಟಕರು ಮಾಟಕರೆ-ಮಂಕುತಿಮ್ಮ."

ಖಗೋಳ ಲೋಕವನ್ನು ಕುರಿತಂತೆ ಡಿ.ವಿ.ಜಿ.ಯವರ ಈ ಮಾತಿನಲ್ಲಿ ಆಕಾಶದ ಅನಂತ ವೈವಿಧ್ಯವನ್ನು ಅಗಣಿತ ಸೌಂದರ್ಯವನ್ನು ಅಸೀಮ ವಿಸ್ತಾರವನ್ನು ಕಾಣಬಹುದು. ಖಗೋಳಲೋಕದ ಅಸಾದೃಶ್ಯದ ಮೋಡಿಗೆ ಒಳಗಾದ ಐನ್‌ಸ್ಟೀನ್ ನಕ್ಷತ್ರ ಸಾಮ್ರಾಜ್ಯದಲ್ಲಿ ಕಂಡದ್ದು ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ ಪ್ರೇರೇಪಿಸುವ ಸ್ಫೂರ್ತಿಯ ನೆಲೆ, ಸಕಲ ಜ್ಞಾನ-ವಿಜ್ಞಾನಗಳ ಸೆಲೆ. ಅಂತಹ ಜ್ಞಾನ-ವಿಜ್ಞಾನಗಳ ಮಹಾ ಸಾಗರದ ಪ್ರವಾಹದಲ್ಲಿ ಒಂದು ಮುತ್ತಿನ ಹನಿ ಕೃತ್ತಿಕಾ ನಕ್ಷತ್ರ ಪುಂಜ. ಅದರ ಪ್ರಾಜ್ವಲ ಸೌಂದರ್ಯಕ್ಕೆ ಮಂತ್ರಮುಗ್ಧರಾದ ವಿವಿಧ ದೇಶದ ಖಗೋಳತಜ್ಞರು, ಜನಸಾಮಾನ್ಯರು ಸಹಸ್ರ ಸಹಸ್ರ ವರುಷಗಳಿಂದ ಕೃತ್ತಿಕಾ ಪುಂಜದ ಅತುಳ ಸೌಂದರ್ಯವನ್ನು ಸ್ವಾನುಭಾವದಿಂದ ತಾ ಕಂಡಂತೆ ನಾನಾ ಬಗೆಯಲ್ಲಿ ವರ್ಣಿಸಿದ್ದಾರೆ. ಆಂಗ್ಲ ಕವಿ ಟೆನ್ನಿಸನ್ ಕಂಡಂತೆ ಕೃತ್ತಿಕಾ ನಕ್ಷತ್ರ ಪುಂಜ "ಮಿಣುಕು ಹುಳುಗಳ ಒಂದು ಬೆಳ್ಳಿಯ ದಾರದಲ್ಲಿ ಪೋಣಿಸಿದಂತೆ" ಈ ದೃಶ್ಯ ಖಗೋಳ ಲೋಕದಲ್ಲಿ ಅದ್ಭುತ ಕೌತುಕದ ನೆಲೆ. ಈ ಕೌತುಕ ನಕ್ಷತ್ರ ಪುಂಜದ ಬಗ್ಗೆ ದೇಶ ವಿದೇಶಗಳಲ್ಲಿ ಅನೇಕ ದಂತ ಕಥೆಗಳು ಪ್ರಚಲಿತವಿವೆ.

ಖಗೋಳ ಲೋಕದ ವಿದ್ಯಮಾನ ಕುರಿತಂತೆ ಸುಂದರ ಕತೆಗಳನ್ನು ಹೆಣೆದಿರುವ ಪ್ರಾಚೀನ ಗ್ರೀಕರು ಕೃತ್ತಿಕಾ ನಕ್ಷತ್ರ ಪುಂಜದ ಬಗ್ಗೆಯೂ ಸುಂದರ ಕತೆಗಳನ್ನು ಹೆಣೆದಿದ್ದಾರೆ. ಪ್ರಚಲಿತವಿರುವ ಗ್ರೀಕ್ ದಂತ ಕತೆಯೊಂದರಲ್ಲಿ ಮಹಾ ವ್ಯಾಧನೊಮ್ಮೆ ಪರ್ವತದ ತಪ್ಪಲಲ್ಲಿ ಬೇಟೆಯಾಡುತ್ತಿದ್ದಾಗ ವೃಕ್ಷಗಳ ಮರೆಯಲ್ಲಿ ಅವನಿಗೆ ಅಪೂರ್ವ ವಸ್ತುವೊಂದು ಕಂಡಂತಾಯಿತು. ತತ್‌ಕ್ಷಣವೇ ಅವನು ಬಿಲ್ಲನ್ನು ಎದೆಗೇರಿಸಿ ಬತ್ತಳಿಕೆಯಿಂದ ಬಾಣ ತೆಗೆದು ಅದರ ಬೆನ್ನಟ್ಟಿದ. ಆದರೆ ಅವನ ಅದೃಷ್ಟಕ್ಕೆ ಅದು ಬೇಟೆಯ ಪ್ರಾಣಿಯಾಗಿರದೆ ಅಪೂರ್ವ ರೂಪವತಿಯರಾದ ಏಳು ಜನ ಯುವತಿಯರಾಗಿದ್ದರು. ಪ್ರಾಚೀನ ಗ್ರೀಕರ ನಂಬಿಕೆಯಂತೆ ಈ ಸಪ್ತಕನ್ನಿಕೆಯರು ಭೂಮಂಡಲದ ಸ್ತಂಭಗಳೆನಿಸಿರುವ ಕಂಬಗಳನ್ನು ಹೊತ್ತು ನಿಂತಿರುವ ದೇವತೆ ಅಟ್ಲಾಸನ ಪುತ್ರಿಯರು. ಮಹಾ ವ್ಯಾಧನ ಸುಳಿವು ಕಣ್ಣಿಗೆ ಬಿದ್ದೊಡನೆ ಕಾಲಿಗೆ ಬುದ್ಧಿ ಹೇಳಿದರು. ಈಗ ಮಹಾವ್ಯಾಧನಿಗೆ ತನ್ನ



ತಪ್ಪಿನ ಅರಿವಾಯ್ತು. ತತ್‌ಕ್ಷಣವೇ ಶರವೇಗದಲ್ಲಿ ಆ ಸುಂದರಿಯರನ್ನು ಹಿಂಬಾಲಿಸಿದ; ತನ್ನಿಂದ ಅವರಿಗೆ ತೊಂದರೆಯಾಗದೆಂಬ ಅಭಯಹಸ್ತ ನೀಡಲು.

ಆದರೆ ಭೀತಿಯಲ್ಲಿ ತತ್ತರಿಸುತ್ತಿದ್ದ ಆ ಪ್ರಮದೇಯರು ತಮ್ಮನ್ನು ರಕ್ಷಿಸೆಂದು ದೇವತೆಗಳ ಅಗ್ರಗಣ್ಯ ಗುರುವಿಗೆ ಮೊರೆ ಬಿದ್ದರು. ಕ್ಷಣ ಕಾಲ ಆಲೋಚಿಸಿದ ಗುರು ಅವರೆಲ್ಲರನ್ನು ನಕ್ಷತ್ರಗಳನ್ನಾಗಿಸಿದ. ಬಾನಿನಲ್ಲಿ ಏಳು ಮಂದಿಯೂ ಜೊತೆಯಲ್ಲಿ ವಾಸಿಸುವಂತೆ ವರ ನೀಡಿದ. ಇದಕ್ಕೆ ಸಾಕ್ಷಿ ಎಂಬಂತೆ ಗುಚ್ಛದ ಸಮೀಪ ಮಹಾವ್ಯಾಧ ಪುಂಜವಿರುವುದನ್ನು ಗುರುತಿಸಬಹುದು.

ಕೃತ್ತಿಕಾ ಎಂಬ ನಾಮಪದ ಗ್ರೀಕ್‌ನ 'ಪಾರಿವಾಳ' ಎಂಬ ಪದದಿಂದ ಬಂದಿದೆ. ಕೆಲವು ದಂತ ಕತೆಗಳ ಪ್ರಕಾರ ಕೃತ್ತಿಕೆಯರು ವ್ಯಾಧನಿಂದ ತಪ್ಪಿಸಿಕೊಳ್ಳಲು ಪಾರಿವಾಳಗಳಾದರೆಂದು ಪ್ರತೀತಿ.

ಪ್ರಾಯಶಃ ಈ ಬಗ್ಗೆ ಪ್ರಾಚೀನ ಐತಿಹ್ಯವು ಗ್ರೀಕರಿಗಿಂತಲೂ ಆದಿಕಾಲಕ್ಕೆ ಅಂದರೆ ಬೆಬಿಲೋನಿಯನ್ನರ ಕಾಲಕ್ಕೆ ಅಥವಾ ಇನ್ನೂ ಪ್ರಾಚೀನ ಕಾಲಕ್ಕೆ ಹೋಗುತ್ತದೆ. ಏಕೆಂದರೆ ನಮ್ಮ ವೇದಗಳ ಕಾಲದ ಖಗೋಳ ಶಾಸ್ತ್ರದಲ್ಲೂ ಈ ನಕ್ಷತ್ರ ಪುಂಜವನ್ನು "ಕೃತ್ತಿಕಾ ದೇವಿ"ಯರೆಂದು ಕರೆಯಲಾಗಿದೆ. ನಮ್ಮ ಪೌರಾಣಿಕ ಕಲ್ಪನೆಯಲ್ಲಿ ಆರು ಮಂದಿ ಕೃತ್ತಿಕಾ ದೇವಿಯರನ್ನು ಹೆಸರಿಸಲಾಗಿದೆ. ಶಿಶು ಸುಬ್ರಮಣ್ಯ ಗಂಗಾ ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದಾಗ ಈ ದೇವಿಯರು ಅಂತರಿಕ್ಷದಿಂದ ಇಳಿದು ಬಂದು ಅವನಿಗೆ ಮೊಲೆಯುಣಿಸಲು ಮುಂದಾದರು. ಆರು ಮೊಲೆಗಳಿಂದ ಹಾಲು ಹೀರಲು ಶಿಶುವಿಗೆ ಆರು ತಲೆಗಳು ಹುಟ್ಟಿದವು. ಹೀಗೆ ಅವನು ಕಾರ್ತಿಕೇಯ, ಷಡಾನನ, ಅರ್ಮೊಗ, ಗಾಂಗೇಯ, ಗೌರಿತನಯ ಇತ್ಯಾದಿ ನಾಮಾಂಕಿತನಾಗಿದ್ದಾನೆ ಹಾಗೂ ಇತರೆ ನಾಮಾಂಕಿತಗಳಾದ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.

ವಿಶ್ವ ಖಂಡದ ಇತರ ಭಾಗಗಳಲ್ಲಿ ಈ ನಕ್ಷತ್ರ ಪುಂಜದ ಬಗ್ಗೆ ಸಂಪೂರ್ಣವಾಗಿ ಬೇರೆಯೇ ಆದ ವ್ಯಾಖ್ಯಾನವನ್ನು ನೀಡುತ್ತಾರೆ. ಆ ವ್ಯಾಖ್ಯಾನದಂತೆ ಪ್ರಜ್ವಲಿಸುವ ಮಾಣಿಕ್ಯ ಕೆಂಪು-ರೋಹಿಣಿ ನಕ್ಷತ್ರ ಕೃತ್ತಿಕೆಯರ ಮಾತೃ. ಇದರ ಸನಿಹದ ಕೃತ್ತಿಕಾ ಪುಂಜ ವೀಕ್ಷಕರಿಗೆ ಭಾಸವಾದದ್ದಾದರೂ ಹೇಗೆಂದರೆ ಕೋಳಿ ಮರಿಗಳು ಒಟ್ಟಾಗಿ ತಾಯಿ ಕೋಳಿ ಪಕ್ಕದಲ್ಲಿ ಇರುಕಿದಂತೆ.

ಉತ್ತಮ ದೃಷ್ಟಿಯುಳ್ಳ ಯಾರಾದರೂ ಈ ನಕ್ಷತ್ರ ಪುಂಜದ 6 ಕೃತ್ತಿಕೆಯರನ್ನು ಶುಭ್ರ ರಾತ್ರಿಯಂದು, ವಿದ್ಯುದ್ದೀಪಗಳ ಗೊಡವೆಯಿರದ ದೂರದ ಪ್ರದೇಶದಿಂದ ಗುರುತಿಸಲು ಸಾಧ್ಯ. ಈ ಪುಂಜದಲ್ಲಿ ಕೃತ್ತಿಕೆ ಎಂಬ ಸಹೋದರಿಯೇ ಅತ್ಯಂತ ಹೊಳಪುಳ್ಳ ನಕ್ಷತ್ರವಾಗಿದ್ದು ಗುಂಪಿನ ಹಿರಿಯಳು ಹೌದು. ಈ ಗುಂಪಿನ ಎರಡನೆ ಪೌರೋಹಿತ ಅಟ್ಲಾಸ್‌ಗೆ ಸಲ್ಲುತ್ತದೆ. ಅಟ್ಲಾ ೱ

ನಷ್ಟೇ ಪ್ರಕಾಶವುಳ್ಳದ್ದು ಎಲಕ್ಟ್ರಾ. ಇದರ ನಂತರದ ಸ್ಥಾನ ಮಯಳಿಗೆ. ಬುದನ ಅನುರೂಪ ಸೌಂದರ್ಯವತಿ ತಾಯಿ ಆಕೆ. ಪ್ರಾಚೀನ ರೋಮನ್ನರು ಮಯಳನ್ನು ವಸಂತ ದೇವತೆಯೆಂದು ಆರಾಧಿಸುತ್ತಿದ್ದರು.

ಉತ್ತರಾರ್ಧಗೋಳದ ಕೆಲವು ರಾಷ್ಟ್ರಗಳಲ್ಲಿ ಕೃತ್ತಿಕಾ ಪುಂಜದ ಅರುಣೋದಯವನ್ನು ಹೊಸ ವರ್ಷದ ಶುಭ ಸೂಚನೆಯೆಂದು ಭಾವಿಸಿ ಬಿತ್ತನೆ ಆರಂಭಿಸುತ್ತಾರೆ. ಈ ಗುಂಪಿನ ಇತರ ನಕ್ಷತ್ರಗಳಾದ ಮಿರೋಪ್ ಮತ್ತು ಟೈಗೇಟಾಗಳನ್ನು ಸುಲಭವಾಗಿ ವೀಕ್ಷಿಸಬಹುದು.

ಇದು ಪುಂಜದ ಏಳನೇ ಮಂದ ನಕ್ಷತ್ರ ಪ್ಲಿಯೋನ್ ಕುರಿತು ಗ್ರೀಕರು ಪ್ರಾಯಶಃ ಅದು ನಾಚಿಕೆ ಅಥವಾ ದುಃಖದಿಂದ ಕಣ್ಣಿಗೆ ಗೋಚರಿಸದೆ ಹಾಗೆ ಉಳಿದಿದೆ ಎನ್ನುತ್ತಾರೆ. ಇದೇ ಬಗೆಯ ದಂತ ಕತೆಗಳು ಜಪಾನ್, ಆಸ್ಟ್ರೇಲಿಯಾ ಹಾಗೂ ಆಫ್ರಿಕಾದ ಕೆಲವೆಡೆ ಪ್ರಚಲಿತವಿದೆ. ಈಗ್ಗೆ 2-3 ಸಾವಿರ ವರ್ಷಗಳ ಹಿಂದೆ ಪ್ಲಿಯೋನ್ ಉಜ್ವಲ ನಕ್ಷತ್ರವಾಗಿತ್ತೆಂದು ವೈಜ್ಞಾನಿಕ ಆಧಾರಗಳು ತಿಳಿಸುತ್ತವೆ.

ಶೀಕ್ಷ್ಣ ದೃಷ್ಟಿಯುಳ್ಳವರು ಕೃತ್ತಿಕಾ ಪುಂಜದಲ್ಲಿ 8-9 ಕ್ಕಿಂತಲೂ ಹೆಚ್ಚು ನಕ್ಷತ್ರಗಳನ್ನು ಗುರುತಿಸಬಲ್ಲರು. ಈಗಾಗಲೇ ಆಸ್ಟಿರೋಪ್ ಮತ್ತು ಸಿಲೇನೋ ಎಂಬ ನಕ್ಷತ್ರಗಳನ್ನು ಗುರುತಿಸಲಾಗಿದೆ. ಆದರೂ ಈ ಪುಂಜದಲ್ಲಿ ಕಡಿಮೆ ಎಂದರೆ 200-300 ನಕ್ಷತ್ರಗಳಿದ್ದು ಇವೆಲ್ಲವೂ ಒಂದಕ್ಕೊಂದು ಗುರುತ್ವಾಕರ್ಷಣ ಶಕ್ತಿಯಿಂದಾಗಿ ಒಂದೆಡೆ ಸೇರಿವೆ ಎಂದು ನಂಬಲಾಗಿದೆ. ಈ ಗುಂಪು ಸು. 1000 ಮಿಲಿಯನ್ ವರ್ಷಗಳ ಹಿಂದೆ ನಡೆದ ಬಾಹ್ಯ ಗುರುತ್ವ ಬಲದಿಂದ ಸಿಡಿದು ದೂರ ಹೋಗಿ ನಮ್ಮ ಬ್ರಹ್ಮಾಂಡದಲ್ಲಿ ಪ್ರತ್ಯೇಕವಾಗಿ ಉಳಿದಿದೆ ಎಂದು ಲೆಕ್ಕ ಹಾಕಲಾಗಿದೆ.

ವೈಜ್ಞಾನಿಕ ದೃಷ್ಟಿಕೋನದಿಂದ ಹೇಳುವುದಾದರೆ ಕೃತ್ತಿಕಾ ಪುಂಜ ಹೆಚ್ಚು ಗಮನವನ್ನು ಸೆಳೆಯುತ್ತದೆ. ಇದಕ್ಕೆ ಕಾರಣ ಈ ಪುಂಜದ ಎಲ್ಲ ನಕ್ಷತ್ರಗಳು ಏಕ ಕಾಲಕ್ಕೆ ಸೃಷ್ಟಿಯಾದವು. ಏಕ ಕಾಲಕ್ಕೆ ಸೃಷ್ಟಿಯಾದ ವಿವಿಧ ಗಾತ್ರದ ನಕ್ಷತ್ರಗಳ ರೋಹಿತ (ಸ್ಪೆಕ್ಟ್ರಾ)ದಿಂದ ಅವುಗಳ ವಿಕಾಸ ಮತ್ತು ಅವನತಿಯ ಬಗ್ಗೆ ಮಾಹಿತಿಯು ದೊರೆಯುತ್ತದೆ.

ಕೃತ್ತಿಕಾ ಪುಂಜ ಉದಯಿಸಿ ಸುಮಾರು 60 ಮಿಲಿಯನ್ ವರ್ಷಗಳು ಸಂದಿವೆ. ಭೂಮಿಯ ವಯಸ್ಸಿಗೆ ಹೋಲಿಸಿದರೆ ಇದು ನೂರನೆ ಒಂದು ಭಾಗಕ್ಕಿಂತ ತುಸು ಹೆಚ್ಚಷ್ಟೇ. ವಿಶ್ವದ ಸೃಷ್ಟಿಗೆ (15-20 ಸಾವಿರ ಮಿಲಿಯನ್ ವರ್ಷಗಳು) ಹೋಲಿಸಿದರೆ ಭೂಮಿ ತೀರಾ ಇತ್ತೀಚಿನದು! ಧೂಳಿನ ಕಣ ಹಾಗೂ ಅನಿಲದ ದಟ್ಟ ಸಾಂದ್ರತೆಯಿಂದ "ನೀಹಾರಿಕೆಯ ಕಾರ್ಮೋಡ" ಸೃಷ್ಟಿಯಾಯಿತೆಂದು ನಂಬಲಾಗಿದೆ. ಈ ದಟ್ಟ ಕಾರ್ಮೋಡದ ಅಳಿದುಳಿದ ಶೇಷಭಾಗವೇ ಇಂತಹ ಮೋಹಕ ಸೌಂದರ್ಯದ ಕೃತ್ತಿಕಾ ಪುಂಜದ ಜನ್ಮಕ್ಕೆ ಕಾರಣವೆಂದು ಹೇಳಿದರೆ ತಪ್ಪಾಗಲಾರದು.

ಮೊದಲ ನೋಟಕ್ಕೆ ಇದು ಅದರಲ್ಲೂ ಬರಿಗಣ್ಣಿಗೆ ತೀರಾ ನಿಕೃಷ್ಟವಾಗಿ ಕಾಣಬಹುದು. ದೂರದರ್ಶಕದ ಮೂಲಕ ನೋಡಿದರೆ ಅದೊಂದು ನಯನ ಮನೋಹರ ದೃಶ್ಯ. ಶುಭ್ರ ನೀಲಾಕಾಶದ ರಾತ್ರಿಯಂದು ಪೂರ್ವ ಹಾಗೂ ಈಶಾನ್ಯ ದಿಕ್ಕಿನಲ್ಲಿ ಪ್ರಕಾಶಿಸುವ ರೋಹಿಣಿ ಮತ್ತು ಬ್ರಹಸ್ಪತಿಯು ಎಂಬ ಎರಡು ನಕ್ಷತ್ರಗಳನ್ನು ಗುರುತಿಸಿ. ಕೃತ್ತಿಕಾ ಪುಂಜ ಹುಡುಕಲು ರೋಹಿಣಿ ನಕ್ಷತ್ರದಿಂದ ತೀರಾ ಮೇಲಕ್ಕೆ ಕಣ್ಣು ಹಾಯಿಸಬೇಕು. ನವೆಂಬರ್‌ನ ರಾತ್ರಿಯಲ್ಲಿ ತುಸು ಮೇಲೆ ಏರಿ ಫೆಬ್ರವರಿ ಮಾಹೆಯಲ್ಲಿ ಪಶ್ಚಿಮ ದಿಕ್ಕಿಗೆ ಸರಿಯುತ್ತದೆ. ಅನೇಕರು ಕೃತ್ತಿಕಾ ಗುಚ್ಛವನ್ನೇ ಸಪ್ತರ್ಷಿ ಮಂಡಲವೆಂದು ಭ್ರಮಿಸುವುದಿದೆ. ಆದರೆ ಕೃತ್ತಿಕಾಗುಚ್ಛ ಮತ್ತು ಸಪ್ತರ್ಷಿ ಮಂಡಲ ಇವೆರಡು ಬೇರೆ ಬೇರೆ. ರಾತ್ರಿಯಲ್ಲಿ ಆಕಾಶದ ನಿರಂತರ ಅಧ್ಯಯನ ಈ ಗೊಂದಲವನ್ನು ನಿವಾರಿಸುತ್ತದೆ. ಇತ್ತೀಚೆಗೆ ಆಕಾಶವೀಕ್ಷಣೆಗೆ ನೆರವಾಗಬಲ್ಲ ಹೊತ್ತಿಗೆಗಳು, ಕಡಿಮೆ ಬೆಲೆಗೆ ದೊರಕುವ ದೂರದರ್ಶಕಗಳು ಮಾರುಕಟ್ಟೆ ಪ್ರವೇಶಿಸಿವೆ. ಆಸಕ್ತಿಯುಳ್ಳವರು ಇವುಗಳನ್ನು ಬಳಸಿಕೊಂಡರೆ ಬ್ರಹ್ಮಾಂಡ ರಂಗಸ್ಥಲದ ಕೋಟಿಕೋಟಿ ಸಚಿ ಸಾರ್ವಭೌಮರನ್ನು ನೋಡಿ ಆನಂದಿಸಬಹುದು. ●

(ಪನ್‌ಫ್ರಂಟ್)

ಬೆಳ್ಳಿ ಮೊದಲಿಗಿಂತ ನಮ್ಮ ಜೀವನದಲ್ಲಿ ಹೆಚ್ಚು ಹಾಸುಹೊಕ್ಕಾಗಿದೆ. ಬೆಳ್ಳಿಯ ಸಹಾಯವಿಲ್ಲದೆ ತಾಂತ್ರಿಕ ಅಭಿವೃದ್ಧಿಯೇ ಸಾಧ್ಯವಿಲ್ಲದಂತಾಗಿದೆ. ಸೌರಶಾಖ ದಿಂದ ವಿದ್ಯುದುತ್ಪಾದನೆ, ಸ್ತನದ ಕ್ಯಾನ್ಸರ್ ಪತ್ತೆಹಚ್ಚಲು ಅವಶ್ಯವಿರುವ ಉಪ ಕರಣದ ಉತ್ಪಾದನೆ, ಕಂಪ್ಯೂಟರ್ ನಿರ್ವಹಣೆ, ಕಾರನ್ನು ಆರಂಭಿಸುವ ಬಟನ್, ತಲೆಬುರುಡೆಗಾದ ಗಾಯವನ್ನು ವಾಸಿ ಮಾಡುವುದು, ವಿಮಾನದ ಎಂಜಿನ್ ಮುಂತಾದುವುಗಳಿಗೆ ಬೆಳ್ಳಿ ಅತ್ಯವಶ್ಯ.

ಬೆಳ್ಳಿ ಈಗ ಬಂಗಾರ

• ಸಂಜೀವ •

ಕಳೆದ ಆರು ನೂರು ವರ್ಷಗಳಲ್ಲಿ ಮಾನವನಿಗೆ ಬೆಳ್ಳಿಯಿಂದ ಅತಿ ಹೆಚ್ಚು ಉಪಯೋಗವಾದದ್ದು ಚಮಚೆಯ ರೂಪದಲ್ಲಿ. ಹಾಗೆ ನೋಡಿದರೆ ಈ ರೀತಿಯ ಉಪಯೋಗಕ್ಕೆ ಬೆಳ್ಳಿ ಸಾಕಷ್ಟು ಗಟ್ಟಿಯಾದುದಲ್ಲ. ಆದರೆ ಬೆಳ್ಳಿಯ 925 ಕಣಗಳಿಗೆ (1 ಕಣ ಪೌಂಡಿನ 1/7000 ಭಾಗದಷ್ಟು) 75 ಕಣಗಳಷ್ಟು ತಾಮ್ರವನ್ನು ಸೇರಿಸಿದರೆ ಆ ಬೆಳ್ಳಿಯ ವಸ್ತುವಿಗೆ ಸಾಕಷ್ಟು ಕಾಲ ತಳಿಕೆ ಬರುವಷ್ಟು ಬಲ ಬರುತ್ತದೆ. ಶುದ್ಧ ಬೆಳ್ಳಿ ಎಷ್ಟು ಮಿದುವಾಗಿರುತ್ತದೆಂದರೆ ಅದರ ಒಂದು ಲಕ್ಷ ತಗಡುಗಳನ್ನು ಬಡಿದು ಒಂದರ ಮೇಲೊಂದರಂತೆ ಜೋಡಿಸಿಟ್ಟರೆ ಅದು 25 ಮಿಲಿಮೀಟರಿಗಿಂತ ಹೆಚ್ಚು ಎತ್ತರವಾಗುವುದಿಲ್ಲ. ಅಕ್ಕಸಾಲಿಗರು ಮಾನವನ ಕೂದಲಿನಷ್ಟು ತೆಳ್ಳಗೆ ಬೆಳ್ಳಿಯನ್ನು ಎಳೆಯಬಲ್ಲರು. ಕೆತ್ತಿ ಕೊರೆದು ಮನಮೋಹಕ ಸುಂದರ ಒಡವೆಗಳನ್ನು ತಯಾರಿಸಬಲ್ಲರು. ಬೆಳ್ಳಿಯ ಆಭರಣ ಧರಿಸುವುದು, ಬಹುಮಾನದ ರೂಪದಲ್ಲಿ ಬೆಳ್ಳಿಯ ಕಪ್ ಕೊಡುವುದಂತೂ ಸಾಮಾನ್ಯವಾಗಿಬಿಟ್ಟಿದೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಎಷ್ಟೋ ಬಾರಿ ನಮಗೆ ಅರಿವೇ ಇಲ್ಲದಂತೆ ನಾವು ಬೆಳ್ಳಿಯನ್ನು ಉಪಯೋಗಿಸುವುದಿದೆ. ಉದಾಹರಣೆಗೆ ಫೋಟೋ ತೆಗೆಯುವಾಗ, ಫೋಟೋಗ್ರಾಫಿಕ್ ಫಿಲ್ಮಿನ ಮೇಲಿರುವ ತೆಳ್ಳನೆಯ ರಜತ ಸಂಯುಕ್ತದ ಮೇಲೆ ಅತಿ ಚಿಕ್ಕ ಪ್ರಮಾಣದಲ್ಲಿ ಬೆಳಕು ಬಿದ್ದಾಗ ತಕ್ಷಣ ಚಿತ್ರ ಮೂಡುತ್ತದೆ. ಫೋಟೋ ಮೂಡಿಸಲು ಬಹಳಷ್ಟು ಬೆಳ್ಳಿಯೇನೂ ಬೇಕಾಗುವುದಿಲ್ಲ. ಒಂದು ಟ್ರಾಯ್ ಔನ್ಸ್ (31 ಗ್ರಾಂಗಳಿಗಿಂತ ಸ್ವಲ್ಪ ಹೆಚ್ಚು) ಬೆಳ್ಳಿಯಿಂದ ಎರಡು ಸಾವಿರ ಫೋಟೋಗಳನ್ನು ತೆಗೆಯಬಹುದು.

ಎಕ್ಸ್‌ರೇ ಸಹ ಬೆಳ್ಳಿಯನ್ನವಲಂಬಿಸಿದೆ ಎನ್ನುವುದು ಪ್ರಾಯಶಃ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಫಿಲ್ಮಿನ ಮೇಲಿರುವ ರಜತ ಸಂಯುಕ್ತದ ಮೇಲೆ ಕ್ಷ ಕಿರಣಗಳು ಶಾಶ್ವತವಾಗಿ ಶರೀರದ ಅಂತರವಯವಗಳ ಚಿತ್ರವನ್ನು ಮೂಡಿಸುತ್ತವೆ.

ಆರೋಗ್ಯದ ದೃಷ್ಟಿಯಿಂದಲೂ ಬೆಳ್ಳಿ ಉಪಯುಕ್ತ. ಶುದ್ಧೀಕರಣದ ಕಾಲಕ್ಕೆ ಹತ್ತು [illegible]

ಸಿದರೆ ಅದು ಮಾನವರಿಗೆ ಹಾನಿಯನ್ನು ಮಾಡದೆ ನೀರಿನಲ್ಲಿನ ಕ್ರಿಮಿಗಳನ್ನು ನಾಶಗೊಳಿಸುತ್ತವೆ. ಬೆಳ್ಳಿ ಕ್ಲೋರಿನ್ನಿಗಿಂತ ಹತ್ತು ಪಟ್ಟು ಹೆಚ್ಚು ಪರಿಣಾಮಕಾರಿ. ಒಂದು ಚಮಚೆಯಷ್ಟು ಬೆಳ್ಳಿ 2600 ಕೋಟಿ ಲೀಟರುಗಳಷ್ಟು ನೀರನ್ನು ಶುದ್ಧಗೊಳಿಸಬಲ್ಲದು. ಇದನ್ನು ಗಮನಿಸಿ ಅಮೆರಿಕದ ಉಪಗ್ರಹ ನೌಕೆಗಳಲ್ಲಿ ನೀರಿನ ಶುದ್ಧೀಕರಣಕ್ಕಾಗಿ ಬಳಸುವುದು ಬೆಳ್ಳಿಯನ್ನೇ.

ನವಜಾತ ಶಿಶುಗಳಿಗೆ ಅಂಟುರೋಗ ತಗಲಿ ಕುರುಡುತನ ಉಂಟಾಗುವುದನ್ನು ತಡೆಯಲು ವೈದ್ಯರು ಸಿಲ್ವರ್ ನೈಟ್ರೇಟ್ ಮಿಶ್ರಣವನ್ನು ಕಣ್ಣುಗಳಿಗೆ ಹಾಕುತ್ತಾರೆ. ಸುಟ್ಟಗಾಯಗಳ ಚಿಕಿತ್ಸೆಗಂತೂ ಬೆಳ್ಳಿಯ ಮಿಶ್ರಣಗಳಷ್ಟು ಪರಿಣಾಮಕಾರಿಯಾದದ್ದು ಮತ್ತೊಂದಿಲ್ಲ. ಇದು ಗಾಯ ಮಾಯುವುದಕ್ಕೆ ತಡೆಯೊಡ್ಡದೆ ರೋಗಾಣುಗಳನ್ನೇ ನಾಶಗೊಳಿಸುತ್ತದೆ. ಗಾಯಗಳನ್ನು ಹೊಲಿಯಲು ಇಂದು ವೈದ್ಯರು ಬೆಳ್ಳಿಯ ದಾರವನ್ನು ಉಪಯೋಗಿಸುತ್ತಾರೆ. ಎಲುವುಗಳನ್ನು ಜೋಡಿಸಲು ಮತ್ತು ತಲೆಬುರುಡೆಯ ಎಲುವು ಪುಡಿ ಪುಡಿಯಾದ ಜಾಗದಲ್ಲಿ ಎಲುವಿನ ಬದಲು ಬೆಳ್ಳಿಯ ತಗಡುಗಳನ್ನು ಬಳಸುತ್ತಾರೆ.

ಉದ್ದಿಮೆಯಲ್ಲೂ ಬೆಳ್ಳಿ ಅತ್ಯವಶ್ಯ. ಅದು ಹೆಚ್ಚು ಪರಿಣಾಮಕರವಾಗಿ ವಿದ್ಯುತ್ತನ್ನು ಸಾಗಿಸುತ್ತದೆ. ತುಕ್ಕು ಹಿಡಿಯುವುದಿಲ್ಲವೆಂಬುದು ಬೆಳ್ಳಿಯ ಇನ್ನೊಂದು ಉತ್ತಮ ಅಂಶ. ಬೆಳ್ಳಿಯ ಸಹಾಯವಿಲ್ಲದೆ ನಾವು ಟಿ.ವಿ. ನೋಡುವಂತಿಲ್ಲ, ರೆಫ್ರಿಜರೇಟರ್ ಉಪಯೋಗಿಸುವಂತಿಲ್ಲ. ಅಷ್ಟೇ ಏಕೆ ಫೋನ್ ಸಹ ಮಾಡಲು ಸಾಧ್ಯವಿಲ್ಲ.

ಎರಡು ಲೋಹಗಳ ಸಹಜವಾದ ಗುಣಧರ್ಮಗಳಿಗೆ ಯಾವುದೇ ಧಕ್ಕೆ ಬರದಂತೆ ಬೆಸೆಯುವ ಸಾಮರ್ಥ್ಯ ಬೆಳ್ಳಿಗಿದೆ. ಅಲ್ಯುಮಿನಿಯಂ ಮತ್ತು ಉಕ್ಕು ಲೋಹಗಳನ್ನು ಜೋಡಿಸಲು ಬೆಳ್ಳಿ ಬೇಕು.

ಸಿಲ್ವರ್‌ಝಿಂಕ್ ಬ್ಯಾಟರಿಗಳು ಹಳೆಯ ಬ್ಯಾಟರಿಗಳಿಗಿಂತ ಇಪ್ಪತ್ತು ಪಟ್ಟು ಹೆಚ್ಚು ಶಕ್ತಿಯುತವಾಗಿರುತ್ತವೆ. ಅಪೊಲೋ ವೇಳೆ ಮಾನವನ ಕೈಯಷ್ಟು ಗಾತ್ರದ ಕೇವಲ 3.9 ಕಿಲೋ ತೂಕದ ಈ ಬ್ಯಾಟರಿಗಳು ಚಂದ್ರಗ್ರಹಕ್ಕೆ ತೆರಳಿದ್ದ ಬಾಹ್ಯಾಕಾಶ ಯಾತ್ರಿಗಳ ಎಲ್ಲ ಕಾರ್ಯಗಳಲ್ಲಿಯೂ ಅನುವಾದವು. ಅವರಿಗೆ ಉಸಿರಾಡಲು ಆಮ್ಲಜನಕ ಒದಗಿಸುವುದು, ದೇಹಕ್ಕೆ ತಂಪು ನೀಡುವುದು. ಎದೆಬಡಿತವನ್ನು ನಿಯಂತ್ರಿಸುವುದು ಮುಂತಾದ ಮಹತ್ವದ ಕಾರ್ಯಗಳನ್ನು ಇಂಥ ಬ್ಯಾಟರಿಗಳು ನಿರ್ವಹಿಸಿದವು. ಚಂದ್ರಗ್ರಹದಿಂದಲೇ ಬಾಹ್ಯಾಕಾಶ ಯಾತ್ರಿಗಳು ಕಳಿಸಿದ ಚಿತ್ರಗಳು ಹಾಗೂ ಧ್ವನಿಮುದ್ರಣಗಳನ್ನು ಭೂಮಿಯಲ್ಲಿ ಟಿ.ವಿ. ಮೂಲಕ ಪ್ರಸಾರಮಾಡಲು ಈ ಬ್ಯಾಟರಿಗಳು ಸಹಾಯ ಮಾಡಿವೆ.

ಸೌರಶಕ್ತಿಯ ಮೂಲಕ ವಿದ್ಯುತ್ ಉತ್ಪಾದಿಸಲು ಸಹ ಬೆಳ್ಳಿಯನ್ನು ಬಳಸಲಾಗುತ್ತಿದೆ. ಇದು ಮೊದಲು ಆರಂಭವಾದದ್ದು ಫ್ರಾನ್ಸಿನಲ್ಲಿ. ರಜತ ಬಳಿದ ಕನ್ನಡಿಗಳ ಮೂಲಕ ಇದನ್ನು ಮಾಡಲಾಗುತ್ತದೆ. ಈ ವಿದ್ಯುತ್ತಿನ ಉಷ್ಣಾಂಶ ಸುಮಾರು 3800 ಡಿಗ್ರಿಗಳಷ್ಟಿರುವುದರಿಂದ ಕೇವಲ 50 ಸೆಕೆಂಡುಗಳಲ್ಲಿ 12.5 ಮಿಲಿಮೀಟರ್ ಸ್ಟೀಲಿನ ಪ್ಲೇಟನ್ನು ಕೊರೆದುಕೊಂಡು ಹೋಗುತ್ತದೆ. ಸೌರಶಾಖ, ಲೋಹಗಳನ್ನು ಕರಗಿಸಿ ಅವುಗಳನ್ನು ಸಂಪೂರ್ಣ ಶುದ್ಧಗೊಳಿಸಿ ಬೇರೆ ಆಕಾರಕ್ಕೆ ತರಬಲ್ಲದು. ಆದ್ದರಿಂದ ದೊಡ್ಡ ಉದ್ದಿಮೆಗಳಿಗೆ ಇದು ಬಹಳ ಉಪಯುಕ್ತ.

ಬೆಳ್ಳಿಯ ಇನ್ನೊಂದು ಮಹತ್ವದ ಗುಣವೆಂದರೆ ಅದನ್ನು ಎಷ್ಟೇ ಸಲ ಕರಗಿಸಿ ತಯಾರಿಸಿದರೂ ಅದು ಕಳೆದುಕೊಳ್ಳುವ ತೂಕದ ಪ್ರಮಾಣ ತೀರ ಕಡಿಮೆ. ಶತಮಾನಗಳಷ್ಟು ಹಳೆಯದಾದ ಬೆಳ್ಳಿಗೂ ಇದು ಅನ್ವಯಿಸುತ್ತದೆ. ಎರಡನೆಯ ಮಹಾಯುದ್ಧದಲ್ಲಿ ಅಮೆರಿಕ ಇದರ ಸಂಪೂರ್ಣ ಲಾಭ ಪಡೆದುಕೊಂಡಿತು. ಆಗ ಪರಮಾಣು ಸಂಶೋಧನಾ ಕೇಂದ್ರವೊಂದನ್ನು ನಿರ್ಮಿಸಲು 13000 ಟನ್ನುಗಳಷ್ಟು ವಿದ್ಯುದ್ವಾಹಕಗಳ ಅಗತ್ಯವಿತ್ತು. ಆದರೆ ಲಭ್ಯವಿದ್ದ ಎಲ್ಲ ತಾಮ್ರವನ್ನು ಆಗಲೇ ರಕ್ಷಣಾ ಸಾಮಗ್ರಿಗಳ ಉತ್ಪಾದನೆಗೆಂದು ಉಪಯೋಗಿಸಲಾಗಿತ್ತು. ಆದರೆ ಬೆಳ್ಳಿ ತಾಮ್ರಕ್ಕಿಂತ ಉತ್ತಮ ವಿದ್ಯುದ್ವಾಹಕವೆಂದು ಗಮನಿಸಿ ಸರಕಾರದ ಬಳಿಯಿದ್ದ ಬೆಳ್ಳಿಯ ಸಂಗ್ರಹವನ್ನು ಬಳಸಲು ನಿರ್ಧರಿಸಲಾಯಿತು. 40 ಕೋಟಿ

ಟ್ರಾಯ್ ಔಂಸುಗಳಿಗಿಂತ ಹೆಚ್ಚು ಬೆಳ್ಳಿಯನ್ನು ಪರಮಾಣು ಸಂಶೋಧನಾ ಕೇಂದ್ರದಲ್ಲಿ ಬಳಸಲಾಯಿತು. ಏಳು ವರ್ಷಗಳಾದ ಮೇಲೆ ಯುದ್ಧ ಮುಗಿದ ನಂತರ ಈ ಬೆಳ್ಳಿಯನ್ನು ತೆಗೆದು ಒಂದು ಸಾವಿರ ಟ್ರಾಯ್ ಔನ್ಸ್ ತೂಕದ ಸರಳುಗಳನ್ನಾಗಿ ಪರಿವರ್ತಿಸಲಾಯಿತು. ಇಂಥ ಎಲ್ಲ ಸರಳುಗಳನ್ನು ಅಳೆದು ನೋಡಿದಾಗ ಒಟ್ಟು ತೂಕ ಮೊದಲಿಗಿಂತ ಪ್ರತಿಶತ ಒಂದು ಅಂಶದ ಒಂದು ಚಿಕ್ಕ ಪ್ರಮಾಣದಷ್ಟು ಮಾತ್ರ ಕಡಿಮೆಯಾಗಿತ್ತು!

ಬೆಳ್ಳಿಗೆ ಬೇಡಿಕೆ ಈಗ ಭಾರಿ ಪ್ರಮಾಣದಲ್ಲಿ ಬೆಳೆಯುತ್ತಿದೆಯಾದರೂ ಇನ್ನು ಮುಂದೆ ಬೆಳ್ಳಿಯ ಗಣಿಗಳು ದೊರೆಯುವ ಸಾಧ್ಯತೆಯಿಲ್ಲ ಎಂದು ಭೂವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಭೂವಿಜ್ಞಾನಿಗಳು ಸಂಭಾವ್ಯ ಪ್ರದೇಶಗಳಲ್ಲಿ ವಿಮಾನಗಳಿಂದ ಮ್ಯಾಗ್ನೆಟೋಮೀಟರುಗಳನ್ನು ಇಳಿಬಿಟ್ಟು ಬೆಳ್ಳಿಯಿರುವ ನಿರ್ದಿಷ್ಟ ಸ್ಥಳವನ್ನು ಕಂಡುಹಿಡಿಯಲು ಯತ್ನಿಸುತ್ತಿದ್ದಾರೆ. ಮಣ್ಣಿನ ಪರೀಕ್ಷೆಗೆ ಸುರಂಗ ಕೊರೆಯುವುದು, ಅದಿರು ಪರೀಕ್ಷಿಸುವುದರ ಮೂಲಕವೂ ಈ ವಸ್ತು ಒಂದರಲ್ಲಿ ಮಾತ್ರ ಬೆಳ್ಳಿಯನ್ನು ಅಗೆಯುವ ಕಾರ್ಯ ಆರ್ಥಿಕವಾಗಿ ಸೂಕ್ತವಾಗಿರುತ್ತದೆ.

ದುರದೃಷ್ಟವಶಾತ್ ಇಂದು ಭೂಮಿಯಲ್ಲಿ ಉಳಿದಿರುವ ಬೆಳ್ಳಿ ಬಹಳ ಆಳದಲ್ಲಿದೆ. ಕಾರಣ ಅದನ್ನು ತೆಗೆಯುವ ಕಾರ್ಯ ಬಹಳ ದುಬಾರಿಯಾಗುತ್ತಿದೆ ಕೂಡ. ಭೂಮಿಯಿಂದ ಹೊರಬಂದಾಗ ಬೆಳ್ಳಿಯ ಅದಿರು ಕೆಂಪು ಬಣ್ಣದ್ದಿರುತ್ತದೆ. ಅದನ್ನು ಕುಟ್ಟಿ ನುಣುಪಾದ ಪುಡಿಯನ್ನಾಗಿ ಮಾಡಲಾಗುತ್ತದೆ. ನಂತರ ರಾಸಾಯನಿಕ ಕ್ರಿಯೆಯ ಮೂಲಕ ಬೆಳ್ಳಿಯನ್ನು ಬೇರ್ಪಡಿಸಿ ಟ್ರಾಯ್ ಔನ್ಸ್ ತೂಕದ ಸರಳುಗಳನ್ನು ತಯಾರಿಸಲಾಗುತ್ತದೆ.

ಯಾವುದೇ ವಸ್ತುವಾದರೂ, ಸಾಮಾನ್ಯವಾಗಿ ಹಳೆಯದಾದಂತೆ ತನ್ನ ಪ್ರಾಮುಖ್ಯ ಕಳೆದುಕೊಳ್ಳುತ್ತದೆ. ಆದರೆ ಶತಮಾನಗಳಿಂದಲೂ ತನ್ನ ಉಪಯುಕ್ತತೆ, ಪ್ರಾಮುಖ್ಯಗಳನ್ನು ಉಳಿಸಿಕೊಂಡು ಮಿಂಚುತ್ತಿರುವ ಬೆಳ್ಳಿ ಮಾನವ ಕುಲಕ್ಕೆ ಸಲ್ಲಿಸುತ್ತಿರುವ ಸೇವೆ ಅವಿಸ್ಮರಣೀಯ. ●

ಶ್ರಮಸಾರ್ಥಕ

'ಎಮ್ಮೆ ಕಾಯಲಿಕ್ಕೂ ಲಾಯಕ್ಕಿಲ್ಲ' ಎಂದು ಅನ್ನಿಸಿಕೊಳ್ಳುತ್ತಿದ್ದ ದುಗ್ಗಪ್ಪ ಒಂದು ಚುನಾವಣೆಯಲ್ಲಿ ಪ್ರಚಾರಕ್ಕಾಗಿ ದಿನಗೂಲಿ ಮಾಡಿದ. ಆದರೆ ಮುಂದಿನ ಚುನಾವಣೆಯಲ್ಲಿ ಧಿಡೀರನೆ ತಾನೆ ಎಂ.ಎಲ್.ಎ. ಆಗಿಬಿಟ್ಟ! ತನ್ನದೇ ಆದ ಪಕ್ಷ ಆಳುತ್ತಿದ್ದುದರಿಂದ ತನ್ನ ಊರಿಗೆ ಒಂದು ದೊಡ್ಡ ಸರಕಾರಿ ಆಸ್ಪತ್ರೆಯನ್ನು ಕಟ್ಟಿಸುವಲ್ಲಿ ಯಶಸ್ವಿಯಾದ. ಆಸ್ಪತ್ರೆಯ ಉದ್ಘಾಟನೆಯನ್ನೂ ತಾನೇ ಮಾಡಿದ. ಉದ್ಘಾಟನಾ ಭಾಷಣದಲ್ಲಿ ತನ್ನ ಜನಸೇವಾಕಾರ್ಯಗಳನ್ನು ಪಟ್ಟಿ ಮಾಡಿದ. ಇನ್ನು ಮುಂದೆ ತಾನು ಮಾಡಲಿರುವ ಮಹತ್ಕಾರ್ಯವೊಂದನ್ನು ವಿವರಿಸಿದ.

"ಬೃಹತ್ ಪ್ರಮಾಣದ ಈ ಸರಕಾರಿ ಆಸ್ಪತ್ರೆಯನ್ನು ಉದ್ಘಾಟಿಸುವುದು ಒಂದು ಸಂತೋಷದ ಸಂಗತಿಯಾದರೂ ಇದಕ್ಕಿಂತ ಹೆಚ್ಚಿನ ಸಂಗತಿ ಇನ್ನೊಂದಿದೆ. ವಿರೋಧ ಪಕ್ಷದ ಸರಕಾರ ಆಳುತ್ತಿದ್ದಾಗ ನಾವು ನಮ್ಮ ಊರಿನ ಸರ್ವ ಧರ್ಮ ಸ್ಮಶಾನಕ್ಕಾಗಿ ಐದು ಎಕರೆ ಜಮೀನನ್ನು ಕೇಳಿದ್ದೆವು. ನಮ್ಮ ಈಗಿನ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ಅದನ್ನು ಮಂಜೂರು ಮಾಡಿದೆ. ಆದರೆ ಒಂದು ಸರಕಾರಿ ಆಸ್ಪತ್ರೆಯೂ ಇಲ್ಲದೇ ಇಷ್ಟು ದೊಡ್ಡ ಸ್ಮಶಾನದಿಂದ ಪ್ರಯೋಜನವಾದರೂ ಏನು! ಎಂದು ಅದನ್ನು ಮಂಜೂರು ಮಾಡಿಸಿದ್ದೇನೆ. ಊರಿಗೆ ಒಂದು ಆಸ್ಪತ್ರೆ! ಅದಕ್ಕೆ ತಕ್ಕಂತ ಒಂದು ಸ್ಮಶಾನ!"

ಪ್ರಚಂಡ ಕರತಾಡನವಾಯಿತು. ದುಗ್ಗಪ್ಪನಿಗೆ ಮತ್ತಷ್ಟು ಹುರುಪು ಬಂದು ಭಾಷಣವನ್ನು ಮುಂದುವರಿಸಿದ. "ಆಸ್ಪತ್ರೆ ಉದ್ಘಾಟನೆ ಆಯಿತು. ಇಂದ ಮೇಲೆ ಸ್ಮಶಾನದ ಉದ್ಘಾಟನೆ [illegible] ಅದೂ ಸ್ವತಃ [illegible] ಆಗುತ್ತದೆ ಎಂಬ ಭರವಸೆ ಇದೆ. ನಂತರ ಹೆಚ್ಚಿನ [illegible] ನಾವೆಲ್ಲರೂ ಅದರ ಸದುಪಯೋಗ ಮಾಡಿಕೊಂಡರೆ ನನ್ನ ಶ್ರಮ ಸಾರ್ಥಕವಾಗುತ್ತದೆ."

ಮತ್ತಷ್ಟು ಮೊದಲಿಗಿಂತ ಜೋರಾಗಿ ಕರತಾಡನವಾಯಿತು. ● [illegible]

ಬೌದ್ಧ ಧರ್ಮದ ಕೈಪಿಡಿ

ಸುಹೃಲ್ಲೇಖ: ಒಂದು ಅಪೂರ್ವಪತ್ರ

● ತಾಳ್ತಜೆ ವಸಂತಕುಮಾರ್ ●

ಸಾಹಿತ್ಯ ಪ್ರಕಾರಗಳಲ್ಲಿ ಪತ್ರ ಸಾಹಿತ್ಯಕ್ಕೆ ತುಂಬ ವಿಶಿಷ್ಟವಾದ ಸ್ಥಾನವಿದೆ. ಅಲ್ಲಿ ಶುದ್ಧಾಂಗವಾದ ವಸ್ತುನಿಷ್ಠತೆಯ ಬದಲಿಗೆ ಮಾನವೀಯ ಸಂಬಂಧಗಳ ಸೂಕ್ಷ್ಮ ಎಳೆಗಳಿರುತ್ತವೆ. ಅದು ಸೃಷ್ಟಿಸುವ ಆತ್ಮೀಯ ವಾತಾವರಣದಲ್ಲಿ ಶುಷ್ಕ ವಿಚಾರಗಳೂ ಕಾವ್ಯವಾಗುತ್ತವೆ. ಹೃದ್ಯವಾಗುತ್ತವೆ. ಅಲ್ಲಿ ಏಕಮುಖ ನಿರೂಪಣೆಯಿರುವುದಿಲ್ಲ. ಆದರೆ ಸಹೃದಯನ ಪ್ರತಿಕ್ರಿಯೆಯನ್ನು ಗುರುತಿಸಿ ಮುಂದುವರೆಯುವ ತಾಳ್ಮೆಯನ್ನು ಗುರುತಿಸುತ್ತೇವೆ. ಈ ಸಂವಾದ ಮಾಧ್ಯಮ ಅದ್ಭುತ ಪರಿಣಾಮವನ್ನು ಸಾಧಿಸುತ್ತದೆ. ಆಪ್ತ ಅನುಭವಗಳ ಕೊಂಡಿಯನ್ನು ಬೆಸೆಯುತ್ತ ಬೆಳೆಯುವ ಈ ಪ್ರಕಾರದ ಅಭಿವ್ಯಕ್ತಿ ಕಾಂತಾಸಮ್ಮಿತಿಯದ್ದು. ಭಾರತೀಯ ಸಾಹಿತ್ಯದಲ್ಲಿ ನಮಗೆ ಈ ಪ್ರಕಾರದ ಉದಾಹರಣೆಗಳು ತೀರಾ ಅಲ್ಪ ಪ್ರಮಾಣದಲ್ಲಿ ಸಿಗುತ್ತವೆ. ಪ್ರಾಚೀನ ಸಾಹಿತ್ಯದಲ್ಲಂತೂ ಇಲ್ಲವೆಂಬಷ್ಟು ಕಡಿಮೆ. ಇಂಥ ಒಂದು ಅಪೂರ್ವ ಮಾದರಿ ನಾಗಾರ್ಜುನನ 'ಸುಹೃಲ್ಲೇಖ'ದಲ್ಲಿ ಕಾಣುತ್ತದೆ. ಇದು ಮೂಲತಃ ಸಂಸ್ಕೃತ ಕೃತಿಯಾಗಿದ್ದು ಮೂಲವು ಇಂದಿಗೆ ಉಪಲಬ್ಧವಿಲ್ಲ. ಆದರೆ ಅದರ ಟಿಬೆಟನ್ ಅನುವಾದವನ್ನು ಆಧರಿಸಿದ ಇಂಗ್ಲಿಷ್ ಆವೃತ್ತಿಯು ಪ್ರಕಟವಾಗಿದೆ.

ಒಟ್ಟು 123 ಶ್ಲೋಕಗಳಿರುವ ಈ ಕೃತಿಯನ್ನು ಅಡಕಗೊಳಿಸಿದ ಬೌದ್ಧಧರ್ಮದ ಕೈಪಿಡಿ ಎನ್ನಬಹುದು. ಬೌದ್ಧಧರ್ಮದ ಮೂಲತತ್ತ್ವಗಳನ್ನೂ ಅನುಷ್ಠಾನ ವಿಧಾನಗಳನ್ನೂ ಆದಷ್ಟೂ ಸರಳಗೊಳಿಸಿ ಹೇಳುವುದರತ್ತ ಇದರ ಲಕ್ಷ್ಯ ಕೇಂದ್ರೀಕೃತವಾಗಿದೆ. ಮೂಲದಲ್ಲಿ ಇದು ಒಂದು ಬೌದ್ಧಪಾರಾಯಣ ಗ್ರಂಥವಾಗಿ ಬಳಕೆಯಾಗುತ್ತಿತ್ತೆಂಬುದಕ್ಕೆ ಆಧಾರಗಳಿವೆ. ಚೀನದ ಬೌದ್ಧ ಯಾತ್ರಿಕ ಇತ್ಸಿಂಗನ ಪ್ರಕಾರ, ನಾಲಂದೆಯಂಥ ಬೌದ್ಧ ವಿಹಾರಗಳಲ್ಲಿ ಸಂಜೆಯ (ತ್ರಿಸಂಧ್ಯಾಕಾಲ) ಪ್ರದಕ್ಷಿಣೆಯ ಅನಂತರ ಭಿಕ್ಷುಗಳು ನಾಗಾರ್ಜುನನ 'ಸುಹೃಲ್ಲೇಖ', ಚಂದ್ರನ 'ಸುದಾನ', ಆಯತಶೂರನ 'ಜಾತಕಮಾಲಾ', ಅಶ್ವಘೋಷನ 'ಬುದ್ಧಚರಿತ' ಮುಂತಾದ ಕೃತಿಗಳನ್ನು ಪಾರಾಯಣ ಮಾಡುತ್ತಿದ್ದರು.

ಮಾತ್ರವಲ್ಲದೆ ಬೌದ್ಧಶಿಕ್ಷಣ ವ್ಯವಸ್ಥೆಯಲ್ಲಿಯೂ ಈ ಕೃತಿಗೆ ಮಹತ್ವದ ಸ್ಥಾನವಿತ್ತು. ತನ್ನ ನೈತಿಕ ಮತ್ತು ಆಧ್ಯಾತ್ಮಿಕ ವಿಚಾರ ಪ್ರಣಾಲಿಯಿಂದಾಗಿ ಇದು ಆಗ ತುಂಬ ಜನಪ್ರಿಯತೆಯನ್ನು ಗಳಿಸಿಕೊಂಡಿತ್ತು. ಇದರಲ್ಲಿ, ಬೌದ್ಧ ಧರ್ಮ ಪ್ರತಿಪಾದಿಸುವ ಮೂರು ಮುಖ್ಯ ಪ್ರಜ್ಞೆಗಳಾದ 1) ಶ್ರುತಮಯೀ ಪ್ರಜ್ಞಾ 2) ಚಿಂತಾ

ಇಂದು ನೆಡುವ ಸಸಿ-ನಾಳಿನ ಬಾಳಿನ ಆಧಾರ
ಇಂದೇ ಒಂದು ಸಸಿ ನೆಡಿರಿ.
ಉಚಿತ ಸಸಿಗಳು ನಿಮಗಾಗಿ ಕಾದಿವೆ.

ನೀವೊಂದು ಸಸಿ ನೆಟ್ಟರೆ, ಆ ಸಸಿಯಿಂದ ನೀವು ಪಡೆಯುವ ಪ್ರಯೋಜನ ಒಂದೆರಡಲ್ಲ. ಪ್ರಯೋಜನ ನಿಮ್ಮೊಬ್ಬರಿಗೆ ಅಲ್ಲ- ನಿಮ್ಮ ಮನೆಯವರಿಗೆ, ಸುತ್ತಮುತ್ತಲಿ ಜನರಿಗೆ, ಎಲ್ಲರಿಗೂ.

ನಮ್ಮ ಪೂರ್ವಜರಿಗೆ ಮರಗಳ ಮಹತ್ವ ತಿಳಿದಿತ್ತು. ಆದ್ದರಿಂದಲೇ ಆ ಕಾಲದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಮರಗಳ ಒಂದು ತೋಪು ಇರುತ್ತಿತ್ತು. ಪಟ್ಟಣಗಳಲ್ಲಿ ಪ್ರತಿಯೊಂದು ಮನೆಗೂ ಒಂದೆರಡು ಮರಗಳು ತಂಪಿನ ಆಸರೆ ನೀಡುತ್ತಿದ್ದವು.

ಆದರೆ ಇಂದು ನಮ್ಮ ಅರಣ್ಯ ಸಂಪತ್ತು ಕ್ಷೀಣಿಸಿದೆ. ಉರುವಲಿಗಾಗಿ, ಮರಮಟ್ಟುಗಳಿಗಾಗಿ, ಜಾನುವಾರುಗಳ ಮೇವಿಗಾಗಿ, ಕಾಡನ್ನು ಕಡಿದು ನಾಶಪಡಿಸಲಾಗಿದೆ. ಅಕ್ರಮವಾಗಿ ಮರ ಕಡಿಯುವುದರಿಂದಷ್ಟೆ ಅಲ್ಲ, ಕಾಳ್ಗಿಚ್ಚಿನಿಂದಲೂ ಮರಗಳು ನಾಶವಾಗುತ್ತಿವೆ- ಇದರ ಪರಿಣಾಮ ನಮ್ಮ ಭವಿಷ್ಯಕ್ಕೆ ಮಾರಕ. ನಮ್ಮ ಅಮೂಲ್ಯವಾದ ಕಾಡುಗಳು ಕಣ್ಮರೆಯಾದರೆ ನಮಗೆ ಕ್ಷಾಮ, ನೆರೆ ಹಾವಳಿ, ಅಷ್ಟೇಕೆ ಪರಿಸರದ ಅವನತಿ- ಎಲ್ಲವೂ ನಿಶ್ಚಿತ.

ಆದರೆ ಒಂದು ಆಶಾಕಿರಣವಿದೆ. ನಾವು ಪ್ರಯತ್ನಿಸಿದರೆ ಈಗಲೂ ನಮ್ಮ ನಾಡನ್ನು ಹಸಿರು ಮರಗಳ ನಂದನವನವನ್ನಾಗಿಸಬಹುದು. ಹೌದು, ಈ ಕಾರ್ಯದಲ್ಲಿ ನಿಮ್ಮ ಪ್ರಯತ್ನವೇ ಮುಖ್ಯ. ನೀವು ಒಂದು ಸಸಿ ನೆಡುವ ಮೂಲಕ ನೆರವಾಗಬಹುದು. ಸಾಧ್ಯವಾದರೆ ಇಂದೇ ಒಂದು ಸಸಿ ನೆಡಬಹುದು-ನಿಮ್ಮ ಕೈತೋಟದಲ್ಲಿ, ಹಿತ್ತಲಿನಲ್ಲಿ, ಹೊಲದಲ್ಲಿ, ನಿಮ್ಮ ಶಾಲೆಯ ಕಾಂಪೌಂಡಿನಲ್ಲಿ-ಎಲ್ಲಿ ಬೇಕಾದರೂ. ಒಂದೇ ಸಸಿ ಏಕೆ ಅವಕಾಶವಿದ್ದರೆ ಸಾವಿರಾರು ನೆಡಬಹುದಲ್ಲವೆ?

ಇದು ತುಂಬಾ ಸುಲಭ; ಏನೂ ಖರ್ಚಿಲ್ಲ; ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ನೀವು ಸಸಿ ನೆಡಲು ಸಹಾಯ ಮಾಡುವ ಯೋಜನೆಯೊಂದನ್ನು ಜಾರಿಗೆ ತಂದಿದೆ. ಇಲಾಖೆ ನಿಮಗೆ ಸಸಿಗಳನ್ನು, ಬೀಜಗಳನ್ನು ಪೂರೈಸುತ್ತದೆ; ಉಚಿತವಾಗಿ! ತ್ವರೆಮಾಡಿ! ನಿಮ್ಮ ಕೈಲಾದಷ್ಟು ನೆರವು ನೀಡಿ. ನಿಮಗೆ ಹತ್ತಿರವಿರುವ ಅರಣ್ಯ ಇಲಾಖೆಯ ಕಛೇರಿಯನ್ನು ಸಂಪರ್ಕಿಸಿ, ಅಥವಾ ನಮಗೆ ಬರೆಯಿರಿ.

ಅಧಿಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಯೋಜನೆ,
54, ಅರಣ್ಯ ಭವನ,
ಮಲ್ಲೇಶ್ವರ, ಬೆಂಗಳೂರು-560 003.

"ಮರಗಳು ನಮ್ಮ ಭವಿಷ್ಯ ನಿಧಿ"

524

ಕರ್ನಾಟಕ ವಾರ್ತೆ

ಮಯೀ ಪ್ರಜ್ಞಾ 3) ಭಾವನಾಮಯೀ ಪ್ರಜ್ಞಾ ಗಳನ್ನು ಅನುಸರಿಸುವ ನಿರ್ದೇಶನವಿದೆ. ಇವು ಗಳ ಮೂಲಕ ಬೌದ್ಧಧರ್ಮದ ತಳಹದಿಯಾದ ಅಷ್ಟಾಂಗ ಮಾರ್ಗ ಮತ್ತು ಚತುರಾರ್ಯ ಸತ್ಯ ಗಳ ಸಾಮಾಜಿಕ ಸಂದರ್ಭದ ಅರ್ಥೈಸುವಿಕೆ ಸುಲಭವಾಗುತ್ತಿತ್ತು.

'ಸುಹೃಲ್ಲೇಖ'ಕ್ಕೆ ಇನ್ನೊಂದು ದೃಷ್ಟಿ ಯಿಂದಲೂ ಮಹತ್ವವಿದೆ. ಉಪದೇಶಾತ್ಮಕ ಕೃತಿಗಳ ಪರಂಪರೆಯೊಂದಕ್ಕೆ ಇದು ಆದಿ ಯಾಯಿತು. ಇವನ ಅನಂತರದವನಾದ ಚಂದ್ರಗೋಮಿನ್ (ಕ್ರಿಸ್ತಶಕ ಆರನೆಯ ಶತ ಮಾನ) ಇದರ ಮಾದರಿಯನ್ನು ಅನುಸರಿಸಿ 'ಶಿಷ್ಯಲೇಖಧರ್ಮ ಕಾವ್ಯ'ವನ್ನು ಬರೆದಿದ್ದಾ ನೆಂಬುದು ಈ ಹೇಳಿಕೆಗೆ ಸಮರ್ಥನೆಯನ್ನೊದ ಗಿಸುತ್ತದೆ.

ಇದರ ಸಾಹಿತ್ಯದ ಬಗೆಗೆ ಹೇಳುವುದಾದರೆ, ಇದು ನಾಗಾರ್ಜುನನು ರಾಜಾ ಗೌತಮೀಪುತ್ರ ನಿಗೆ ಬರೆದ ಪತ್ರದ ಸ್ವರೂಪದಲ್ಲಿದೆ. ದಕ್ಷಿಣ ಭಾರತದ ಬಹುಭಾಗಗಳನ್ನು ಆಳಿದ ಸುಪ್ರಸಿದ್ಧ ಶಾತವಾಹನ ವಂಶೀಯನಾದ ಗೌತಮೀ ಪುತ್ರನೇ ಇಲ್ಲಿ ಉಲ್ಲೇಖಗೊಂಡವನು. ಗೋದಾವರೀ ತೀರದಿಂದ ದಕ್ಷಿಣದ ಕಾವೇರಿ ವರೆಗಣ ಭೂಭಾಗದ ಒಡೆಯನಾಗಿದ್ದ ಈತನ ಮೇಲೆ ಬೌದ್ಧಗುರು ನಾಗಾರ್ಜುನನು ವಿಶೇಷ ಪ್ರಭಾವ ಬೀರಿದ್ದಾನೆ. ಕೃತಿಯ ಆಂತರಿಕ ಮತ್ತು ಇತರ ಪುರಾವೆಗಳಿಂದ ಈ ನಾಗಾ ರ್ಜುನನು ದಕ್ಷಿಣ ಭಾರತೀಯನೆಂಬುದು ಈಗಾಗಲೇ ದೃಢಪಟ್ಟಿದೆ. ಇತಿಹಾಸದಲ್ಲಿ ಆಗಿ ಹೋದ ಕನಿಷ್ಠ ಮೂವರು ನಾಗಾರ್ಜುನರಲ್ಲಿ ಈತನು, 'ಮಾಧ್ಯಮಿಕ ಸೂತ್ರ', ಪ್ರಜ್ಞಾ ಪಾರ ಮಿತ ಸೂತ್ರ-ಇತ್ಯಾದಿ ಕೃತಿಗಳ ಕರ್ತೃವಾದ ಮೊದಲನೇ ನಾಗಾರ್ಜುನನೇ ಆಗಿರಬೇಕೆಂಬ ಊಹೆಗೆ ಸಾಕಷ್ಟು ಸಮರ್ಥನೆಯೂ ಕೃತಿಯಲ್ಲಿ -ಯೇ ದೊರೆಯುತ್ತದೆ.

ಇದರಲ್ಲಿರುವ ಒಟ್ಟು 123 ಶ್ಲೋಕಗಳಲ್ಲಿ ಪ್ರತಿಯೊಂದೂ ಒಂದೊಂದು ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿರುವುದಲ್ಲದೆ, ಬೌದ್ಧ ಧರ್ಮತತ್ವಗಳಿಗೆ ಸಂಬಂಧಿಸಿದಂತೆ ಮಹತ್ವದ ಮಾಹಿತಿಗಳನ್ನೂ ವ್ಯಾಖ್ಯಾನಗಳನ್ನೂ ಮುಂದಿ ಡುತ್ತವೆ. ಬೌದ್ಧಧರ್ಮದ ಒಂದೊಂದು ಮುಖದತ್ತ ಗಮನ ಹರಿಸುತ್ತವೆ. ಇಲ್ಲಿ ಸಾಂ ಕೇತಿಕಮಾತ್ರವಾಗಿ ಅಂಥ ಕೆಲವನ್ನು ಪರಿಗಣಿಸು ವುದು ಪ್ರಸ್ತುತವಾಗುತ್ತದೆ.

ಇವುಗಳಲ್ಲಿ 108ನೆಯ ಶ್ಲೋಕವು ಬುದ್ಧನ ವೈಯಕ್ತಿಕ ಇತಿಮಿತಿಗಳನ್ನು ಸ್ಪರ್ಶಿಸುತ್ತಾ ಬುದ್ಧನೂ ಉತ್ತರಿಸಲಾರದ ಪ್ರಶ್ನೆಗಳನ್ನು ಪಟ್ಟಿ ಮಾಡುತ್ತದೆ. ಮಾತ್ರವಲ್ಲ, ಸೃಷ್ಟಿಯ ಮೂಲ ರಹಸ್ಯ ಆತನಿಗೂ ಪೂರ್ಣವಾಗಿ ಬಿಚ್ಚಿಕೊಳ್ಳ ಲಿಲ್ಲವೆಂಬ ಮಹತ್ವದ ಅಂಶವನ್ನು ಹೊರಗೆಡ ಹುತ್ತವೆ. ಬುದ್ಧನನ್ನು ಕೂಡಾ ಮಾನವೀಯ ನೆಲೆಯಲ್ಲಿಯೇ ಅರ್ಥೈಸಿಕೊಳ್ಳಲು ಸಹಕರಿ ಸುವ ಆ ಪ್ರಶ್ನೆಗಳು ಹೀಗಿವೆ.

1. 1) ವಿಶ್ವವು ಶಾಶ್ವತವೆ? 2) ಅಶಾಶ್ವತವೆ?
   3) ಶಾಶ್ವತವೂ ಅಶಾಶ್ವತವೂ ಆಗಿದೆಯೇ?
   ಅಥವಾ 4) ಶಾಶ್ವತವೂ ಅಶಾಶ್ವತವೂ ಅಲ್ಲವೆ?
2. 1) ವಿಶ್ವವು ಗಣ್ಯವೆ? 2) ಅಗಣ್ಯವೆ?
   3) ಗಣ್ಯವೂ ಅಗಣ್ಯವೂ ಆಗಿದೆಯೆ? ಅಥವಾ
   4) ಗಣ್ಯ ಅಗಣ್ಯವೂ ಅಲ್ಲವೆ?
3. ತಥಾಗತನು ಮರಣಾನಂತರ 1) ಇರುವನೆ?
   2) ಇರುವುದಿಲ್ಲವೆ? 3) ಇರುವನೂ
   ಇರದಿರುವನೂ ಅಲ್ಲವೆ? ಅಥವಾ
   4) ಇರುವುದೂ ಇಲ್ಲ ಇರದಿರುವುದೂ ಇಲ್ಲವೆ?
4. ಆತ್ಮವು 1) ಶರೀರದೊಂದಿಗೆಯೇ ಇದೆಯೇ
   ಅಥವಾ 2) ಪ್ರತ್ಯೇಕವಾಗಿದೆಯೇ?

ಈ 14 ಪ್ರಶ್ನೆಗಳು ಉತ್ತರವನ್ನು ನೀಡಲಾರ ದವು. ಅವುಗಳ ಕುರಿತಾಗಿ ಚಿಂತಿಸುವ ಕಾರಣ ವಿಲ್ಲ. ಬುದ್ಧನಲ್ಲಿ ಈ ಪ್ರಶ್ನೆಗಳನ್ನು ಕೇಳಿ ದಾಗಲೂ ಆತ ಅವಕ್ಕೆ ಉತ್ತರ ಕೊಡುವ ಗೋಜಿಗೆ ಹೋಗಲೇ ಇಲ್ಲ. ಏಕೆಂದರೆ ಇವೆಲ್ಲ ಸರಿಯಾಗಿ ಎತ್ತಿದ ಪ್ರಶ್ನೆಗಳೇ ಅಲ್ಲ. ಪ್ರಶ್ನೆಯ ವಿಷಯವೇ ಅಸಿಂಧುವಾಗಿರುವಾಗ ಉತ್ತರಿ ಸುವ ಪ್ರಶ್ನೆ ಏಳುವುದೇ ಇಲ್ಲ! ಈ ಸಮಾಧಾನ ವನ್ನು ಮುಂದಿಟ್ಟು, ಬುದ್ಧ ಈ ಪ್ರಶ್ನೆಗಳನ್ನು ಪ್ರಶ್ನೆಗಳಾಗಿಯೇ ಇರಗೊಡುತ್ತಾನೆ.

ಇದರ ಮೊದಲಿನ ಶ್ಲೋಕ (107) ಒಂದು ಸುಂದರ ಹೋಲಿಕೆಯನ್ನು ಮುಂದಿಡುತ್ತದೆ. "ಏಕಾಗ್ರತೆ ಮತ್ತು ಪ್ರಜ್ಞೆಯುಳ್ಳ ಯೋಗಿಗೆ ಸಕಲ ಸಂಸಾರ ಸಾಗರವೂ ಗೋಪಾದ ಮುದ್ರೆ ಯೊಳಗಿನ ನೀರು ಮಣ್ಣಿನಲ್ಲಿ ಇಂಗುವಂತೆ ಕ್ಷಣ

ದಲ್ಲಿ ಇಂಗಿ ಬಿಡುತ್ತದೆ"! ಕ್ಷುಲ್ಲಕ ವಿಷಯದ ನಿರೂಪಣೆಯ ಮೂಲಕ ಮಹತ್ತನ್ನು ದಾಟಿಸುವ ತಂತ್ರ ತುಂಬ ಸಫಲವಾದ ರೀತಿಗೆ ಇದು ಉದಾಹರಣೆ.

'ಸುಹೃಲ್ಲೇಖ'ದ ವ್ಯಾಪ್ತಿ ರೂಕ್ಷಧಾರ್ಮಿಕ ಚೌಕಟ್ಟಿನಾಚೆಗೂ ಬೆಳೆಯುತ್ತದೆ. ಮಾನವ ಸ್ವಭಾವದ ಸೂಕ್ಷ್ಮಗಳನ್ನು ನವಿರಾಗಿ ಸ್ಪರ್ಶಿಸುತ್ತಾ ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಮೂಲಕ ಇದು ಸಾರ್ವಕಾಲಿಕತೆಯನ್ನು ಸಾಧಿಸಿಕೊಳ್ಳುತ್ತದೆ. 30ನೆಯ ಶ್ಲೋಕದ ಅರ್ಥವನ್ನು ಈ ದೃಷ್ಟಿಯಿಂದ ಪರಿಭಾವಿಸಬಹುದು. ಇದು ವ್ಯಕ್ತಿಯನ್ನು ಅರ್ಥೈಸುವ ಬಗೆಯನ್ನು ಹೇಳುತ್ತ ಮಾವಿನ ಹಣ್ಣನ್ನು ಉದಾಹರಿಸುತ್ತದೆ. ಪಕ್ವಗೊಳ್ಳದೆ ಆದರೆ ಪಕ್ವಗೊಂಡಂತೆ ಕಾಣಿಸುವುದು ಒಂದು, ಪಕ್ವಗೊಂಡೂ ಪಕ್ವವಾಗದಂತೆ ಕಾಣಿಸುವುದು ಎರಡು, ಅಪಕ್ವ ಅಪಕ್ವವಾಗಿಯೇ ಕಾಣಿಸುವುದು ಮೂರು, ಪಕ್ವಗೊಂಡು ಪಕ್ವವಾಗಿಯೇ ಕಾಣಿಸುವುದು ನಾಲ್ಕು. ಇವನ್ನು ಮಾನವ ಸ್ವಭಾವಕ್ಕೆ ಅನ್ವಯಿಸಿದ ರೀತಿಯಲ್ಲಿ ಅನನ್ಯತೆಯಿದೆ.

1. ಕೆಲವರ ಉದ್ದೇಶ ಒಳ್ಳೆಯದಿರುವುದಿಲ್ಲ. ಆದರೆ ಕ್ರಿಯೆ ಒಳ್ಳೆಯದಿರುತ್ತದೆ.

2. ಕೆಲವರ ಉದ್ದೇಶ ಒಳ್ಳೆಯದಿರುತ್ತದೆ. ಆದರೆ ಕ್ರಿಯೆ ಒಳ್ಳೆಯದಿರುವುದಿಲ್ಲ.

3. ಕೆಲವರ ಉದ್ದೇಶವೂ ಕ್ರಿಯೆಯೂ ಕೆಟ್ಟದ್ದೇ ಇರುತ್ತದೆ.

4. ಕೆಲವರ ಉದ್ದೇಶವೂ ಕ್ರಿಯೆಯೂ ಒಳ್ಳೆಯದೇ ಇರುತ್ತದೆ.

ಇವನ್ನು ವ್ಯಾಖ್ಯಾನಿಸುತ್ತಾ ಈ ಶ್ಲೋಕವು, ನಾಲ್ಕನೆಯ ವರ್ಗದವರು ಮಾತ್ರ ಸ್ನೇಹಕ್ಕೆ ಯೋಗ್ಯರು, ಅವರೊಡನೆ ಮಾತ್ರ ಸ್ನೇಹ ಬೆಳೆಸಬೇಕು ಎನ್ನುತ್ತದೆ.

ಅನುನಯದಿಂದ ಸಾಧಿಸಲಾರದುದನ್ನು ಭೀತಿಯ ಮೂಲಕ ಸಾಧಿಸುವ ರೀತಿಯನ್ನು 92ನೆಯ ಶ್ಲೋಕ ಸೂಚಿಸುತ್ತದೆ. ನರಕದ ವಿವರಣೆ ಕೊಡುತ್ತ, ಅಲ್ಲಿ ಅನುಭವಿಸಬೇಕಾಗಿರುವ ಶಿಕ್ಷೆಗಳನ್ನು ವಿವರಿಸುವ ಈ ಶ್ಲೋಕ ವಿವರ ಒಂದು ಮಾದರಿಯನ್ನು ಮುಂದಿಡುತ್ತದೆ. ಪಾಪಿಗಳಾದ ಹಸಿದ ಪ್ರೇತಗಳಿಗೆ ಗುಡಾಣದಂಥ ಹೊಟ್ಟೆಯಿರುತ್ತದೆ. ಅವರ ಅವುಗಳ ಗಂಟಲು ಕೂದಲೆಳೆಯಷ್ಟು, ಬಾಯಿ ಸೂಜಿಯ ಕಣ್ಣಿನಷ್ಟು! ಈ ಪರ್ವತೋಪಮ ಹೊಟ್ಟೆಯನ್ನು ತುಂಬಿಸಲಾರದೆ ಅವು ಚಡಪಡಿಸುತ್ತಲೇ ಇರುತ್ತವೆ!

ಕಾಮನೆಗಳನ್ನು ನಿಯಂತ್ರಣದಲ್ಲಿಡಬೇಕಾದ ಅಗತ್ಯವನ್ನು ಒತ್ತಿ ಹೇಳುವ 35ನೆಯ ಶ್ಲೋಕವು ಇನ್ನೊಂದು ದೃಷ್ಟಿಯಿಂದಲೂ ಮಹತ್ವಪೂರ್ಣವಾಗಿದೆ. ಇದರ ಪ್ರಕಾರ, ಕಾಮನೆಗಳು ಬಹುವಾಗಿದ್ದರೆ, ಸಂಪತ್ತು ಅಧಿಕವಾಗಿದ್ದರೆ ಅನೇಕ ಹೆಡೆಗಳುಳ್ಳ ನಾಗ ರಾಜನಿಗೆ ಒದಗಿದ ದುಃಖದಂತೆ ಸಂತಾಪಕ್ಕೆ ಕಾರಣವಾಗುತ್ತದೆ. ಆದರೆ ಆಸೆಗಳನ್ನು ಹದ್ದುಬಸ್ತಿನಲ್ಲಿಟ್ಟವನಿಗೆ ಈ ದಾರುಣ ಸಂಕಟವಿರುವುದಿಲ್ಲ. ಇಲ್ಲಿ ಅನೇಕ ಕಡೆಗಳಲ್ಲಿ ಕಂಡು ಬರುವ, ಮಳೆಯ ಮೇಲೆ ಪ್ರಭಾವ ಬೀರುವ, ಸಂಪತ್ತನ್ನು ರಕ್ಷಿಸುವ, ಅರ್ಧ ಮಾನವ ಅರ್ಧ ನಾಗ ಶರೀರದ 'ನಾಗ'ಗಳ ಉಲ್ಲೇಖ, ಇನ್ನೊಂದು ಊಹೆಗೂ ಎಡೆಕೊಡುತ್ತದೆ. ನಾಗಗಳ ಬಹುತಲೆಯ ಕಲ್ಪನೆ, ಆಗ ರೂಢಿಯಲ್ಲಿದ್ದಿರಬಹುದಾದ ಬಹುನಾಯಕತ್ವಕ್ಕೆ ಸಂಕೇತವಿರಬಹುದೆ? ಈ ದಿಸೆಯಲ್ಲಿ ಸಂಶೋಧನೆಯ ಅಗತ್ಯವಿದೆ. 'ನಾಗ' ಜನಾಂಗವೂ ಪ್ರಸಿದ್ಧವಿದೆ.

ಒಟ್ಟಿನಲ್ಲಿ ಸುಹೃಲ್ಲೇಖವು ಒಂದು ನೀತಿ ಸಂಹಿತೆಯಾಗಿಯೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ. ಮಾನವ ಸ್ವಭಾವದ ವಿಭಿನ್ನ ಪಾತಳಿಗಳು, ಬದುಕಿನಲ್ಲಿ ಎದುರಾಗುವ ಸವಾಲುಗಳಿಗೆ ಎದೆಯೊಡ್ಡುವ ಛಾತಿಯ ಅವಶ್ಯಕತೆ, ಕಾಲದ ನಿರಂತರ ಗತಿಶೀಲತೆ, ಆಹಾರಾದಿಗಳ ಹದವರಿತ ಸೇವನೆ ಇಂಥ ವಿಚಾರಗಳೂ ಸೂಕ್ತ ಉದಾಹರಣೆಗಳೊಂದಿಗೆ ಅಲ್ಲಲ್ಲಿ ಎಡೆಪಡೆದಿವೆ.

ಭಾರತೀಯ ಪರಂಪರೆಯಲ್ಲಿ ಬೌದ್ಧ ಚಿಂತನೆಗೆ ವಿಶಿಷ್ಟ ಸ್ಥಾನವಿದೆ. ವಿಷಾದವೆಂದರೆ ಈ ರಾಷ್ಟ್ರೀಯ ಸಂಪತ್ತಿನ ಗೋಪನೆ ಮತ್ತು ಅಭ್ಯಾಸಗಳು ಗಂಭೀರವಾಗಿ ಮತ್ತು ಪರ್ಯಾಪ್ತವಾಗಿ ನಡೆದಿಲ್ಲ ಎಂಬುದು. ಆ ಅಜ್ಞಾತ ಭಂಡಾರದ ಒಂದು ಅನಿಮುತ್ತು 'ಸುಹೃಲ್ಲೇಖ'. ●

ಜೀವನದರ್ಶನ – 9 ★ ಕೆ.ಟಿ. ಪಾಂಡುರಂಗಿ

ಹಿರಿಯರು – ಮಕ್ಕಳು

ಮಕ್ಕಳನ್ನು ಸರಿಯಾಗಿ ರೂಪಿಸುವದು ತಮ್ಮ ಕರ್ತವ್ಯವೆಂದು ಸಾಮಾನ್ಯವಾಗಿ ಎಲ್ಲ ಹಿರಿಯರು ನಂಬುವರು. ಆದರೆ ಮಕ್ಕಳನ್ನು ಸರಿಯಾಗಿ ರೂಪಿಸಬೇಕಾದರೆ ತಮ್ಮನ್ನೂ ಅವರೊಡನೆ ಸರಿಯಾಗಿ ರೂಪಿಸಿಕೊಳ್ಳುತ್ತ ಹೋಗಬೇಕಾಗುತ್ತದೆ ಎಂಬುದನ್ನು ಅನೇಕರು ಅರಿತಿರುವದಿಲ್ಲ.

ಮಕ್ಕಳು ತಮ್ಮ ಸ್ವಭಾವ ಮತ್ತು ನಡವಳಿಕೆಗಳನ್ನು ನೋಡಿ, ಕೇಳಿ, ಮಾಡಿ, ರೂಪಿಸಿಕೊಳ್ಳುವರು. ತಮ್ಮ ಮನೆಯಲ್ಲಿಯ, ನೆರೆಹೊರೆಯ ಮತ್ತು ಸಮಾಜದಲ್ಲಿಯ ಮಾತು ನಡತೆ ಕೃತಿಗಳು ಅವರಿಗೆ ಮಾದರಿಯಾಗುವವು. ಹಿರಿಯರು ಅವರೊಡನೆ ನಡೆದುಕೊಳ್ಳುವ ರೀತಿ ಮತ್ತು ಪರಸ್ಪರ ನಡೆದುಕೊಳ್ಳುವ ರೀತಿಗಳು ಮಕ್ಕಳ ಸ್ವಭಾವ ಮತ್ತು ನಡವಳಿಕೆಗಳನ್ನು ರೂಪಿಸುವವು.

ಮಕ್ಕಳೊಡನೆ ಪ್ರೀತಿಯಿಂದ ವ್ಯವಹರಿಸಬೇಕು, ಮೃದುವಾಗಿ ವ್ಯವಹರಿಸಬೇಕು ಎಂದು ಎಲ್ಲರೂ ಒಪ್ಪುವರು. ಆದರೆ ಇದನ್ನು ಅನುಸರಿಸಲು ಬಹಳ ತಾಳ್ಮೆ, ತಿಳುವಳಿಕೆ ಬೇಕು. ಮಕ್ಕಳು ಸೋಮಾರಿಗಳಾಗಿರಲು ಎಂದೂ ಬಯಸುವುದಿಲ್ಲ. ಎಡಬಿಡದೆ ಒಂದಲ್ಲ ಒಂದು ಚಟುವಟಿಕೆಯಲ್ಲಿ ತೊಡಗಬೇಕೆನ್ನುವರು. ಅವರಿಗೆ ಚಟುವಟಿಕೆಗಳನ್ನು ಒದಗಿಸುವದೇ ಒಂದು ಸಮಸ್ಯೆಯಾಗುವದು. ಆಯಾ ಮಕ್ಕಳ ವಯಸ್ಸಿಗೆ ತಕ್ಕಂತೆ ಉತ್ಸಾಹ ತಿಳುವಳಿಕೆ ಎರಡೂ ಬೆಳೆಯುವಂಥ ಆಟದ ಮತ್ತು ಬೋಧನೆಯ ಚಟುವಟಿಕೆಗಳನ್ನು ಒದಗಿಸುವದು ಅಗತ್ಯ. ಮಕ್ಕಳು ಮಕ್ಕಳನ್ನು ಜೊತೆ ಮಾಡಿ ಅವರನ್ನು ಇಂಥ ಚಟುವಟಿಕೆಗಳಲ್ಲಿ ತೊಡಗಿಸುವದು ಹೆಚ್ಚು ಉಪಯುಕ್ತವಾಗುವದು. ಮಕ್ಕಳ ಪ್ರತಿಯೊಂದು ಚಟುವಟಿಕೆಯಲ್ಲಿಯೂ ಹಿರಿಯರು ಕೈಹಾಕುತ್ತಾ ಹೋಗುವದು, ದರ್ಪ ನಡೆಸುವದು, ಒತ್ತಾಯ ತರುವದು ಮಕ್ಕಳ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುವದು. ಮಕ್ಕಳಿಗೆ ಯಾವಾಗಲೂ ದಂಡನೆಯ ಬೆದರಿಕೆ ಹಾಕುವದು ಅಥವಾ ದಂಡನೆ ಮಾಡುವದು ಅವರನ್ನು ತಿದ್ದಲಾರವು. ಮಕ್ಕಳಿಗೆ ಮಾರ್ಗದರ್ಶನ ಮಾಡುವಾಗ ಶಿಸ್ತು ಮತ್ತು ಸಲಿಗೆಗಳ ಸಮತೂಕವನ್ನು ಕಾಯ್ದುಕೊಂಡು ಹೋಗುವದೇ ಬುದ್ಧಿವಂತಿಕೆ. ಮತ್ತೆ ಮತ್ತೆ ಪ್ರಶ್ನೆಗಳನ್ನು ಕೇಳುವದು ಮಕ್ಕಳ ಇನ್ನೊಂದು ಸ್ವಭಾವ. ಇದಕ್ಕೆ ಬೇಸರಪಟ್ಟುಕೊಳ್ಳುವದು ಜಬರಿಸುವದು ಸರಿಯಲ್ಲ. ಸುಳ್ಳು ಅಥವಾ ಹಾರಿಕೆಯ ಉತ್ತರಗಳನ್ನು ಹೇಳುವದೂ ಸರಿಯಲ್ಲ. ಅವರ ತಿಳುವಳಿಕೆಗೆ ಒಗ್ಗುವಂತೆ ಸುಲಭವಾಗಿ ತಿಳಿಸಿ ಹೇಳಬೇಕು.

ಮಕ್ಕಳು ಬಿರುಸು ಮಾತನಾಡುವದು, ಒರಟಾಗಿ ವರ್ತಿಸುವದು, ಅಡ್ಡ ತಿಡ್ಡ ಉತ್ತರ ಕೊಡುವದು ಇವುಗಳನ್ನು ಹಿರಿಯರಿಂದಲೇ ಕಲಿಯುತ್ತಾರೆ. ಆದ್ದರಿಂದ ಹಿರಿಯರೇ ಇಂಥ ಪ್ರವೃತ್ತಿಯನ್ನು ಕಡಿಮೆ ಮಾಡಿಕೊಳ್ಳುವದು ಅಗತ್ಯ. ದುರ್ವ್ಯಸನ, ದುರ್ನಡತೆ, ಕಪಟತನ ಇವೆಲ್ಲವೂ ಮಕ್ಕಳಿಗೆ ಹಿರಿಯರ ಕಾಣಿಕೆಗಳೇ ಆಗಿರುತ್ತವೆ.

ಇಂದಿನ ಸಾಹಿತ್ಯ ಕೃತಿಗಳು ಚಲಚ್ಚಿತ್ರ ಟಿ.ವಿಗಳು ಪತ್ರಿಕೆಗಳಲ್ಲಿ ಬರುವ ವಾದ ಪ್ರತಿವಾದಗಳು ಬೆಳೆಯುತ್ತಿರುವ ಮಕ್ಕಳ ಮೇಲೆ ವಿಪರೀತ ಪರಿಣಾಮವನ್ನುಂಟು ಮಾಡುವದೇನೋ ನಿಜ. ಆದರೆ ಕುಟುಂಬದಲ್ಲಿಯ ತಂದೆ ತಾಯಿಗಳ ನೆರೆಹೊರೆಯವರಲ್ಲಿ ಕಣ್ಣಿಗೆ ಕಾಣುವ ನಡತೆಯ ಮಾದರಿಗಳು ಉತ್ತಮವಾಗಿದ್ದರೆ, ಅಧ್ಯಾಪಕರ ಕಾಲ್ಪನಿಕ ಮಾದರಿಗಳು ಉತ್ತಮವಾಗಿದ್ದರೆ ಸಾಹಿತ್ಯ ಮತ್ತು ಚಿತ್ರಗಳಲ್ಲಿಯ ಕಾಲ್ಪನಿಕ ಮಾದರಿಗಳು ಹೆಚ್ಚು ಪರಿಣಾಮವನ್ನು ಮಾಡಲಾರವು. ಆದ್ದರಿಂದ ಹಿರಿಯರು ತಮ್ಮ ನಡವಳಿಕೆಯನ್ನು ಉತ್ತಮವಾಗಿ ಇಟ್ಟುಕೊಳ್ಳುವದು ಮಕ್ಕಳನ್ನು ಸರಿಯಾಗಿ ರೂಪಿಸುವ ಕಾರ್ಯದ ಒಂದು ಅವಶ್ಯವಾದ ಅಂಗ. ●

ಉಲ್ಲಾಸ ತರುವ ಹಬ್ಬಗಳು..


ಅಮೃತ ಲೋಕ:

ಜೀವಜಗತ್ತಿನಲ್ಲಿ ಪಕ್ಷಿಗಳ ಸ್ಥಾನ ಪ್ರಮುಖ. ಮಾನವನಿಗಿಂತ ಲಕ್ಷಾಂತರ ವರ್ಷಗಳಷ್ಟು ಮೊದಲೇ ಭೂಮಿಯ ಮೇಲೆ ಕಾಲಿಟ್ಟ ಹೆಗ್ಗಳಿಕೆ ಇವುಗಳದ್ದು. 18 ಕೋಟಿ ವರ್ಷಗಳಷ್ಟು ಹಿಂದೆ ಜೀವಿಸಿದ್ದ ಬೃಹದ್ಗಾತ್ರದ ಸರೀಸೃಪಗಳಿಂದ ಉತ್ಕ್ರಾಂತಿಗೊಂಡ ಜೀವಿಗಳೇ ಈ ಪಕ್ಷಿಗಳು. ಸರೀಸೃಪಗಳ ದೇಹದಲ್ಲಿದ್ದ ಹುರುಪೆಗಳೇ ಮುಂದೆ ಗರಿಗಳಾಗಿ ಮಾರ್ಪಟ್ಟವು. ಇವು ಬಿಸಿರಕ್ತ ಜೀವಿಗಳು. ಇಂದು ಜಗತ್ತಿನೆಲ್ಲೆಡೆ 8650 ಪಕ್ಷಿ ಪ್ರಭೇದಗಳಿವೆ. ಭಾರತದಲ್ಲೇ 1200 ಜಾತಿಯ ಪಕ್ಷಿಗಳಿವೆ. ಜೀವ ಪ್ರಪಂಚದಲ್ಲಿ ಯಾವ ಜೀವಿಗೂ ಇಲ್ಲದ ಗರಿಗಳು ಪಕ್ಷಿಗಳ ಪಾಲಾಗಿವೆ. ಇದರಿಂದಾಗಿಯೇ ಮಾನವ ಆಸೆಗಂಗಳಿಂದ ಹಾರುವ ಹಕ್ಕಿಯತ್ತ ನೋಡುವಂತಾಗಿರುವುದು; ಇವನ ಹಾರುವ ಕನಸನ್ನು ಹುಟ್ಟಿ ಹಾಕಿದುದು.

ಪಕ್ಷಿ ಪ್ರಪಂಚವನ್ನು ಹೊಕ್ಕರೆ ವಿಸ್ಮಯಗಳ ಸರಮಾಲೆಯೇ ಬಿಚ್ಚಿಕೊಳ್ಳುತ್ತದೆ. ತನ್ನ ಇಂಪಾದ ಕೂಗಿನಿಂದ ಕೋಗಿಲೆ ನಮ್ಮನ್ನು ಸೆಳೆದರೆ, ಗರಿಬಿಚ್ಚಿ ಕುಣಿದ ನವಿಲು ನಮ್ಮನ್ನು ಆಕರ್ಷಿಸುತ್ತದೆ. ಮಾನವನ ಮಾತನ್ನು ಅನುಕರಿಸುವ ಗಿಳಿ ಅಚ್ಚರಿ ಮೂಡಿಸುತ್ತದೆ. ಹಾರುತ್ತಲೇ ನಿದ್ರಿಸುವ ಬಾನಾಡಿ ಹೆಲಿಕ್ಯಾಪ್ಟರ್‌ನಂತೆ ಗಾಳಿಯಲ್ಲಿ ನಿಂತು ಮಕರಂದ ಹೀರುವ 'ಸೂರಕ್ಕಿ' ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತದೆ. 'ಸ್ವಿಫ್ಟ್' ಎಂಬ ಹಕ್ಕಿ ಗಂಟೆಗೆ 219 ಮೈಲು ವೇಗದಲ್ಲಿ ಹಾರಿದರೆ, ಹೆಬ್ಬಾತು 9000 ಮೀಟರ್ ಎತ್ತರಕ್ಕೇರಬಲ್ಲದು. ಹಮ್ಮಿಂಗ್ ಬರ್ಡ್ ಸೆಕೆಂಡಿಗೆ 55 ಸಲ ರೆಕ್ಕೆ ಬಡಿದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುತ್ತದೆ. ಕೋಗಿಲೆ ಮೊಟ್ಟೆಯಿಡುವಾಗ ಕಾಗೆಯೊಂದಿಗೆ ಆಡುವ ನಾಟಕವಂತೂ ಸಿನೆಮಾದ ನೆನಪು ತರುತ್ತದೆ. ಸಾವಿರಾರು ಮೈಲಿ ವಲಸೆ ಹೋಗುವ ಹಕ್ಕಿಗಳ ಸ್ವಭಾವವಂತೂ ವಿಜ್ಞಾನಿಗಳಿಗೆ ಬಿಡಿಸಲಾಗದ ಒಗಟು.

ಹಕ್ಕಿಗಳ ಗೂಡು ಕಟ್ಟುವ ಕಲೆಯನ್ನು ನೋಡಿ ಯಾರಾದರೂ ತಲೆದೂಗಬೇಕು. ತಮ್ಮ ನೆಲೆಗೆ ಆಯ್ದುಕೊಳ್ಳುವ ತಾಣ ಮತ್ತು ಪರಿಸರದೊಂದಿಗೆ ಹೊಂದಿಕೊಳ್ಳುವಂತೆ ಗೂಡು ಕಟ್ಟುವ ಅವುಗಳ ಜಾಣ್ಮೆಗೆ ನಮ್ಮ ಇಂದಿನ ಇಂಜಿನಿಯರುಗಳೂ ನಾಚಬೇಕು. ದರ್ಜಿ ಹಕ್ಕಿ ಎರಡು ದೊಡ್ಡ ಎಲೆಗಳನ್ನು ಕೂಡಿಸಿ ಹೊಲಿಗೆ ಹಾಕಿ ಚೀಲವನ್ನಾಗಿಸಿದರೆ, ಕೊಂಬೆಗೆ ಜೋತು ಬಿದ್ದ ಗೀಜಗನ ಗೂಡು ರಕ್ಷಣೆಯ ಭದ್ರ ಕೋಟೆ. ಟೊಳ್ಳು ಪೊಟರೆಯೇ ಮರಕುಟಿಗನ ಗೂಡಾದರೆ, ಪೆಂಡ್ಯುಲೈನ್ ಟಿಟ್ ಹಕ್ಕಿಯ ಗೂಡು ಗಡಿಗೆಯಾಕಾರದ್ದು, ಗೋಲ್ಡ್ ಫಿಂಚ್‌ನ ಗೂಡು ಬಟ್ಟಲನ್ನು ಹೋಲಿದರೆ ಕವಲು ತೋಕೆ ಹಕ್ಕಿಯ ಗೂಡು ಬಕೆಟ್ ಆಕಾರದ್ದು. ರೂಫೆನ್ ಒವನ್ ಹಕ್ಕಿಯಂತೂ ಸಗಣಿ ಮರಳನ್ನು ಬಳಸಿ ಗೂಡು ಕಟ್ಟಿಬಿಡುತ್ತದೆ. ಎಷ್ಟೇ ಹುಡುಕಿದರೂ ಕಣ್ಣಿಗೆ ಬೀಳದ ಸೂರಕ್ಕಿಯ ಗೂಡು ಬಹು ಸುಂದರ. ಮಿಂಚು ಹುಳುಗಳನ್ನು ತಂದು ಬಂಧಿಸಿ ಬೆಳಕು ಪಡೆವ ಪಕ್ಷಿಗಳ ಬುದ್ಧಿಮತ್ತೆಗೆ ಎಣೆಯುಂಟೆ? ನಿಜಕ್ಕೂ ಇವು ನಿಸರ್ಗದ ಕುಶಲಕರ್ಮಿಗಳು.


ಇಷ್ಟೆಲ್ಲ ವೈವಿಧ್ಯಗಳಿರುವ ಪಕ್ಷಿಗಳು ಮಾನವನ ಬದುಕಿನೊಂದಿಗೆ ತಳಕು ಹಾಕಿಕೊಂಡಿರುವ ರೀತಿ ನಿಜಕ್ಕೂ ಬೆರಗುಹುಟ್ಟಿಸುವಂಥದು. ಒಂದೇ ರಾತ್ರಿಗೆ ಗಿಡವನ್ನು ಅಸ್ಥಿಪಂಜರವನ್ನಾಗಿಸುವ ಕಂಬಳಿಹುಳು, ಒಂದು ಜೊತೆ ದುಂಬಿ ವರ್ಷವೊಂದರಲ್ಲಿ ಆರು ಕೋಟಿ ದುಂಬಿಗಳಾದರೆ, ಒಂದು ಜೊತೆ ಇಲಿ ವರ್ಷದೊಳಗೆ 880 ಇಲಿಗಳಾದರೆ ನಮ್ಮ ಬೆಳೆಯ ಗತಿಯೇನು? ಆದರೆ ನಿಸರ್ಗ ನಮಗೆ ಪಕ್ಷಿಗಳನ್ನು ಕೊಡುಗೆಯಾಗಿತ್ತಿದೆ. ಕೀಟ ಭಕ್ಷಣೆಯಿಂದ ನಿಸರ್ಗ ಸಮತೋಲವನ್ನು ಕಾಯುವ ಪಕ್ಷಿಗಳು ಕೃಷಿ ಕ್ಷೇತ್ರದಲ್ಲಿ ನಮಗೆ ನೆರವಾಗುತ್ತವೆ. 'ಟಿಟ್' ಎಂಬ ಪಕ್ಷಿಯೊಂದೇ ವರ್ಷಕ್ಕೆ ಒಂದೂವರೆ ಲಕ್ಷ ಕಂಬಳಿ ಹುಳುಗಳನ್ನು ಸಂಪಾದಿಸುತ್ತದೆ. ಗುಬ್ಬಚ್ಚಿಯೊಂದು ಪ್ರತಿದಿನ 240 ಬಾರಿ ಸಣ್ಣ ಗೂಡಿಗೆ ಆಹಾರ ತರುತ್ತದೆಯೆಂದರೆ, ಅದು ಎಷ್ಟು ಪ್ರಮಾಣದ ಕೀಟಗಳನ್ನು ಭಕ್ಷಿಸುತ್ತದೆಂಬುದನ್ನು ಕಲ್ಪಿಸಿಕೊಳ್ಳಬಹುದು. ನಮ್ಮ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಗೂಬೆ ಇಲಿಗಳನ್ನು ತಿಂದು ಬೆಳೆ ಉಳಿಸುವುದಲ್ಲದೆ, ಪರಿಸರವನ್ನೂ ಚೊಕ್ಕಟವಾಗಿಡುತ್ತದೆ. ಪರಾಗಕ್ರಿಯೆಯಲ್ಲಿ ಬೀಜ ಪ್ರಸಾರ ಕಾರ್ಯದಲ್ಲಿ ಪಕ್ಷಿಗಳು ವಹಿಸುವ ಪಾತ್ರ




ಕೊಳ್ಳೆ ಒಡಿಯಲು (ಗಿಡುಗ)



ಓಡಲು (ಟಿಟ್ಟಿಭ)



ಜಾಲಪಾದ (ಬಾತು)



ನಡೆಯಲು (ಕೋಳಿ)



ಗುಬ್ಬಿ.

ಒರಿದು. ಹೀಗೆ ಪಕ್ಷಿಗಳು ನಿಸರ್ಗ ಸಮತೋಲನಗೊಳಿಸುತ್ತಾ ನಮಗೆ ನೆರವಾಗುತ್ತಾ ಬದುಕಿಗೆ ಹತ್ತಿರವಾಗಿವೆ.

ಪೂರ್ವ ಸಿದ್ಧತೆ:

ಇಷ್ಟೆಲ್ಲಾ ತಿಳಿದ ಮೇಲೆ ಪಕ್ಷಿಗಳನ್ನು ವೀಕ್ಷಿಸುವ ಅವುಗಳ ಕುರಿತು ಮಾಹಿತಿ ಸಂಗ್ರಹಿಸುವ ಆಸೆ ನಿಮಗೆ ಉಂಟಾಗಿರಬೇಕಲ್ಲವೆ? ಪಕ್ಷಿ ವೀಕ್ಷಣೆ ಮನಸ್ಸಿಗೆ ಮುದ ಕೊಡುವ ನಿಸರ್ಗದ ಪರಿಚಯ ಮಾಡಿಕೊಡುವ ಆರೋಗ್ಯಕರ ಹವ್ಯಾಸ. ಪಕ್ಷಿವೀಕ್ಷಣೆಯಿಂದ ದೊರೆಯುವ ಸಂತೋಷ ವರ್ಣನಾತೀತ. ಇದು ಮನಃಶಾಂತಿಯ ಜೊತೆಗೆ ಆರೋಗ್ಯವನ್ನೂ ನೀಡುತ್ತದೆ. ಇದರಿಂದಾಗಿಯೇ ಇಂದು ಜಗತ್ತಿನೆಲ್ಲೆಡೆ ಲಕ್ಷಾಂತರ ಜನ ಪಕ್ಷಿವೀಕ್ಷಣೆಗೆ ತೊಡಗಿರುವುದು. ಪಕ್ಷಿಶಾಸ್ತ್ರದ ಅಧ್ಯಯನ ಗೈಯುತ್ತಿರುವುದು.

ಪಕ್ಷಿ ವೀಕ್ಷಣೆಗೆ ಹೊರಡುವ ಮುನ್ನ ಕೆಲವು ವಿಷಯಗಳ ಬಗೆಗೆ ಎಚ್ಚರಿಕೆ ವಹಿಸಬೇಕು. ಅಲ್ಲದೆ ಸಾಕಷ್ಟು ಪೂರ್ವ ಸಿದ್ಧತೆಯನ್ನೂ ಮಾಡಿಕೊಳ್ಳಬೇಕು. ಕಾಗೆ, ಗುಬ್ಬಿ, ಮೈನಾಗಳನ್ನು ನಿಮ್ಮ ಮನೆಯ ಸುತ್ತ ಮುತ್ತ ಕಾಣುವಿರಾದರೂ, ವೈವಿಧ್ಯಮಯ ಪಕ್ಷಿಗಳನ್ನು ವೀಕ್ಷಿಸಬೇಕಾದರೆ ಕೆರೆಯಂಗಳ, ಹೊಲಗದ್ದೆ, ಹಸಿರು ಬಯಲಿಗೆ ಹೋಗಬೇಕಾಗುತ್ತದೆ. ಹೀಗೆ ಹೋಗುವಾಗ ದುರ್ಬೀನ್ ಒಂದನ್ನು ನಿಮ್ಮ ಜೊತೆ ಕೊಂಡೊಯ್ಯಬೇಕು. ಉತ್ತಮ ಸಾಮರ್ಥ್ಯದ ದುರ್ಬೀನು ಆದರೆ ಹೆಚ್ಚು ಅನುಕೂಲ. ಪಕ್ಷಿಗಳ ಆಹಾರ ಕ್ರಮ ಗೂಡು ಕಟ್ಟುವ ರೀತಿ ದೇಹದ ಬಣ್ಣ ಎದ್ದು ಕಾಣುವ ಗುರುತುಗಳನ್ನು ತಿಳಿಯುವಲ್ಲಿ ದುರ್ಬೀನು ನೆರವಾಗುತ್ತದೆ. ಬಹಳಷ್ಟು ಪಕ್ಷಿಗಳು ಸಮೀಪ ಹೋದೊಡನೆ ಗಾಬರಿಗೊಂಡು ಹಾರಿಹೋಗುತ್ತವೆ ಟೀಪೆಲ್ ಹಕ್ಕಿಯಂಥ ಪಕ್ಷಿಗಳು ಒಂದೆಡೆ

ಪಕ್ಷಿಗಳ ಪಾದದ ಆಕಾರವೂ ಭಿನ್ನವಾಗಿದೆ. ಜಲ ಪಕ್ಷಿಗಳಾದ ಬಾತು, ಹೆಬ್ಬಾತು, ನೀರು ಕಾಗೆಗಳಿಗೆ ನೀರಲ್ಲಿ ಈಜಲು ಅನುಕೂಲವಾಗುವ ಹಾಗೆ ಜಾಲ ಪಾದಗಳಿವೆ. ಮಾಂಸಾಹಾರಿ ಪಕ್ಷಿಗಳ ಪಾದ ಬಲಿಷ್ಠವಾಗಿ ಸ್ನಾಯುಗಳು ಶಕ್ತಿಯುತವಾಗಿ, ಚೂಪಾದ ಮೊನೆಯುಗುರುಗಳನ್ನು ಹೊಂದಿವೆ. ಹಾಗೆ ಮೈನಾಗಳ ಕಾಲು ದುರ್ಬಲವಾಗಿವೆ. ಟಿಟ್ಟಿಭ, ಕೋಳಿ, ಉಷ್ಟ್ರ ಪಕ್ಷಿಗಳ ಪಾದ ನಡೆಯಲು ಅನುಕೂಲವಾಗಿವೆ. ಗಿಳಿಯ ಪಾದ ರೆಂಬೆಯನ್ನು ಹಿಡಿಯಲು ಅನುವಾಗುವಂತೆ ಬಾಗಿದೆ. ಪಕ್ಷಿಗಳ ಪಾದ ರಚನೆ ಅವುಗಳ ಗುರುತಿಸುವಿಕೆಗೆ ನೆರವಾಗುತ್ತದೆ.

ಕೂರುವುದೆ ಅಪರೂಪ. ಅಂಥ ವೇಳೆಯಲ್ಲಿ ದುರ್ಬೀನು ನಮ್ಮ ನೆರವಿಗೆ ಬರುವುದಲ್ಲದೆ ಹತ್ತಿರದಿಂದ ಪಕ್ಷಿಗಳನ್ನು ವೀಕ್ಷಿಸಬಹುದು.

ಎರಡನೆಯದಾಗಿ ಚಿಕ್ಕ ಪುಸ್ತಕ ಮತ್ತು ಪೆನ್ ಸದಾ ನಿಮ್ಮ ಬಳಿ ಇದ್ದರೆ ನೀವು ಕಂಡ ಹಕ್ಕಿಯ ಬಗ್ಗೆ ಟಿಪ್ಪಣಿ ಬರೆದುಕೊಳ್ಳಲು ಅನುಕೂಲ. ಇದು ಪಕ್ಷಿಯನ್ನು ಗುರುತಿಸಲು ಸಹಾಯಕವಾಗುತ್ತದೆ. ನೀವು ತೊಡುವ ಬಟ್ಟೆ ಕೂಡ ಪಕ್ಷಿವೀಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಯೆಂದರೆ ನಿಮಗೆ ಅಚ್ಚರಿಯಾಗಬಹುದು. ಆದರೆ ಇದು ನಿಜ. ಸಾಮಾನ್ಯವಾಗಿ ಮನುಷ್ಯನನ್ನು ಕಂಡೊಡನೆ ಪಕ್ಷಿಗಳು ಭೀತಿಗೊಂಡು ಗಾಬರಿಗೊಳ್ಳುತ್ತವೆ. ಆದ್ದರಿಂದ ಪಕ್ಷಿ ವೀಕ್ಷಕ ಎದ್ದು ಕಾಣುವ ಬಿಳಿ, ಕಡುಗೆಂಪು ಬಣ್ಣದ ಬಟ್ಟೆಗಳನ್ನು ತೊಡಬಾರದು. ಬೂದು, ಹಳದಿ, ಖಾಕಿ, ಹಸಿರು, ಮೊದಲಾದ ಪರಿಸರದೊಂದಿಗೆ ಹೊಂದಿಕೊಳ್ಳುವಂಥ ಬಣ್ಣದ ಬಟ್ಟೆಗಳನ್ನು ತೊಡಬೇಕು. ಒಟ್ಟಿನಲ್ಲಿ ನಿಮ್ಮ ಇರುವು ಪಕ್ಷಿಗಳಿಗೆ ತಿಳಿಯಬಾರದು.

ಪಕ್ಷಿ ವೀಕ್ಷಣೆಗೆ ಹೊರಡುವ ಮುನ್ನ ಪಕ್ಷಿಗಳ ಬಗ್ಗೆ ಲಘು ಅಧ್ಯಯನ ಅಗತ್ಯ. ಪಕ್ಷಿಗಳ ಕೂಗು, ಅವುಗಳ ಅಂಗಗಳ ಬಗೆಗೆ ಸಾಮಾನ್ಯ ಜ್ಞಾನ ಇರಬೇಕಾಗುತ್ತದೆ. ಪಕ್ಷಿ ವೀಕ್ಷಣೆಯಷ್ಟೆ ನಮ್ಮ ಉದ್ದೇಶ. ಆದ್ದರಿಂದ ಪಕ್ಷಿಗಳನ್ನು ವೀಕ್ಷಿಸುವಾಗ ಅವನ್ನು ಗಾಬರಿಗೊಳಿಸುವುದಾಗಲಿ, ಅವಕ್ಕೆ ತೊಂದರೆ ನೀಡುವುದಾಗಲಿ ಮಾಡಕೂಡದು. ಇಬ್ಬರಿಗಿಂತ ಹೆಚ್ಚು ಮಂದಿ ಸೇರಿ ವೀಕ್ಷಿಸುವಾಗ ಗದ್ದಲ ಆಗುವ ಸಂಭವವಿರುತ್ತದೆ. ಆದ್ದರಿಂದ ಆದಷ್ಟೂ ಒಂಟಿಯಾಗಿ ಅಥವಾ ಇನ್ನೊಬ್ಬರೊಂದಿಗೆ ಪಕ್ಷಿವೀಕ್ಷಣೆಗೆ ಹೊರಡುವುದು ಉತ್ತಮ. ಪಕ್ಷಿಗಳನ್ನು ವೀಕ್ಷಿಸುವ ಸಂಭ್ರಮದಲ್ಲಿ ಅವುಗಳ ಗೂಡನ್ನು ಹಾಳುಮಾಡುವುದಾಗಲೀ, ಮೊಟ್ಟೆಗಳನ್ನು ಮುಟ್ಟುವುದಾಗಲಿ ಮಾಡಬೇಡಿ. ಏಕೆಂದರೆ

ಪಕ್ಷಿಕಾಶಿ

ಐತಿಹಾಸ ಪ್ರಸಿದ್ಧ ಶ್ರೀರಂಗಪಟ್ಟಣದಿಂದ ಪಶ್ಚಿಮ ವಾಹಿನಿ ಮಾರ್ಗವಾಗಿ ಏಳೆಂಟು ಕಿಲೋ ಮೀಟರಿನಷ್ಟು ದಾರಿಯನ್ನು ಸವೆಸಿದರೆ ರಂಗನತಿಟ್ಟು ಕಣ್ಣಿಗೆ ಬೀಳುತ್ತದೆ. ಕಾವೇರಿ ಪಾತ್ರದಲ್ಲಿರುವ ಆರು ಸಣ್ಣ ದ್ವೀಪಗಳ ಸಮೂಹದಿಂದ ಈ ಪಕ್ಷಿ ಧಾಮದಲ್ಲಿನ ಹಕ್ಕಿಗಳ ಇಂಚರ ನಿಮಗೆ ಸ್ವಾಗತ ಕೋರುತ್ತದೆ. ನಾಡದೋಣಿಯ ನೆರವಿನಿಂದ ದ್ವೀಪದ ಸಮೀಪ ಹೋದರೆ ಪಕ್ಷಿ ಪ್ರಪಂಚವೇ ಕಾಣ ಸಿಗುತ್ತದೆ. ಎತ್ತ ನೋಡಿದರೂ ಪಕ್ಷಿಗಳೇ ಪಕ್ಷಿಗಳು.


ಪಕ್ಷಿಧಾಮದ ಸುತ್ತಲೂ ಇರುವ ಆಳವಾದ ನೀರು ಪಕ್ಷಿಗಳಿಗೆ ನೈಸರ್ಗಿಕ ರಕ್ಷಣೆ ನೀಡುತ್ತದೆ. ಪಕ್ಷಿ ಧಾಮದ ನಾಲ್ಕಂಚಿಗೂ ಕಾಣಬರುವ ಹೊಲ ಗದ್ದೆಗಳು ಪಕ್ಷಿಗಳ ಆಹಾರದ ಸಮಸ್ಯೆಯನ್ನು ನೀಗಿಸುತ್ತವೆ. ಕಾವೇರಿ ನದಿಯಲ್ಲಿರುವ ಮೀನು, ಏಡಿ, ಹುಳು ಹುಪ್ಪಟಗಳು ಜಲಪಕ್ಷಿಗಳಿಗೆ ಔತಣ ನೀಡುತ್ತವೆ. ಬೆಳ್ಳಕ್ಕಿ, ನೀರುಕಾಗೆ ಬಕಪಕ್ಷಿ ಮೊದಲಾದ 13 ಜಾತಿಯ ಸಾವಿರಾರು ಪಕ್ಷಿಗಳು ಸಂತಾನೋತ್ಪತ್ತಿಗಾಗಿ ಇಲ್ಲಿಗೆ ಬರುತ್ತವೆ. ಮೇ ತಿಂಗಳಲ್ಲಿ ವಲಸೆ ಬಂದು ವಾಸ್ತವ್ಯ ಹೂಡುವ ಹಕ್ಕಿಗಳು ಗೂಡು ಕಟ್ಟಿ ಮೊಟ್ಟೆ ಇಟ್ಟು ಮರಿ ಮಾಡಿ ನವೆಂಬರ್ ವೇಳೆಗೆ ಮರಿಗಳೊಂದಿಗೆ ಪಕ್ಷಿ ಧಾಮಕ್ಕೆ ವಿದಾಯ ಹೇಳಿ ತಮ್ಮ ಮೊದಲಿನ ಸ್ಥಳಕ್ಕೆ ಹಿಂತಿರುಗುತ್ತವೆ. ನವೆಂಬರ್ ನಂತರ ಪಕ್ಷಿಧಾಮ ಬಹುಮಟ್ಟಿಗೆ ಬರಡೋ ಬರಡು.

ರಂಗನತಿಟ್ಟಲ್ಲದೆ ಕರ್ನಾಟಕದಲ್ಲಿ ಮಂಡಗದ್ದೆ, ಕೊಕ್ಕರೆ, ಬೆಳ್ಳೂರು ಮತ್ತು ಹೊಸದಾದ ಗುಡವಿ ಪಕ್ಷಿಧಾಮಗಳಿವೆ. ಒಮ್ಮೆ ನೀವು ಈ ಪಕ್ಷಿಧಾಮಗಳಿಗೆ ಭೇಟಿ ನೀಡಿ, ಪಕ್ಷಿ ಜಗತ್ತನ್ನು ವೀಕ್ಷಿಸಿದರೆ ಮುಂದೆದೂ ಪಕ್ಷಿ ಪ್ರೇಮಿಯಾಗಿಯೇ ಉಳಿಯುವಿರಿ. ಪಕ್ಷಿಗಳಲ್ಲಿನ ಸಾಮರಸ್ಯ, ಹೊಂದಾಣಿಕೆ ಜೀವನ ನಮ್ಮ ಬದುಕಿಗೆ ಪಾಠ ಹೇಳುತ್ತದೆ. ಹೊಸ ದಿಕ್ಕನ್ನು ತೋರುತ್ತದೆ. ಮುಂದಿನ ಬಾರಿ ಮೈಸೂರಿಗೆ ಬಂದಾಗ 'ಪಕ್ಷಿಕಾಶಿ' ರಂಗನತಿಟ್ಟುವಿಗೆ ಭೇಟಿ ಕೊಡಲು ಮರೆಯಬೇಡಿ.

ಆಗಸ್ಟಿನಿಂದ ನವೆಂಬರ್ ಪಕ್ಷಿಧಾಮಕ್ಕೆ ಭೇಟಿ ಕೊಡಲು ಸೂಕ್ತ ಕಾಲ.




ಗಿಳಿ.



ಗಿಡುಗ



ಗುಬ್ಬಿ.



ಮರಕುಟಿಗ.



ಕಾಗೆ.



ಪೆಲಿಕನ್

ಪಕ್ಷಿಗಳ ಆಹಾರ ಕ್ರಮಗಳಿಗನುಸಾರವಾಗಿ ಕೊಕ್ಕುಗಳು ರಚನೆಗೊಂಡಿವೆ. ಮಾಂಸಾಹಾರಿ ಪಕ್ಷಿಗಳಾದ ಗಿಡುಗ, ಹದ್ದುಗಳ ಕೊಕ್ಕು ಬಲಿಷ್ಠವಾಗಿ, ಚೂಪಾಗಿ ಬಾಗಿದೆ. ಇದರಿಂದ ಕೊಳೆ ಮಾಂಸ ಹರಿಯಲು ಸುಲಭವಾಗುತ್ತದೆ. ಆಹಾರ ಧಾನ್ಯ ತಿನ್ನುವ ಗುಬ್ಬಿ ನವಿಲುಗಳ ಕೊಕ್ಕು ಸಣ್ಣದಾಗಿದ್ದರೆ, ಮರಕುಟಿಗ, ಚಂದ್ರಮುಕುಟ ಹಕ್ಕಿಯ ಕೊಕ್ಕು ಮರ ಕುಕ್ಕಿ ಹುಳು ತೆಗೆಯಲು ಮತ್ತು ಮಣ್ಣಿನಿಂದ ಹುಳು ಹೆಕ್ಕಲು ಅನುವಾಗುವಂತೆ ಉದ್ದವಾಗಿ ಚೂಪಾಗಿದೆ. ಪಕ್ಷಿಯ ಕೊಕ್ಕು ಉದ್ದವಾಗಿದ್ದರೆ ಸೂರಕ್ಕಿಯ ಕೊಕ್ಕು ಮಕರಂದ ಹೀರಲು ಸಣ್ಣದಾಗಿ ಬಾಗಿದೆ. ಹೀಗೆ ಕೊಕ್ಕಿನ ಸಹಾಯದಿಂದ ಪಕ್ಷಿಯನ್ನು ಸುಲಭವಾಗಿ ಗುರುತಿಸಬಹುದು.

ಕಾಗೆಯಂಥ ಆಕ್ರಮಣಕಾರಿ ಪಕ್ಷಿಗಳು ಮೊಟ್ಟೆ ಮರಿಗಳನ್ನು ಕಬಳಿಸಲು ಕಾದು ಕುಳಿತಿರುತ್ತವೆ. ಅಲ್ಲದೆ ಕೆಲವು ಪಕ್ಷಿಗಳು ಭಯಗೊಂಡು ಗೂಡಿನ ಬಳಿ ಸುಳಿಯದಿರುವ ಸಂಭವವೂ ಉಂಟು.

ವೀಕ್ಷಣೆಯ ಕಲೆ:

ಈಗ ನೀವು ಜನಜಂಗುಳಿಯನ್ನು ಬಿಟ್ಟು ಗದ್ದಲದ ಪರಿಸರವನ್ನು ತೊರೆದು ನಿಸರ್ಗದ ಮಡಿಲಿಗೆ ಬಂದಿದ್ದೀರಿ. ನಿಸರ್ಗದ ರಮಣೀಯತೆ ನಿಮ್ಮನ್ನು ಮಂತ್ರಮುಗ್ಧರನ್ನಾಗಿಸಿದೆ. ಈ ನೀರವವನ್ನೂ ಸೀಳಿ ಅಜ್ಞಾತ ಪಕ್ಷಿಯ ಕೂಗೊಂದು ಕೇಳಿಬರುತ್ತಿದೆ. ಎಚ್ಚರಿಕೆಯಿಂದ ಆಲಿಸಿ. ಸದ್ದಿಲ್ಲದೆ ಧ್ವನಿ ಬರುವತ್ತ ಸಾಗಿ. ಮರಗಿಡಗಳ ನಡುವೆ ಅಡಗಿಕೊಳ್ಳಿ. ಪಕ್ಷಿ ನಿಮ್ಮ ಕಣ್ಣಿಗೆ ಬೀಳಲು ಕೆಲವೊಮ್ಮೆ ಬಹುಹೊತ್ತು ಕಾಯಬೇಕು. ತಾಳ್ಮೆ ಕಳೆದುಕೊಳ್ಳಬೇಡಿ [illegible] ಕಾಯಿಸಿ. ಬೇಸರಗೊಂಡು ಸದ್ದು ಮಾಡೀರಿ ಜೋಕೆ! ನೀವು ಯಶಸ್ವಿ ಪಕ್ಷಿ ವೀಕ್ಷಕರಾಗುವುದು ಮರಗಿಡ, ಪೊದೆಗಳ ನಡುವೆ ಹೇಗೆ ಇರುತ್ತೀರೆಂಬುದನ್ನು ಅವಲಂಬಿಸಿದೆ. ತಾಳ್ಮೆಯನ್ನು ಮೈಗೂಡಿಸಿಕೊಂಡು, ಕಲ್ಲಿನಂತೆ ಅಚಲರಾಗಿರುವುದನ್ನು ಕಲಿತರೆ ಬಹುಬೇಗ ಪಕ್ಷಿಯ ಇರವನ್ನು ಪತ್ತೆ ಹಚ್ಚಬಹುದು. ನಿಧಾನಗತಿಯ ಚಲನೆ, [illegible] ಜಾಗ್ರತೆ, ತಾಳ್ಮೆಯ ಮನೋಭಾವ ಮಾತ್ರ ನಿಮ್ಮನ್ನು ಪಕ್ಷಿ ಪ್ರಪಂಚಕ್ಕೆ ಕರೆದೊಯ್ಯುತ್ತದೆಂಬುದನ್ನು ನೆನಪಿನಲ್ಲಿಡಿ. ಅಂಥ ವೇಳೆಯಲ್ಲಿ ಮಾತನಾಡುವಂತಿಲ್ಲ. ಗದ್ದಲ ಎಬ್ಬಿಸುವಂತಿಲ್ಲ. ಕಾಫಿ ತಿಂಡಿಗಳ ಮಾತಂತೂ [illegible].

[illegible] ಸದ್ದು ಮಾಡದೇ ದುರ್ಬೀನಿನಿಂದ ಅದರ ಕುಳಿತ ಭಂಗಿ, ಎದ್ದು ಕಾಣುವ ಬ

ಮಾಹಿತಿಗೊಂದಿಷ್ಟು ಮನೆಗೆಲಸ

ಪಕ್ಷಿ ವೀಕ್ಷಣೆ ಮುಗಿಸಿ ಮನೆಗೆ ಮರಳಿದ ನಂತರ ಒಂದಿಷ್ಟು ಮನೆಗೆಲಸ ಮಾಡಬೇಕು. ಪುಸ್ತಕ ದಪ್ತರಿನ ಟಿಪ್ಪಣಿಯನ್ನು ವಿವರವಾಗಿ ಮತ್ತೊಂದು ಪುಸ್ತಕ ಅಥವಾ ಡೈರಿಯಲ್ಲಿ ಬರೆದಿಡಬೇಕು. ಹಾಗೆ ಬರೆಯುವಾಗ ಅಂದಿನ ದಿನಾಂಕವನ್ನು ನಮೂದಿಸಲು ಮರೆಯಬೇಡಿ. ಪಕ್ಷಿ ವೀಕ್ಷಣೆಯ ನಿಮ್ಮ ಅನುಭವವನ್ನು ವಿವರವಾಗಿ ಬರೆಯಿರಿ. ಇದು ನೀವು ಮಾಡಬೇಕಾದ ಪ್ರಮುಖ ಮನೆಗೆಲಸ. ಇದು ಮುಂದೆ ಪಕ್ಷಿಗಳ ಅಧ್ಯಯನ ಮತ್ತು ಪುನರ್ ವೀಕ್ಷಣೆಗೆ ನೆರವಾಗುತ್ತದೆ. ಈಗ ನೀವು ಪತ್ತೆ ಹಚ್ಚಿ [illegible] ಸಂಗ್ರಹಿಸಿದ ಪಕ್ಷಿಯ ಹೆಸರು ಮತ್ತು ಅದರ ಬಗೆಗಿನ ಹೆಚ್ಚಿನ ಮಾಹಿತಿ ಬೇಕಾಗಿದೆಯೇ? ಇದಕ್ಕಾಗಿ ನೀವು ಡಾ|| ಸಲೀಂ ಅಲಿಯವರ ಪುಸ್ತಕಗಳ ನೆರವು ಪಡೆಯಬಹುದು. ಸಲೀಂ ಅಲಿಯವರ 'ದ ಬುಕ್ ಆಫ್ ಇಂಡಿಯನ್ ಬರ್ಡ್ಸ್' ಪುಸ್ತಕದ ವಿವರಣೆ ಮತ್ತು ಚಿತ್ರಗಳು [illegible] ರಾಗುವುದರಲ್ಲಿ ಸಂಶಯವಿಲ್ಲ.

ಸಂರಕ್ಷಣೆಯ ದಿಕ್ಕಿನಲ್ಲಿ

[illegible] 500 ಪ್ರಭೇದಗಳಲ್ಲಿ 100 ವಿವಿಧ ಜಾತಿಯ ಪಕ್ಷಿ ಸಂತತಿಯು [illegible] ಪಕ್ಷಿ ಸಂರಕ್ಷಣೆಯ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು. [illegible] ಪಕ್ಷಿಗಳಿಗೆ [illegible]

[illegible] ಲೋಕಕ್ಕೆ ಕರೆದೊಯ್ಯು [illegible] ದಾಗಲೂ, ಹೊಸದೇನನ್ನೋ [illegible] ಉಲ್ಲಾಸಕ್ಕೆ ಕಾರಣವಾಗುತ್ತದೆ. [illegible] 'ಪಕ್ಷಿ ವೀಕ್ಷಣೆ' [illegible] ಅರ್ಥಪೂರ್ಣ!

ಆಕಾರವನ್ನು ಗಮನಿಸಿ. ನೀವು ಕಂಡ ಪಕ್ಷಿಯನ್ನು ನಿಮಗೆ ಪರಿಚಿತವಾದ ಹಕ್ಕಿ ಗುಂಪುಗಳೊಂದಿಗೆ ಹೋಲಿಸಿ ನೋಡಿ. ಅದರ ಚಲನವಲನಗಳನ್ನು ಎಚ್ಚರಿಕೆಯಿಂದ ಗಮನಿಸಿ. ಪಕ್ಷಿಯ ಗಾತ್ರ, ಬಣ್ಣ, ಕೂಗು ಮತ್ತು ಅದರ ಚಟುವಟಿಕೆಗಳನ್ನು ಪುಸ್ತಕದಲ್ಲಿ ಗುರುತು ಹಾಕಿಕೊಳ್ಳಿ. ಸಾಧ್ಯವಾದರೆ ಪಕ್ಷಿಯ ಕರಡು ಚಿತ್ರವೊಂದನ್ನು ಬಿಡಿಸಿ. ಪಕ್ಷಿಯೊಂದನ್ನು ಪತ್ತೆ ಹಚ್ಚಿದ ಮೇಲೆ ಅದನ್ನು ಗುರುತಿಸುವ ಕುತೂಹಲ ಮೂಡುತ್ತದೆ. ಪ್ರಾರಂಭದಲ್ಲಿ ಹಕ್ಕಿಯನ್ನು ಗುರುತಿಸುವುದು ಕಷ್ಟಸಾಧ್ಯವೆನಿಸಿದರೂ, ದಿನಗಳೆದಂತೆ ಈ ಕಲೆ ನಿಮ್ಮ ಕೈವಶವಾಗುತ್ತದೆ. ಹಕ್ಕಿಯ ಕೂಗು ಮತ್ತು ಇಂಚರದಿಂದ ಅದನ್ನು ಗುರುತಿಸುವುದು ಸುಲಭವಾದರೂ ಮೊದಮೊದಲು ಇದರಿಂದ ಮೋಸ ಹೋಗುವ ಸಂಭವವೇ ಹೆಚ್ಚು. ಪಕ್ಷಿಯ ಪಾದ ಮತ್ತು ಕೊಕ್ಕನ್ನು ವಿಶೇಷವಾಗಿ ಗಮನಿಸಿದರೆ, ಪಕ್ಷಿಯನ್ನು ಗುರುತಿಸುವ ಕಾರ್ಯ ಸುಲಭವಾಗುತ್ತದೆ. ಕೊಕ್ಕು ಮತ್ತು ಪಾದಗಳನ್ನು ಗಮನಿಸುವುದರೊಂದಿಗೆ ಪಕ್ಷಿಯನ್ನು ನೋಡಿದ ಜಾಗ, ವಾತಾವರಣ, ಗಿಡಮರಗಳು, ಪಕ್ಷಿಯಿದ್ದ ಪರಿಸರ, ಹವಾಮಾನ, ನೆಲ ತೇವಗೊಂಡಿತ್ತೋ? ಹೇಗೆ? ಪಕ್ಷಿಯನ್ನು ಕಂಡ ವೇಳೆ ಇದನ್ನೆಲ್ಲಾ ಪುಸ್ತಕದಲ್ಲಿ ಚಿಕ್ಕದಾಗಿ ಟಿಪ್ಪಣಿ ಮಾಡಿಕೊಳ್ಳಬೇಕು. ಸಾಧ್ಯವಾದರೆ ಪಕ್ಷಿಯ ಗೂಡನ್ನು ಪತ್ತೆ ಹಚ್ಚಿ. ಇದರಿಂದ ಪಕ್ಷಿಯ ಆಹಾರಾಭ್ಯಾಸ, ಗೂಡು ಕಟ್ಟಿದ ರೀತಿಯನ್ನು ತಿಳಿಯಬಹುದು. ಪ್ರಾರಂಭದಲ್ಲಿ ಕಂಡ ಕಂಡ ಪಕ್ಷಿಗಳನ್ನೆಲ್ಲಾ ಬೆನ್ನಟ್ಟಿ ಹೋಗಬೇಡಿ. ಯಾವುದಾದರೊಂದು ಪಕ್ಷಿಯನ್ನು ವೀಕ್ಷಿಸಿ ಅದರ ಬಗ್ಗೆ ಹೆಚ್ಚು ಮಾಹಿತಿ ತಿಳಿದುಕೊಳ್ಳಿ. ಪಕ್ಷಿಯನ್ನು ವೀಕ್ಷಿಸುವುದರ ಜೊತೆಗೆ ನಿಸರ್ಗದ ಸೌಂದರ್ಯವನ್ನು ಸವಿಯಲು ಮರೆಯಬೇಡಿ. ●

ಫ್ರೆಂಚ್ ಕಥೆ

ಮೂಲ: ಮಾರ್ಸೆಲ್ ಐಮೇ
ಅನು: ಆರ್.ವಿ. ಕಟ್ಟಿಮನಿ

ಗೋಡೆಯಲ್ಲಿ ಮನುಷ್ಯ

ಒಂದೊಮ್ಮೆ ಪ್ಯಾರಿಸ್ಸಿನಲ್ಲಿ ಒಂದು ಬಿಲ್ಡಿಂಗಿನ ನಾಲ್ಕನೇ ಅಂತಸ್ತಿನಲ್ಲಿ ದ್ಯುತಿಯುಲ್ ಎಂಬ ವ್ಯಕ್ತಿ ವಾಸಿಸುತ್ತಿದ್ದ. ಅವನು ಯಾವುದೇ ಗೋಡೆಯೊಳಗಿಂದ ನಿರಾತಂಕವಾಗಿ ತೂರಿ ಹೋಗುತ್ತಿದ್ದ. ಸರಪಳಿಯ ಕನ್ನಡಕ ಚಿಕ್ಕ ಗಡ್ಡಧಾರಿಯಾದ ಆತ ರಿಜಿಸ್ಟ್ರಾರ್ ಆಫೀಸಿನಲ್ಲಿ ಒಬ್ಬ ಗುಮಾಸ್ತ.

ನಲವತ್ತು ವರ್ಷಗಳು ದಾಟುವವರೆಗೆ ಅವನಿಗೆ ತನ್ನ ಶಕ್ತಿಯ ಅರಿವಿರಲಿಲ್ಲ. ಒಂದು ದಿನ ರಾತ್ರಿ ಆ ಬಿಲ್ಡಿಂಗಿನಲ್ಲಿ ಕರೆಂಟ್ ಹೋಗಿದ್ದರಿಂದ ಕತ್ತಲೆಯಲ್ಲಿ ಅವನು ಗಾಬರಿಯಿಂದ ಅತ್ತಿತ್ತ ತಿರುಗಾಡಿದ. ಕರೆಂಟ್ ಬಂದನಂತರ ನೋಡಿದರೆ ಬಿಲ್ಡಿಂಗಿನ ಆ ಕೊನೆಯಲ್ಲಿರುವ ತನ್ನ ಕೋಣೆಯಲ್ಲಿರಬೇಕಾದ ತಾನು ಈ ಕೊನೆಯ ವರಾಂಡದೊಳಕ್ಕೆ ಬಂದಿರುವುದನ್ನು ಗಮನಿಸಿದ. ತನ್ನ ಕೋಣೆಯ ಬಾಗಿಲು ಒಳಗಿನಿಂದ ಬೀಗ ಹಾಕಿಕೊಂಡಿದುದರಿಂದ ತಾನು ಗೋಡೆಯೊಳಗಿಂದ ನಡೆದು ಬಂದಿರುವುದು ಅವನಿಗೆ ಖಾತ್ರಿಯಾಯಿತು. ಈ ವಿಚಿತ್ರ ಶಕ್ತಿಯ ಬಗೆಗೆ ಚಿಂತಿಸಲು ಮರುದಿನ [illegible] ಮಧ್ಯಾಹ್ನದವರೆಗೆ ಮಾತ್ರ ಆಫೀಸು ಇದ್ದುದರಿಂದ [illegible] ಡಾಕ್ಟರರ ಹತ್ತಿರ ಹೋದ. ದ್ಯುತಿಯುಲ್ ಹೇಳುವುದು [illegible] ಎಂದು ಅರಿತ ನಂತರ ಆ ಡಾಕ್ಟರ್ ಅವನನ್ನು ಪರೀಕ್ಷಿಸಿ ಈ ಶಕ್ತಿಗೆ ಕಾರಣ ಥೈರಾಯಿಡ್ ಗ್ರಂಥಿಯ ಒಳಭಾಗ ಗಟ್ಟಿಗೊಂಡಿರುವುದು ಎಂದು ಅಭಿಪ್ರಾಯಪಟ್ಟ. ಇದನ್ನು ನಿವಾರಿಸಲು ಹೆಚ್ಚಿಗೆ ಶ್ರಮಿಸಬೇಕೆಂದೂ ಹೇಳಿದ. ದಿನಕ್ಕೆರಡರಂತೆ ತೆಗೆದುಕೊಳ್ಳಲು ಹೇಳಿ ಕೆಲವು ಮಾತ್ರೆಗಳನ್ನು ಕೊಟ್ಟು ಕಳುಹಿಸಿದ.

ಒಂದು ಮಾತ್ರೆ ಬಾಯಿಗೆ ಹಾಕಿಕೊಂಡು ಉಳಿದವುಗಳನ್ನು ಡ್ರಾದಲ್ಲಿ ಹಾಕಿ ಸುಮ್ಮನಾಗಿಬಿಟ್ಟ, ದ್ಯುತಿಯುಲ್. ಇನ್ನು ಕೆಲಸದ ಬಗೆಗೆ ಹೇಳಬೇಕೆಂದರೆ ಅವನು ಸರಕಾರಿ ನೌಕರ. ಹೆಚ್ಚಿಗೆ ಶ್ರಮಿಸಬೇಕಾದ ಅಗತ್ಯವೇ ಇಲ್ಲ ಅವನಿಗೆ. ಏನೋ ನಾಲ್ಕು ಫೈಲು ಬರೆದು ಬಿಟ್ಟರಾಯಿತು. ಬಿಡುವಿನ ಸಮಯದಲ್ಲಿ ಅವನು ಪತ್ರಿಕೆಗಳನ್ನು ಓದುತ್ತಿದ್ದ. ಅಂಚೆಚೀಟಿ ಸಂಗ್ರಹಿಸುತ್ತಿದ್ದ. ವ್ಯಾಯಾಮ, ಆಟ ಅವನಿಗೆ ಗೊತ್ತಿಲ್ಲದ ಪದಗಳು. ಹೀಗಾಗಿ ವರ್ಷ ಕಳೆದರೂ ಗೋಡೆಯೊಳಗಿಂದ ನಡೆಯುವ ಶಕ್ತಿ ಅವನಲ್ಲಿ ಹಾಗೆಯೇ ಉಳಿದುಬಿಟ್ಟಿತು. ಆದರೆ ಬೇಕೆಂದು ಅವನೆಂದೂ ತನ್ನ ಶಕ್ತಿಯನ್ನು ಪ್ರಯೋಗಿಸಲಿಲ್ಲ. ಅವನಿಗೆ ಅಸಾಧಾರಣ ಕಾರ್ಯಗಳನ್ನು ಮಾಡಬೇಕೆಂಬ ಯೋಚನೆಯೂ ಇದ್ದಿಲ್ಲ. ಕನಿಷ್ಠ, ಬೀಗ ತೆಗೆಯದೆ ತನ್ನ ಕೋಣೆಯೊಳಗೆ ಹೋಗಬೇಕೆಂಬ ಯೋಚನೆ ಕೂಡ ಅವನಿಗೆ ಹೊಳೆದಿರಲಿಲ್ಲ.

ಅವನ ಆಫೀಸಿಗೆ ಆಫೀಸರ್ ಲೆಕೂಯೇ ಹೊಸದಾಗಿ ಬಂದ [illegible]

ಕೊಡುತ್ತಿದ್ದ. ಮುಖ್ಯವಾಗಿ ಮೇಲಾಧಿಕಾರಿ ಗಳಿಗೆ ಇವನು ಬರೆಯುವ ಪತ್ರಗಳ ಪದ್ಧತಿ ಆತ ನಿಗೆ ಹಿಡಿಸುತ್ತಿರಲಿಲ್ಲ. ತನ್ನ ಪದ್ಧತಿಯನ್ನು ಬದಲಾಯಿಸಿಕೊಳ್ಳುವುದು ದ್ಯುತಿಯ್ಯಲ್‌ಗೂ ಸುತರಾಂ ಇಷ್ಟವಿದ್ದಿಲ್ಲ. ಅದರಿಂದಾಗಿ ಆಫೀಸರ್ ಮಾತು ಮಾತಿಗೂ ದ್ಯುತಿಯ್ಯಲ್‌ನ ಮೇಲೆ ರೇಗುತ್ತಿದ್ದ. ಕೊನೆಗೆ ತನ್ನ ಮಾತು ಕೇಳದ ದ್ಯುತಿಯ್ಯಲ್‌ನ ಸೀಟನ್ನು ತನ್ನ ರೂಮ್ ಪಕ್ಕದಲ್ಲಿದ್ದ ಕತ್ತಲೆ ಗುಹೆಯಂತಹ ಕೋಣೆಗೆ ಬದಲಾಯಿಸಿದ. ಆ ಕೋಣೆಯ ಬಾಗಿಲ ಮೇಲೆ "ಸ್ಟೋರ್ ರೂಮ್" ಎಂದು ದೊಡ್ಡ ಅಕ್ಷರಗಳಲ್ಲಿ ಬರೆದ ಫಲಕವಿತ್ತು. ಇದಕ್ಕೆ ಕೂಡ ದ್ಯುತಿಯ್ಯಲ್ ಸುಮ್ಮನಾದ. ಮನೆಯಲ್ಲಿ ಪೇಪರ್ ನೋಡುವಾಗ ಅದರಲ್ಲಿ ಯಾವು ದಾದರೂ ಘೋರ ಅಪಘಾತದ ಬಗೆಗೋ ಕೊಲೆಯ ಬಗೆಗೋ ಓದಿದಾಗ, ಅದರಲ್ಲಿ ಸತ್ತ ವನನ್ನು ತನ್ನ ಆಫೀಸರ್ ಆಗಿ ಊಹಿಸಿಕೊಂಡು ಆನಂದಿಸುತ್ತಿದ್ದ.


ಒಂದು ದಿನ ದ್ಯುತಿಯ್ಯಲ್ ಬರೆದ ಫೈಲ್ ಹಿಡಿದುಕೊಂಡು ಬಿರುಗಾಳಿಯಂತೆ ಆ ಸ್ಟೋರ್ ರೂಮ್‌ನೊಳಗೆ ಬಂದ ಆ ಆಫೀಸರ್, "ಈ ಲೆಟರ್‌ನ ಮತ್ತೆ ಬರೆ. ನನ್ನ ಡಿಪಾರ್ಟ್‌ಮೆಂಟ್ ಅನ್ನು ತಲೆ ತಗ್ಗಿಸುವಂತೆ ಮಾಡುವ ಹಾಗಿದೆ ಇದು. ಇದನ್ನು ಓದುವು ದಕ್ಕೇ ಅಸಹ್ಯವಾಗ್ತಿದೆ. ಛೀ ಛೀ" ಎನ್ನುತ್ತಾ ನಾನಾ ರೀತಿಯಾಗಿ ಬೈದ. ಅದರಲ್ಲಿ ತಪ್ಪು ಗಳೇನೂ ಇಲ್ಲವೆಂದೂ, ಎರದಿನಿಂದಲೂ ತಾನು ಹಾಗೆ ಬರೆಯುತ್ತಲೇ ಇದ್ದೇನೆಂದೂ ದ್ಯುತಿಯ್ಯಲ್ ಹೇಳಹೋದರೂ, ಆತ ಅದೇ ನನ್ನೂ ಕೇಳಿಸಿಕೊಳ್ಳದೆ ಏನೇನೂ ಅರಚ ಕೊನೆಗೆ ಆ ಕಾಗದವನ್ನು ಉಂಡೆ ಕಟ್ಟಿ ಅವನ ಮುಖಕ್ಕೆಸೆದು ಹೊರಟು ಹೋದ.

ದ್ಯುತಿಯ್ಯಲ್ ಎಷ್ಟೇ ವಿನಯವಂತನಾಗಿ ಕಾಣಿ ಸಿದರೂ ಮಹಾ ಅಹಂಭಾವಿ. ಆ ಕತ್ತಲೆ ಕೋಣೆಯಲ್ಲಿ ಒಂಟಿಯಾಗಿ ಕುಳಿತ ಅವನಿಗೆ ಹಠಾತ್ತಾಗಿ ಒಂದು ಅದ್ಭುತ ಉಪಾಯ ಹೊಳೆ ಯಿತು. ಅವನು ತನ್ನ ಸೀಟಿನಿಂದ ಎದ್ದು, ತನ್ನ ಮತ್ತು ಆಫೀಸರ್‌ನ ಕೋಣೆಗೆ ನಡುವೆ ಇದ್ದ ಗೋಡೆಯೊಳಗೆ ನಡೆದು ತಲೆ ಮಾತ್ರ ಗೋಡೆಯ ಹೊರಗಿಟ್ಟು ನಿಂತುಕೊಂಡ.

ಲೆಕ್ಸೂಯೇ ತನ್ನ ಸೀಟಿನಲ್ಲಿ ಕುಳಿತುಕೊಂಡು ಯಾವುದೋ ಕಾಗದ ಓದುತ್ತಿದ್ದ. ಇದುವರೆ ಗಿದ್ದ ಆವೇಶಕ್ಕೆ ಅವನ ಕೈಯಲ್ಲಿನ ಪೆನ್ನು ಇನ್ನೂ ನಡುಗುತ್ತಲೇ ಇತ್ತು. ಏನೋ ತಿದ್ದು ತ್ತಿದ್ದ ಅವನಿಗೆ ತನ್ನ ಕೋಣೆಯಲ್ಲಿ ಯಾರೋ ಕೆಮ್ಮಿದಂತೆ ಭಾಸವಾಯ್ತು. ಕಣ್ಣೆತ್ತಿ ನೋಡಿದ ಅವನಿಗೆ ಟ್ರಾಫ್ ಗೋಡೆಗೆ ಅಲಂಕರಿಸಿದಂತಿ ರುವ ದ್ಯುತಿಯ್ಯಲ್‌ನ ತಲೆ ಕಾಣಿಸಿತು. ಮೇಲಾಗಿ ಅದಕ್ಕೆ ಪ್ರಾಣ ಕೂಡ ಇದೆ. ಸರಪಳಿ ಕನ್ನಡಕದ ಹಿಂದಿನ ಆ ಕಣ್ಣುಗಳಲ್ಲಿ ತನ್ನ ಮೇಲಿನ ಕ್ರೋಧ ಸ್ಪಷ್ಟವಾಗಿ ಕಾಣಿಸುತ್ತಿದೆ. ಮೇಲಾಗಿ ಅದು ಮಾತಾಡಲು ಕೂಡ ಮೊದಲು ಮಾಡಿತು.

"ಸರ್... ನೀವೊಬ್ಬ ದೊಡ್ಡ ರೋಗ್, ಸ್ಕ್ಯಾಂಡ್ರಲ್, ಕೈಲಾಗದ ಹೇಡಿ" ಎಂದಿತು. ಹೆದರಿ ಹೋದ ಲೆಕ್ಸೂಯೇ ಬಾಯಿ ತೆರೆದು ನಿಶ್ಚೇಷ್ಟನಾಗಿ ಅತ್ತಲೇ ನೋಡುತ್ತಾ ಕುಳಿತು ಬಿಟ್ಟ. ಸ್ವಲ್ಪ ಹೊತ್ತಾದ ಮೇಲೆ ಸುಧಾರಿಸಿ ಕೊಂಡು - ಸೀಟಿನಿಂದ ಎದ್ದು ಅವಸರ ದಿಂದೆಂಬಂತೆ ಸ್ಟೋರ್ ರೂಮಿಗೆ ಹೋದ. ಅಲ್ಲಿ ದ್ಯುತಿಯ್ಯಲ್ ಯಥಾಪ್ರಕಾರ ತನ್ನ ಸೀಟಿ ನಲ್ಲಿ ಶಾಂತವಾಗಿ ಶ್ರದ್ಧೆಯಿಂದ ಬರೆಯುತ್ತ ಕುಳಿತಿದ್ದ. ಅವನನ್ನೇ ನೋಡಿ ಏನನ್ನೋ ಗೊಣಗಿಕೊಂಡು ತನ್ನ ಕೋಣೆಗೆ ತಿರುಗಿ ಬಂದ ಆಫೀಸರ್.

ಬಂದು ಕುಳಿತುಕೊಂಡನೋ ಇಲ್ಲವೋ ಮತ್ತೆ ಆ ತಲೆ ಗೋಡೆಯ ಮೇಲೆ ಪ್ರತ್ಯಕ್ಷವಾಯ್ತು. "ಸಾರ್...ನೀವೊಬ್ಬ ದೊಡ್ಡ ರೋಗ್, ಸ್ಕ್ಯಾಂಡ್ರಲ್, ಕೈಲಾಗದ ಹೇಡಿ" ಎನ್ನುತ್ತಾ. ಆ ರೀತಿ ಆ ದಿನವೆಲ್ಲಾ ಕನಿಷ್ಠ ಇಪ್ಪತ್ತಾರು ಸಲ ವಾದರೂ ಆ ತಲೆ ಹಾಗೆ ಭಯಂಕರವಾಗಿ ಕಾಣಿಸಿಕೊಂಡು ಬೈಯುತ್ತಲೇ ಇತ್ತು. ದ್ಯುತಿ ಯ್ಯಲ್ ಹಾಗೆ ಸುಮ್ಮನೆ ಬೈಯುವುದರಲ್ಲೇ ತೃಪ್ತಿ ಪಡದೆ, ಅದಕ್ಕೆ ಬೆದರಿಕೆಗಳು, ವಿಕಟಾಟ್ಟ ಹಾಸಗಳು, ಕರ್ಕಶವಾಗಿ ಧ್ವನಿ ಬದಲಾಯಿಸು ವುದನ್ನು ಕೂಡ ಜೋಡಿಸಿದ. ಇದರಿಂದಾಗಿ ಆಫೀಸರ್ ಬಿಳಿಚಿಕೊಂಡ. ಉಸಿರಾಡುವುದು ಕಷ್ಟವಾಯ್ತು. ಕೂದಲು ನೆಟ್ಟಗೆ ನಿಮಿರಿ ನಿಂತವು. ಮೈಯೆಲ್ಲಾ ಬೆವರು ಹರಿದು ಹರಿಯಿತು.



ಮೊದಲನೇ ದಿನ ಆ ಆಫೀಸರ್ [illegible] [illegible] ತೂಕವಿಳಿದ. ವಾರ ಕಳೆಯುವಷ್ಟರಲ್ಲಿ ಸೊರಗುವುದಷ್ಟೇ ಅಲ್ಲದೆ ಪೋಲೀಸರಿಗೆ ನಮಸ್ಕಾರ ಮಾಡುವುದು. ಸಾರನ್ನು ಫೋರ್ಕಿನಿಂದ ತಿನ್ನಲು ಪ್ರಯತ್ನಿಸುವುದೇ ಮೊದಲಾದ ಹುಚ್ಚು ಚೇಷ್ಟೆ ಪ್ರಾರಂಭಿಸಿದ. ಎರಡನೇ ವಾರದ ಕೊನೆಗೆ ಅವನಿಗೆ ಆಫೀಸಿನ ಬದಲು ಹುಚ್ಚಾಸ್ಪತ್ರೆಗೆ ಹೋಗುವ ಪರಿಸ್ಥಿತಿಯುಂಟಾಯ್ತು.

ರೆಕೂಯೇನ ಪೀಡೆ ತಪಿದ ದುತಿಯುಲ್ [illegible] ಆಫೀಸಿನಲ್ಲಿ ತನ್ನ ಮಾಮೂಲು ಫೋರಗೆಯಲ್ಲಿ "[illegible] ಇಂತಹ [illegible] ಬರೆದ ಪತ್ರಕ್ಕೆ ಉತ್ತರವಾಗಿ..." ಎನುತ್ತಾ ಮೇಲಾಧಿಕಾರಿಗಳಿಗೆ ಪ್ರತ್ಯುತ್ತರ ಬರೆಯಲು ಮೊದಲು ಮಾಡಿದ. ಆದರೆ ಕೆಲವು ಕಾಲ ಗೋಡೆಯೊಳಗಿಂದ ಹೋಗುವ ರೂಢಿಯಾದ ಅವನಿಗೆ ಆ ವಿದ್ಯೆಯನ್ನು ಅರ್ಥಪೂರ್ಣವಾಗಿ ಉಪಯೋಗಿಸದಿರುವುದು ಅಸಂತೃಪ್ತಿಯನ್ನುಂಟುಮಾಡಿತು. ಏನಾದರೂ [illegible] ಬೇಕು ಎನುವ ತವಾತವ [illegible] [illegible] ಏದೆ ಮಾಡಲು ಬಿಡಲಿಲ್ಲ.

[illegible]

ವನ್ನು ಒಂದು ಸೂಪರ್ ಬಜಾರಿನಲ್ಲಿ ಮಾಡಿದ. ಒಂದು ಡಜನ್ ಗೋಡೆಗಳೊಳಗಿಂದ ತೂರುತ್ತಾ ಹೋಗಿ, ಅಲ್ಲಿನ ಕಬ್ಬಿಣದ ತಿಜೋರಿಗಳಲ್ಲಿ ನುಗ್ಗಿ ನೋಟಿನ ಕಂತೆಗಳನ್ನು ಜೇಬಿನಲ್ಲಿ ತುಂಬಿಕೊಂಡು ಬರುವ ಮೊದಲು ಅಲ್ಲಿನ ಗೋಡೆಯ ಮೇಲೆ ಕೆಂಪು ಸುಣ್ಣದಿಂದ ತನ್ನ ಅಂದವಾದ ಕೈ ಬರಹದಲ್ಲಿ "ವರ್‌ವುಲ್ಫ್" ಎಂದು ಬರೆದು ಬಂದ. ಮರುದಿನ ಆ ಸಹಿಯನ್ನು ಎಲ್ಲಾ ಪೇಪರ್‌ಗಳಲ್ಲೂ ಯಥಾವತ್ ಅಚ್ಚು ಮಾಡಿದರು. ವಾರ ಕಳೆಯುವಷ್ಟರಲ್ಲಿ "ವರ್‌ವುಲ್ಫ್"ಗೆ ಹೇಳಲಾಗದಷ್ಟು ಪ್ರಸಿದ್ಧಿ ಬಂತು. ಪೊಲೀಸರಿಗೆ ದೊರಕದೆ ಅವನು ಮಾಡುವ ಕಳ್ಳತನಗಳು ಪ್ರಜೆಗಳಲ್ಲಿ ರೋಮಾಂಚನೆಯನ್ನುಂಟು ಮಾಡಿದವು. ಪ್ರತಿ ರಾತ್ರಿ ಅವನು ಯಾವುದೊಂದು ಬ್ಯಾಂಕನ್ನೋ ಆಭರಣದ ಅಂಗಡಿಯನ್ನೋ, ಧನವಂತನನ್ನೋ ದೋಚುತ್ತಿದ್ದ. ಊಹಾಲೋಕದಲ್ಲಿ ವಿಹರಿಸುವ ಪ್ರತಿ ಯುವತಿ ಅವನನ್ನು ತನ್ನ ಪ್ರಿಯಕರನಾಗಿ ಭಾವಿಸುತ್ತಿದ್ದಳು. ಆ ವಾರದಲ್ಲೇ ಆತ ಅತಿ ಬೆಲೆಯ ವಜ್ರಗಳನ್ನೂ ಕಿರೀಟವನ್ನೂ ಕದ್ದ. ಪ್ರಜೆಗಳು ರೊಚ್ಚಿಗೆದ್ದರು. ರಾಷ್ಟ್ರೀಯ ಭದ್ರತಾ ಮಂತ್ರಿ ತನ್ನ ಅಸಹಾಯಕತೆಗೆ ಚಿಂತಿಸುತ್ತಾ ರಾಜೀನಾಮೆ ನೀಡಿದ.

ಪ್ಯಾರಿಸ್ಸಿನ ಕೋಟೀಶ್ವರರಲ್ಲಿ ಒಬ್ಬನಾಗಿಬಿಟ್ಟಿದ್ದ ದ್ಯುತಿಯ್ಯಲ್ ಆಫೀಸಿಗೆ ಸರಿಯಾಗಿ ಬರುತ್ತಿದ್ದ. ಪ್ರತಿ ದಿನ ಕಳೆದ ರಾತ್ರಿ ತಾನು ಮಾಡಿದ ಕಳ್ಳತನದ ಬಗೆಗೆ ಎಲ್ಲರೂ ಮಾತಾಡಿಕೊಳ್ಳುವುದನ್ನು ಕೇಳುತ್ತಿದ್ದ. "ಈ ವರ್‌ವುಲ್ಫ್ ಯಾರೋ ಏನೋ, ಮಹಾ ಅಸಾಧ್ಯ. ಸೂಪರ್‌ಮ್ಯಾನ್, ಮೇಧಾವಿ" ಎಂದುಕೊಳ್ಳುವುದನ್ನು ಕೇಳಿ ಉಬ್ಬುತ್ತಿದ್ದ. ಹೊಗಳಿಕೆಗಳನ್ನು ಕೇಳಿದಾಗ ಅವನ ಮುಖ ನಾಚಿಕೆಯಿಂದ ಕೆಂಪೇರುತ್ತಿತ್ತು. ಅವನ ಕಣ್ಣು ಆದರಭಾವದಿಂದ, ಕೃತಜ್ಞತೆಯಿಂದ ಹೊಳೆಯುತ್ತಿದ್ದವು.

ಫ್ರಾನ್ಸ್ ಬ್ಯಾಂಕಿನಲ್ಲಿಯ ದರೋಡೆಯ ಬಗೆಗೆ ಓದುತ್ತಾ ಪೇಪರ್ ಸುತ್ತಲೂ ಅವನ ಸಹೋದ್ಯೋಗಿಗಳು ಗುಂಪುಗೂಡಿದಾಗ ಹೆಮ್ಮೆಯಿಂದ "ನಾನೇ ಆ ವರ್‌ವುಲ್ಫ್" ಎಂದುಬಿಟ್ಟ ದ್ಯುತಿಯ್ಯಲ್.

ಎಲ್ಲರೂ ಒಂದು ಕ್ಷಣ ಅವಾಕ್ಕಾಗಿ ಬಿಟ್ಟರು. ಅವನು ಹೇಳಿದ್ದು ಅರ್ಥವಾದೊಡನೆಯೇ ಜೋರಾಗಿ ಹೊಟ್ಟೆ ಹುಣ್ಣಾಗುವಂತೆ ಬಿದ್ದು ಬಿದ್ದು ಒಬ್ಬರೊಂದಿಗೊಬ್ಬರು ಹೇಳಿಕೊಳ್ಳುತ್ತಾ ಅವನನ್ನು ನೋಡಿ ಹೀಯಾಳಿಕೆಯಿಂದ ನಕ್ಕರು. ಆ ದಿನವೆಲ್ಲಾ ಅವನ ಮೇಲೆ ಜೋಕ್ ಹೇಳುತ್ತಲೇ ಇದ್ದರು. ಮನೆಗೆ ಹೋಗುವವರೆಗೂ ಅವನನ್ನು ಮುಟ್ಟಿನೋಡಿ ಪರಿಹಾಸ್ಯದಿಂದ ನಗುತ್ತಲೇ ಇದ್ದರು. ದ್ಯುತಿಯ್ಯಲ್‌ನಿಗೆ ಬೇಸರವೆನಿಸಿತು ಅವರ ವರ್ತನೆ.

ಕೆಲವು ದಿನಗಳ ನಂತರ ಒಂದು ಆಭರಣದ ಅಂಗಡಿಯಲ್ಲಿ ಕಳ್ಳತನ ಮಾಡುತ್ತಿರುವಾಗ ಸಿಕ್ಕಿಬಿದ್ದ "ವರ್‌ವುಲ್ಫ್". ತನ್ನನ್ನು ಹಿಡಿದುಕೊಂಡ ಪೊಲೀಸ್ ಸುತ್ತಲೂ ಡ್ಯಾನ್ಸ್ ಮಾಡುತ್ತಾ ಹಾಡುತ್ತಿದ್ದ ದ್ಯುತಿಯ್ಯಲ್. ಅವನು ಬಯಸಿದರೆ ಗಾಜಿನ ಬಾಗಿಲೊಳಗಿಂದ ತೂರಿಕೊಂಡು ಪಾರಾಗಬಲ್ಲ. ಆದರೆ ಆಫೀಸಿನಲ್ಲಿ ತನ್ನನ್ನು ಅವಮಾನಿಸಿದವರು ತಾನೇ "ವರ್‌ವುಲ್ಫ್" ಎಂದು ಗುರುತಿಸಿ ಆಶ್ಚರ್ಯಪಡುವಂತೆ ಮಾಡಬೇಕೆನಿಸಿತು.

ಮರುದಿನ ಪೇಪರ್‌ಗಳಲ್ಲಿ ಮೊದಲನೇ ಪುಟದಲ್ಲಿ ಅವನ ಫೋಟೋ ಪ್ರಕಟವಾಯ್ತು. ಅದರ ಕೆಳಗೆ "ಇಷ್ಟು ದಿನ ಪೊಲೀಸರಿಗೆ ಸಿಕ್ಕದಿದ್ದ 'ವರ್‌ವುಲ್ಫ್' ಇವನೇ" ಎಂದು ಬರೆದಿತ್ತು. ಅದನ್ನು ನೋಡಿದ ಅವನ ಸ್ನೇಹಿತರು ಬೆರಗಾದರು. ಅವನನ್ನು ಕೀಳಾಗಿ ಕಂಡಿದ್ದಕ್ಕೆ ನೊಂದುಕೊಂಡು ಗಡ್ಡ ಕೂಡ ಬೆಳೆಸಿದರು.

ತನ್ನ ಸ್ನೇಹಿತರ ಮೇಲಿನ ಪ್ರತೀಕಾರಕ್ಕೋಸ್ಕರ ಪೊಲೀಸರಿಗೆ ಸಿಕ್ಕಿಬಿದ್ದ ದ್ಯುತಿಯ್ಯಲ್ ಜೈಲಿನಲ್ಲಿ ಮತ್ತಷ್ಟು ಗಮ್ಮತ್ತುಗಳನ್ನು ಮಾಡಿದ. ಅಗಲವಾಗಿದ್ದ ದಪ್ಪವಾದ ಗೋಡೆಗಳೊಳಗಿಂದ ಹೋಗುವುದು ಅವನಿಗೆ ತುಂಬಾ ತಮಾಷೆಯಾಗಿತ್ತು. ಅವನನ್ನು ಜೈಲಿನಲ್ಲಿಟ್ಟ ಎರಡನೇ ದಿನ ಅವನ ಗೋಡೆಗೆ ಒಂದು ಮೊಳೆ ಅದಕ್ಕೆ ವಾರ್ಡನ್‌ರವರ ಬಂಗಾರದ ರಿಸ್ಟ್‌ವಾಚ್ ನೋಡಿದ ಗಾರ್ಡ್‌ಗಳಿಗೆ ಮತಿಭ್ರಮಣೆಯಾದಂತಾಯ್ತು. ಅದು ತನ್ನ ಕೋಣೆಯೊಳಗೆ ಹೇಗೆ ಬಂತೆಂದು ದ್ಯುತಿಯ್ಯಲ್ ಹೇಳಲಿಲ್ಲ. ಗಾರ್ಡ್‌ಗಳು ಆ ವಾಚನ್ನು ವಾರ್ಡನ್‌ಗೆ ಕೊಟ್ಟರೂ ಮರುದಿನ ಅವರೊಂದಿಗೆ "ದಿ ಥಿ

ಮಿಸ್ಟಿರಿಯರ್ಸ್" ಪುಸ್ತಕವೂ ಅವನ ಕೋಣೆಯಲ್ಲಿ ಪ್ರತ್ಯಕ್ಷವಾದವು. ಜೈಲಿನವರಿಗೆ ಈ ಚಿತ್ರಗಳು ಅರ್ಥವಾಗಲಿಲ್ಲ. ಅಷ್ಟೇ ಅಲ್ಲ, ಗಾರ್ಡ್‌ಗಳು ತಮ್ಮನ್ಯಾರೋ ಒದೆಯುತ್ತಿದ್ದಾರೆಂದೂ, ಆ ಕಾಲುಗಳೆಲ್ಲಿಂದ ಬರುತ್ತಿವೆಯೋ ತಿಳಿಯದೆಂದೂ ಫಿರ್ಯಾದು ಮಾಡಿದರು. ಗೋಡೆಗಳಿಗೆ ಕಿವಿಗಳಿರುತ್ತವೆಯೆನ್ನುವರಾದರೂ, ಕಾಲುಗಳಿರುವುದು ವಿಪರೀತವೆಂದು ಬೆರಗಾದರು.

ದ್ಯುತಿಯ್ಯಲ್ ಜೈಲಿಗೆ ಬಂದು ವಾರ ಕಳೆಯುತ್ತಿದೆನ್ನುವಾಗ, ಒಂದು ದಿನ ಬೆಳಿಗ್ಗೆಯೇ ವಾರ್ಡನ್ ತನ್ನ ಕೋಣೆಯಲ್ಲಿ ಬರುವಷ್ಟರಲ್ಲಿ, ಮೇಜಿನ ಮೇಲೆ ಒಂದು ಪತ್ರ ಕಾಣಿಸಿತು.

> "ಸಾರ್... ಈ ತಿಂಗಳು 15ನೇ ತಾರೀಖು ನಮ್ಮ ನಡುವೆ ನಡೆದ ಸಂಭಾಷಣೆಯನ್ನು ಪುರಸ್ಕರಿಸಿ, 17ನೇ ತಾರೀಖು ನೀವಿತ್ತ ಆದೇಶದ ಪ್ರಕಾರ, ನಾನು ಈ ಪುಸ್ತಕದ ಎರಡನೇ ಭಾಗವನ್ನೂ ಓದುವುದು ಮುಗಿಯಿತೆಂದು ನಿಮಗೆ ಸಗೌರವದಿಂದ ತಿಳಿಯಪಡಿಸುತ್ತಿದ್ದೇನೆ. ಮತ್ತೊಂದು ವಿಷಯವೇನೆಂದರೆ ನಾನು ಈ ರಾತ್ರಿ 11-25 ರಿಂದ 11-35 ನಿಮಿಷಗಳೊಳಗಾಗಿ ಜೈಲಿನಿಂದ ತಪ್ಪಿಸಿಕೊಂಡು ಹೋಗಬೇಕೆಂದುಕೊಂಡಿದ್ದೇನೆ. ಚಿತ್ತೈಸಿರಿ,
>
> ನಿಮ್ಮ ವಿಧೇಯ,
> 'ವರ್‌ವುಲ್ಫ್'.

ಅವನ ಮೇಲೆ ಎಷ್ಟೇ ನಿಗಾ ಇಟ್ಟರೂ ಆ ರಾತ್ರಿ 11-30 ನಿಮಿಷಗಳಿಗೆ ದ್ಯುತಿಯ್ಯಲ್ ತಪ್ಪಿಸಿಕೊಂಡ. ಮರುದಿನ ಬೆಳಿಗ್ಗೆ ಈ ವಿಷಯ ಜೈಲಿನ ಹೊರಗೆ ಕೂಡ ದೊಡ್ಡ ಸುದ್ದಿಯಾಯಿತು. ಆದರೂ ದ್ಯುತಿಯ್ಯಲ್ ಯಾವ ಜಾಗ್ರತೆಯನ್ನೂ ವಹಿಸದೆ ರಸ್ತೆಯ ಮೇಲೆ ಯಥೇಚ್ಛವಾಗಿ ತಿರುಗತೊಡಗಿದ. ಅದರಿಂದಾಗಿ ತಪ್ಪಿಸಿಕೊಂಡ ಮೂರನೇ ದಿನ ತನ್ನ ಸ್ನೇಹಿತರೊಂದಿಗೆ ಕಾಫಿ ಕುಡಿಯುತ್ತಿದ್ದ ಅವನನ್ನು ಪೊಲೀಸರು ಮತ್ತೆ ಅರೆಸ್ಟ್ ಮಾಡಿದರು.

ಜೈಲಿನಲ್ಲಿ ಅವನನ್ನು ಒಂದು ಕತ್ತಲು ಕೋಣೆಯಲ್ಲಿ ಕೂಡಿ ಹಾಕಿ ಅತಿ ಭದ್ರವಾಗಿ ಮೂರು ಬೀಗಗಳನ್ನು ಜಡಿದರು ಗಾರ್ಡ್‌ಗಳು. ಆದರೆ ಆ ಸಾಯಂಕಾಲವೇ ದ್ಯುತಿಯ್ಯಲ್ ವಾರ್ಡನ್‌ರವರ ಅತಿಥಿಗೃಹದಲ್ಲಿ ನಿದ್ದೆ ಹೋದ. ಮೇಲಾಗಿ ಮರುದಿನ ಬೆಳಿಗ್ಗೆ ಒಂಭತ್ತು ಗಂಟೆಯ ಸಮಯದಲ್ಲಿ ಬೆಲ್ ಹೊಡೆದು ಕೆಲಸದಾಳನ್ನು ಕರೆದು ತನಗೋಸ್ಕರ ಊಟ ತರಲು ಆಜ್ಞಾಪಿಸಿದ. ಗಾರ್ಡ್‌ಗಳು ಬಂದು ಅವನನ್ನು ಹಿಡಿದು ಜೈಲಿನಲ್ಲಿ ತಳ್ಳಿದರು. ಅವನೇನೂ ಅಡ್ಡಿಪಡಿಸಲಿಲ್ಲ. ವಾರ್ಡನ್ ಅವನ ಚೇಷ್ಟೆಗಳಿಗೆ ಉರಿದು ಬಿದ್ದು ಅವನ ಸೆಲ್ ಹತ್ತಿರ ಬಲಿಷ್ಠನಾದ ಒಬ್ಬ ಗಾರ್ಡ್‌ನನ್ನು ನಿಯಮಿಸಿ ದ್ಯುತಿಯ್ಯಲ್‌ಗೆ ನೀರು, ರೊಟ್ಟಿ ಮಾತ್ರವೇ ಕೊಡುವ ಏರ್ಪಾಟು ಮಾಡಿದ.



"ಏನೋ ಹನುಮ, ನಿಂದೇನೋ ಡಿಮ್ಯಾಂಡ್ ಇದೆ ಅಂದ್ಯಂತೇ.... ...ಹೊಸ ಪರಕೆ ಬೇಕೇನೋ!!"

ಮಧ್ಯಾಹ್ನವಾಗುತ್ತಿರುವಾಗ ದ್ಯುತಿಯ್ಯಲ್ ಜೈಲಿಗೆ ಹತ್ತಿರದಲ್ಲಿರುವ ಹೋಟೆಲ್‌ಗೆ ಊಟ ಮಾಡಲು ಹೋದ. ಊಟವಾದ ನಂತರ ತಾಂಬೂಲವನ್ನೂ ಸೇವಿಸಿ, ವಾರ್ಡನ್‌ಗೆ ಫೋನ್ ಮಾಡಿದ, "ಹಲೋ ಸಾರ್... ನನ್ನ ಪರ್ಸ್ ತರೋದನ್ನ ಮರೆತು ಬಿಟ್ಟೆ, ಸಾರಿ! ಊಟ ಮಾಡುವುದು ಆಯಿತಾದರೂ, ಬಿಲ್ ಕೊಟ್ಟಿಲ್ಲ. ದಯವಿಟ್ಟು ನಿಮ್ಮವರಲ್ಲಿ ಯಾರನ್ನಾದರೂ ಕಳಿಸುತ್ತೀರಾ?" ಎಂದು.

ಪಾರ್ಡನ್ ಗಾಬರಿಯಾಗಿ ತಾನೇ ಆ ಹೋಟಲ್‌ಗೆ ಓಡಿ ಬಂದ. ಅಲ್ಲಿ ಆತನ ಕೋಪ ತಾರಸ್ಥಾಯಿಗೇರಿತು. ಆತ ದ್ಯುತಿಯ್ಯಲ್‌ನನ್ನು ಬಾಯಿಗೆ ಬಂದಾಗ ಹಾಗೆ ಬೈದ. ದ್ಯುತಿಯ್ಯಲ್ ಅಹಂಗೆ ಪೆಟ್ಟು ಬಿತ್ತು. ಅದರಿಂದಾಗಿ ಅವನು ಆ ರಾತ್ರಿಯೇ ಮತ್ತೆ ತಪ್ಪಿಸಿಕೊಂಡು ಹೋದ.

ಈ ಸಲ ಅವನು ಸಿಕ್ಕಿ ಬೀಳದಂತೆ ತಕ್ಕ ಜಾಗ್ರತೆ ವಹಿಸಿದ. ತನ್ನ ಚಿಕ್ಕ ಗಡ್ಡವನ್ನು ಶೇವ್ ಮಾಡಿಕೊಂಡ. ಸರಪಳಿ ಕನ್ನಡಕವನ್ನು ತೆಗೆದು ರಿಮ್ ಕನ್ನಡಕ ಧರಿಸಿದ. ಬಟ್ಟೆಗಳ ಸ್ಟೈಲ್ ಬದಲಾಯಿಸಿದ. ಮನೆ ಕೂಡ ಬದಲಾಯಿಸಿದ. ಅವನ ವೇಷದಲ್ಲಿ ಎಂತಹ ಬದಲಾವಣೆಯಾಯಿತೆಂದರೆ ತನ್ನ ಆತ್ಮೀಯ ಸ್ನೇಹಿತರ ಮಧ್ಯೆ ಕೂಡ ಅವನು ಅಪರಿಚಿತ ವ್ಯಕ್ತಿಯಾದ.

ಆದರೆ, ಹಳೆಯ ಬಿಲ್ಡಿಂಗಿನಲ್ಲಿ ಅವನ ಪಕ್ಕದ ಕೋಣೆಯಲ್ಲಿ ಇರುವ ಪೇಂಟರ್ ಜಾನ್ ಪಾಲ್ ಮಾತ್ರ ಅವನ ಗುರುತುಹಿಡಿದ. ಒಂದು ದಿನ ಬೆಳಿಗ್ಗೆಯೇ ಸಂದಿಯಲ್ಲಿ ಎದುರಾಗಿ "ವೇಷ ಚೆನ್ನಾಗಿ ಬದಲಾಯಿಸಿದ್ದೀಯಲ್ಲ. ಪೊಲೀಸರಿಗೆ ಸಿಕ್ಕಿಬೀಳದಂತೆ ಚೆನ್ನಾಗಿಯೇ ಎಚ್ಚರಿಕೆ ವಹಿಸಿದ್ದೀಯ" ಎಂದ ಅದೊಂದು ವಿಧವಾಗಿ ನೋಡುತ್ತಾ. "ಓ! ಇವನು ನನ್ನನ್ನು ಗುರುತು ಹಿಡಿದಿದ್ದಾನೆಂದಾಯ್ತು" ಎಂದು ಮೆಲ್ಲಗೆ ತನ್ನಲ್ಲಿ ತಾನೇ ಅಂದುಕೊಂಡ ದ್ಯುತಿಯ್ಯಲ್. ಈ ಘಟನೆ ನಡೆದ ಕ್ಷಣದಿಂದ ಊರು ಬಿಟ್ಟು ಹೋಗಬೇಕೆಂಬ ಆಲೋಚನೆ ಅವನಲ್ಲಿ ಬಲಗೊಳ್ಳತೊಡಗಿತ್ತು.

ಆದರೆ ಅದೇ ದಿನ ಮಧ್ಯಾಹ್ನ ಬಜಾರಿನಲಿ ಹೋಗುತ್ತಿರುವಾಗ ಅವನಿಗೊಬ್ಬ ಅಂದವಾದ ಯುವತಿ ಕಾಣಿಸಿದಳು. ಕಾಲುಗಂಟೆಯ ನಂತರ ಮತ್ತೆ ಕಾಣಿಸಿದ ಆ ಯುವತಿಯೊಂದಿಗೆ ಅವನು ಪ್ರೇಮದಲ್ಲಿ ಸಿಕ್ಕಿಬಿದ್ದ. ಆ ಯುವತಿ ಕೂಡ ಅವನನ್ನು [illegible] [illegible] [illegible] [illegible] [illegible] [illegible].

[illegible] ಬಿಡುವ ಯೋಚನೆಯನ್ನು [illegible] [illegible]

ಯಿಂದ ಶೇಖರಿಸಿದ ದ್ಯುತಿಯ್ಯಲ್. ಮರುಪಕ್ಷ ಪಶಾತ್ ಅವಳು ವಿವಾಹಿತೆ, ಅವಳ ಗಂಡ ಕ್ರೂರಿ, ಅಸೂಯಾಪರ. ಆ ಅನುಮಾನದ ವ್ಯಕ್ತಿ ಪ್ರತಿ ದಿನ ರಾತ್ರಿ ಹತ್ತು ಗಂಟೆಗೆ ಅವಳನ್ನು ಮನೆಯಲ್ಲಿ ಒಂದು ಕೋಣೆಯಲ್ಲಿ ಹಾಕಿ, ಎಲ್ಲಾ ಕಿಟಕಿಗಳನ್ನೂ ಮುಚ್ಚಿ ಹೊರಗೆ ಬೀಗ ಹಾಕಿ ಹೊರಟು ಹೋಗುತ್ತಿದ್ದ. ಮತ್ತೆ ಬೆಳಗಿನ ಜಾವ ನಾಲ್ಕು ಗಂಟೆಗಳವರೆಗೆ ಬರುತ್ತಿರಲಿಲ್ಲ. ಹಗಲೆಲ್ಲಾ ಅವಳು ಏನು ಮಾಡುತ್ತಾಳೆಂದು ನಿಗಾ ಇಟ್ಟಿರುತ್ತಿದ್ದ. ಒಂದೊಂದು ಸಲ ಬಜಾರಿನಲ್ಲಿ ಕೂಡ ಅವಳ ಹಿಂದೆಯೇ ತಿರುಗುತ್ತಿರುತ್ತಾನೆಂದೂ ಗೊತ್ತಾಯಿತು.

ಇವೆಲ್ಲಾ ಕೇಳಿದ ದ್ಯುತಿಯ್ಯಲ್‌ಗೆ ಅವಳ ಮೇಲೆ ಮತ್ತಷ್ಟು ಇಷ್ಟವುಂಟಾಯ್ತು. ಮರುದಿನ ಬಜಾರಿನಲ್ಲಿ ಅವಳ ಹಿಂದೆಯೇ ಹೋದ. ಅವಳು ಒಂದು ಅಂಗಡಿಯೊಳಗೆ ಹೋದಾಗ, ತಾನೂ ಹೋಗಿ ತನ್ನ ಪವಿತ್ರ ಪ್ರೇಮದ ಬಗೆಗೆ ಹೇಳಿದ. ಅವಳ ಗಂಡ ಕೆಟ್ಟವನೆಂದೂ, ಬಾಗಿಲಿಗೆ ಬೀಗ ಹಾಕುತ್ತಾನೆಂಬುದು ತನಗೆ ಗೊತ್ತೆಂದೂ, ಆದರೂ ಆ ಸಾಯಂಕಾಲ ಅವಳನ್ನು ಅವಳ ಕೋಣೆಯಲ್ಲಿ ಭೇಟಿಯಾಗುತ್ತೇನೆಂದು ಹೇಳಿದ. ಅವಳು ನಾಚಿಕೊಂಡಳು. ಆರ್ದ್ರತೆಯಿಂದ ಅವಳ ಕಣ್ಣು ಹನಿಗೂಡಿದವು. "ನೀನು ನನ್ನ ಕೋಣೆಗೆ ಬರುವುದು ಅಸಾಧ್ಯ" ಎಂದು ಆತ್ಮೀಯತೆಯಿಂದ ಅವನನ್ನು ನೋಡುತ್ತಾ ನುಡಿದಳು.

ಆ ರಾತ್ರಿ ಹತ್ತು ಗಂಟೆಗೆ ದ್ಯುತಿಯ್ಯಲ್ ನೋರ್ವಾ ರಸ್ತೆಯ ಮೇಲೆ ದಾರಿಕಾಯುತ್ತ ನಿಂತುಕೊಂಡ. ಅಲ್ಲೊಂದು ಪ್ರಹರೀಗೋಡೆಯಿತ್ತು. ಅದರ ಹಿಂದಿರುವ ಮನೆಯ ಹೊಗೆಗೊಳವೆ ಮಾತ್ರ ಅವನಿಗೆ ಕಾಣಿಸುತ್ತಿತ್ತು. ಅಷ್ಟರಲ್ಲಿ [illegible] [illegible] [illegible] ಬೀಗ ಹಾಕಿ, ಕೀಲಿಕೈ ಜೇಬಿನಲ್ಲಿ ಹಾಕಿಕೊಳ್ಳುತ್ತಾ ಹೊರಟು ಹೋದ. [illegible] ಕಣ್ಮರೆಯಾಗುವವರೆಗೆ ನೋಡಿ, ದ್ಯುತಿಯ್ಯಲ್ [illegible] [illegible] [illegible] ಹಾದು ಹೋಗಿ ಬಂದಿಯಾಗಿದ್ದ ತನ್ನ ಪ್ರೇಯಸಿಯನ್ನು ಭೇಟಿಯಾದ.

ಮರುದಿನ ಅವನಿಗೆ ತದ್ವಿರುದ್ಧವಾಗಿದ್ದ [illegible] ನೋಟವುಂಟಾಯಿತು. ಮೇಜಿನ [illegible]

ಮಾತ್ರೆಗಳನ್ನು ಬೆಳಿಗ್ಗೆ ಒಂದು, ಮಧ್ಯಾಹ್ನ ಒಂದು ಬಾಯಿಗೆ ಹಾಕಿಕೊಂಡ. ಸಾಯಂಕಾಲಕ್ಕೆ ಅವನ ತಲೆನೋವು ಸಾಕಷ್ಟು ಕಡಿಮೆಯಾಯ್ತು. ತನಗೋಸ್ಕರ ಎದುರು ನೋಡುವ ಪ್ರೇಯಸಿಯ ನೆನಪು ಅವನನ್ನು ವಿಶ್ರಾಂತಿ ತೆಗೆದುಕೊಳ್ಳಲೂ ಬಿಡಲಿಲ್ಲ. ಆ ದಿನ ರಾತ್ರಿ ಕೂಡ ಅವಳನ್ನು ಭೇಟಿಯಾಗಿ, ಬೆಳಿಗ್ಗೆ ಮೂರು ಗಂಟೆಯವರೆಗೂ ಅಲ್ಲಿಯೇ ಕಳೆದ ದ್ಯುತಿಯ್ಯಲ್.

ಹೊರ ಬರುವಾಗ ಅವನಿಗೆ ಗೋಡೆಗಳು ತನ್ನ ಭುಜಗಳಿಗೆ, ಕಾಲುಗಳಿಗೆ ತೀಡುತ್ತಿರುವಂತೆ ಭಾಸವಾಯ್ತು. ಆದರೂ ಅವನು ಅದನ್ನು ಅಷ್ಟಾಗಿ ಲೆಕ್ಕಿಸಲಿಲ್ಲ. ತೀರಾ ಅಗಲವಾದ ಪ್ರಹರೀ ಗೋಡೆಯೊಳಗೆ ಕಾಲಿಟ್ಟೊಡನೆಯೇ ಅದು ಘನೀಭವಿಸುತ್ತಿರುವ ದ್ರಾವಣದಂತೆಯೂ, ಹೆಜ್ಜೆ ಹೆಜ್ಜೆಗೂ ಅದು ತನ್ನ ಸುತ್ತಲೂ ಗಟ್ಟಿಗೊಳ್ಳುತ್ತಿರುವಂತೆಯೂ ಭಾಸವಾಯ್ತು. ಅವನು ಪೂರ್ತಿಯಾಗಿ ಗೋಡೆಯೊಳಗೆ ಬಂದೊಡನೆಯೇ ಅದು ಕಲ್ಲಾಗಿ ಬಿಟ್ಟಿತು. ಅವನಿಂದ ಒಂದು ಹೆಜ್ಜೆ ಕೂಡ ಕದಲಿಸಲಾಗಲಿಲ್ಲ. ಅಲ್ಲಿಯವರೆಗೆ ಅವನಿಗೆ ತಾನು ಆ ಬೆಳಿಗ್ಗೆ, ಮಧ್ಯಾಹ್ನ ಬಾಯಿಗೆ ಹಾಕಿಕೊಂಡ ಮಾತ್ರೆಗಳು ನೆನಪಿಗೆ ಬರಲಿಲ್ಲ. ಈಗ ಏನು ಅವನು ಹೆದರಿಬಿಟ್ಟ. ಏನೋ ಆಸ್ಪಿರಿನ್ ಎಂದುಕೊಂಡು ಹಾಕಿಕೊಂಡ ಆ ಮಾತ್ರೆಗಳು ಅದೇನೋ ತಾನ ಮಾಮೂಲು ವ್ಯಕ್ತಿಯಾಗಲು ಡಾಕ್ಟರ್ ಕೊಟ್ಟ ಮಾತ್ರೆಗಳೆಂದು ನೆನಪಾಗಿ ಅವನಿಗೆ ಎದೆಬಡಿತ ನಿಂತಂತಾಯ್ತು. ಆ ಔಷಧ ಅದಕ್ಕೆ ಜೊತೆಯಾಗಿ ಬಳಲಿಕೆ ಅವನನ್ನು ಆ ಗೋಡೆಯಲ್ಲಿ ಬಂಧಿಸಿಬಿಟ್ಟವು.

ದ್ಯುತಿಯ್ಯಲ್ ಆ ಗೋಡೆಯಲ್ಲಿ ಸಮಾಧಿಯಾಗಿ ಇವತ್ತಿಗೂ ಅಲ್ಲಿಯೇ ಇದ್ದಾನೆ. ಪ್ಯಾರಿಸ್ಸಿನಲ್ಲಿ ಗಡಿಬಿಡಿ ಕಡಿಮೆಯಾಗಿ, ಪ್ರಶಾಂತ ವಾತಾವರಣವೇರ್ಪಟ್ಟ ನಂತರ ನೋರ್ವಾ ರಸ್ತೆಯ ಮೇಲೆ ತಿರುಗಾಡುವವರಿಗೆ ತನ್ನ ಪ್ರೇಮವನ್ನೂ ಜೀವನವನ್ನೂ ನೆನೆಸಿಕೊಂಡು ದ್ಯುತಿಯ್ಯಲ್ ಪಡುವ ಬಾಧೆ ಯಾವುದೋ ಸಮಾಧಿಯೊಳಗಿಂದ ಬರುತ್ತಿರುವ ಅಳುವಿನಂತೆ ಕೇಳಿಸುತ್ತದೆ. ಆದರೆ ಅವರು ಅದನ್ನು ಗಾಳಿ ಹಾಕುತ್ತಿರುವ ಸಿಳ್ಳೆಂದುಕೊಳ್ಳುತ್ತಾರೆ. ಒಂದೊಂದು ಸಲ ಚಳಿ ರಾತ್ರಿಗಳಲ್ಲಿ ಜಾನ್‌ಪಾಲ್ ತನ್ನ ಗಿಟಾರ್ ತೆಗೆದುಕೊಂಡು ನಿರ್ಜನವಾದ ನೋರ್ವಾ ರಸ್ತೆಯ ಮೇಲೆ ಅಲ್ಲಿಯ ಬಂಧಿಯನ್ನು ಸಮಾಧಾನಪಡಿಸುತ್ತಾ ಹಾಡುಗಳನ್ನು ಹಾಡುತ್ತಾನೆ. ಆ ಸ್ವರಗಳು ಚಳಿಗೆ ಸೆಟೆದುಕೊಳ್ಳುತ್ತಿರುವ ಅವನ ಬೆರಳುಗಳಿಂದ ಪ್ರವಹಿಸಿ, ಬೆಳದಿಂಗಳು ಜಾರಿದಂತೆ, ಕಲ್ಲನ್ನು ಸೀಳುತ್ತಾ ದ್ಯುತಿಯ್ಯಲ್‌ನನ್ನು ಸೇರಿ ಅವನಿಗೆ ತಂಪನ್ನೀಯುತ್ತವೆ. ●

ಅವನನ್ನು ನೇಮಿಸಿಕೊಳ್ಳಿ

ಲಾರ್ಡ್ ಚಲ್ಮ್ಸ್‌ಫರ್ಡ್ ಭಾರತದ ವೈಸರಾಯ್ ಆಗಿದ್ದಾಗ ಕೇರಳದ ವಿದ್ವಾಂಸ ಶಂಕರನ್ ನಾಯರ್ ವೈಸರಾಯರ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದರು. ನ್ಯಾಯ ನಿಷ್ಠುರಿಗಳಾಗಿದ್ದ ಅವರಿಗೆ ಒಂದು ದಿನ ವೈಸ್ರಾಯರೊಂದಿಗೆ ಮತಭೇದ ಉಂಟಾದ ಕಾರಣ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಆಗ ವೈಸ್‌ರಾಯ್ ಅವರನ್ನು ನಿಮ್ಮ ಸ್ಥಾನಕ್ಕೆ ಯಾರನ್ನಾದರೂ ಸೂಚಿಸುತ್ತೀರಾ? ಎಂದು ಕೇಳಿದರು. ಅದಕ್ಕೆ ನಾಯರರು ಬಾಗಿಲಲ್ಲಿ ನಿಂತಿದ್ದ ಸೇವಕನನ್ನು ತೋರಿಸಿ 'ಅವರನ್ನು ನೇಮಿಸಿಕೊಳ್ಳಬಹುದು' ಎಂದರು. ಇದನ್ನು ಕೇಳಿ ಗಾಬರಿಗೊಂಡ ವೈಸ್‌ರಾಯ್ 'ಏನು ಆ ಸೇವಕನನ್ನೇ?' ಎಂದು ಕೇಳಿದರು. ಅದಕ್ಕೆ ನಾಯರರು ' ಹೌದು, ಅವನು ಎತ್ತರವಾಗಿದ್ದಾನೆ, ನೋಡಲು ಚೆನ್ನಾಗಿದ್ದಾನೆ, ಜೊತೆಗೆ ನಿಮಗೆ ಬೇಕಾದಾಗ "ಎಸ್" ಎನ್ನಲೂ ಬಲ್ಲ "ನೊ" ಎನ್ನಲೂ ಬಲ್ಲ. ನಿಮ್ಮ ಕಾರ್ಯನಿರ್ವಾಹಕ ಸಮಿತಿಗೆ ಅವನೇ ತಕ್ಕವನು' ಎಂದು ಅಲ್ಲಿಂದ ಹೊರನಡೆದರು. ಸ್ವಾತಂತ್ರ್ಯಪೂರ್ವದಲ್ಲಿ ಅನೇಕ ಭಾರತೀಯರ ವ್ಯಕ್ತಿತ್ವ ಹೇಗಿತ್ತು ಎನ್ನಲು ಇದೊಂದು ನಿದರ್ಶನ.

● ಕೆ. ವೆಂಕಣ್ಣಾಚಾರ್ ●

ಧರ್ಮ ಚಿಂತಾಮಣಿ

● ಪಾವೆಂ ●

ದುರ್ ಎಂದರೆ ದುಷ್ಟವಲ್ಲ! ಶೌಚದ ಅಧಃಪತನ

'ದುರ್ಯೋಧನ' 'ದುಶ್ಶಾಸನ' ಮೊದಲಾದ ಕೌರವರ ಹೆಸರುಗಳನ್ನು ಕೇಳಿ ನಮಗೆ ಸ್ವಲ್ಪ ಆಶ್ಚರ್ಯವಾಗುವುದು ಸಹಜ. ಯಾರಾದರೂ ತಮ್ಮ ಮಕ್ಕಳಿಗೆ ಇಂಥಾ ಹೆಸರಿಡುವುದುಂಟೆ? ಇದಕ್ಕೆ 'ದುಷ್ಟ' 'ದುರ್ಜನ' ಮೊದಲಾದ ಶಬ್ದಗಳ ಪರಿಚಯದಿಂದ ದುರ್-ದುಸ್-ಉಪಸರ್ಗಗಳು 'ಕೆಟ್ಟ' ಎಂಬರ್ಥ ಸೂಚಿಸುವಂಥವು ಎಂಬ ತಿಳಿವಳಿಕೆಯಾಗಿರುವುದು ಕಾರಣ. ಸಂಸ್ಕೃತದಲ್ಲಿ ದುರ್, ದುಸ್-ಉಪಸರ್ಗಗಳು 'ಕೆಟ್ಟ' ಎಂಬರ್ಥವನ್ನು ಸೂಚಿಸುವುದುಂಟಾದರೂ 'ಕಷ್ಟದಿಂದ' ಎಂಬರ್ಥವನ್ನು ಸೂಚಿಸುತ್ತವೆ. ಹೀಗೆ ದುಷ್ಕರ್ಮ ಎಂದರೆ ಕೆಟ್ಟ ಕೆಲಸವೆಂದು ಅರ್ಥವಾದರೂ 'ದುಷ್ಕರ' ಎಂದರೆ ಕಷ್ಟದಿಂದ (ದುಃಖೇನ) ಮಾಡಬಹುದಾದ ಅರ್ಥಾತ್ ಕಠಿಣ ಕಾರ್ಯವೆಂದಾಗುತ್ತದೆ. ಅದೇ ಪ್ರಕಾರ 'ದುರ್ಯೋಧನ' ಎಂದರೆ ಇವನ ಸಂಗಡ ಹೋರಾಡುವುದು (ಯೋಧನ) ಬಲು ಕಷ್ಟ. ಅರ್ಥಾತ್ ಇವನು ಮಹಾಶೂರ ಎಂದು ತಾತ್ಪರ್ಯ. 'ದುಃಶಾಸನ' ಎಂದರೆ ಅವನಿಗೆ ಶಾಸನ ಮಾಡುವುದು, ಇವನನ್ನು ನಿಗ್ರಹಿಸುವುದು ಸುಲಭವಲ್ಲ. ಯಾಕೆಂದರೆ ಇವನು ಅಷ್ಟು ಬಲಿಷ್ಠ, ಶೂರ ಎಂದರ್ಥ. ಆದ್ದರಿಂದಲೇ ದುರ್ಯೋಧನನಿಗೆ 'ಸುಯೋಧನ' (=ಚೆನ್ನಾಗಿ (ಸು) + ಯುದ್ಧ ಮಾಡುವವ) ಎಂದೂ ನಾಮಾಂತರವಿದೆ. ಕರ್ನಾಟಕದ ರಾಜರಲ್ಲೊಬ್ಬನಿಗೆ 'ದುರ್ವಿನೀತ' ಎಂಬ ಹೆಸರುಂಟು. ಅವನನ್ನು ವಿನೀತನನ್ನಾಗಿ (=ವಿಧೇಯನನ್ನಾಗಿ) ಮಾಡುವುದು ಕಷ್ಟ. ಅವನು ಬಡಪಟ್ಟಿಗೆ ಬಗ್ಗಿ ನಡೆಯುವವನಲ್ಲ ಎಂದು ಅಭಿಪ್ರಾಯ. ವ್ಯಾವಹಾರಿಕ ಭಾಷೆಯಲ್ಲಿ 'ದುರ್ಗಮ' (=ಗಮಿಸಲು, ಹೋಗಲು ಕಷ್ಟವಾದುದು) 'ದುರ್ಧರ' (ಧರಿಸಲು ಹೊರಲು ಕಷ್ಟಕರವಾದುದು) 'ದುರ್ಜಯ' (ಜಯಿಸಲು ಕಷ್ಟವಾದುದು) ಇತ್ಯಾದಿ ಪದಗಳು ಬಳಕೆಯಲ್ಲಿವೆ. ದುರ್-ದುಸ್ ಉಪಸರ್ಗಗಳಿಗೆ 'ಹೀನ' ಎಂಬರ್ಥವೂ ಇದೆ. 'ದುರ್ಬಲ' ಇದಕ್ಕೊಂದು ಉದಾಹರಣೆ.

ಇದಕ್ಕೆ ತದ್ವಿರುದ್ಧವಾದ 'ಸು' ಎಂಬ ಉಪಸರ್ಗಕ್ಕೆ 'ಒಳ್ಳೆ' ಮತ್ತು 'ಸುಲಭದಿಂದ' [illegible] ಎಂಬರ್ಥಗಳುಂಟು. 'ಸುಜನ' ಎಂದರೆ ಒಳ್ಳೆ ಮನುಷ್ಯ. 'ಸುಲಭ' ಎಂದರೆ ಕಷ್ಟವಿಲ್ಲದೆ [illegible] ಅರ್ಥದಲ್ಲಿ ಕಷ್ಟವಿಲ್ಲದೆ ಮಾಡಬಹುದಾದುದು. [illegible] 'ಸುಲಭಾ' ಎಂದು [illegible] ಎಂಬ ಹೆಸರಿದೆ.

[illegible]

ಹಳ್ಳ. 'ಕುಮಾರ' ಎಂದರೆ ಮಗ. ಮಮಗ ಎಂಬರ್ಥ ನಮಗೆ ಗೊತ್ತು. ಆದರೆ ಶಬ್ದ ವ್ಯುತ್ಪತ್ತಿಯ ಕೆಲವು ಪ್ರಕಾರ ಇಲ್ಲಿಯೂ ಕೆಟ್ಟ, ದುರ್ಬಲ ಎಂಬ ಭಾವವೇ ಮೂಲದಲ್ಲಿದ್ದಂತೆ 'ಕುಮಾರ' ಎಂದರೆ ಬಹಳ ಚಿಕ್ಕ ಕಾರಣ (ರೋಗ ಇತ್ಯಾದಿ)ಗಳಿಗಾಗಿ ಸಾಯುವವ!

ದುಷ್ಟಾರ್ಥ ಕೊಡುವ ಉಪಸರ್ಗವಾಗಿ 'ಕು-' ಮಾತ್ರವಲ್ಲ, ಕಕಾರಾದಿಯಾದ 'ಕ' 'ಕಾ' 'ಕದ್' ಇತ್ಯಾದಿಗಳೂ ಇವೆ. 'ಕಃ ಪದಾರ್ಥ' ಎಂದು ಲೆಕ್ಕಿಸುವ ಅಗತ್ಯವಿಲ್ಲದಷ್ಟು ಕ್ಷುದ್ರ ಎನಿಸುವಾಗ ಮನುಷ್ಯರನ್ನು ತುಚ್ಛೀಕರಿಸುತ್ತೇವೆ. ಇವೆಲ್ಲವೂ 'ಕ' ಎಂದರೆ 'ಯಾರು' ಎಂಬರ್ಥದ ಸರ್ವನಾಮದಿಂದಲೇ ಹೊರಟವೆ ಎಂದು ಒಂದು ಅಭಿಪ್ರಾಯವಿದೆ. ನಾವು ಯಾರಿಗಾದರೂ ದುರ್ಲಕ್ಷ್ಯ ತೋರಿಸಬೇಕಾದರೆ "ಯಾವೋನೋ ನೀನು?" ಎನ್ನುವುದಿಲ್ಲವೆ? ಹಾಗೆ 'ಕಃಪದಾರ್ಥ' (ಯಾವ ಸರಕೋ? ಮನುಷ್ಯರಲ್ಲಿ ಅವನನ್ನು ಗಣಿಸುವುದಿಲ್ಲ) ಎನ್ನುವುದು 'ಕಾಪುರುಷ' ಎನ್ನುವಾಗ ಕೆಟ್ಟವನೂ ಹೌದು, ಕ್ಷುಲ್ಲಕನೂ ಹೌದು. "ದೈವೇನ ದೇಯಮಿತಿ ಕಾಪುರುಷಾ ವದಂತಿ" ದೈವ ಕೊಡುತ್ತದೆ ಎನ್ನುವವರು ಕಾಪುರುಷರು ಎಂದು ಭರ್ತೃಹರಿ ಹೇಳುವಾಗ ಕ್ಷುದ್ರ ಪುರುಷ ಕೈಲಾಗದವನು, ಸಾಹಸಹೀನ ಎಂಬುದೇ 'ಕಾಪುರುಷ'ದ ಅರ್ಥ. ಎಂಥಾ ಮನುಷ್ಯ ಈತ ಎಂದಂತೆ. ಅದೇ ರೀತಿ 'ಕದನ್ನ' ತಿನ್ನಬೇಕಾಗಿದೆ ಎನ್ನುವಾಗ ಎಂಥದೋ ಅನ್ನ. ಅಂದರೆ ರಸಹೀನ ರುಚಿಹೀನ ಅನ್ನ ಎಂದು ತಾತ್ಪರ್ಯ. ಪ್ರಶ್ನಾರ್ಥಕ ಸರ್ವನಾಮವೊಂದು ಉಪಸರ್ಗದ ಕೆಲಸ ಮಾಡುವಾಗ ತಿರಸ್ಕಾರ ಸೂಚಿಸುವ ಬಲವಾದ ವಾಗಾಯುಧವಾಗುವುದೊಂದು ಸ್ವಾರಸ್ಯವಾದ ಸಂಗತಿ.

ಇದೇ ಸಂಸ್ಕೃತದ ಸರ್ವನಾಮದ ನಪುಂಸಕ ಲಿಂಗ ರೂಪ 'ಕಿಂ' ಎಂದು ಇದನ್ನು ಸ್ವಲ್ಪ ತುಚ್ಛೀಕಾರದೊಡನೆ ಬಳಸಿದ ಉದಾಹರಣೆಗಳೆಂದರೆ 'ಕಿನ್ನರ, ಕಿಂಪುರುಷ'. ಹಿಮಾಲಯದ ತಪ್ಪಲಿನಲ್ಲಿ ಬಹುಶಃ ವಾಸಿಸುತ್ತಿದ್ದ ಎರಡು ಜನಾಂಗಗಳಿವು. ಕಿನ್ನರ ಎಂದರೆ ಕುದುರೆಯಂಥ ಮುಖ, ಮನುಷ್ಯರಂಥ ಮೈಯವರು. ಕಿಂಪುರುಷರೆಂದರೆ ಕುದುರೆ ಮೈ, ಮನುಷ್ಯ ಮುಖದವರು. ಆದ್ದರಿಂದ ಅವರು ಕಿಂ(=ಏನು) ನರರು. ಕಿಂ (=ಏನು) ಪುರುಷರು ಎಂಥವರೋ ನರರು!

'ವಾನರ' (ಮಂಗ) ಕೂಡ ಹೀಗೆ ಹುಟ್ಟಿದ್ದು ಎನ್ನುವವರಿದ್ದಾರೆ. 'ನರೋ ವಾ' (ಮನುಷ್ಯನೋ ಇನ್ನೇನೋ) ಎಂದು ವಿಶ್ಲೇಷಣೆ ಅವರದು. ಆದರೂ ಬಹುಶಃ ಅದು ವನರ್ (ವನಕ್ಕೆ ಸಂಬಂಧಿಸಿದ್ದು) ಎಂಬುದರಿಂದ ಹುಟ್ಟಿದ್ದು ಎಂಬ ವಿವರಣೆಯೇ ಸಾಧುವೆನಿಸುತ್ತದೆ.

★ ★ ★

ಎಲ್ಲ ಭಾಷೆಗಳಲ್ಲಿಯೂ ನಾಗರಿಕ ಮಟ್ಟದಲ್ಲಿ ಲೈಂಗಿಕ ಮತ್ತು ಆಹಾರದ ಅವಶೇಷದ (ಮಲ) ವಿಸರ್ಜನೆಯ ಕ್ರಿಯೆಗಳನ್ನು ಸಭ್ಯರು ಮರೆಸಿ ಹೇಳುವ ಸಂಪ್ರದಾಯವಿದೆ. ಮೊದಲನೆಯದನ್ನು ಸದ್ಯಕ್ಕೆ ಚರ್ಚಿಸದೆ ವಿಸರ್ಜನಾ ಕ್ರಿಯೆಯ ಸಭ್ಯ ವಾಕ್ಸಂಪ್ರದಾಯವನ್ನು ಶೋಧಿಸಿದರೆ ತಮಾಷೆಯ ಸಂಗತಿಗಳು ಕಾಣಿಸುತ್ತವೆ. ಇದಕ್ಕೆ 'ಹೇಲು' ಎಂಬ ಕ್ರಿಯಾಪದ ಮತ್ತು ನಾಮಪದವನ್ನು ಹಳ್ಳಿಗರು ಅಸಹ್ಯವಿಲ್ಲದೆ ಬಳಸುತ್ತಾರೆ. ಆದರೆ ಸಭ್ಯ ಪ್ರಪಂಚದಲ್ಲಿ ಅದು ಎಷ್ಟು ನಿಷಿದ್ಧವೆಂದರೆ 'ಹೇಲುತ್ತಾ ಕೋಮಲಾಂಗಿ' ಎಂಬ ರೀತಿಯಲ್ಲಿ ಪದ ಸಂಯೋಜನೆ ಮಾಡಲೇಬಾರದೆಂದು ವೈಯಾಕರಣಿ ಕೇಶಿರಾಜ ಆದೇಶಿಸುತ್ತಾನೆ. ಈ ಬಗ್ಗೆ ಆಡಲೇ ಬೇಕಾದರೆ 'ಮಲ' ಎಂಬ ಸಂಸ್ಕೃತ ಪದವನ್ನಾದರೂ ಬಳಸಿದರೆ ನಾತ ಸ್ವಲ್ಪ ಸಹ್ಯವಾಗುತ್ತದೆ! ಈ ಕ್ರಿಯೆಗೆ ಸಭ್ಯ ಪ್ರಪಂಚದಲ್ಲಿ 'ಶೌಚ'ಕ್ಕೆ ಹೋಗುವುದೆನ್ನುತ್ತೇವೆ. 'ಶೌಚ' ಎಂಬುದು ಶುಚಿ ಶಬ್ದದಿಂದ ಹುಟ್ಟಿದ್ದು. ಶುಚಿತ್ವ ಎಂದು ಅದರ ಅರ್ಥ. ದೇಹವನ್ನು ಶುಚಿ ಮಾಡಿಕೊಳ್ಳುವ ಕ್ರಿಯೆಯಾದರಿಂದ ಈ ಪ್ರಯೋಗ ತಪ್ಪಲ್ಲವೆನ್ನಿ. ಆದರೆ "ಅವನ ಶೌಚ ತಿನ್ನುವುದಕ್ಕೆ ಯಾಕೆ ಹೋದ?" ಎನ್ನುವಾಗ ಈ 'ಶುಚಿತ್ವ'ವೇ 'ಹೇಲು' ಎಂಬರ್ಥಕ್ಕೆ ತಿರುಗುವ ಅಭಾಸ ನೋಡಿ! ಸಂಸ್ಕೃತದಲ್ಲಿ ಕೂಡ 'ಶೌಚ ಕೂಪ' (ಮಲ ವಿಸರ್ಜನೆಯ ಹೊಂಡ) ಎನ್ನುವಲ್ಲಿ ಶೌಚ ಸ್ವಲ್ಪ ದುರ್ವಾಸನೆಯನ್ನು ಇಮುಗಿಸುತ್ತದೆ! ಕನ್ನಡದಲ್ಲಂತೂ ಈ ಪದದ ಮೂಲಾರ್ಥವೇ ಹೋಗಿ ವಿರುದ್ಧಾರ್ಥ ನೆಲಗೊಂಡು ಬಿಟ್ಟಿದೆ. 'ಶೌಚ ತಿನ್ನು' 'ಶೌಚ ಬಳಿ' ಇತ್ಯಾದಿಗಳನ್ನು ಉದಾಹರಿಸಬಹುದು. ಭಾಷಾರ್ಥಿಗಳು ಶುದ್ಧವನ್ನು ಅಶುದ್ಧ ಮಾಡಬಲ್ಲರು.

ಈ ಕ್ರಿಯೆ ಇನ್ನು ತುಸು ಕೆಳ ಹಂತದಲ್ಲಿ ಚಿತ್ರವಿಚಿತ್ರವಾಗಿ ವರ್ತಿಸುತ್ತದೆ. "ತಂಬಿಗೆ ತೆಗೆದುಕೊಂಡು ಹೋಗುವುದು" ಎಂಬುದು ಹಿಂದೆ ಮಲ ವಿಸರ್ಜನೆಗೆ ದೂರಕ್ಕೆ ನೀರ ತಂಬಿಗೆಯೊಡನೆ ಹೋಗುತ್ತಿದ್ದರು ಎಂಬುದನ್ನು ಅಟ್ಯಾಚ್ಡ್ ಬಾತ್‌ರೂಂ, ಕಮೋಡ್‌ಗಳ ಕಾಲದಲ್ಲಿಯೂ ನೆನಪಿಗೆ ತರುತ್ತದೆ. "ತಂಬಿಗೆ ತೆಗೆದುಕೊಂಡು ಆಗಲಿಲ್ಲ" ಎಂದು ವೃದ್ಧರಿಗೆ ತಕರಾರು ಹೇಳುವಾಗ 'ತಂಬಿಗೆ ತೆಗೆದುಕೊಂಡು' ಎಂಬ ಅಪೂರ್ಣ ಕ್ರಿಯೆ ನಾಮಪದವಾಗಿಬಿಡುತ್ತದೆ. ಈ ಕ್ರಿಯೆಗೆ ಆಯಾ ಪ್ರದೇಶದವರು ಬಳಸುವ ಸುತ್ತುಬಳಸಿನ ಮಾತುಗಳು ಅವರು ವಿಸರ್ಜನಾ ಕ್ರಿಯೆಗೆ ಎತ್ತ ಹೋಗುತ್ತಿದ್ದರು ಎಂದು ಸೂಚಿಸುತ್ತದೆ. ಕೆಲವೆಡೆ "ಬಯಲು ಕಡೆಗೆ ಹೋದ" ಎಂದರೆ ಕೆಲವೆಡೆ (ಉತ್ತರ ಕರ್ನಾಟಕದಲ್ಲಿ) 'ಗುಡ್ಡೆಗೆ (=ಗುಡ್ಡಕ್ಕೆ) ಹೋದ' ಎನ್ನುತ್ತಾರೆ. ಆಮೇಲೆ 'ಬಯಲುಕಡೆ' ಮತ್ತು ಗುಡ್ಡೆ ಎಂಬುದೇ ಹೇಲು ಎಂಬರ್ಥ ಕೊಡುವಂತಾಯಿತು.


ಶಬ್ದಗಳ ನಡತೆ ನಿಜಕ್ಕೂ ವಿಚಿತ್ರ ಅಲ್ಲವೆ?

ಸಂಕಟ ಬಂದಾಗ...

● ಎಚ್. ಆನಂದರಾಮ ಶಾಸ್ತ್ರಿ ●

ಸಂಕಟ ಬಂದಾಗ ವೆಂಕಟರಮಣ, ಸಂಕಟ ಹೋದಾಗ 'ಗೋವಿಂದಾ', ಗೋ.' ಎಂದ, ಇದೊಂದು ಗಾದೆ. ಇಲ್ಲಿ, ಗೋವಿಂದನಿಗೆ, 'ಗೋ,' ಅಂತ ಇಂಗ್ಲೀಷಿನಲ್ಲೆ ಯಾಕೆ ಹೇಳ್ಬೇಕೋ, ನನಗರ್ಥವಾಗೊಲ್ಲ. 'ಗೋವಿಂದ,. ಗೋeeee...ಎಂದ,' ಅಂತ ಅಂದಿದ್ರೂ ಅದೇ ಅರ್ಥ ಬರ್‍ತಾ ಇತ್ತು. 'ಸಂಕಟ' ಅನ್ನೋದನ್ನೂ ಇಲ್ಲಿ ಯಾವ ಅರ್ಥ ದಲ್ಲಿ ತಗೊಂಡಿದ್ದಾರೋ ಅದೂ ನನಗೆ ನಿಚ್ಚಳ ವಾಗಿಲ್ಲ. 'ಸಂಕಟ' ಅಂದರೆ ಇಲ್ಲಿ ಕಷ್ಟವೇ? ದುಃಖವೇ? ನೋವೇ? ಅಥವಾ ನೋವೆಂಬ ಕಷ್ಟದಿಂದ ಉಂಟಾಗುವ ದುಃಖವೇ? ಇಲ್ಲಾ, ಕಷ್ಟವೆಂಬ ನೋವಿನಿಂದ ಉಂಟಾಗುವ ದುಃಖವೇ? 'ನೋವು' ಅಂದರೆ ಇಲ್ಲಿ ಹೊಟ್ಟೆ ನೋವೇ? ತಲೆನೋವೇ? ಬೇರೆ ರೀತಿಯ ನೋವೇ? ಕ್ಲಿಯರ್ ಮಾಡ್ಕೊಳ್ಳೋಣಾಂತ ಯಾರೋ ಬುದ್ಧಿವಂತರನ್ನು ವಿಚಾರಿಸಿದೆ. "ನೀವು ಹೇಳಿದ್ದಿಷ್ಟೂ, ಕವರ್ ಆಗುತ್ತೆ ಅದ ರಲ್ಲಿ," ಅಂದರು ಅವರು. ಇರಬಹುದು. ಅದ ಕ್ಕಾಗಿಯೇ ಇರಬಹುದು, ಭಾರೀ ದೊಡ್ಡ, ಶ್ರೀಮಂತ ದೇವರ ಹೆಸರನ್ನೇ ತಗೊಂಡಿ ರೋದು ಈ ಗಾದೇಲಿ. ಅಥವಾ, ಯಾರಾದ್ರೂ ತಿರುಪತಿ ಮಾಡಿಸ್ಕೊಂಡೋರು....?!

ಅದೇನೇ ಇರಲಿ, ತಾತ್ಪರ್ಯವಂತೂ ಇಷ್ಟೇ: 'ಸಂಕಟ ಬಂದಾಗ ಮಾತ್ರ ಸಂಕಟಹರ ಬೇಕಲ್ಲದೆ, ಸಂಕಟವಿಲ್ಲದಾಗ ಆತನ ಅವಶ್ಯ



ಕತೆ ಬಿಲ್‌ಕುಲ್ ಇಲ್ಲ.' ಬಾಯಾರಿಕೆ ಇದ್ದಾಗ ಮಾತ್ರ ನೀರು ಬೇಕೇ ಹೊರತು ಬಾಯಾರಿಕೆ ಇಲ್ಲದಾಗೇನೂ ಬೇಡ. ಬಾಯಾರಿಕೆಯೂ ಒಂದು ಸಂಕಟವೇ ತಾನೇ? ಬಾಯಾರಿಕೆ ಬಗ್ಗೆ ಹೇಳೋಕೇ ನಾನು ಈ ಗಾದೆ ವಿಷಯ ತೆಗೆದದ್ದು. (ಆದ್ದರಿಂದ, ಇನ್ನು ಗಾದೆ ಬಗ್ಗೆ ತರ್ಕ ಬೇಡ).

ಬಾಯಾರಿಕೆ ಇದ್ದಾಗ ನೀರು ಬೇಕೇ ಬೇಕು. ಬೀರು, ಖೀರು ಏನು ಕುಡಿದರೂ ಬಾಯಾರಿಕೆ ಹೋಗೋಲ್ಲ. ಸೋಡಾ ಕುಡಿದರೆ ಸ್ವಲ್ಪ ಹೋದೀತು. ಸೋಡಾದಲ್ಲೂ ಬರೀ ನೀರೇ ತಾನೇ ಇರೋದು?! ನೀರು ಬೇಕೆಂದರೆ, ಕೆರೆ, ಬಾವಿ ಏನಾದ್ರೂ ಬೇಕು, ಇಲ್ಲಾ, ನಲ್ಲಿ ಬೇಕು, ಅದೂ ಇಲ್ಲಾ, ಬೋರು ಬೇಕು. ಈ ಬೋರಿನ ಕಥೇನೇ ನಾನೀಗ ಹೇಳೋಕೆ ಹೊರಟಿರೋದು.

ನಮ್ಮೂರಲ್ಲಿ, ಮಾಮೂಲಿನಂತೆ, ಒಂದು ದಿನ ಮುನಿಸಿಪಾಲ್ಟಿ ನಲ್ಲಿಗಳು ಸತ್ತು ಹೋದವು. ಆದರೆ, ಮಾಮೂಲಾಗಿ, ಎರಡು ದಿನದೊಳಗೇ ಅವು ಮತ್ತೆ ಬದುಕಬೇಕಿತ್ತು, ಈ ಸಲ ಹಾಗಾಗಲಿಲ್ಲ. ಎರಡುದಿನ, ಮೂರು ದಿನ, ನಾಲ್ಕುದಿನ, ಕೊನೆಗೆ ವಾರ ಆದರೂ ನಲ್ಲೀಲಿ ನೀರೇ ಕಾಣದಾದಾಗ ಜನ ಗಾಬರಿಯಾದರು. ಅವರಿವರ ಮನೆ ಬಾವಿ, ಬೋರ್‌ವೆಲ್‌ಗಳಿಂದ ನೀರು ಹೊತ್ತೂ, ಹೊತ್ತೂ ಆಗಲೇ ಅರ್ಧ ಹೆಣವಾಗಿದ್ದರು ಜನಗಳು. 'ಭದ್ರಾ ಜಲಾಶಯದಲ್ಲಿ ನೀರಿಲ್ಲ, ನೀರು ಬಂದರೂ ಎತ್ತೋಕೆ ಮಿಷನ್ ಸರಿಯಾಗಿಲ್ಲ, ನೀರು ಯಾವಾಗ ಬರುತ್ತೋ, ಗೊತ್ತಿಲ್ಲ. ಮಳೆ ಬಂದ ಕೂಡಲೇ ಚಾನಲ್ಲಲ್ಲಿ ನೀರು ಬಂದಾತು, ಆದರೆ, ಕೆಟ್ಟು ಕುಂತಿರೋ ಮಿಷನ್ನು ಯಾವಾಗ ಸರಿಯಾಗುತ್ತೋ ಗೊತ್ತಿಲ್ಲ. ಇಲ್ಲಿ ಇಂಜಿನೀರ್ರಿಗೆ 'ಅದನ್ನ ಸರಿ ಮಾಡೋಕೆ ಆಗ್ತಾ ಇಲ್ಲ. ಹೊರಗಡೆಯಿಂದ ಇಂಜಿನೀರನ್ನ ಕರೆಸೋಕೆ ಮುನ್ಸಿಪಾಲ್ಟಿ ಹತ್ರ ದುಡ್ಡಿಲ್ಲ: ಅನ್ನೋ ಶಾಕಿಂಗ್ ನ್ಯೂಸು ಲೋಕಲ್ ಪೇಪರ್‌ಗಳಲ್ಲಿ ಹೆಡ್‌ಲೈನಲ್ಲಿ ಅಚ್ಚಾದಾಗ ಜನರಲ್ಲಿ ಹಾಹಾಕಾರ ಎದ್ದಿತು. 'ಇದೇ ಛಾನ್ಸು', ಅಂದ್ಕೊಂಡು, ನಮ್ಮೂರಿನಲ್ಲಿ ಹಾಗೂ ಸುತ್ತಮುತ್ತಲಿನ ಊರುಗಳಲ್ಲಿ ಇದ್ದ ಬೋರಿಂಗ್ ಮಿಷಿನ್, ಯಾನೇ, ರಿಗ್‌ಗಳೆಲ್ಲ ಚುರುಕಾದುವು. ಹತ್ತಾರು ವರ್ಷಗಳಿಂದ ಕೆಟ್ಟು ಕುಳಿತಿದ್ದ ರಿಗ್‌ಗಳೆಲ್ಲಾ ಈಗ ಇದ್ದಕ್ಕಿದ್ದಂತೆ ಹುಷಾರಾಗಿ, ನಡೆಯಲಾರಂಭಿಸಿದ್ದವು! ನಲ್ಲೀಲಿ ನೀರಿದ್ದ ಕಾಲದಲ್ಲಿ ಮನೆ ಮನೆಗೆ ಬಂದು, 'ಬೋರ್ ಹೊಡ್ಸಿ, ಸಾರ್,' ಅಂತ ಅಂಗಲಾಚಿ, ಅಂಗಲಾಚಿ ಬೋರ್ ಹೊಡೀತಿದ್ದ ರಿಗ್ ಯಜಮಾನರುಗಳು ಹಾಗೂ ಕಂಟ್ರಾಕ್ಟರ್‌ಗಳು ಈಗ ಮಿನಿಷ್ಟ್ರುಗಳ ಹಾಗೆ ಆಡತೊಡಗಿದ್ದರು! ಅವರನ್ನು ಕಾಣಬೇಕಾದರೇ ಅವರ ಮನೆ ಆಳಿನಿಂದ ಅಪಾಯಿಂಟ್‌ಮೆಂಟ್ ತಗೋಬೇಕು, ಕಂಡಮೇಲೆ, ಅವರು ಕೇಳಿದಷ್ಟು ಅಡ್ವಾನ್ಸ್ ತೆತ್ತು, ಅವರು ಹೇಳಿದ ಚಾರ್ಜಿಗೆ, ಹೇಳಿದ ದಿನಕ್ಕೆ ಬೋರ್ ಹೊಡೆಸಿಕೊಳ್ಳೋಕೆ ಒಪ್ಪಿ, ವೈಟಿಂಗ್ ಲಿಸ್ಟ್‌ನಲ್ಲಿ ಹೆಸರು ಎಂಟ್ರಿ ಮಾಡಿಸಿ, ಅವರ ಕಾಲಿಗೆ ಬಿದ್ದು ಬರಬೇಕಿತ್ತು. ಯಾರಾದ್ರೂ ನನ್ನಂತೋರು, "ಸ್ವಲ್ಪ ಜಾಗ್ರತೆ ಬಂದು ಹಾಕ್ಕೊಡಿ ಸಾರ್, ನೀರಿಲ್ಲದೆ ಸಾಯ್ತಾ ಇದೀವಿ," ಅಂತಂದ್ರೆ ಅವರು, "ಸಾಯ್ರೀ, ಬೇಡ ಅಂದೋರ್‍ಯಾರು? ಇಷ್ಟು ದಿನಾ ನಾವು ಹೊಟ್ಟೆಗಿಲ್ಲದೇ ಸಾಯ್ತಾ ಇದ್ವಿವಲ್ಲ, ನಮ್ಮನ್ಯಾರಾದ್ರೂ ವಿಚಾರಿಸಿದ್ರಾ?" ಅಂತ ದಬಾಯಿಸಿಬಿಡ್ತಿದ್ರು. ಬೋರು ಬೇಕಂದ್ರೆ ಅವರು ಅಂದಿದ್ದನ್ನೆಲ್ಲಾ ಅನ್ನಿಸ್ಕೊಂಡು ತೆಪ್ಪಗೆ ಬರಬೇಕಿತ್ತು.

ನೀರಿನ ಹಾಹಾಕಾರ ಜಾಸ್ತಿಯಾದಾಗ ಕೆಲವರು ಬುದ್ಧಿವಂತರು ತಲೆ ಓಡಿಸಿದರು. ಸೀದಾ, ಎಲ್ಲಾದ್ರೂ ಬೋರ್ ತೆಗೀತಿರೋ ಜಾಗಕ್ಕೆ ಹೋಗೋದು, ನೋಡ್ತಾ ನಿಂತು ಬಿಡೋದು. ರಿಗ್ಗಿನ ಯಜಮಾನ ಕಾಫಿಗೋ, ಊಟಕ್ಕೋ ಆಚೆ ಹೋದ ಸಮಯ ನೋಡ್ಕೊಂಡು, ರಿಗ್ ಡ್ರೈವರ್‌ನ ಕೈ ಬೀಸಿ ಮಾಡೋದು. 'ಡೀಜಲ್ ಹಾಕ್ಕಂಬರ್‍ತೀನಿ,' ಅಂತ ಆತ ಮನೆ ಮಾಲೀಕರಿಗೆ ಹೇಳಿ, ರಿಗ್ ತಗೊಂಡು, ಕೈ ಬೆಚ್ಚಗೆ ಮಾಡಿದೋರ ಮನೆ ಕಡೆ ಗಾಡಿ ಬಿಡ್ತಿದ್ದ! ಆದರೆ, ಈ ಪ್ಲಾನು ಹೆಚ್ಚು ಸಮಯ ನಡೆಯಲಿಲ್ಲ. ಅಂಥಾ ಭಾರಿ ಯಂತ್ರಾನ ಕಿತ್ತೋದು, ಇಡೋದು ಎಲ್ಲಾ ದೀರ್ಘವಾದ ಕೆಲಸ. ಆದ್ದರಿಂದ ಇದರಿಂದ ಯಾರಿಗೂ ಪ್ರಯೋಜನ ಆಗಲಿಲ್ಲ. ಈಗ ಬುದ್ಧಿವಂತರು ಬೇರೆ ಐಡಿಯಾ ಯೋಚಿಸತೊಡಗಿದರು.

ಬುದ್ಧಿವಂತರಿಗೆ ಹೊಳೆಯದೇ ಇರೋ ಐಡಿಯಾ ಯಾವುದಿದೆ? ಒಂದೊಂದು ಕೇರಿಯ ಎಂಟ್ಹತ್ತು ಜನ ಸೇರಿ ಒಂದೊಂದು ರಿಗ್ ತೆಗೆಸೋ ಐಡಿಯಾ ಹಾಕಿದರು ಬುದ್ಧಿವಂತರು. 'ಇದರಿಂದ, ದುಡ್ಡೂ ಉಳೀತು, ರಿಗ್ ಯಜಮಾನನಿಗೆ ಹೆಚ್ಚು ದುಡ್ಡು ಕೊಟ್ಟು ಬೇಗಾನೂ ಕರ್‍ಕೊಂಡು ಬರಬಹುದು.' ಆದರೆ, ಈ ಐಡಿಯಾನೂ ಹೆಚ್ಚು ಕಾಲ ಬಾಳಲಿಲ್ಲ. ರಿಗ್ ಮಾಲೀಕರು ಒಂದು ಕಡೆ ಇಪ್ಪತ್ತಡಿ ತೂತು ತೆಗೆದು, ಈ ಬುದ್ಧಿವಂತರ ಸ್ಥಳಕ್ಕೆ ಧಾವಿಸಿ, ಇಲ್ಲೂ ಇಪ್ಪತ್ತಡಿ ತೂತು ಮಾಡಿ, ರಿಗ್ ಎತ್ಕೊಂಡು ಇಂಥದೇ ಇನ್ನೊಂದು ಸ್ಥಳಕ್ಕೆ ಧಾವಿಸೋಕೆ ಶುರುಮಾಡಿದರು! ಪರಿಣಾಮವಾಗಿ, ಯಾರ ತೂತಿನಲ್ಲೂ ನೀರಿಲ್ಲ! ಅಪರೂಪಕ್ಕೆಲ್ಲೊ? ಒಂದು ಕಡೆ ನೀರು ಬಂದರೆ, ಗ್ರೂಪ್ ಬೋರ್‌ವೆಲ್ ಆದುದರಿಂದ, ಸದಸ್ಯರುಗಳ ಹೆಂಗಸರ ನಡುವೆ ಗುದ್ದಾಟವಾಗಿ ನೀರೂ ರಸ್ತೆಗೆ ಚೆಲ್ಲಿ ಹೋಗತೊಡಗಿತು. ಮಾತ್ರವಲ್ಲ, ಪೊಲೀಸ್ ಕೇಸುಗಳೂ ಆದುವು. ಹಾಗಾಗಿ, ಈ ಐಡಿಯಾ ಕೂಡಾ ಬಿದ್ದು ಹೋಯಿತು.

ಊರಲ್ಲಿ ಸಂಘ ಸಂಸ್ಥೆಗಳು ಇರೋದು ಯಾತಕ್ಕೆ? ಈ ಟೈಮಲ್ಲಿ ಊರಿನ ಅನೇಕ ಸಂಘ ಸಂಸ್ಥೆಗಳಿಗೆ ಜನಸೇವೆಯ ಉತ್ಕಟೇಚ್ಛೆ ಹತ್ತಿಕೊಂಡಿತು. ಪರಿಣಾಮವಾಗಿ ಕೆಲವು ಸಾಮೂಹಿಕ ಬೋರ್‌ವೆಲ್‌ಗಳು ತಯಾರಾದುವು. ಇಂತಹ ಪ್ರತಿ ಬೋರ್‌ವೆಲ್ ಸುತ್ತಲೂ ಆ ಬೋರಿಗೆ ದಾನ ಮಾಡಿದವರ ಹೆಸರುಗಳ ಫಲಕಗಳನ್ನು ಹಾಕಲಾಗಿತ್ತಲ್ಲದೆ, ಲೋಕಲ್ ಪೇಪರುಗಳಲ್ಲಿ ಪ್ರತಿನಿತ್ಯ, ಬೋರ್‌ವೆಲ್ ದಾನ



ಗಳ ಹೆಸರುಗಳನ್ನು ಸ್ಥಿರ ಶೀರ್ಷಿಕೆಯಡಿ ಪ್ರಕಟಿಸುವ ಪರಿಪಾಠ ಆರಂಭವಾಯಿತು. ಇಂಥ ಸಾಮೂಹಿಕ ಬೋರ್‌ವೆಲ್ ಹ್ಯಾಂಡ್‌ಪಂಪ್‌ಗಳನ್ನು ಇಪ್ಪತ್ನಾಲ್ಕು ಗಂಟೇನೂ ಜನಗಳು ಜಗ್ಗೋವರಿಂದಾಗಿ ಸುತ್ತಮುತ್ತಲಿನ ಮನೆಗಳವರಿಗೆ ಕಿವಿ ತಗೊಂಡು ಇರೋದೇ ಕಷ್ಟವಾಗತೊಡಗಿತು. ಪ್ರತೀ ಮನೆಯವರೂ, ತಾವು ನೀರು ತುಂಬ್ಕೊಂಡಾದ ಕೂಡಲೇ, ಸಂಘದ ಕಾರ್ಯದರ್ಶಿ ಮನೆಗೆ ಹೋಗಿ, 'ಹ್ಯಾಂಡ್ ಪಂಪ್ ಸೌಂಡಿಂದ ತಮಗೆ ಟ್ರಬಲ್ ಆಗುತ್ತೆ.' ಅಂತ ಕಂಪ್ಲೆಂಟ್ ಕೊಡತೊಡಗಿದರು. ಕಂಪ್ಲೆಂಟ್‌ಗಳು ಹೆಚ್ಚಾದಾಗ ಸೆಕ್ರೆಟರಿ, ಪಂಪಿಂಗ್ ಟೈಂ ಫಿಕ್ಸ್ ಮಾಡಿ, ಬೋರ್ಡು ಬರೆಸಿ ಕೊಳಾಯಿ ಪಕ್ಕಕ್ಕೆ ಇರಿಸಿದ. ಆದರೆ ಜನರು ಇಂತಹ ಬೋರ್ಡ್‌ಗಳಿಗೆ ನಯಾ ಪೈಸಾ ಕಿಮ್ಮತ್ತೂ ಕೊಡಲಿಲ್ಲ. ಕೊನೆಗೆ, ಹ್ಯಾಂಡ್‌ಪಂಪ್‌ಗೆ ಬೀಗ ಬಿತ್ತು. ನಿರ್ದಿಷ್ಟ ಸಮಯದಲ್ಲಿ ಮಾತ್ರ ಬೀಗ ಓಪನ್ ಆಗ್ತಿತ್ತು. ಟೈಂ ಕ್ಲೋಸ್ ಆದ ಮೇಲೂ ಜನಗಳು ಸೆಕ್ರೆಟರಿ ಮನೆಗೆ ಹೋಗಿ ಬೀಗದ ಕೈಗಾಗಿ ಗೋಗರೆಯೋಕೆ ಶುರುಮಾಡಿದರು.

ಸೆಕ್ರೆಟರೀನೂ ಮಿನಿಷ್ಟ್ರು ಹಾಗೆ ಆಡತೊಡಗಿದ. ಒಂದು ರಾತ್ರಿ, ಇಂಥಾ ಒಂದು ಸಾಂಘಿಕ ಬೋರ್‌ವೆಲ್ ಕೊಳಾಯಿಯ ಬೀಗಾನ, ಯಾರೋ ಮುರಿದು, ನೀರು ಕದ್ದರು. ಮಾರನೇ ರಾತ್ರಿಯೇ, ಊರಿನ ಉಳಿದೆಲ್ಲಾ, ಅಂತಹ, ಸಾಂಘಿಕ ಬೋರ್‌ವೆಲ್ ಪಂಪುಗಳ ಬೀಗಗಳೂ ಮುರಿಯಲ್ಪಟ್ಟವು! ಸಂಘಗಳ ಪದಾಧಿಕಾರಿಗಳು ಈಗ ಹುಷಾರಾಗಲೇ ಬೇಕಾಯಿತು. ದಿನಕ್ಕೊಬ್ಬರಂತೆ, ಸರತಿ ಪ್ರಕಾರ, ಅವರು ರಾತ್ರಿ ಪಾಳಿ ಶುರು ಮಾಡಿದರು. ಮೊದಮೊದಲು, ರಾತ್ರಿ ಹೊತ್ತು ನಲ್ಲಿ ಕಾಯೋಕೆ ಹೋಗೋಕೆ ಪದಾಧಿಕಾರಿಗಳು ಹಿಂಜರಿದರು. ಆದರೆ, ಅದರಲ್ಲಿರೋ ಇನ್‌ಕಮ್ಮಿನ್ನ ಅರಿತವರೇ, 'ನಾನು, ತಾನು; ಅಂತ ನುಗ್ಗೋಕೆ ಶುರುಮಾಡಿದರು. ರಾತ್ರಿಯಿಡೀ ಸಾಂಘಿಕ ಬೋರ್‌ವೆಲ್‌ಗಳಿರೋ ಕೇರಿಗಳಲ್ಲಿ ನೀರಿನ ಜಗ್ಗಾಟ, ಮನೆಗಳಿಗೆ ಓಡಾಟ, ಆಟೋರಿಕ್ಷಾಗಳಲ್ಲಿ ಸಾಗಾಟ, ಗದ್ದಲಪ್ಪೋ ಗದ್ದಲ ಆರಂಭವಾಯಿತು. ಇನ್‌ಕಂ ವಿಚಾರದಲ್ಲಿ ಘರ್ಷಣೆ ಉಂಟಾಗಿ ಕೆಲವು ಸಂಘಗಳ ಪದಾಧಿಕಾರಿಗಳು ಕೈಕಾಲು ಮುರಕೊಂಡದ್ದೂ ಕೆನ್ನೆ ಮೂಗು ಹರಕೊಂಡದ್ದೂ ಆಯಿತು. ತಂತಮ್ಮ ಮನೆ ಕಾಂಪೌಂಡ್‌ಗಳೊಳಗೆ ಸ್ವಂತ ಬೋರ್‌ವೆಲ್ ಇಟ್ಕೊಂಡೋರಿಗೂ ರಾತ್ರಿ ನಿದ್ದೆ ಇಲ್ಲವಾಯಿತು. ಬೇಡೋರ ಕಾಟ, ಕಳ್ಳರ ಕಾಟ! 'ನೀರು ದಾನ ಮಾಡೋರಿಗೆ ಕರೆಂಟ್ ಚಾರ್ಜ್‌ನಲ್ಲಿ ರಿಯಾಯ್ತಿ,' ಅಂತ ಕೆ.ಇ.ಬಿ.ಯವರು ಅನೌನ್ಸ್ ಮಾಡಿದ ಮೇಲಂತೂ ಬೇಡೋರ ಕಾಟ ಡಬ್ಬಲ್ ಆಯ್ತು.

ಈ ನಡುವೆ, ಇನ್ನೊಂದು ಸ್ವಾರಸ್ಯಕರ ಘಟನೆ ನಡೀತು. ಒಬ್ಬ ಮಾರ್ವಾಡಿ ಹುಡುಗ. ವಿಜಯ್‌ಕುಮಾರ್ ಅಂತ ಹೆಸರು. ಲಾ ಪರೀಕ್ಷೆ ಪಾಸ್ ಮಾಡಿಕೊಂಡು, ಅಪ್ಪನ ಎಲಕ್ಟ್ರಿಕ್ ಶಾಪಲ್ಲಿ ಕೂತ್ಕೊಂಡಿರ್‍ತಾ ಇದ್ದ. ಒಂದಿನ, ಶಾಪಲ್ಲಿ ಕೂತ ಹಾಗೇ, ಇದ್ದಕ್ಕಿದ್ದಂತೆ ಅವನ ತಲೇಲಿ ವಿದ್ಯುತ್ ಸಂಚಾರವಾಯ್ತು! ಆ ವಿದ್ಯುತ್ತು ಆತನ ಮೈಯಲ್ಲೂ ಹರೀತು! ಕೂಡಲೇ ತನ್ನ ಶಾಪಿಂದ ಒಂದಷ್ಟು ವೈರು ವಗೈರೆ ಎತ್ಕೊಂಡು ಮನೆಗೆ ಓಡಿದ. ಒಂದು ಮೊಳೆಗೆ ತಂತಿ ಜೋಡಿಸಿದ. ಕೈಲಿ ಹಿಡಕೊಂಡು ತಿರುಗಿಸಿದ. "ಯುರೇಕಾ! ಯುರೇಕಾ!"ಅಂತಾ ಲೋಕಲ್ ಪೇಪರ್‌ನ ಪ್ರೆಸ್ ಕಡೆಗೆ ಧಾವಿಸಿದ. ಮರುದಿನದ ಪೇಪರಲ್ಲಿ ಆತನ ದೈವೀ ಶಕ್ತಿಯ ಬಗ್ಗೆ ಡೀಟೈಲ್ಡ್ ರಿಪೋರ್ಟ್ ಪ್ರಕಟವಾಯಿತು. 'ಭೂಮಿಯೊಳಗಿರೊ ನೀರಿನ ಪ್ರವಾಹದಿಂದ ಹುಟ್ಟೋ ಕರೆಂಟು ಹಾಗೂ ಕುಮಾರನ ಮೈಯಲ್ಲಿ ಹರಿಯೋ ಕರೆಂಟು ಎರಡೂ ಒಂದೇ ಗ್ರೂಪಿನ ಕರೆಂಟ್ ಆಗಿರೋದರಿಂದ, ನೀರಿನ ಸೆಲೆ ಇದ್ದಲ್ಲಿ, ಆತನ ಕೈಲಿರೋ ತಂತಿಗೆ ಕಟ್ಟಿದ ಮೊಳೆ ತಿರುಗತ್ತೆ!' ಅಂತ ಸುದ್ದಿ ತಿಳಿದ ತಕ್ಷಣ ಜನಗಳು, ಬೋರಿಗೆ ಪಾಯಿಂಟ್ ತೋರಿಸಬೇಕೆಂದು ಕೇಳಿಕೊಂಡು ಆತನ ಬಳಿ ಹೋಗೋಕೆ ಶುರು ಮಾಡಿದರು. ಮುಂದೆ ಎರಡು ದಿನದೊಳಗೇ ಆತ, ಊರಿಗೇ ಫೇಮಸ್ ಆದ. ಎಲ್ರೂ ಆತನ್ನ, 'ಬೋರ್ ಸ್ವಾಮಿ, ಬೋರ್ ಸ್ವಾಮಿ', ಅಂತ ಕರೆಯೋಕೆ ಶುರು ಮಾಡಿದರು. ತಾನು ತೋರಿಸಿದ ಪಾಯಿಂಟ್‌ಗಳು ಫೇಲ್ ಆದಲ್ಲೆಲ್ಲ ಆತ ದೈವೀಕಾರಣಗಳನ್ನು ಹೇಳಿ ಜನರನ್ನು ಕನ್ವಿನ್ಸ್ ಮಾಡುತ್ತಿದ್ದ. ಹೀಗಾಗಿ, ಆತನ ದೈವೀಶಕ್ತಿಯ


ಬಗ್ಗೆ ಯಾರೊಬ್ಬರೂ ಅನುಮಾನಿಸಲಿಲ್ಲ. ಪಾಯಿಂಟ್ ಒಂದಕ್ಕೆ ಇನ್ನೂರರಿಂದ ಸಾವಿರದ ವರೆಗೆ, ಜನ ಜನ ನೋಡಿ ಆತ ತೆಗೆದುಕೊಳ್ಳುತ್ತಿದ್ದುದರಿಂದ ಯಾರಿಗೂ ಅಸಮಾಧಾನವಾಗಲಿಲ್ಲ, ಬದಲಾಗಿ, 'ಬೋರ್ ಸ್ವಾಮಿ'ಯ 'ಬಡ ಜನಪ್ರೇಮ'ದ ಬಗ್ಗೆ ಸಂತೋಷವಾಯಿತು.

ಊರಿನಲ್ಲಿ ಬೋರ್‌ವೆಲ್ ಭರಾಟೆ ಶುರುವಾಗಿ ಇಪ್ಪತ್ತ್ಮೂರನೇ ದಿನ. ಶಾಸ್ತ್ರಕ್ಕೆ ನಾಲ್ಕು ಬೋರ್‌ವೆಲ್ ತೋಡಿಸಿ ಕೈಬಿಟ್ಟಿದ್ದ. ಊರಿನ, ಮುನ್ಸಿಪಲ್ ಪ್ರೆಸಿಡೆಂಟರು ಸಂಸಾರ ಸಮೇತ ಟೂರ್ ಹೋದರು. ಉಪಾಧ್ಯಕ್ಷರು ತುರ್ತು ಕಾರ್ಯದ ನಿಮಿತ್ತ ಊರು ಬಿಟ್ಟು ಹೋಗಬೇಕಾಯಿತು. ರೂಲಿಂಗ್ ಪಾರ್ಟಿ ಮೆಂಬರುಗಳಿಗೂ, ಒಬ್ಬೊಬ್ಬರಿಗೂ ಒಂದೊಂದು ಅರ್ಜೆಂಟ್ ಕೆಲಸ, ಹೊರ ಊರುಗಳಲ್ಲಿ ಉದ್ಭವಿಸಿತು. ವಿರೋಧ ಪಕ್ಷದ ಮೆಂಬರ್‌ಗಳನ್ನು ಬಿಟ್ಟರೆ, ಊರಿನಲ್ಲಿ, ರೂಲಿಂಗ್ ಪಕ್ಷದ ಮೆಂಬರುಗಳ ಪೈಕಿ ಉಳಿದೋರು ಇಬ್ಬರೇ ಇಬ್ಬರು. ಶೆಟ್ರ ಗೌರಮ್ಮ ಹಾಗೂ ಎಚ್. ಅಂಬುಜಮ್ಮ. ಇವರಿಬ್ಬರಿಗೂ, ಸೊಸೆಯಂದಿರಿಗೆ ಹುಷಾರಿಲ್ಲದೇ, ಮನೆ ಕೆಲಸ ತಲೆ ಮೇಲೆ ಬಿದ್ದಿದ್ದರಿಂದ, ಈ ಇಪ್ಪತ್ತ್ಮೂರು ದಿನವೂ ಮನೆ ಬಿಟ್ಟು ಹೊರಗೆ ಹೋಗೋಕೇ ಆಗಿರಲಿಲ್ಲ!

ಇಪ್ಪತ್ತ್ಮೂರನೇ ದಿನ ಊರಲ್ಲಿ ಒಂದು ವಿಶೇಷ ನಡೀತು. ಊರಿನ ನಾಗರಿಕರು ಊರ ಹೊರಗಿನ ಬಯಲಿನಲ್ಲಿ ಬೃಹತ್ ಸಭೆ ಸೇರಿ, ನೂತನವಾಗಿ 'ನಾಗರಿಕ ಜಲ ಬಾಧ್ಯತಾ ಸಮಿತಿ'ಯೊಂದನ್ನು ರಚಿಸಿಕೊಂಡರು. ಅದರ ವತಿಯಿಂದ, ಸಂಕಟ ಪರಿಹರಿಸಿದಂಥಾ ವೆಂಕಟರಮಣಗಳಿಗೆ, ಅರ್ಥಾತ್, ಬೋರ್‌ವೆಲ್ ಮಾಲೀಕರು, ಕಂಟ್ರಾಕ್ಟರುಗಳು, ಬೋರ್ ದಾನಿಗಳು, 'ಬೋರ್ ದಾನ' ಮಾಡಿದ ಸಂಘಗಳ ಪದಾಧಿಕಾರಿಗಳು ಹಾಗೂ 'ಬೋರ್ ಸ್ವಾಮಿ' ಇವರುಗಳಿಗೆ ಸನ್ಮಾನವನ್ನು ಮಾಡುವುದೆಂದು ನಿರ್ಧರಿಸಿದರು. 'ಪೌರಸನ್ಮಾನ ಸಮಾರಂಭ'ದ ದಿನಾಂಕವನ್ನು ಸಭೆಯು ಚರ್ಚಿಸುತ್ತಿದ್ದಂತೆ, ಬಿಸಿಲು ಮಾಯವಾಗಿ, ಗಾಳಿ ಜೋರಾಗಿ ಬೀಸಿ, ಎಲ್ಲಿಂದಲೋ ಮೋಡ ಪ್ರತ್ಯಕ್ಷವಾಗಿ ಮಳೆ ಸುರಿಯತೊಡಗಿತು. ಹೇಳದೇ ಕೇಳದೇ ಸಭೆ ಬರಖಾಸ್ತಾಯಿತು.

ಹಿಡಿದ ಮಳೆ ಎರಡು ದಿನವಿಡೀ ಬಿಡದೇ ಸುರಿಯಿತು. ಇದನ್ನು ಕಂಡು ಮುನಿಸಿಪಲ್ ಕಮೀಷನರ್ ಸಾಹೇಬರು, ಬೆಂಗಳೂರಿಗೆ ಓಡಿ, ಅಲ್ಲೇನೋ ಕಟಿಪಿಟಿ ಮಾಡಿ, ತಾಬಡ್ ತೋಬಡ್ ಮೂವರು ಮೆಕ್ಯಾನಿಕ್‌ಗಳನ್ನು ಹಿಡಕೊಂಡು ಬಂದು ಮುನಿಸಿಪಾಲ್ಟಿಯ ವಾಟರ್ ಸ್ಟೇಷನ್ನಿನ ಕೆಟ್ಟಿದ್ದ ಮಿಷನ್ನನ್ನು ಸರಿ ಮಾಡಿಸಿದರು. ಇಪ್ಪತ್ತೈದನೇ ದಿನ ಊರಿನ 'ಸಂಕಟ' ಸಂಪೂರ್ಣವಾಗಿ ಪರಿಹಾರವಾಯ್ತು. ಮುನಿಸಿಪಲ್ ಟ್ಯಾಪ್‌ಗಳಿಗೆ ಉಸಿರು ಬಂತು-ನೀರು ನುಗ್ಗಿತು.

ವೆಂಕಟರಮಣಗಳ ಸನ್ಮಾನದ ದಿನಾಂಕ ಕೊನೆಗೂ ಫಿಕ್ಸ್ ಆಗಲೇ ಇಲ್ಲ. 'ಜಲ ಬಾಧ್ಯತಾ ಸಮಿತಿ ತನ್ನ ಬಾಧ್ಯತೆ ಕಳೆದುಕೊಂಡು, ನಲ್ಲಿ ನೀರಲ್ಲಿ ಕರಗಿಹೋಯ್ತು. ವೆಂಕಟರಮಣಗಳಾಗಿದ್ದೋರು ಈಗ ಮತ್ತೆ ಮಾಮೂಲೀ ಮನುಷ್ಯರಾಗಿದ್ದಾರೆ. 'ಬೋರ್ ಸ್ವಾಮಿ' ಮೊನ್ನೆ ರಾಜಸ್ಥಾನಕ್ಕೆ ರೈಲು ಹತ್ತಿದ. ●



ಪುಲಗ್ನೇ ಸಾವಧಾನ...?

● ಗೌರೀಶ ಕಾಯ್ಕಿಣಿ ●

ಇಂಥ ನಿಂದ್ಯ, ನೀಚ, ಮತ್ತು ನಾಚಿಕೆಗೆಟ್ಟ ಘಟನೆ ನಡೆಯುವುದು ಈ 20ನೇ ಶತಮಾನದ ಕೊನೆಯ ಪಾದದಲ್ಲಿ ನಮ್ಮ ಪುಣ್ಯ ಭೂಮಿ ಭಾರತದಲ್ಲಿಯೇ ಶಕ್ಯ. ಇದು ನಡೆದದ್ದು ತೀರ ಇತ್ತೀಚೆಗೆ ಹರ್ಯಾಣಾದ ಪಾಲ್ವಾಲ ಎಂಬ ಊರಲ್ಲಿ. ಇದೆ ಜುಲೈ 24ರಂದು ರಾಜಾರಾಣಿ ಎಂಬ 25 ವರ್ಷದ ತರುಣಿಯನ್ನು ಒಬ್ಬ ಹಿಂದೂ ತರುಣನೊಂದಿಗೆ ಮದುವೆಯಾಗುವಂತೆ ಬಲಾತ್ಕರಿಸಲಾಯಿತು.

ಆದರೆ ಇದರಲ್ಲಿ ನಾಚಿಕೆಗೇಡು ಏನು ಬಂತು? ತರುಣ ಹಿಂದೂ ಗಂಡು ಹೆಣ್ಣುಗಳ ಶರೀರ ಸಂಬಂಧದಲ್ಲಿ ನಾಚಿಕೆ ಎಲ್ಲಿ? ಆದರೆ ರಾಜಾರಾಣಿಗೆ 20 ದಿನಗಳ ಹಿಂದೆಯೇ ಮದುವೆಯಾಗಿತ್ತು! ಅವಳು ಒಲಿದು ವರಿಸಿದ್ದು ಅಜೀಜ್ ಅಹಮ್ಮದ್ ಎಂಬ ಮುಸ್ಲಿಂ ಯುವಕನನ್ನು. ಹತ್ತು ವರ್ಷಗಳಿಂದಲೂ ಅವರಿಬ್ಬರೂ ಪ್ರೇಮಿಗಳಾಗಿದ್ದರು. ದಿಲ್ಲಿಯ ಹಜಾರಿ ಕೋರ್ಟಿನಲ್ಲಿ ಈ ಮದುವೆ ರಿಜಿಸ್ಟರ್ ಆಗಿತ್ತು.

ಆದರೇನು? ಈ ಹಿಂದೂ ಹೆಣ್ಣು ಮುಸ್ಲಿಂ ತರುಣನನ್ನು ಮದುವೆಯಾಗುವದೆಂದರೇನು? ಯಾವ ಜಗದ್ಗುರು ಇದನ್ನು ಒಪ್ಪಬಹುದು? ಊರಿನ ಮಹಾಜನರ ಅಸ್ಮಿತೆ ಜಾಗ್ರತವಾಯಿತು. ಹಿಂದೂ ಧರ್ಮದ ಅಭಿಮಾನ ಭುಗಿಲೆದ್ದಿತು. ಸುಖಿಯಾದ ಈ ನವದಂಪತಿಯ ಮೇಲೆ ನರಕವೇ ಕುಸಿಯಿತು.

ಈ ಮಿಶ್ರ ವಿವಾಹದ ವಾರ್ತೆ ಹಬ್ಬಿದೊಡನೆ ಪಾಲ್ವಾಲದ ಆರು ಲಕ್ಷ ಜನ ಒಮ್ಮೆಲೇ ಒಟ್ಟಾಗಿ ಪ್ರತಿಭಟಿಸಿ ಎದ್ದರು. ಬರೆ ಜನ ಜಂಗುಳಿ. ಅಶಿಕ್ಷಿತ ಅಪ್ರಬುದ್ಧರು ಮಾತ್ರವಲ್ಲ ಕಲಿತವರು, ಕಾನೂನು ಬಲ್ಲವರು, ಪಂಡಿತರು, ರಾಜಕಾರಣಿಗಳು ಎಲ್ಲರೂ ಈ ಧರ್ಮ ಸಂಕಟದ ವಿರುದ್ಧ ಸೆಟೆದು ನಿಂತರು. ಊರಿನಲ್ಲಿಯ ಎರಡು ಪಕ್ಷಗಳು ಲೋಕದಳ ಮತ್ತು ಕಾಂಗ್ರೆಸ್ ಪರಸ್ಪರ ಪ್ರತಿಸ್ಪರ್ಧಿಗಳು. ಆದರೂ ಈ ಧರ್ಮ ರಕ್ಷಣೆಯ ಕಾರ್ಯದಲ್ಲಿ ಅವರೆಲ್ಲರೂ ಒಟ್ಟಾದರೂ. ಎಲ್ಲರೂ ಧರ್ಮ ಸಂಸ್ಥಾಪನೆಯ ಧ್ವಜವನ್ನು ಎತ್ತಿ ಹಿಡಿಯಲು ಒಂದಾದರು.

ಈ ಮದುವೆಯನ್ನು ಲೆಕ್ಕಿಸಲೇಬಾರದು, ಒಪ್ಪಲೇಬಾರದು ಎಂದು ರಾಜಾರಾಣಿಯ ತಂದೆ ಗಿರಿಧಾರಿಲಾಲ್‌ನನ್ನು ಒತ್ತಾಯ ಪಡಿಸಲಾಯಿತು. ಆತ ಸಾಮಾಜಿಕ ಬಲಾತ್ಕಾರಕ್ಕೆ ಬಲಿಬಿದ್ದು ಮಗಳನ್ನು ಗೀತಾಭವನಕ್ಕೆ ಕರೆದೊಯ್ದ. ಅಲ್ಲಿ ಆಗಲೆ 2000ದಷ್ಟು ಜನ ಸ್ತೋಮ ನೆರೆದಿತ್ತು. ಬಡವರು, ಡಾಕ್ಟರರು, ವಕೀಲರು, ರಾಜಕೀಯ ಧುರೀಣರು, ಗೂಂಡಾಗಳು ಹಾಗೂ ಪೊಲೀಸರು ಎಲ್ಲರೂ ಅಲ್ಲಿ ನೆರೆದಿದ್ದರು. ರಾಜಾರಾಣಿಯನ್ನು ಒಬ್ಬ

> ● *ಸರ್ವೋಚ್ಚ ನ್ಯಾಯಾಲಯ ರಾಜಾ ರಾಣಿಗೆ ತನ್ನ ಮೊದಲಿನ ಪತಿ ಅಜೀಜ್ ಅಹಮ್ಮದನೊಂದಿಗೆ ದಿಲ್ಲಿಯಲ್ಲಿ ವಾಸಿಸಲು ಅನುಮತಿ ನೀಡಿದೆ.*
>
> ● *ರಂಗನಾಥ ಮಿಶ್ರಾ ಹಾಗೂ ಎಂ.ಎನ್. ವೆಂಕಟಾಚಲಯ್ಯನವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠ ಮೊದಲು ರಾಜಾರಾಣಿಯನ್ನು ಆಕೆಯ ಹೆತ್ತವರ ಮನೆಗೆ ಬಿಡಬೇಕೆಂದೂ, ಅಲ್ಲಿಂದ ಮುಂದೆ ಬೇಕಾದಲ್ಲಿ ತರಳಲು ಆಕೆಗೆ ಸ್ವಾತಂತ್ರ್ಯವಿದೆಯೆಂದೂ ಹೇಳಿತ್ತು. ಆದರೆ ಪಾಲ್ಕಾಲವಲ್ಲಿ ಆಕೆಯ ಜೀವಕ್ಕೆ ಅಪಾಯ ವಿರುವುದನ್ನು ಪರಿಗಣಿಸಿ ನಂತರ ತೀರ್ಪನ್ನು ಬದಲಿಸಲಾಗಿದೆ.*
>
> ● *ಅಜೀಜ್ ಅಹ್ಮದ್ ತನ್ನ ಜೀವಕ್ಕೆ ಅಪಾಯವಿರುವುದರಿಂದ ಈ ಮೊದಲೇ ದಿಲ್ಲಿಗೆ ಹೋಗಿ ವಾಸ್ತವ್ಯ ಹೂಡಿದ್ದ. ಈಗ ರಾಜಾರಾಣಿ ಅವನೊಂದಿಗೆ ಬಾಳು ತ್ತಿದ್ದಾಳೆ.*

ಹಿಂದೂ ತರುಣನ ಕೊರಳಿಗೆ ಕಟ್ಟಿ, ಊರಿನ 'ಇಜ್ಜತ್' ಉಳಿಸಬೇಕು ಎಂದು ಸ್ಥಾನಿಕ ಪಂಚಾಯತ್ ನಿರ್ಣಯ ಮಾಡಿತ್ತು. ಇದಕ್ಕೆ ಆ 25 ವರ್ಷದ ಹುಡುಗಿಯ ಸಮ್ಮತಿ ಕೇಳುವುದಾಗಲಿ, ಪಡೆಯುವದಾಗಲಿ ಅವರಿಗೆ ಅಗತ್ಯವೆನಿಸಲಿಲ್ಲ.

ಹುಡುಗಿ ಕಂಗೆಟ್ಟಳು. ಮಾಲೆ ಹಾರಗಳನ್ನು ಹರಿದು ಹಾಕಿದಳು. ಬಳೆಗಳನ್ನು ಒಡೆದು ಚೆಲ್ಲಿದಳು. ಒದ್ದಾಡಿದಳು. ಎದೆ ಬಡಿದುಕೊಂಡು ಗೋಗರೆದಳು. ಆಕ್ರೋಶ ಮಾಡಿದಳು. ಆದರೆ ನೆರೆದವರಲ್ಲಿ ಒಬ್ಬರೂ ಪ್ರತಿಭಟಿಸಲಿಲ್ಲ. ನಡೆಯುತ್ತಿರುವುದನ್ನು ನಿಷೇಧಿಸಲಿಲ್ಲ.

ಸಂತರಾಮು ಒಬ್ಬ ವಕೀಲ ಅಲ್ಲದೆ ಈ ಸಮಾಜಕ್ಕಾಗಿಯೇ ಹುಟ್ಟಿಕೊಂಡ ಕ್ರಿಯಾ ಸಮಿತಿಯ ಸದಸ್ಯ. ಅವನ ಅಂಬೋಣ ಹೀಗೆ, 'ಈ ಮದುವೆಯನ್ನು ಇವಳ ಮೇಲೆ ಹೇರಿದನ್ನು ಒಪ್ಪುತ್ತೇನೆ. ಆದರೆ ಸಮಾಜ ಇವಳ 'ಆ' ಮದುವೆಯನ್ನು ಹೇಗೆ ಒಪ್ಪಿತು?" ಆದರೆ ಇಲ್ಲಿ ಸೋಜಿಗವೇನೆಂದರೆ, ಈ ಜನಕ್ಕೆ ಒಬ್ಬ ಹಿಂದೂ ಹೆಣ್ಣುಮಗಳು ಒಬ್ಬ ಮುಸ್ಲಿಂ ಹುಡುಗನೊಂದಿಗೆ ಮದುವೆ ಇಲ್ಲದೆ ಉಳಿದರೆ ಆಕ್ಷೇಪವಿಲ್ಲ! (10 ವರ್ಷದಿಂದ ರಾಜಾರಾಣಿ ಮತ್ತು ಅಜೀಜ್ ಅಹಮ್ಮದ್ ಜೊತೆಯಾಗಿ ದ್ದರು!) ಅಜೀಜ್ ಊರಿನ ಒಬ್ಬ ಚಿಕ್ಕ ವ್ಯಾಪಾರದ ವ್ಯವಸಾಯಿ. ರಾಜಾರಾಣಿಯ ಮನೆ ಯಲ್ಲಿಯೇ ವಾಸಿಸುತ್ತಿದ್ದ. ರಾಜಾರಾಣಿಯ ಕುಟುಂಬ ಆರ್ಥಿಕವಾಗಿ ಅವನನ್ನೇ ಅವಲಂಬಿಸಿದ್ದರಿಂದ ಅವಳ ತಾಯಿ ತಂದೆಯರು ಈ ಬಗ್ಗೆ ಏನೂ ಹೇಳುತ್ತಿದ್ದಿಲ್ಲ. ಅವರ ಮನೆ ಕಟ್ಟಲು, ಫ್ರಿಜ್, ಟಿ.ವಿ. ಕೊಳ್ಳಲು ಅಹಮ್ಮದನೇ ಈ ಹಿಂದೆ ಸಹಾಯ ಮಾಡಿದ್ದ. ಗಿರಿಧಾರಿಲಾಲ್ ಒಬ್ಬ ಸಣ್ಣ ಬಟ್ಟೆವ್ಯಾಪಾರಿ. ಆತ ಅವನ್ನೆಲ್ಲ ಕೊಳ್ಳಲಾರ.

"ಮಂದಿ ಪಾಪದಲ್ಲಿ ಬದುಕುತ್ತಿದ್ದರು. ಅದು ಅವರ ಖಾಸಗಿ ಬದುಕು. ಆದರೆ ಅವರು ತಮ್ಮ ಸಂಬಂಧವನ್ನು ಕಾನೂನುಬದ್ಧವಾಗಿಸ ಹೊರಟರು. ಅದಕ್ಕೆ ಸಾಮಾಜಿಕ ಮಹತ್ವ ಬಂತು!" ಇದು ಸಮಾಜದ ಹಸ್ತಕ್ಷೇಪದ ಕುರಿತು ಸಂತಾರಾಮು ವಕೀಲನ ಸಮರ್ಥನೆ.

ಅಜೀಜ್ ತನ್ನ ತಂದೆ ಮತ್ತು ಸಹೋದರರೊಡನೆ ತೀವ್ರ ತುಂಬಿದ ಕಾವೇರಿದ ಆ ಊರನ್ನೇ ಬಿಟ್ಟು ಹೋಗಿದ್ದ. ಹಿಂದೂ ಧರ್ಮವನ್ನು ಉದ್ಧರಿಸುವ ಈ ಜನ ಅವನನ್ನು ಒಬ್ಬ ಠಕ್ಕ, ದುಷ್ಟ ಹಾಗೂ ಗೂಂಡಾ ಎಂದು ಬಣ್ಣಿಸಿದರು. ಪೋಲೀಸರೂ ಹಾಗೆಯೇ ಹೇಳುತ್ತಿದ್ದರು. ರಾಜಾರಾಣಿ ಹಿಂದು. ಅವಳು ಹೀಗೆ ಮುಂದಾಗಿ ದುಡುಕಿ ತನ್ನ ಕೋಮಿನ ಹೊರಗೆ ಮದುವೆ ಆದಳೆಂದರೆ ಹಿಂದೂ ಸಮಾಜವು ಲಕ್ಷಿಸಬೇಕಾದ ಸಮಸ್ಯೆಯಾದಳು ಎನ್ನುತ್ತಾನೆ ಕ್ರಿಯಾ ಸಮಿತಿಯ ಒಬ್ಬ ಸದಸ್ಯ ಸುಭಾಷ್ ಜೈನ್. ಅಂದು ರಾಜಾರಾಣಿಯ ಮದುವೆಗೆ ಗೀತಾ ಭವನದಲ್ಲಿ ಹಾಜರ್ ಇದ್ದವರು ಅತ್ತ ಆಕೆ ಬಗೆಯುತ್ತ ರಾಜಾರಾಣಿ ಯನ್ನು ಮದುವೆಯ ಮಂಟಪಕ್ಕೆ ಎಳೆದೊಯ್ದು ವಾಗಲೂ ಅವಳು "ನನ್ನನ್ನು ನನ್ನವರೊಂದಿಗೆ ಸೇರಿಸಿರಿ. ಇಲ್ಲವೆ ವಿಷವನ್ನು ಕೊಡಿರಿ!" ಎಂದು ಅಸಹಾಯಳಾಗಿ ಕೂಗುತ್ತಲೇ ಇದ್ದಳು.

ಹಿಂದೂ ಧರ್ಮದ ಸ್ವಯಂಸಿದ್ಧ ರಕ್ಷಕರು ಅವಳೊಂದಿಗೆ ಮದುವೆಗಾಗಿ ಒಬ್ಬ ಹಿಂದೂ

ಮಾರುವವ, ಇನ್ನೊಬ್ಬ ರೇಡಿಯೋ ಮೆಕಾನಿಕ್ ಹೀಗೆ ಆರು ಜನರನ್ನು ಸಜ್ಜು ಮಾಡಿದ್ದರು. ಗಿರಿಧಾರಿಲಾಲ್ ಮಗಳ ಈ ಮದುವೆಗೆ ಒಪ್ಪಲಾರ. ಆದರೆ ಈ ಪ್ರತಿಭಟನೆಯ ಮುಂದೆ ಬಗ್ಗಿ ಹೋದ. ಕೊನೆಗೆ ಆ ಊರಿನ ಒಬ್ಬ ಚಿಕ್ಕ ಚಹದಂಗಡಿಕಾರ ಮೋಹನಲಾಲನನ್ನು ಅಳಿಯನನ್ನಾಗಿಸಿ ಕೊಳ್ಳಲು ಒಪ್ಪಿಕೊಂಡ. ಈ ಮೋಹನ ಈಗ ರಾಜಾರಾಣಿಯ ಮನೆಯಲ್ಲಿಯೇ ತಳಊರಿದ್ದಾನೆ. "ಅವಳು ಇನ್ನೊಬ್ಬನೊಂದಿಗೆ ಕೂಡಿಕೊಂಡಿದ್ದರೇನಾಯಿತು? ಹಾಗೆ ಪ್ರತಿಯೊಬ್ಬರು ತಪ್ಪು ಮಾಡುತ್ತಾರೆ" ಎಂದು ಆತ ಖುಷಿಯಿಂದ ಅನ್ನುತ್ತಾನೆ. ರಾಜಾರಾಣಿಯ ಮೇಲೆ ಕೆಲಕಾಲದಿಂದ ಅವನ ಕಣ್ಣು ಹಾಕಿದ್ದ. ಆದರೆ ಆಕೆ ಮೋಹನಲಾಲನನ್ನು ನೋಡಿದ್ದು ಮದುವೆಯಲ್ಲಿಯೇ. ಆಕೆ ಅವನೊಂದಿಗೆ ಕೂಡಲು ಎಂದೂ ಒಪ್ಪಲಿಲ್ಲ. ಅವಳ ಬಸಿರಿನಲ್ಲಿ ಈಗಾಗಲೇ ಅಜೀಜನ ಶಿಶುವಿದೆ. ಗರ್ಭಪಾತಕ್ಕೆ ಅವಳು ಎಂದಿಗೂ ಸಿದ್ಧಳಿರಲಿಲ್ಲ. ಈ ಕೂಸೊಂದೆ ಅವಳ ಬಾಳಿನ ಆಶಾಕಿರಣ.

ಈ ಎರಡನೆಯ ಮದುವೆಯ ನಂತರ ಊರಿನಲ್ಲಿ ದ್ವೇಷಮಯ ವಾತಾವರಣ ಸ್ಫೋಟಗೊಂಡಿತು. 50-100 ಮಂದಿಯ ಗುಂಪು ಒಂದು ಮಸೀದೆಯನ್ನು ಲೂಟಿ ಮಾಡಿತು. ರೊಚ್ಚಿಗೆದ್ದ ಜನಸ್ತೋಮ ಮಸೀದೆಯ ಮಿನಾರುಗಳನ್ನು ಕೆಡಹಿತು; ಮೌಲವಿಯನ್ನು ಹಿಡಿದು ಥಳಿಸಲಾಯಿತು. ಫ್ಯಾನುಗಳನ್ನು ಕಿತ್ತೆಸೆಯಲಾಯಿತು. ಕಪಾಟಿಗೆ ಬೆಂಕಿ ಹಚ್ಚಲಾಯಿತು. ದಿನ ಬೆಳಗಾಗುವುದರೊಳಗೆ ದೊಡ್ಡ ಕೋಮು ಗಲಭೆ ಊರನ್ನೇ ವ್ಯಾಪಿಸಬಹುದಿತ್ತು. ಆದರೆ ಆಡಳಿತ ವ್ಯವಸ್ಥೆ ಶೀಘ್ರ ಕ್ರಮ ಕೈಗೊಂಡಿತು. ಬೆಳಗಾಗುವಷ್ಟರಲ್ಲಿ ಮಸೀದೆಯ ದುರಸ್ತಿ ಮಾಡಿಸಲಾಯಿತು. ಇಲ್ಲದಿದ್ದರೆ ಹತ್ತಿರದ ಊರುಗಳಿಂದ ಮುಸ್ಲಿಮರು ನುಗ್ಗಿ ಬಂದು ಊರಲ್ಲಿ ದಂಗೆ ಭುಗಿಲೇಳುತ್ತಿತ್ತು ಎಂಬುದು ಹಿರಿಯ ಅಧಿಕಾರಿಯೊಬ್ಬನ ಅಂಬೋಣ.

ರಾಜಾರಾಣಿ ಗರಬಡಿದವಳಂತೆ ಯಾಂತ್ರಿಕವಾಗಿ ದಿನವೆಲ್ಲ ಮನೆ ಕೆಲಸದಲ್ಲಿ ಹೊಲಿಗೆಯ ಯಂತ್ರದೊಂದಿಗೆ ಕಾಲ ಕಳೆಯುತ್ತಿದ್ದಳು. ಆಕೆ ಪೂರ್ತಿ ಉದ್ವಿಗ್ನಳು. ನೇರ ಯೋಚನೆ ಮಾಡಲಾರಳು. ಊರಿನ ಹಿಂದೂ ಸಮಾಜವು ತನ್ನ ಶತಕೃತ್ಯಕ್ಕೆ ಹಿರಿಹಿಗ್ಗಿ ಉಬ್ಬಿ, ಬರಿಯಿತು. ಅವರಿಗೂ ಗೊತ್ತಿತ್ತು, ಕೊನೆಗೂ ಒಂದು ದಿನ ಅಜೀಜ್ ಅಹಮ್ಮದನೊಂದಿಗೆ ರಾಜಾರಾಣಿ ಊರು ಬಿಟ್ಟು ಓಡಿಹೋಗಬಹುದೆಂದು. ●

ಪಾದ್ರಿ ಮಹಾಶಯರೊಬ್ಬರು ಮತ್ತೊಬ್ಬ ತರುಣ ಪಾದ್ರಿಗೆ ಧರ್ಮೋಪದೇಶ ಮಾಡುವಾಗ ಅನುಸರಿಸಬೇಕಾದ ಕೆಲವು ತಂತ್ರಗಳನ್ನು ಕಲಿಸಿಕೊಡುತ್ತಿದ್ದರು. ಅವರು ಹೇಳಿದರು. "ನನ್ನ ಶ್ರೋತೃಗಳು ತೂಕಡಿಸತೊಡಗಿದರೆಂದರೆ ನಾನು ಹೇಳುತ್ತೇನೆ, "ನೋಡಿ ನಿನ್ನೆ ರಾತ್ರಿ ಒಂದು ತಮಾಷೆ ನಡೆಯಿತು. ನಾನು ಇನ್ನಾರದೋ ಹೆಂಡತಿಯನ್ನು ನನ್ನ ಬಾಹುಪಾಶದಲ್ಲಿ ತುಂಬಿಕೊಂಡೆ. ಈ ಮಾತುಗಳನ್ನು ಕೇಳಿದೊಡನೆಯೇ ಶ್ರೋತೃಗಳ ಕಿವಿಗಳು ನೆಟ್ಟಗಾಗಿಬಿಡುತ್ತವೆ. ಮುಂದಿನ ಮಾತುಗಳನ್ನು ಕೇಳಲು ಅವರು ಕಾತರಿಸತೊಡಗುತ್ತಾರೆ. ಆಗ ಅವರ ಕುತೂಹಲದ ಬಲೂನಿಗೆ ಸೂಜಿ ಚುಚ್ಚಿದಂತೆ ನಾನೆನ್ನುತ್ತೇನೆ, ಆ ಮಹಿಳೆ ಬೇರಾರೂ ಅಲ್ಲ, ನನ್ನ ತಾಯಿಯಾಗಿದ್ದಳು." ಈ ತಂತ್ರ ತರುಣ ಪಾದ್ರಿಗೆ ತುಂಬ ಹಿಡಿಸಿತು. ಮರುದಿನವೇ ಆ ತಂತ್ರವನ್ನು ಪ್ರಯೋಗಿಸಬೇಕೆಂದು ಅವನು ಮನಸ್ಸಿನಲ್ಲಿ ನಿರ್ಧರಿಸಿಕೊಂಡ. ಆತ ಧರ್ಮೋಪದೇಶ ಮಾಡುತ್ತಿದ್ದಾಗ ಕೆಲವರು ತೂಕಡಿಸುತ್ತಿರುವರೆಂಬುದು ಅರಿವಾದ ಕೂಡಲೇ ಅವನು ಅದೇ ಚಟಾಕಿಯನ್ನು ಹಾರಿಸಿದ. "ನಿನ್ನೆ ರಾತ್ರಿ ಏನಾಯ್ತೆಂದರೆ ನಾನು ಇನ್ನಾರದೋ ಹೆಂಡತಿಯನ್ನು ಆಲಂಗಿಸಿಬಿಟ್ಟೆ.." ಗಡಬಡಿಸಿ ಕಣ್ತೆರೆದ ಶ್ರೋತೃಗಳು ಮುಂದಿನ ಮಾತುಗಳನ್ನು ಕೇಳಲು ಅವನನ್ನೇ ದಿಟ್ಟಿಸಿ ನೋಡತೊಡಗಿದರು. ಪಾಪ ತರುಣ ಪಾದ್ರಿಯ ಜಂಘಾಬಲವೇ ಉಡುಗಿದಂತಾಗಿ ಮುಂದೆ ಹೇಳಬೇಕಾದ ವಿಷಯವೇ ಅವನಿಗೆ ಮರೆತು ಹೋಯಿತು. ಗಾಬರಿಯಲ್ಲಿ ಅವನೆಂದ "ಆದರೆ ಆಕೆ ಯಾರೆಂಬುದೇ ನೆನಪಿಗೆ ಬರುತ್ತಿಲ್ಲ."

ಸಂಗ್ರಹ: ಮುರಲೀಧರ ಕುಲಕರ್ಣಿ.



ನವಚಿಂತನೆಯ ಚೇತನ

[illegible]

[illegible]

[illegible] ಇಂದು [illegible]

[illegible]

[illegible] ಅಲ್ಲಿಯವರೆಗಿರುವ [illegible]

[illegible] ಅವರಿರುವ [illegible]

[illegible]

[illegible] ರಂಜಿಸಿತ. ಆದರೆ ಈ [illegible]

[illegible]

"ಸಮಾಜವಾದವನ್ನು ಉಳಿಸುವುದೇ ನಮ್ಮ ಉದ್ದೇಶ. ಅದಕ್ಕಾಗಿ ನಮ್ಮ [illegible] ಪದ್ಧತಿಯನ್ನು ಬದಲಾಯಿಸುವುದು. [illegible] ಜನತೆಗೆ ಸಮಾಜವಾದ [illegible] ಅಂಗವನ್ನು ಪರಿಚಯಿಸುವುದು [illegible]

ಎಂದು ಗೊರ್ಬಾಚೇವ್ ಘೋಷಿಸಿದರು. ಈ ದಿಶೆಯಲ್ಲಿ ಅವರ "ಗ್ಲಾಸ್‌ನಾಸ್ಟ್" (ಮುಕ್ತ ವಾತಾವರಣ) ಮತ್ತು "ಪೆರೆಸ್ಟ್ರೊಯಿಕಾ" (ಪುನರ್‌ನಿರ್ಮಾಣ) ಯೋಜನೆಗಳು ಆರಂಭ ವಾಗಿವೆ.

ಇದು ರಶಿಯದ ಎಷ್ಟೋ ಜನರ ಮನದಲ್ಲಿ ತಮ್ಮ ದೇಶದಲ್ಲಿ ಹೊಸ ಯುಗ ಆರಂಭ ವಾಗಿದೆ ಎಂಬ ಭಾವನೆ ಮೂಡಿಸಿದೆ. ಆದರೆ ಇಲ್ಲಿ ಅಚ್ಚರಿಯ ಸಂಗತಿಯೆಂದರೆ, ಈ ಹೊಸ ಯುಗದ ಪ್ರವರ್ತಕನಾದ ಗೊರ್ಬಾಚೇವ್‌ರ ಹೆಸರು ಒಂದು ದಶಕದ ಹಿಂದೆ ರಶಿಯದ ದಕ್ಷಿಣಕ್ಕಿರುವ ಸ್ಟಾವ್ರೊ ಪೋಲ್ ಪ್ರಾಂತ್ಯವನ್ನು ಬಿಟ್ಟರೆ ಉಳಿದೆಡೆಗಳ ಜನರಿಗೆ ಗೊತ್ತೆ ಇರ ಲಿಲ್ಲ. 1978ರಲ್ಲಿ ಮಾಸ್ಕೊಕ್ಕೆ ಬಂದು ರಾಷ್ಟ್ರೀಯ ರಾಜಕೀಯ ರಂಗಸೇರಿದ ಅವರು ನಂತರ ಕೇವಲ ಏಳು ವರ್ಷಗಳಲ್ಲಿ ರಾಷ್ಟ್ರದ ಅತ್ಯುನ್ನತ ಹುದ್ದೆಗೇರಿದರು.

ರಶಿಯದಲ್ಲಿ ಎಲ್ಲ ವಿಷಯಗಳೂ ನಿಗೂಢ ವಾಗಿರುವುದು ಹೊರಜಗತ್ತಿಗೆ ಹೊಸದೇನಲ್ಲ. ಅದರಂತೆ ಗೊರ್ಬಾಚೇವ್‌ರ ಬಗೆಗೂ ಇಂದಿಗೂ ಪೂರ್ಣ ಮಾಹಿತಿ ದೊರೆಯುವು ದಿಲ್ಲ. ಅವರಿಗೆ ಒಬ್ಬ ಸಹೋದರ ಹಾಗೂ ಸಹೋದರಿ ಇರುವರೆಂದು ವರದಿಗಳಿವೆ ಯಾದರೂ ಯಾವುದೂ ದೃಢಪಟ್ಟಿಲ್ಲ. ಆದರೆ 1987ರಲ್ಲಿ ಗೊರ್ಬಾಚೇವ್‌ರನ್ನು "ವರ್ಷದ ವ್ಯಕ್ತಿ"ಯನ್ನಾಗಿ ಆಯ್ಕೆ ಮಾಡಿದ 'ಟೈಮ್' ಪತ್ರಿಕೆ ಅವರ ಹಿನ್ನೆಲೆಯ ಕುರಿತು ಅಧ್ಯಯನ ನಡೆಸಿ ಸಾಕಷ್ಟು ಅಂಶಗಳನ್ನು ಹೊರಗೆಡಹಿದೆ. ಈ ಕಥೆ ಆರಂಭವಾಗುವುದು ಸ್ಟಾವ್ರೊಪೋಲ್ ನಗರದಿಂದ 124 ಮೈಲು ದೂರದಲ್ಲಿರುವ, ಕೇವಲ ಮೂರು ಸಾವಿರ ಜನಸಂಖ್ಯೆಯ ಪ್ರಿವೋಲ್‌ನೋಯ್ ಗ್ರಾಮದಲ್ಲಿ. ಅಲ್ಲಿ ಕೃಷಿ ಕರ ಕುಟುಂಬವೊಂದರಲ್ಲಿ ಗೊರ್ಬಾಚೇವ್ 1931ರ ಮಾರ್ಚ್ ಎರಡರಂದು ಜನಿಸಿದರು. ಆ ಸಮಯದಲ್ಲಿ ರಶಿಯದಲ್ಲೆಲ್ಲ ಸರ್ವಾಧಿ ಕಾರಿ ಜೋಸೆಫ್ ಸ್ಟಾಲಿನ್‌ನ ಆಡಳಿತ ಅತಿ ಘೋರವೆನಿಸುವ ಮಟ್ಟಕ್ಕೆ ತಲುಪಿತ್ತು. ಸಾಮೂಹಿಕ ಕೃಷಿ ಪದ್ಧತಿ ಅನುಸರಿಸುವಂತೆ ಮಾಡಲು ಕೃಷಿಕರನ್ನು ಸರ್ವವಿಧಾನಗಳಿಂದ ಒತ್ತಾಯಿಸಲಾಗುತ್ತಿತ್ತು. ಪ್ರತಿಭಟಿಸಿದವರನ್ನು ಕೊಂದುಬಿಡಲಾಗುತ್ತಿತ್ತು. ಕೆಲ ಬಾರಿ ಅಂಥವ ರನ್ನು ಸೈಬೀರಿಯದಲ್ಲಿನ ಕುಖ್ಯಾತ ಲೇಬರ್ ಕ್ಯಾಂಪ್‌ಗಳಿಗೆ ಅಟ್ಟುತ್ತಿದ್ದುದೂ ಉಂಟು.

ಗೊರ್ಬಾಚೇವ್ ಕುಟುಂಬ ಸರಕಾರದ ಪರ ವಿದ್ದುದರಿಂದ ಬೇರೆಯವರಷ್ಟು ಕಷ್ಟಪಡ ಬೇಕಾಗಲಿಲ್ಲ. ಮಿಖಾಯಿಲ್‌ರ ಅಜ್ಜ ಆ್ಯಂಡ್ರಿ ಸಾಮೂಹಿಕ ಕೃಷಿ ಸಂಘಟನೆಯಲ್ಲಿ ಸರಕಾರಕ್ಕೆ ಸಹಾಯ ಮಾಡಿದ. ತಂದೆ ಸೆರ್ಜೆಯೆವಿಚ್ ಸರಕಾರದ ಉದ್ದಿಮೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಆದರೂ ಸುತ್ತಮುತ್ತಲಿನ ಜನರ ಕಷ್ಟ ಆಗಲೇ ಮಿಖಾಯಿಲ್‌ರ ಮೇಲೆ ಪರಿ ಣಾಮ ಬೀರಿತು. ಆದ್ದರಿಂದಲೇ ಪ್ರಧಾನ ಕಾರ್ಯ ದರ್ಶಿಯಾದ ನಂತರ ಅವರು ಸ್ಟಾಲಿನ್ನನ ಸಾಮೂಹಿಕ ಕೃಷಿ ಪದ್ಧತಿಯನ್ನು ಮತ್ತು ಶ್ರೀಮಂತ ವರ್ಗದ ಕೃಷಿಕರನ್ನು ಕಠಿಣ ಕ್ರಮಕ್ಕೆ ಒಳಪಡಿಸಿದ್ದನ್ನು ಸಮರ್ಥಿಸಿಕೊಂಡಿದ್ದಾ ರಾದರೂ, ಮಧ್ಯಮ ಮತ್ತು ಬಡ ವರ್ಗಗಳ ಕೃಷಿಕರಿಗೆ ತೀವ್ರ ಹಿಂಸೆ ನೀಡಿದ್ದನ್ನು ಕಟುವಾಗಿ ಟೀಕಿಸಿದ್ದಾರೆ.

1930ರ ದಶಕದ ಮೊದಲಾರ್ಧವೆಲ್ಲ ಈ ಹಿಂಸಾಚಾರದಲ್ಲೇ ಕಳೆದು ನಂತರ ಪರಿಸ್ಥಿತಿ ಸ್ವಲ್ಪ ಶಾಂತವಾಗಬೇಕೆನ್ನುವಷ್ಟರಲ್ಲಿ ರಶಿ ಯದ ಮೇಲೆ ನಾಜ್ಸಿ ದಾಳಿ ಆರಂಭವಾಯಿತು. ಜರ್ಮನಿಯ ಸೈನಿಕರು ಸ್ಟಾವ್ರೊಪೋಲ್ ಪ್ರವೇ ಶಿಸಿದಾಗ ಮಿಖಾಯಿಲ್ 11 ವರ್ಷ ವಯಸ್ಸಿನ ಬಾಲಕ. ಆದರೆ ನಾಜ್ಸಿಗಳಿಗೆ ಪ್ರಿವೋಲೆ ನೋಯ್‌ದಂಥ ಚಿಕ್ಕ ಗ್ರಾಮವನ್ನು ವಶಪಡಿಸಿ ಕೊಳ್ಳುವುದು ಅಷ್ಟು ಮಹತ್ವದ್ದೆನಿಸಲಿಲ್ಲವೋ ಏನೋ, ಆ ಗ್ರಾಮದ ಜನತೆ ಅವರ ಹಿಂಸೆಗೆ ಬಲಿಯಾಗದೆ ತಪ್ಪಿಸಿಕೊಂಡಿತು. ಜರ್ಮನರ ಕುಕೃತ್ಯಗಳ ಬಗ್ಗೆ ಮಿಖಾಯಿಲ್ ಕೇಳಿದ್ದ ರಾದರೂ, ಅದರಿಂದುಂಟಾದ ಹಾನಿಯ ಪೂರ್ಣ ಅರಿವು ಅವರಿಗಾದದ್ದು 1950ರಲ್ಲಿ ಪ್ರಥಮ ಬಾರಿಗೆ ಮಾಸ್ಕೋಕ್ಕೆ ಪ್ರಯಾಣಿಸಿ ದಾಗ. 800 ಮೈಲುಗಳ ಪ್ರಯಾಣದುದ್ದಕ್ಕೂ ಜರ್ಮನ್ನರ ಆಕ್ರಮಣಕೋಳ್ಳಗಾಗಿ ನಾಶಮಾಡ ಲ್ಪಟ್ಟ ಸ್ಟಾಲಿನ್‌ಗ್ರಾಡ್ ರೋಸ್ಟೋವ್ ಮುಂತಾದ ನಗರಗಳನ್ನವರು ಕಂಡರು.

ಆದರೆ ಯುದ್ಧದ ಪರಿಣಾಮಗಳನ್ನು ಮಿಖಾ ಯಿಲ್ ಸಾಕಷ್ಟು ಮೊದಲೇ ಅನುಭವಿಸಿದ್ದರು. ಅವರ ತಂದೆ ಸೆರ್ಜೆ ರಶಿಯದ ಸೈನ್ಯ ಸೇರಿ ನಾಲ್ಕು ವರ್ಷಗಳವರೆಗೆ ಜರ್ಮನ್ನರೊಡನೆ

ಪೋರಾಡಿದ್ದ. ಇತ್ತ ಮನೆಯಲ್ಲಿ ತಾಯಿ ಮಾರಿಯಾಳ ಬಳಿ ಹಣವಿಲ್ಲದುದರಿಂದ ಬೂಟು ಕೊಳ್ಳಲಾಗದ್ದಕ್ಕೆ ಮಿಖಾಯಿಲ್ ಚಳಿಗಾಲದ ತಿಂಗಳುಗಳವರೆಗೆ ಶಾಲೆಗೆ ಹೋಗುವುದನ್ನೇ ಬಿಡಬೇಕಾಯಿತು. ಈ ವಿಷಯ ತಿಳಿದಾಗ ಸೆರ್ಜಿ ಮನೆಯಲ್ಲಿನ ಏನನ್ನಾದರೂ ಮಾರಿ ಮಿಖಾಯಿಲ್‌ಗೆ ಬೂಟು ಕೊಡಿಸಿ ಶಾಲೆಗೆ ಕಳಿಸುವಂತೆ ಹೆಂಡತಿಗೆ ಪತ್ರ ಬರೆದ (70 ವಯಸ್ಸು ದಾಟಿರುವ ಮಾರಿಯಾ ಈಗಲೂ ಪ್ರಿವೋಲ್‌ನೋಯ್‌ನಲ್ಲೇ ಇದ್ದಾಳೆ. ಸೆರ್ಜಿ 1976ರಲ್ಲಿ ತೀರಿಕೊಂಡ).

ಮಿಖಾಯಿಲ್ 14 ವರ್ಷದವರಿರುವಾಗಲೇ ಹೊಲದಲ್ಲಿ ಟ್ರ್ಯಾಕ್ಟರ್ ಹೊಡೆಯುತ್ತಿದ್ದರು. ಪ್ರತಿದಿನ ಶಾಲೆ ಬಿಟ್ಟ ಮೇಲೆ ಇದೇ ಕೆಲಸ. ಈ ಕಾರ್ಯಕ್ಷಮತೆಗಾಗಿ ಅವರಿಗೆ 18 ವರ್ಷದವರಿರುವಾಗಲೇ ಆರ್ಡರ್ ಆಫ್ ರೆಡ್ ಬ್ಯಾನರ್ ಆಫ್ ಲೇಬರ್ ಪುರಸ್ಕಾರ ಬಂತು. ಮುಂದಿನ ವರ್ಷ ಅಂದರೆ 1950ರಲ್ಲಿ ಅವರು ಹೆಚ್ಚಿನ ವ್ಯಾಸಂಗಕ್ಕಾಗಿ ಮಾಸ್ಕೋ ವಿಶ್ವವಿದ್ಯಾಲಯ ಸೇರಬಯಸಿದಾಗ ಅವರ ಕೃಷಿಕನ ಹಿನ್ನೆಲೆ, ತಂದೆ ಮತ್ತು ಅಜ್ಜ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದುದು, ಹೈಸ್ಕೂಲಿನಲ್ಲಿ ವರ್ಗಕ್ಕೆ ಎರಡನೇ ಸ್ಥಾನಗಳಿಸಿದ್ದಕ್ಕಾಗಿ ದೊರೆತ ರಜತ ಪದಕದೊಂದಿಗೆ ಈ ಪುರಸ್ಕಾರವೂ ಅವರಿಗೆ ಸೀಟು ದೊರಕಿಸಲು ಸಹಾಯಮಾಡಿತು.

ಮಿಖಾಯಿಲ್‌ರಿಗೆ ಭೌತಶಾಸ್ತ್ರ, ಇತಿಹಾಸ, ಸಾಹಿತ್ಯ, ಗಣಿತದಲ್ಲಿ ಆಸಕ್ತಿಯಿದ್ದರೂ ಮಾಸ್ಕೋ ವಿಶ್ವವಿದ್ಯಾಲಯದಲ್ಲಿ ಅವರು ಅಭ್ಯಸಿಸಿದ್ದು ಕಾಯ್ದೆ ವಿಷಯವನ್ನು. ಆದ್ದರಿಂದ ಅವರು ಇತರ ಎಲ್ಲ ಸೋವಿಯತ್ ವಿದ್ಯಾರ್ಥಿಗಳಂತೆ ಮಾರ್ಕ್ಸಿಸಂ ಮತ್ತು ಲೆನಿನಿಸಂಗಳಷ್ಟೇ ಅಲ್ಲ ರಾಜಕೀಯದ ಬಗೆಗೂ ಸಾಕಷ್ಟು ಅರಿತುಕೊಂಡರು. ಅದೇ ವೇಳೆಗೆ ಸ್ಟಾಲಿನ್‌ನ ಬಗ್ಗೆ ರಾಷ್ಟ್ರವಲ್ಲೆಲ್ಲ ಭಾರಿ ಪ್ರಚಾರ ನಡೆದಿತ್ತು. ಇದರಿಂದ ಮಿಖಾಯಿಲ್ ಸಹ ಸ್ಟಾಲಿನ್ನನತ್ತ ಆಕರ್ಷಿತರಾದರೂ, ರಶಿಯದ ವಾಸ್ತವಿಕ ಸಾಮಾಜಿಕ ಸ್ಥಿತಿಯ ಅರಿವು ಅವರಿಗಿತ್ತು. ಕೇವಲ ಬಲಪ್ರಯೋಗದಿಂದಲೇ ಸಮಾಜವನ್ನು ನಿಯಂತ್ರಿಸಲಾಗುತ್ತಿದೆ ಎಂಬುದನ್ನು ಅವರು ತಿಳಿದುಕೊಂಡಿದ್ದರು.

"ಬದಲಾವಣೆಯ ವಾತಾವರಣ"

'ಪೆರಿಸ್ಟ್ರೋಯ್‌ಕಾ' ಹಾಗೂ 'ಗ್ಲಾಸ್‌ನಾಸ್ಟ್' -ಇವೆರಡೂ ಮೂಲತಃ ರಶ್ಯನ್ ಪದಗಳು. 'ಪೆರೆಸ್ಟ್ರೋಯ್‌ಟ್' ಎಂಬ ಕ್ರಿಯಾಪದದಿಂದ 'ಪೆರೆಸ್ಟ್ರೋಯ್‌ಕಾ' ಹುಟ್ಟಿದೆ. 'ಪೆರೆಸ್ಟ್ರೋಯ್‌ಟ್' ಅಂದರೆ ಹೊಸತಾಗಿ ಹಾಗೂ ವಿಭಿನ್ನವಾಗಿ ನಿರ್ಮಿಸು ಅಥವಾ ಯಾವುದೇ ಒಂದು ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆಯನ್ನು ಉಂಟುಮಾಡುವುದು ಎಂದರ್ಥ. ಯಾವುದಾದರೊಂದು ವಸ್ತುವಿನ ಪುನರ್ ನಿರ್ಮಾಣ ಅಥವಾ ಪುನರ್ರಚನೆ ಎಂದೂ ಇದನ್ನು ಕರೆಯಬಹುದು.

'ಗ್ಲಾಸ್‌ನಾಸ್ಟ್' ನಾಮಪದಕ್ಕೆ 'ಗ್ಲಾಸ್‌ನ್ಯೀ' ಎಂಬ ನಾಮ ವಿಶೇಷಣವೇ ಮೂಲ ಧಾತು. ಅಂದರೆ ಸಾರ್ವಜನಿಕ ಚರ್ಚೆಗೆ ಒದಗುವಂತಹ ವಿಷಯ ಎಂದರ್ಥ. ರಶ್ಯನ್ ಸಂದರ್ಭದಲ್ಲಿ 'ಗ್ಲಾಸ್‌ನಾಸ್ಟ್'ನ್ನು ಮುಕ್ತ ಚಿಂತನೆ, ನೇರ ಸಂವಾದ ಅಥವಾ ಮುಕ್ತ ವಾತಾವರಣದಲ್ಲಿ ಸಮೂಹ ಸಂವಾದಕ್ಕೆಡೆಮಾಡಿಕೊಡಬಲ್ಲ ಸ್ವಾತಂತ್ರ್ಯ ಎಂದು ಅರ್ಥೈಸಬಹುದು.

ಮಾಸ್ಕೋದಲ್ಲಿ ಗೊರ್ಬಾಚೇವ್ ಮೂರು ವರ್ಷ ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿದ್ದರು. ಅಲ್ಲಿ ಸ್ಥಳದ ಅಭಾವದಿಂದ ಒಂದು ಕೋಣೆಯಲ್ಲಿ ಎಂಟರಿಂದ ಹತ್ತು ಜನ ವಿದ್ಯಾರ್ಥಿಗಳನ್ನು ತುಂಬಲಾಗುತ್ತಿತ್ತು. ಮುಂದೆ 1954ರ ಆರಂಭಕ್ಕೆ ಮಿಖಾಯಿಲ್ ಅದೇ ಹಾಸ್ಟೆಲ್‌ನಲ್ಲಿದ್ದ ಫಿಲಾಸಫಿ ವಿದ್ಯಾರ್ಥಿನಿ ರೈಸಾ ಮ್ಯಾಕ್ಸಿಮೋವ್ನಾ ಟಿಟೋರೆಂಕೋರನ್ನು ಮದುವೆಯಾದರು.

ವಿತನ್ಮಧ್ಯ ಮಿಖಾಯಿಲ್ 1952ರಲ್ಲಿ ಯುವಜನರ 'ಕೋಮ್ಸೋಮೋಲ್' ಸಂಸ್ಥೆ ಸೇರಿದರಲ್ಲದೆ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಆದರು. 21ರ ಹರೆಯದ ಮಿಖಾಯಿಲ್‌ರಿಗೆ ಮಾಸ್ಕೋದ ಕಾರ್ಮಿಕ ವರ್ಗದ ಪ್ರವೇಶ

ಗಳಲ್ಲಿ ಪಕ್ಷದ ಪ್ರಚಾರ ಕಾರ್ಯ ಮತ್ತು ಆ ಪ್ರದೇಶದ ಜನರ ದೂರು ದುಮ್ಮಾನಗಳನ್ನು ನೋಡಿಕೊಳ್ಳುವ ಹೊಣೆ ವಹಿಸಲಾಗಿತ್ತು. ಆಗ ಗೊರ್ಬಾಚೇವ್ ಕಮ್ಯುನಿಸ್ಟ್ ಪಕ್ಷಕ್ಕೆ ವಿರೋಧವಾಗಿದ್ದವರನ್ನು ಗುರುತಿಸಿ ಸರಕಾರಕ್ಕೆ ತಿಳಿಸಿದ್ದೂ ಉಂಟು.

1955ರಲ್ಲಿ ಕಾಯ್ದೆ ಶಿಕ್ಷಣ ಮುಗಿದ ನಂತರ ಗೊರ್ಬಾಚೇವ್ ಮತ್ತೆ ಸ್ಟಾವ್ರೋಪೋಲ್ ಪ್ರಾಂತ್ಯಕ್ಕೆ ಮರಳಿದರು. ಅದೇ ವೇಳೆಗೆ ರಶಿಯದಲ್ಲಿ ಸರಕಾರದ ಮುಷ್ಟಿ ಸ್ವಲ್ಪ ಸಡಿಲಾಗಿತ್ತು. 1953ರಲ್ಲಿ ಸ್ಟಾಲಿನ್ನನ ನಿಧನದ ನಂತರ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದ ನಿಕಿತಾ ಕ್ರುಶ್ಚೇವ್ ರಾಜಕೀಯ ಬದಲಾವಣೆಗಳಿಗೆ ಕೈಹಾಕಿದ್ದರು. 1956ರಲ್ಲಿ ನಡೆದ 20ನೇಯ ಕಮ್ಯುನಿಸ್ಟ್ ಪಕ್ಷದ ಕಾಂಗ್ರೆಸ್‌ನಲ್ಲಿ ಕ್ರುಶ್ಚೇವ್ ಸ್ಟಾಲಿನ್‌ರನ್ನು ಕಟುವಾಗಿ ಟೀಕಿಸಿದ್ದರು. ಆದರೆ ಈ ಬದಲಾವಣೆ ಮುಂದುವರಿಯಲಿಲ್ಲ. ಕೆಲ ವರ್ಷಗಳಲ್ಲೇ ಮತ್ತೆ ಬಿಗಿಯಾದ ಆಡಳಿತ ಆರಂಭವಾಯಿತು. ಆದರೂ ಆಗ ರಾಜಕೀಯದ ಬಗೆಗೆ ತಮ್ಮ ಅನಿಸಿಕೆಗಳನ್ನು ರೂಪಿಸಿಕೊಂಡ ಗೊರ್ಬಾಚೇವರಂಥ ಸುಶಿಕ್ಷಿತ ಸೋವಿಯತ್ ಜನತೆ ಇಂದಿಗೂ ತಾವು "20ನೇ ಕಾಂಗ್ರೆಸ್ಸಿನ ಮಕ್ಕಳು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಸ್ಟಾವ್ರೋಪೋಲ್‌ಗೆ ಮರಳಿದ ನಂತರ ಗೊರ್ಬಾಚೇವ್ ಅತಿ ಅಲ್ಪಾವಧಿಯಲ್ಲೆ ಪಕ್ಷದಲ್ಲಿ ಉನ್ನತ ಹುದ್ದೆಗಳಿಗೇರಿದರು. 31 ವರ್ಷದವರಿದ್ದಾಗಲೇ (1962) ಪಕ್ಷದಲ್ಲಿ ವಿವಿಧ ಹುದ್ದೆಗಳಿಗಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಲಾರಂಭಿಸಿದ ಅವರು 1970ರಲ್ಲಿ ಸ್ಟಾವ್ರೋಪೋಲ್ ಪ್ರದೇಶಕ್ಕೆ ಪಕ್ಷದ ಪ್ರಥಮ ಕಾರ್ಯದರ್ಶಿ ಎಂದು ಆಯ್ಕೆಯಾದರು. ಒಂದು ಇಡೀ ಪ್ರದೇಶದ ಆಡಳಿತ ಆ ಪ್ರದೇಶದ ಕಮ್ಯುನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯ ಕೈಯಲ್ಲಿರುತ್ತದೆ. ಏತನ್ಮಧ್ಯೆ ಅವರು ಕೃಷಿಯಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡು ಸಾಕಷ್ಟು ಪರಿಣತಿ ಹೊಂದಿದ್ದರು.

ಗೊರ್ಬಾಚೇವ್‌ರ ಮೇಲೆ ಬಹಳ ಭರವಸೆ ಇಟ್ಟಿದ್ದ ಸ್ಟಾವ್ರೊಪೋಲ್‌ನ ಪಕ್ಷದ ಮುಖ್ಯಸ್ಥ ಫ್ಯೋಡೋರ್ ಕುಲಾಕೋವ್ 70ರ ದಶಕದಲ್ಲಿ ರಶಿಯದ ಕೃಷಿಕಾರ್ಯದರ್ಶಿಯೆಂದು ಮಾಸ್ಕೋಗೆ ತೆರಳಿದ ನಂತರ ಗೊರ್ಬಾಚೇವ್ ಪಕ್ಷದ ಮುಖ್ಯಸ್ಥರಾದರು. ಆಗ ಚಿಕಿತ್ಸೆ ಹಾಗೂ ವಿಶ್ರಾಂತಿಗೆಂದು ಮೇಲಿಂದ ಮೇಲೆ ಸ್ಟಾವ್ರೊಪೋಲ್‌ಗೆ ಬರುತ್ತಿದ್ದ ಮಾಸ್ಕೋದ ಹಿರಿಯ ನಾಯಕರೊಂದಿಗೆ ಅವರ ಸಂಪರ್ಕ ಬೆಳೆಯಿತು. ಅಲ್ಲದೆ ಗೊರ್ಬಾಚೇವ್ ಸ್ವಚ್ಛ ಆಡಳಿತಕ್ಕೆ ಬಹಳ ಹೆಸರಾಗಿದ್ದರು. ಇದೆಲ್ಲ ಮಾಸ್ಕೋದ ಇಬ್ಬರು ಹಿರಿಯ ನಾಯಕರನ್ನು ಪ್ರಭಾವಿಸಿತು. ರಶಿಯದ ಮುಖ್ಯ ತತ್ವವಾದಿಯಾಗಿದ್ದ ಮಿಖಾಯಿಲ್ ಸುಸ್ಲೋವ್ ಮತ್ತು ಕೆಜಿಬಿ ಮುಖ್ಯಸ್ಥ ಯೂರಿ ಆ್ಯಂಡ್ರೋಪೋವ್ ಬ್ರೆಜ್ನೇವ್ ಆಡಳಿತದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರದಿಂದ ಬೇಸತ್ತಿದ್ದರು. ಗೊರ್ಬಾಚೇವ್‌ರಿಂದ ಆಕರ್ಷಿಸಲ್ಪಟ್ಟ ಅವರಿಬ್ಬರೂ 1978ರಲ್ಲಿ ಕುಲಾಕೋವ್ ನಂತರ ತಮ್ಮ ಶಿಷ್ಯ ಕೃಷಿ ಕಾರ್ಯದರ್ಶಿಯ ಹುದ್ದೆಗೇರುವಲ್ಲಿ ಪ್ರಮುಖ ಪಾತ್ರ ವಹಿಸಿದರು.

47ನೇ ವಯಸ್ಸಿಗೆ ರಾಷ್ಟ್ರೀಯ ರಂಗ ಸೇರಿ ರಶಿಯದ ನಾಯಕರ ಪಟ್ಟಿಯಲ್ಲಿ 20ನೇ ಸ್ಥಾನದಲ್ಲಿದ್ದ ಗೊರ್ಬಾಚೇವ್ ನಂತರ ಏಳು ವರ್ಷಗಳಲ್ಲಿ ಅತ್ಯುನ್ನತ ಸ್ಥಾನಕ್ಕೇರಿದ್ದೂ ಒಂದು ಅದ್ಭುತ ಸಾಧನೆಯೇ ಹಾಗೆ ನೋಡಿದರೆ ಅವರು ಕೃಷಿ ಕಾರ್ಯದರ್ಶಿಯಾಗಿದ್ದಾಗ ರಾಷ್ಟ್ರದ ಆಹಾರೋತ್ಪಾದನೆ ಬಹಳ ಕಡಿಮೆಯಾಗಿತ್ತು. ಈ ಎಲ್ಲ ಗೊಂದಲದ ಮಧ್ಯೆಯೇ ಗೊರ್ಬಾಚೇವ್ ಬೆಳೆಯುತ್ತಲೇ ಹೋದರು. ಮಾಸ್ಕೋಕ್ಕೆ ಹೋದ ಒಂದೇ ವರ್ಷದಲ್ಲಿ ಪ್ರತಿಷ್ಠಿತ ಪಾಲಿಟ್‌ಬ್ಯುರೋದ ಸದಸ್ಯರಾದರು.

1982ರಲ್ಲಿ ಬ್ರೆಜ್ನೇವ್ ನಿಧನದ ನಂತರ ಅವರ ಸ್ಥಾನಕ್ಕೇರಿದ ಆ್ಯಂಡ್ರೋಪೋವರಿಗೆ ಗೊರ್ಬಾಚೇವ್ ಬಲಗೈ ಬಂಟರಾದರು. 1984ರಲ್ಲಿ ಆ್ಯಂಡ್ರೋಪೋವ್ ಮರಣದ ನಂತರ ಗೊರ್ಬಾಚೇವ್‌ರೇ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಬಹುದೆಂಬ ನಿರೀಕ್ಷೆಯಿದ್ದರೂ ಈ ಹುದ್ದೆ ಚೆರ್ನೆಂಕೋರಿಗೆ ಹೋಯಿತು. ಆದರೆ 72 ವರ್ಷ ವಯಸ್ಸಾಗಿದ್ದ ಚೆರ್ನೆಂಕೋ ನಿತ್ಯ ರೋಗಿಯಾಗಿದ್ದರಿಂದ ವಾಸ್ತವಿಕವಾಗಿ ರಾಷ್ಟ್ರದ ಆಡಳಿತ ನಡೆಸುವ ಜವಾಬ್ದಾರಿಯೆಲ್ಲ ಗೊರ್ಬಾಚೇವ್‌ರ

ಮೇಲೆಯೇ ಬಿದ್ದಿತ್ತು. ಚೆರ್ನೆಂಕೋ ಮರಣಾನಂತರ ಅನೇಕ ಪಾಲಿಟ್‌ಬ್ಯುರೋ ಸದಸ್ಯರು ಗೋರ್ಬಾಚೇವ್ ಪ್ರಧಾನ ಕಾರ್ಯದರ್ಶಿಯಾಗುವುದನ್ನು ವಿರೋಧಿಸಿದರೂ ಯಶಸ್ವಿಯಾಗಲಿಲ್ಲ.

ಅಧಿಕಾರಕ್ಕೆ ಬಂದಾಗಿನಿಂದ ಗೋರ್ಬಾಚೇವ್ ರಾಷ್ಟ್ರದ ಜನತೆಯ ಸಮಸ್ಯೆಗಳನ್ನು ಪ್ರತ್ಯಕ್ಷ [illegible]. ಸೋವಿಯತ್ ಜನತೆಗೆ ಇದೊಂದು ಹೊಸ ಅನುಭವ. ಗೋರ್ಬಾಚೇವ್ ಒಳ್ಳೆಯ ಮಾತುಗಾರ. ಇದು ಅವರ ಹುಟ್ಟು ಗುಣ. ಅವರ ಭಾಷಣಗಳು ಯಾವಾಗಲೂ ರಸಭರಿತವಾಗಿರುತ್ತವೆ.

ಗೋರ್ಬಾಚೇವ್ ತಮ್ಮ ಕಾರ್ಯಸ್ಥಾನವಾದ ಕ್ರೆಮ್ಲಿನ್‌ಗೆ ಬೆಳಿಗ್ಗೆ ಒಂಬತ್ತು ಗಂಟೆಗೆ ಹೊರಡುತ್ತಾರೆ. ಅವರ ಕಾರಿನ ಹಿಂದೆ ಎರಡು ವಾಹನಗಳಲ್ಲಿ ಅಂಗರಕ್ಷಕರು ಸಹಾಯಕರಿರುತ್ತಾರೆ. ಅದರ ಹಿಂದೆ ಇನ್ನೊಂದು ವಾಹನ ಸಂಪೂರ್ಣ ಮುಸುಕಿನಿಂದಾವೃತವಾಗಿದ್ದು [illegible] ವೆ. ಅಣ್ವಸ್ತ್ರ ಹಾರಿಬಿಡಲು ಸೂಚನೆ [illegible] ಇಂಚು ವಹಿಸಿಯಿದೆ. ಸಭೆ ಸಮಾರಂಭಗಳಿರದಿದ್ದರೆ ಅವರು ಸಾಯಂಕಾಲ ಆರು ಗಂಟೆಗೆ ಮನೆಗೆ ಮರಳುತ್ತಾರೆ. ವಿಶ್ರಾಂತಿಯ ವೇಳೆಯಲ್ಲಿ ನಾಟಕಗಳನ್ನು ನೋಡುವ ಹವ್ಯಾಸ ಗೋರ್ಬಾಚೇವ್ ದಂಪತಿಗಳಿಗೆ. ಅವರ ಏಕೈಕ ಪುತ್ರಿ, 28 ವರ್ಷ ವಯಸ್ಸಿನ ಐರಿನಾ, ಡಾಕ್ಟ[illegible]ದ್ದಾಳೆ. ಐರಿನಾಳ ಪತಿಯ ಮೊದಲ ಹೆಸರು [illegible] ವಿವರಗಳು ದೊರೆತಿಲ್ಲ. ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಮೊದಲನೆಯ ಮಗು ಒಕ್ಸಾನಾ (ಅವಳನ್ನು ಕ್ಸೆನಿಯಾ ಎಂದು ಕರೆಯುತ್ತಾರಂತೆ) ಸುಮಾರು ಹತ್ತು ವರ್ಷದವಳಿರ [illegible] ಮಗುವಿನ ಬಗ್ಗೆ ಯಾವುದೇ ವಿವರಗಳು ದೊರೆ[illegible].

ಗೋರ್ಬಾಚೇವ್‌ರಿಗೆ ಲೆನಿನಿಸಂದಲ್ಲಿ ಬಹಳ [illegible]ಬಿಕೆ. "ರಾಜಕೀಯದಲ್ಲೂ ಲೆನಿನಿಸಂನ್ನು ಅಳವಡಿಸುವುದು ನಮ್ಮ ಉದ್ದೇಶ" ಎಂದವರು ತಮ್ಮ ಪುಸ್ತಕ "ಪೆರೆಸ್ಟ್ರೊಯಿಕಾ"ದಲ್ಲಿ ಹೇಳುತ್ತಾರೆ. ಹಲವಾರು ವರ್ಷಕಾಲ ಸರ್ವಾಧಿಕಾರಿ ಮುಷ್ಟಿಯಲ್ಲಿ ಸಿಕ್ಕು ನರಳಿದ ರಶಿಯಕ್ಕೆ ಹೊಸ ಚೇತನ ನೀಡುವುದು ತಮ್ಮ ಉದ್ದೇಶ ಎಂದು ಅವರು ಘೋಷಿಸಿದ್ದಾರೆ. ಅವರ "ಪೆರೆಸ್ಟ್ರೊಯಿಕಾ" ಯೋಜನೆಯಡಿಯಲ್ಲಿ ಮುಖ್ಯವಾಗಿ ರಶಿಯದಲ್ಲಿ ಆರ್ಥಿಕ್ಷೇಯ ಪದ್ಧತಿ ಆರಂಭವಾಗಲಿದೆ. ಇತ್ತೀಚಿನ ಕಮ್ಯುನಿಸ್ಟ್ ಪಕ್ಷದ 19ನೇ ಸಮ್ಮೇಳನದಲ್ಲಿ ಅವರ ಈ ಯೋಜನೆಗೆ ಒಪ್ಪಿಗೆ ದೊರೆತಿದ್ದು 1989ರ ಏಪ್ರಿಲ್‌ನಲ್ಲಿ ಅದು ಜಾರಿಗೆ ಬರುವ ನಿರೀಕ್ಷೆಯಿದೆ.

ಅವರ "ಗ್ಲಾಸನಾಸ್" ಗಾಳಿ ಯುರೋಪಿನ ಕಮ್ಯುನಿಸ್ಟ್ ಬಣದ ರಾಷ್ಟ್ರವಾದ ಹಂಗೇರಿಯಲ್ಲೂ ಬೀಸತೊಡಗಿದೆ. ಕಟ್ಟಾ ಕಮ್ಯುನಿಸ್ಟರ ಬದಲಾಗಿ ಉದಾರಮತವಾದಿಗಳು [illegible] ಚೇವ್‌ಗೆ ಸಮಾಜವಾದದಲ್ಲಿ ಅಚಲ ನಂಬಿಕೆ. ರಶಿಯದಲ್ಲಿ ಕೊಂಚ ಮುಕ್ತ ವಾತಾವರಣ ಜಾರಿಗೆ ತಂದಿರುವುದರ ಹಿಂದಿನ ಉದ್ದೇಶ ಜನತೆಗೆ ಸಮಾಜವಾದದ ಪ್ರಜಾಪ್ರಭುತ್ವದ ಅಂಗವನ್ನು ಪರಿಚಯಿಸುವುದು ಮಾತ್ರ ಎಂದವರು ಹೇಳುತ್ತಾರೆ. ಪ್ರಜಾಪ್ರಭುತ್ವ ಪದ್ಧತಿಯಂತೆ ತಮ್ಮ ದೇಶದಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳು ಸ್ಥಾಪನೆಯಾಗುವುದಕ್ಕೆ [illegible]ಕಾಶ ನೀಡುವ ಯಾವುದೇ ವಿಚಾರ ಅವರಲ್ಲಿಲ್ಲ. ರಶಿಯದ ಆಂತರಿಕ ಬೆಳವಣಿಗೆಗೆ ಕೊಂಚ ಮುಕ್ತ ವಾತಾವರಣ ಅತ್ಯವಶ್ಯ ಎಂಬುದು-ಅವರ ಅಭಿಪ್ರಾಯ.

ಆದರೆ ಇದಕ್ಕಾಗಿ ತಮ್ಮ ವಿದೇಶ ನೀತಿಯಲ್ಲೂ ಬದಲಾವಣೆ ಅವಶ್ಯ ಎಂಬುದನ್ನು ಮನಗಂಡ ಗೋರ್ಬಾಚೇವ್ ಆ ದಿಶೆಯತ್ತ ಕಾರ್ಯ ಮಗ್ನರಾಗಿದ್ದಾರೆ. ಅನೇಕ ವ[illegible] ನಾಯಕರ ನಂತರ ಪ್ರಧಾನ ಕಾರ್ಯದರ್ಶಿಯಾಗಿ [illegible] ರಾದುದರಿಂದ ಹೊರ ಜಗತ್ತು ಅವರ ಮನೋ[illegible]. ಅಣ್ವಸ್ತ್ರ ಸಂಗ್ರಹ ಅರ್ಥವಿಲ್ಲದ್ದೆಂದು ಅರಿತುಕೊಂಡು ಗೋರ್ಬಾಚೇವ್ ಮಧ್ಯಮ ದೂರ ಗಾಮಿ ಮತ್ತು ಅಲ್ಪದೂರಗಾಮಿ ಕ್ಷಿಪಣಿ ಸಂಗ್ರಹ ಕಡಿಮೆಗೊಳಿಸುವ ಬಗ್ಗೆ 1987ರ

ಹಂತಕ್ಕೆ ಅಮೆರಿಕದೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಇದರ ಪರಿಣಾಮ ಏನೇ ಇರಲಿ, ಇದೊಂದು ಮಹತ್ವದ ಬೆಳವಣಿಗೆ. ನಂತರ ಇತ್ತೀಚೆಗೆ ಅಮೆರಿಕ ರಶಿಯಗಳ ಮಧ್ಯೆ ಬಂದ ಅಫಘಾನಿಸ್ತಾನ ಒಪ್ಪಂದದಂತೆ ರಶಿಯದ ಸೇನೆ ಹಂತಹಂತವಾಗಿ ತವರಿಗೆ ಮರಳಲಾರಂಭಿಸಿದೆ.

ಆದರೂ ಅನೇಕ ಪಾಶ್ಚಿಮಾತ್ಯರಿಗೆ ಗೋರ್ಬಾಚೇವ್‌ರಲ್ಲಿ ಇನ್ನೂ ವಿಶ್ವಾಸ ಮೂಡಿಲ್ಲ. ಇದೆಲ್ಲ ಕಮ್ಯುನಿಸ್ಟರ ನಾಟಕವೆಂದೇ ಅವರ ನಂಬಿಕೆ. ಈ ನಂಬುಗೆಯಲ್ಲಿ ಹುರುಳಿಲ್ಲವೆಂದು ಸಿದ್ಧಮಾಡಿ ತೋರಿಸುವ ಹೊಣೆ ಈಗ ಗೋರ್ಬಾಚೇವ್‌ರ ಮೇಲಿದೆ. ●

(ಆಧಾರ: 'ಟೈಮ್')

ರಶಿಯನ್ ಗಾದೆಗಳು

- ಗೋಲಿಯೊಂದು ಪೆಚ್ಚು, ಕತ್ತಿಯೇ ಚೂಪು.
- ಕಲೆಗಾರನಿಗೆ ಕೆಲಸ ಹೆದರುತ್ತದೆ.
- ಈಜುವುದೆಲ್ಲಾ ಮೀನಲ್ಲ.
- ಒಬ್ಬ ಮನುಷ್ಯನ ಮುಂದೆ ಇಬ್ಬರೇ ಒಂದು ಸೈನ್ಯ.
- ಕಂಠವಿಲ್ಲದವನಿಗೇ ಹಾಡಲು ಇಷ್ಟ.
- ಹರಟೆಗೆ ಪಾವನವೇ ಬೇಕಿಲ್ಲ.
- ನಿನಗೊಂದು ದಾಂಪಾಡಿಕೊಂಡು ಬೇಟೆಯಾಡು.
- ಹೆಂಡತಿ ನಿನ್ನನ್ನು ಹೊಗಳಿದರೆ ಏನೋ ತಂತ್ರ ಹೂಡಿದ್ದಾಳೆಂತ...
- ಕುಸ್ತಿಗೆ ಹೊರಡಲು ಇಬ್ಬರು ಜಂಬಪಡುವರು; ನಂತರ ಒಬ್ಬನೇ!
- ಕೈ ಚೀಲದಲ್ಲಿ ಕೊಡತಿಯನ್ನು ಮುಚ್ಚಿಡಲಾದೀತೆ?
- ರಣಹದ್ದು ನೊಣಗಳನ್ನು ಹಿಡಿಯುವುದಿಲ್ಲ.
- ತೋಳ ಹಲ್ಲು ತೋರಿಸಿದರೂ ಅದು ನಗುವಲ್ಲ.
- ನನಗೆ ಮೊಮ್ಮಕ್ಕಳಾದಾಗ ಕಟ್ಟುಕತೆ ಕಲಿಯುತ್ತೇನೆ.
- ಅಡಿಗೆಯವನು ಹಸಿವೆಯಿಂದಂತೂ ಸಾಯುವುದಿಲ್ಲ.
- ಮನೆಯಲ್ಲೇ ಇದ್ದರೆ ಮುಂದಾಳುತನವೆಲ್ಲಿ?
- ನೀರ ಮೇಲೆ ಹೋಗದವನಿಗೆ ದೇವರೆಂಬುದೇ ತಿಳಿಯದು
- ಮೆಲ್ಲಗೆ ನಡೆದಷ್ಟೂ ಹೆಚ್ಚು ದೂರ ಹೋಗಬಹುದು.
- ಒಂದು ದಿನಕ್ಕಾಗಿ ಪಯಣ ಬೆಳೆಸಿದರೆ ಒಂದು ವಾರದ ಆಹಾರ ಚೀಲದಲ್ಲಿರಲಿ.
- ಅಧಿಕಾರಿಗಳಿಗೆ ಬಿಸಿಯೂಟ, ಹಸಿದವರಿಗೆ ಹಳಸಿದೂಟ.
- ಕೇಳುವುದಂತೂ ಬಹಳ; ಆದರೂ ಕೊಟ್ಟಷ್ಟು ತೆಗೆದುಕೋ.
- ನಾಳೆಗೆ ಕೊನೆಯೇ ಇಲ್ಲ.

ಭೇದಿ

ಕೆಲವು ದೈಹಿಕ ರೋಗ ಲಕ್ಷಣಗಳ ಮೂಲ ಮಾನಸಿಕವಾಗಿರಲೂಬಹುದು

● ಡಾ|| ಕೆ.ಎಂ. ಧ್ರುವಕುಮಾರ ●

ಮಹೇಶ ಇಪ್ಪತ್ತಾರು ವರ್ಷ ವಯಸ್ಸಿನ ತರುಣ. ಐದಾರು ವರ್ಷಗಳಿಂದ ಅವನಿಗೆ ಭೇದಿಯ ತೊಂದರೆ. ಅನೇಕ ವೈದ್ಯರಲ್ಲಿ ಪರೀಕ್ಷಿಸಿಕೊಂಡು ಔಷಧಿ ತೆಗೆದುಕೊಂಡ ನಾದರೂ ಸಂಪೂರ್ಣ ಗುಣವಾಗಲಿಲ್ಲ. ಆಮ ಶಂಕೆಯ ಕುರುಹುಗಳೇನೂ ಇರಲಿಲ್ಲ ಬಹಳ ನೀರಾಗಿ ಭೇದಿಯಾಗುತ್ತಿದ್ದು ಕೆಲವೊಮ್ಮೆ ವಾಂತಿಯೂ ಆಗುತ್ತಿತ್ತು. ಇದಕ್ಕೆ ಕಾರಣವೇ ನೆಂಬುದನ್ನು ಕಂಡು ಹಿಡಿಯಲು ವೈದ್ಯರಿಗೆ ಸಾಧ್ಯವಾಗಲಿಲ್ಲ. ಇದಕ್ಕೆ ಮಾನಸಿಕ ರೋಗ ಕಾರಣವಾಗಿರಬಹುದೆಂಬ ಶಂಕೆಯನ್ನು ಅವರು ವ್ಯಕ್ತಪಡಿಸಲಿಲ್ಲ. ಕೊನೆಗೆ ಮಹೇಶನಿಗೆ ಆ ಶಂಕೆ ಮೂಡಿತು. ಒಂದೆರಡು ವರ್ಷಗಳ ನಂತರ ಅದು ಬಲವಾಯಿತು.

ಆದರೂ ಏನೋ ಅಳುಕಿನಿಂದ ನನ್ನನ್ನು ಭೆಟ್ಟಿ ಯಾಗಲು ಬಂದ. ತನಗೆ ಭೇದಿ ಆಗುವು ದೊಂದನ್ನು ಬಿಟ್ಟರೆ ಬೇರೆ ಯಾವ ಶಾರೀರಿಕ ತೊಂದರೆಗಳಿಲ್ಲವೆಂದು ತಿಳಿಸಿದ. ಬಹಳ ತೆಳ್ಳ ಗಿರುವ ಅವನಿಗೆ ದಷ್ಟಪುಷ್ಟನಾಗಬೇಕೆಂಬ ಆಸೆ. ಆದರೆ ಎಲ್ಲಿ ಅಜೀರ್ಣವಾಗಿ ಭೇದಿಯಾ ಗುವುದೋ ಎಂಬ ಭಯದಿಂದ ಬಹಳ ಕಡಿಮೆ ಆಹಾರ ಸೇವಿಸುತ್ತಿದ್ದ. ಆದರೆ ಎಷ್ಟೇ ಮಿತ ಆಹಾರ ಸೇವಿಸಿದರೂ ಭೇದಿಯ ತೊಂದರೆ ತಪ್ಪಲಿಲ್ಲ.

ಒಂದು ಶಿಕ್ಷಣ ಸಂಸ್ಥೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ಮಹೇಶನಿಗೆ ನಿರಂತರ ಭೇದಿಯ ತೊಂದರೆಯಿದ್ದರೂ ಅವನ ಮುಖದ ಮೇಲೆ ಸದಾ ಮುಗುಳ್ನಗೆಯಿರು ತ್ತಿತ್ತು. ಸ್ವಲ್ಪ ಸಂಕೋಚ ಸ್ವಭಾವದ ಆತ ಮಿತ ಭಾಷಿ. ಕೆಲವರೊಂದಿಗೆ ಮಾತ್ರ ಆತ್ಮೀಯ ಗೆಳೆತನವಿತ್ತು. ಮಾತನಾಡುವಾಗ ಅವನಿಗೆ ಆಗಾಗ ಏಕಾಗ್ರತೆ ಕಡಿಮೆಯಿದ್ದಂತೆ ತೋರಿತು. ಉಳಿದ ಯಾವುದೇ ಶಾರೀರಿಕ ತೊಂದರೆ ಅಥವಾ ನರರೋಗವಿದ್ದಂತೆ ಕಾಣ ಲಿಲ್ಲ. ನಂತರ ಟಿ.ಎ.ಟಿ. ಪರೀಕ್ಷೆ ಮಾಡಿ ನೋಡಿದಾಗ ಅವನಿಗೆ ಲೈಂಗಿಕ ಸಮಸ್ಯೆಯಿರ ಬಹುದೆಂಬ ಶಂಕೆ ಮೂಡಿತು. ಆದ್ದರಿಂದ ನಾರ್ಕೊ ಪರೀಕ್ಷೆ ಮಾಡಲು ನಿರ್ಧರಿಸಿದೆ.

ಮಹೇಶ ತನಗೆ ಭೇದಿಯಾಗುತ್ತದೆ ಎಂದು ಹೇಳಲು ಬಳಸಿದ ಪದ 'ಲೀಕ್' (Leak) ಮೊದಲು ನನಗೆ ಒಮ್ಮೆಲೆ ಅರ್ಥವಾಗಲಿಲ್ಲ. ನಾರ್ಕೊ ಪರೀಕ್ಷೆಯ ಕಾಲಕ್ಕೂ ಅದೇ ಪದ ವನ್ನು ಬಳಸಿದ. ನಂತರ ಬೇರೆ ಸಮಸ್ಯೆಯೇ ನಾದರೂ ಇದೆಯೇ ಎಂದು ಕೇಳಿದಾಗ ನಿದ್ರೆ ಯಲ್ಲಿ ತನಗೆ ಹೆಚ್ಚಾಗಿ ಲೈಂಗಿಕ ಕನಸುಗಳು ಬೀಳುತ್ತವೆಂದೂ ನಾಲ್ಕೈದು ದಿನಗಳಿಗೊಮ್ಮೆ 'ಲೀಕ್' ಆಗುತ್ತದೆಂದೂ ಹೇಳಿದ. ನಾನು ಲೈಂಗಿಕ ಕನಸುಗಳಿಗೂ 'ಲೀಕ್' ಅಥವಾ ಭೇದಿಯಾಗುವುದಕ್ಕೂ ಏನು ಸಂಬಂಧ ಎಂದು ಕೇಳಿದೆ. ಆಗ ಅವನು ತಾನು ಈಗ "ಲೀಕ್" ಪದ ಬಳಸಿದ್ದು ಭೇದಿ ಎಂಬರ್ಥದಲ್ಲಿ ಅಲ್ಲ ವೆಂದೂ, ವೀರ್ಯಸ್ಖಲನದ ಬಗ್ಗೆ ಹೇಳುತ್ತಿರು ವುದಾಗಿಯೂ ತಿಳಿಸಿದ. ಅವನು ಭೇದಿಗೂ ವೀರ್ಯಸ್ಖಲನಕ್ಕೂ ಒಂದೇ ಪದವನ್ನು ಏಕೆ ಬಳಸುತ್ತಿದ್ದಾನೆಂಬುದನ್ನು ತಿಳಿಯಬಯಸಿದೆ. ಅವನ ಪ್ರಕಾರ ವೀರ್ಯ ಮತ್ತು ಭೇದಿ ಎರಡೂ

ದ್ರವಗಳು. ಹಾಗೂ ಎರಡೂ ದೇಹಕ್ಕೆ ಕೆಡಕನ್ನುಂಟು ಮಾಡುತ್ತವೆ. ವೀರ್ಯಸ್ಖಲನದಿಂದ ದೇಹ ನಿಶ್ಶಕ್ತವಾಗುತ್ತದೆ. ಆ ನಿಶ್ಶಕ್ತಿ ಕರುಳಿನಲ್ಲಿರುವುದರಿಂದ ಭೇದಿಯಾಗುತ್ತದೆಂದು ಅವನ ಭಾವನೆ. ರಾತ್ರಿ ಅವನಿಗೆ ವೀರ್ಯಸ್ಖಲನವಾದರೆ ಮರುದಿನದಿಂದ ಮೂರ್‍ನಾಲ್ಕು ದಿನಗಳವರೆಗೆ ಭೇದಿಯಾಗುತ್ತಿತ್ತು. ಅಷ್ಟರಲ್ಲಿ ಮತ್ತೊಮ್ಮೆ ವೀರ್ಯಸ್ಖಲನವಾದರೆ ಭೇದಿ ಮತ್ತೆ ಮುಂದುವರಿಯುತ್ತಿತ್ತು. ಸಾಧಾರಣವಾಗಿ ಮೂರ್‍ನಾಲ್ಕು ದಿನಗಳಿಗೊಮ್ಮೆ ವೀರ್ಯಸ್ಖಲನವಾಗುತ್ತಿತ್ತಾದ್ದರಿಂದ ಅವನಿಗೆ ಭೇದಿಯಿಂದ ಮುಕ್ತಿಯೇ ಇಲ್ಲದಂತಾಗಿತ್ತು. ವೀರ್ಯಸ್ಖಲನ ಕೆಟ್ಟದ್ದೆಂದು ಭಾವಿಸಿ ಅದನ್ನು ತಡೆಯಲು ಪ್ರಯತ್ನಿಸುತ್ತಿದ್ದ. ಆದರೆ ಅದು ಕಡಿಮೆಯಾಗುತ್ತಿರಲಿಲ್ಲ. ಜೊತೆಗೆ ಲೈಂಗಿಕ ಆಲೋಚನೆಗಳೂ ಬರುತ್ತಿದ್ದವಾದ್ದರಿಂದ ತಾನೊಬ್ಬ ಅತಿ ಕಾಮುಕ ಎಂಬ ಭಾವನೆ ಅವನಲ್ಲಿ ಬೇರೂರಿ ಮನಸ್ಸಿಗೆ ಬೇಸರ ಮಾಡಿಕೊಂಡಿದ್ದ.

ಐದು ವರ್ಷಗಳಲ್ಲಿ ಇಂಥ ಅತಿಯಾದ ಲೈಂಗಿಕ ಆಲೋಚನೆಗಳಿಂದ ಪಾರಾಗಲು ಸಾಧ್ಯವಾಗದೆ ಏಕಾಗ್ರತೆ ಕಳೆದುಕೊಂಡು, ಓದಿಗೆ ಶರಣುಹೊಡೆಯಬೇಕಾಯಿತು. ತನ್ನ ತಲೆಯಿಂದ ಆ ಲೈಂಗಿಕ ಆಲೋಚನೆಗಳು ತೊಲಗಿದಲ್ಲಿ ಮಾತ್ರ ವೀರ್ಯಸ್ಖಲನವಾಗುವುದು ನಿಂತು ತನಗೆ ಭೇದಿಯ ತೊಂದರೆ ತಪ್ಪುವುದೆಂಬುದು ಅವನ ಮನದಲ್ಲಿ ಆಳವಾಗಿ ಬೇರೂರಿತ್ತು. ಇವಿಷ್ಟು ನಾರ್ಕೊ ಪರೀಕ್ಷೆಯಲ್ಲಿ ತಿಳಿದು ಬಂದ ಅಂಶಗಳು. ನಂತರ ಅವನಿಗೆ ಮನಸ್ಸನ್ನು ಶಾಂತವಾಗಿಡುವ ಮಾತ್ರೆಗಳನ್ನು ಕೊಟ್ಟು ವಾರಕ್ಕೊಮ್ಮೆ ಬಂದು ನನ್ನನ್ನು ಭೇಟಿಯಾಗುವಂತೆ ತಿಳಿಸಿದೆ.

ಮುಂದಿನ ಕೆಲ ಭೇಟಿಗಳಲ್ಲಿ ಲೈಂಗಿಕ ಆಲೋಚನೆಗಳು, ವೀರ್ಯಸ್ಖಲನ ಅವನ ವಯಸ್ಸಿಗೆ ಸಹಜವೆಂದು ಮಹೇಶನಿಗೆ ತಿಳಿಹೇಳಲು ಪ್ರಯತ್ನಿಸಿದೆ. ಅವನಿಗೆ ಈ ವಯಸ್ಸಿನಲ್ಲಿ ಲೈಂಗಿಕ ಆಲೋಚನೆಗಳು ಬರದಿದ್ದರೇನೆ ಅವನು ಆರೋಗ್ಯಕರವಾಗಿಲ್ಲವೆಂದು ಅರ್ಥವೆಂದು ಹೇಳಿದೆ. ಮೊದಮೊದಲು ಅವನು ನನ್ನ ಮಾತನ್ನು ನಂಬಲಿಲ್ಲ. ವೀರ್ಯಸ್ಖಲನ ಕೆಟ್ಟದ್ದೆಂದೂ ಅದು ನಿಶ್ಶಕ್ತಿಯನ್ನುಂಟುಮಾಡುತ್ತದೆಂದೂ ಅವನು ಎಲ್ಲಿಯೋ ಓದಿದ್ದ. ಅದು ಅವನ ಮನದಲ್ಲಿ ಆಳವಾಗಿ ಬೇರೂರಿತ್ತು. ಆದರೆ ನನ್ನ ಮಾತನ್ನು ಅಲ್ಲಗಳೆದರೆ ನನಗೆ ಅಗೌರವ ವ್ಯಕ್ತಪಡಿಸಿದಂತೆ ಎಂದು ಅವನ ಭಾವನೆ. ನಾನು ಎಷ್ಟೇ ತಿಳಿಹೇಳಿದರೂ ಮತ್ತೆ ತಾನು ಓದಿದ್ದನ್ನೇ ಹೇಳುತ್ತಿದ್ದ.

ಅವನು ಓದಿರುವುದೆಲ್ಲ ಕೀಳು ದರ್ಜೆಯ ಸಾಹಿತ್ಯವಾಗಿದ್ದು, ಅದನ್ನು ನಂಬಬಾರದೆಂದು ಪದೇ ಪದೇ ವಿವರಿಸಿ ಹೇಳಿದೆ. ನನ್ನ ಮೇಲೆ ಅವನಿಗೆ ನಂಬಿಕೆಯಿತ್ತಾದರೂ, ಅವನ ಸಮಾಧಾನಕ್ಕೋಸ್ಕರ ನಾನು ಸುಳ್ಳು ಹೇಳುತ್ತಿದ್ದೇನೆಂದು ಅವನ ಭಾವನೆ. ವೈದ್ಯರು ರೋಗಿಗಳ ಸಮಾಧಾನಕ್ಕೋಸ್ಕರ ಸುಳ್ಳು ಹೇಳುವ ಸಂಗತಿ ನಿಜವಾದರೂ, ಅವನ ರೋಗದ ಬಗೆ ಸುಳ್ಳು ಹೇಳುವ ಅವಶ್ಯಕತೆಯಿಲ್ಲ ಎಂದು ತಿಳಿಸಿದೆ. ಅವನಿಗೆ ನನ್ನ ಮಾತಿನ ಮೇಲೆ ನಂಬಿಕೆಯಿರದಿದ್ದರೆ ಖ್ಯಾತ ವೈದ್ಯಕೀಯ ಸಂಸ್ಥೆಗಳಿಗೆ ಬರೆದು ಕೇಳುವಂತೆ ಅಥವಾ ಉತ್ತಮ ವೈದ್ಯಕೀಯ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುವಂತೆ ಸೂಚಿಸಿದೆ. ವೀರ್ಯದಲ್ಲಿ ಬೀಜಾಣುಗಳು, ಮತ್ತು ಅವು ಕೊಂಚ ಕಾಲ ಬದುಕಿರಲು ಅವಶ್ಯಕವಾದ ದ್ರವಗಳು ಮಾತ್ರ ಇವೆಯೆಂದೂ, ದೇಹಕ್ಕೆ ಶಕ್ತಿ ನೀಡುವ ಅಂಶ ಅದರಲ್ಲಿಲ್ಲವೆಂದು ವಿವರಿಸಿದೆ.

ಮಹೇಶನಿಗೆ ಇನ್ನೊಂದು ಸಂಶಯವಿತ್ತು. ನೈಸರ್ಗಿಕ ಲೈಂಗಿಕ ಕ್ರಿಯೆಯಲ್ಲಿ ಸ್ಖಲನವಾಗುವ ವೀರ್ಯ ದೇಹಕ್ಕೆ ಕೆಡುಕಲ್ಲವೆಂದೂ, ಸ್ವಪ್ನಸ್ಖಲನ, ಮುಷ್ಟಿ ಮೈಥುನ ಮುಂತಾದ ಕ್ರಿಯೆಗಳಿಂದ ಹೊರಬರುವ ವೀರ್ಯ ಕೆಟ್ಟದ್ದೆಂದೂ ಅವನ ಭಾವನೆ. ಅವನ ತಿಳುವಳಿಕೆ ತಪ್ಪೆಂದು ಮನದಟ್ಟಾಗುವಂತೆ ವಿವರಿಸಿದೆ. ವೀರ್ಯಸ್ಖಲನ ದೇಹಕ್ಕೆ ಕೆಡುಕಲ್ಲವಾದರೆ, ತನಗೆ ಮರುದಿನದಿಂದ ಭೇದಿ ಏಕೆ ಆಗುತ್ತದೆ ಎಂದು ಮಹೇಶ್ ಪ್ರಶ್ನಿಸಿದ. ಅವೆರಡಕ್ಕೂ ಏನೂ ಸಂಬಂಧವಿಲ್ಲ. ಆದರೆ ಅವನ ಮನಸ್ಸು ಅವುಗಳಿಗೆ ಸಂಬಂಧ ಕಲ್ಪಿಸಿದೆ. ವೀರ್ಯಸ್ಖಲನವಾದರೆ ಭೇದಿಯಾಗುತ್ತದೆ ಎಂದು ಅವನ ಮನದಲ್ಲಿ ಆಳವಾಗಿ ಬೇರೂರಿದೆ. ಈ ಭಾವನೆಯನ್ನು ಪಾವ್ಲೋವ್ ಕಂಡಿಷನ್ಡ್ ರಿಫ್ಲೆಕ್ಸ್ ಎಂದು ಕರೆಯುತ್ತಾರೆ. ಇದರಿಂದ [illegible] [illegible] ಎಂಬ [illegible] ಕರುಳು ಉದ್ರೇಕಗೊಂಡು ಭೇದಿಯಾಗುತ್ತದೆ.

ಮುಂತಾಗಿ ಮಹೇಶನಿಗೆ ವಿವರಿಸಿ ಹೇಳಿದೆ. ಆದರೆ ಅವನಿಗೆ ಸಮಾಧಾನವಾಗಲಿಲ್ಲ. ಕೊನೆಗೆ ನಾನು, "ವಯಸ್ಸಿಗೆ ಸಹಜವಾಗಿ ಎಲ್ಲರಿಗೂ ವೀರ್ಯಸ್ಖಲನವಾಗುತ್ತದೆ. ಅವರಿಗೆಲ್ಲ ಭೇದಿಯ ತೊಂದರೆ ಆರಂಭವಾಗುವುದಿಲ್ಲವಲ್ಲ ಏಕೆ?" ಎಂದು ಕೇಳಿದೆ. ಆ ಪ್ರಶ್ನೆ ಅವನ ಮನಸ್ಸಿಗೆ ನಾಟಿತು. "ನಾನು ನನ್ನ ಆಲೋಚನೆಯಲ್ಲೇ ಮುಳುಗಿ ಹೋಗಿದ್ದೆ. ಬೇರೆಯವರಿಗೂ ವೀರ್ಯಸ್ಖಲನವಾಗುತ್ತದೆಂಬ ಯೋಚನೆಯೇ ಮಾಡಿರಲಿಲ್ಲ" ಎಂದ.

ಇಷ್ಟೆಲ್ಲ ವಿಶ್ಲೇಷಣೆಯಾಗಲು ನಾಲ್ಕು ಭೇಟಿಗಳು ಬೇಕಾದವು. ಮುಂದಿನ ನಾಲ್ಕುವಾರ ಅವನಿಗೆ ಮಾತ್ರೆಗಳನ್ನು ಕೊಟ್ಟೆ. ಈ ಅವಧಿಯಲ್ಲಿ ಅವನಿಗೆ ವೀರ್ಯಸ್ಖಲನವಾಗಿದ್ದರೂ ಒಮ್ಮೆಯೂ ಭೇದಿಯಾಗಿರಲಿಲ್ಲ. ನಂತರ ಮೂರು ವಾರಗಳಲ್ಲಿ ಮಾತ್ರೆಗಳನ್ನು ಕ್ರಮೇಣ ಕಡಿಮೆ ಮಾಡಿ ನಿಲ್ಲಿಸಿದೆ. ಮಾತ್ರೆ ನಿಲ್ಲಿಸಿದ ನಂತರ ಮತ್ತೆ ಭೇದಿ ಆರಂಭವಾಗಬಹುದೆಂಬ ಭೀತಿ ಅವನಲ್ಲಿತ್ತು. ಆದರೆ ಹಾಗಾಗಲಿಲ್ಲ. ವೀರ್ಯಸ್ಖಲನವಾದರೂ ಭೇದಿ ಮರುಕಳಿಸಲಿಲ್ಲ. ಕ್ರಮೇಣ ಅವನಲ್ಲಿ ಧೈರ್ಯ ಮೂಡಿತು. ಎರಡು ವಾರಗಳಿಗೊಮ್ಮೆ ಭೇಟಿಯಾಗುವಂತೆ ಹೇಳಿ ಕಳಿಸಿದೆ.

ನಂತರ ಎರಡು ಮೂರು ತಿಂಗಳುಗಳಲ್ಲಿ ಒಮ್ಮೆ ಮಾತ್ರ ಅವನಿಗೆ ಭೇದಿಯ ತೊಂದರೆಯಾಗಿತ್ತು. ಆದರೆ ಅನಾರೋಗ್ಯ ಸಹಜ ಎಂಬ ಧೈರ್ಯದಿಂದ ಆತ ಸುಮ್ಮನಿದ್ದ. ತೊಂದರೆ ಕಡಿಮೆಯಾಯಿತು. ಭೇದಿಯ ಕಾಯಿಲೆಯಿಂದ ಆತ ಸಂಪೂರ್ಣ ಮುಕ್ತನಾಗಿದ್ದ. ಐದು ವರ್ಷಗಳಲ್ಲಿ ತಾನೆಂದೂ ಇಷ್ಟು ಆರೋಗ್ಯಕರವಾಗಿರಲಿಲ್ಲವೆಂದೂ ಹೇಳಿದ. ಮೊದಲೇ ನನ್ನಲ್ಲಿ ಚಿಕಿತ್ಸೆ ಮಾಡಿಸಿಕೊಂಡಿದ್ದರೆ ಐದು ವರ್ಷಗಳವರೆಗೆ ಭೇದಿಯಿಂದ ಬಳಲುವುದು ತಪ್ಪುತ್ತಿತ್ತೆಂದು ಪೇಚಾಡಿದ.

ಮಹೇಶನ ಕಾಯಿಲೆಗೆ "ಸೈಕೋ ಸೋಮ್ಯಾಟಿಕ್ ಇಲ್‌ನೆಸ್" ಎನ್ನುತ್ತಾರೆ. ಮಾನಸಿಕ ಅಸ್ವಾಸ್ಥ್ಯದಿಂದ ಶಾರೀರಿಕ ತೊಂದರೆಗಳು ಆರಂಭವಾಗುತ್ತವೆ. ಲೈಂಗಿಕ ವಿಷಯದ ಬಗ್ಗೆ ಯುವ ಜನಾಂಗಕ್ಕೆ ಸರಿಯಾಗಿ ತಿಳಿವಳಿಕೆ ನೀಡುವ ವ್ಯವಸ್ಥೆ ನಮ್ಮ ಸಮಾಜದಲ್ಲಿರಬೇಕು. ಇಲ್ಲದಿರುವುದು ಮಹೇಶನಂಥವರ ರೋಗಕ್ಕೆ ಕಾರಣವಾಗುತ್ತದೆ. ತಪ್ಪು ತಿಳಿವಳಿಕೆಯಿಂದ ಏನೇನೋ ಕಲ್ಪಿಸಿಕೊಳ್ಳುತ್ತಾರೆ. ವಯಸ್ಸಿಗೆ ಸಹಜವಾಗಿ ಲೈಂಗಿಕ್ ಆಲೋಚನೆಗಳು ಎಲ್ಲರಿಗೂ ಬರುತ್ತವೆ. ಅವು ಏಕೆ ಬರುತ್ತವೆ ಎಂದು ತಿಳಿದುಕೊಳ್ಳಲು ಯತ್ನಿಸಬೇಕೆ ವಿನಾ ಅವು ಬಾರದಂತೆ ತಡೆಯಲು ಯತ್ನಿಸಬಾರದು.

ನನ್ನ ಸಲಹೆಯಂತೆ ನಡೆದುಕೊಂಡ ಮೇಲೆ ತನಗೆ ಲೈಂಗಿಕ ಆಲೋಚನೆಗಳು ಬರುವುದು ಕಡಿಮೆಯಾಗಿದೆ ಎಂದು ಮಹೇಶ ಹೇಳಿದ. ಬಂದರೂ ಅವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಈಗ ಅವನ ಮನಸ್ಸು ಹೆಚ್ಚು ಉಲ್ಲಾಸಕರವಾಗಿರುತ್ತದೆ.

ಕೀಳುದರ್ಜೆಯ ಪುಸ್ತಕಗಳೂ ಮಹೇಶನಂಥವರ ಮಾನಸಿಕ ಅಸ್ವಾಸ್ಥ್ಯಕ್ಕೆ ಕಾರಣವಾಗುತ್ತವೆ. ಒಂದು ತೊಟ್ಟು ವೀರ್ಯ ಅರವತ್ತು ತೊಟ್ಟು ರಕ್ತಕ್ಕೆ ಸಮವೆಂದು ಮಹೇಶ ಎಲ್ಲಿಯೋ ಓದಿದ್ದ. ಅದೇ ಅವನ ಮನದಲ್ಲಿ ಆಳವಾಗಿ ಬೇರೂರಿತ್ತು. ಸತ್ಯ ಸಂಗತಿಯನ್ನು ನಂಬಿಸು ವುದು ಕಷ್ಟವೆಂದು ಹೇಳುತ್ತಾರೆ. ಮಹೇಶನಲ್ಲಿನ ತಪ್ಪು ತಿಳಿವಳಿಕೆಯನ್ನು ಹೊಡೆದೋಡಿಸು ವಾಗ ನನಗೆ ಇದರ ಅನುಭವ ಸಾಕಷ್ಟಾಯಿತು.

ಇನ್ನೊಂದು ವಿಷಯವೆಂದರೆ, ಮಹೇಶ ತನಗೆ ಬಹಳಷ್ಟು ಸಲ ವೀರ್ಯಸ್ಖಲನವಾಗುತ್ತದೆ. ಎಂದು ಹೇಳಿದ್ದ. ಈ ಬಹಳಷ್ಟು ಸಲವೆಂದರೆ ಏನು? ಕೆಲವರಿಗೆ ಮೂರ್‍ನಾಲ್ಕು ದಿನಗಳಿಗೊಮ್ಮೆ ವೀರ್ಯಸ್ಖಲನವಾದರೆ ಕೆಲವರಿಗೆ ವಾರಕ್ಕೊಮ್ಮೆ ಅಥವಾ ಎರಡು ವಾರಕ್ಕೊಮ್ಮೆ ಆಗಬಹುದು. ಇದು ವ್ಯಕ್ತಿಯ ಆರೋಗ್ಯ, ವಯಸ್ಸು, ಮನೋಸ್ಥಿತಿ ಮುಂತಾದುವುಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ಇಲ್ಲಿ ಹೆಚ್ಚು ಕಡಿಮೆ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮತ್ತು ವೀರ್ಯಸ್ಖಲನವಾದರೆ ತನ್ನಲ್ಲಿನ ವೀರ್ಯ ಕಡಿಮೆಯಾಗುತ್ತದೆಂಬ ಭಾವನೆ ತಪ್ಪು. ದೇಹದಲ್ಲಿ ವೀರ್ಯ ಉತ್ಪಾದನೆಯ ಕಾರ್ಯ ನಡೆದೇ ಇರುತ್ತದೆ. ಮಹೇಶ ಈ ವೈಜ್ಞಾನಿಕ ಅಂಶಗಳ ಜ್ಞಾನವಿಲ್ಲದೆ, ಅಸಂಬದ್ಧ ವಿಚಾರ ಮಾಡಿ ತಲೆ ಕೆಡಿಸಿಕೊಂಡಿದ್ದ ●

ಕೃಷಿಕರ ಹಬ್ಬಗಳು

● ಜಿ.ಆರ್. ಗುಂಡಪ್ಪ ●

ಮುಂಜಾನೆ ಪೂರ್ವದಲ್ಲಿ ಉದಯಿಸಿ ಬೆಳಕು ನೀಡಿ ಸಂಜೆ ಪಶ್ಚಿಮದಲ್ಲಿ ಮುಳುಗಿ ಕತ್ತಲು ಗೊಳಿಸುವ ಸೂರ್ಯ, ಒಂದು ಪಕ್ಷದಲ್ಲಿ ಮಾತ್ರ ಕಾಣಿಸಿ ಹಾಲಿನಂತೆ ಬೆಳಕನ್ನಿತ್ತು ಮಾಯವಾಗುವ ಚಂದ್ರ, ತನಗೆ ತಾನೆ ಹುಟ್ಟಿ ಬೆಳೆದು ಫಲಪುಷ್ಪಗಳನ್ನೀವ ಗಿಡಮರ ಬಳ್ಳಿಗಳು, ಯಾರ ಸಹಾಯವೂ ಇಲ್ಲದೆ ತಮ್ಮ ಸಂತಾನ ವೃದ್ಧಿಸಿಕೊಂಡು ಬಾಳಿಬದುಕುವ ಸಾವಿರಾರು ಪ್ರಾಣಿ ಪಕ್ಷಿಗಳು, ಎಲ್ಲೋ ಹುಟ್ಟಿ, ಎಲ್ಲೋ ಹರಿದು ಎಲ್ಲೋ ಸೇರುವ ಜಲಧಾರೆಗಳು, ಹಠಾತ್ತಾಗಿ ಬೀಳುವ ಮಳೆ, ಗುಡುಗು, ಸಿಡಿಲುಗಳು, ಒಂದೇ ಎರಡೇ......ಇವೆಲ್ಲವೂ ಆದಿಮಾನವನಿಗೆ ಆನಂದ ಆಶ್ಚರ್ಯ ದಿಗ್ಭ್ರಮೆ, ಭಯ, ವಿಸ್ಮಯ ಅತೀತಭಾವನೆ ಮೂಡಿಸಿರಬೇಕು. ತನ್ನನ್ನು ಮತ್ತು ತನ್ನ ಸುತ್ತಿನ ಈ ಅದ್ಭುತ ಪ್ರಕೃತಿಯನ್ನು ಸೃಷ್ಟಿಸಿದ ಶಕ್ತಿಯೇ ದೇವರೆಂದು ಭಾವಿಸಿ ಆರಾದಿಸಲು ಆರಂಭಿಸಿರಬೇಕು. ಆ ಆರಾಧನೆಯ ವಿಧಿವಿದಾನಗಳೆ ಹಬ್ಬ, ಹರಿದಿನಗಳಾದವು.

ಈ ಅದ್ಭುತ ಶಕ್ತಿಗೆ ಒಬ್ಬೊಬ್ಬರು ಒಂದೊಂದು ರೂಪ, ನಾಮಗಳನ್ನಿತ್ತು ಹತ್ತು ಹಲವು ದೇವ-ದೇವತೆಗಳಾದುವು.

ಕೃಷಿಕರು ಪ್ರತಿದಿನ ಇಂತಹ ಪ್ರಕೃತಿಯ ಮಡಿಲಲ್ಲೇ ಬಾಳುವುದರಿಂದ, ಅವರು ಉಳುವ ಭೂಮಿ, ಬೆಳೆಯುವ ಬೆಳೆ, ಸಾಕುವ ಪ್ರಾಣಿ ಉಳುವ ನೇಗಿಲು ಎಲ್ಲವೂ ದೈವ ಸ್ವರೂಪವೆಂದು ಭಾವಿಸಿದರು. ಕೃಷಿಕರ ಹಬ್ಬಗಳು ನಮ್ಮ ಧಾರ್ಮಿಕ ಹಾಗೂ ಸಾಮಾಜಿಕ ಜೀವನದ ತಳಹದಿಯನ್ನೇ ಬಿಂಬಿಸುವುವು. ತಾವು ಪೂಜಿಸುವ ದೇವರ ಹೆಸರಿನಲ್ಲಿ ಹಬ್ಬ, ಋತು ಪರಿವರ್ತನೆಯ ಕಾಲದಲ್ಲಿ ಹಬ್ಬ, ಪಶುಗಳ ಹೆಸರಿನಲ್ಲಿ ಹಬ್ಬ, ವೃಕ್ಷಗಳ ಹೆಸರಿನಲ್ಲಿ ಹಬ್ಬ, ಮಡಿದು ಹೋದ ಪೂರ್ವಜರ ಹೆಸರಲ್ಲಿ ಹಬ್ಬ ಹೀಗೆ ಯಾವುದಾದರೂ ಒಂದು ನೆಪದಿಂದ ಅನೇಕ ಹಬ್ಬಗಳನ್ನು ಆಚರಿಸುತ್ತಾರೆ. ಈ ರೀತಿಯ ಹಬ್ಬಗಳನ್ನು ಹೆಚ್ಚು ಕಮ್ಮಿ ಭಾರತದ ಎಲ್ಲ ಭಾಗದಲ್ಲೂ ಕಾಣಬಹುದು. ಆದರೆ ಆಯಾ ಪ್ರದೇಶ, ಭಾಷೆ, ಸಂಸ್ಕೃತಿಗೆ ತಕ್ಕಂತೆ ಬೇರೆ ಬೇರೆ ರೂಪಗಳಲ್ಲಿ ಆಚರಿಸುತ್ತಾರೆ.

ಸಾಮಾನ್ಯವಾಗಿ ಕರ್ನಾಟಕದಾದ್ಯಂತ ಎಲ್ಲ ಕೃಷಿಕರೂ ಆಚರಿಸುವ ಕೆಲವು ಹಬ್ಬಗಳುಂಟು. ಹೊಸವರ್ಷದ ಆದಿಯಲ್ಲಿ ಆಚರಿಸುವ ಯುಗಾದಿ. ಈ ಯುಗಾದಿಗೆ ಹೊಂದಿಕೊಂಡಂತೆ ಹಿಂದೆ ಮುಂದೆ ಆಯಾ ಗ್ರಾಮ ದೇವತೆಯರ ಹಬ್ಬ, ಚೋಮನಹಬ್ಬ, ತಿಂಗಳ ಮಾವನ ಹಬ್ಬ, ಬಸವನ ಹಬ್ಬ, ಕಾಂತಿಹಬ್ಬ, ರಂಗದಹಬ್ಬ, ಹೊನ್ನಾರುಕಟ್ಟುವ ಹಬ್ಬ ಇವೆಲ್ಲವೂ ವಸಂತಾಗಮನವನ್ನು ಸಾರುತ್ತವೆ. ಈ ವಸಂತನ ಆಗಮನ ಚೈತ್ರ ಶುದ್ಧ ಪಾಡ್ಯಮಿಯಂದು ಆರಂಭ. ಅದೇ ಯುಗಾದಿ ಹಬ್ಬ. ಚೈತ್ರ ಮಾಸದ ಶುಕ್ಲ ಪಕ್ಷದ ಮೊದಲನೇ ದಿನ



ಸಮೃದ್ಧ ಬೆಳೆ ಹರ್ಷದ ಹೊಳೆ

ಸೂರ್ಯೋದಯದ ವೇಳೆ ಬ್ರಹ್ಮ ಜಗತ್ತನ್ನು ಸೃಷ್ಟಿಸಿದನೆಂಬ ನಂಬಿಕೆ. ಆದುದರಿಂದ ಅದರ ಹಿಂದಿನ ದಿನ ಹಳ್ಳಿಗಳಲ್ಲಿ ಊರಿನ ದೇವಾಲಯ ಗಳ ಮುಂದೆ ಕೋಲಾಟ, ಚೋಮನ ಕುಣಿತ, ಹುಲಿವೇಷ, ವಿಡಂಬನಾತ್ಮಕ ನಟನೆ ಮುಂತಾ ದವುಗಳನ್ನು ಬೆಂಕಿಯ ಸುತ್ತ ಅಥವಾ ಪಂಜಿನ ಬೆಳಕಿನಲ್ಲಿ ಆಚರಿಸಿ ಸೂರ್ಯೋದಯವನ್ನು ಎದುರು ನೋಡುತ್ತಾರೆ. ಯುಗಾದಿಯ ದಿನ ಮಿಂದು ಮಡಿಯುಟ್ಟು ಪೂಜಿಸಿ ಹೊಸ ಬೇವಿನ ಚಿಗುರು ಮತ್ತು ಬೆಲ್ಲವನ್ನು ಸೇವಿಸುತ್ತಾರೆ. ಇಡೀ ವರ್ಷ ಬಾಳು ಸಮರಸವಾಗಲೆಂಬುದೇ ಇದರ ಸಂಕೇತ. ಊಟ ಮಾಡಿ ಮಧ್ಯಾಹ್ನ ಹೊನ್ನಾರು ಕಟ್ಟುತ್ತಾರೆ. ಹೊನ್ನಾರು ಕಟ್ಟುವು ದೆಂದರೆ ಅಂದು ಎತ್ತುಗಳನ್ನು ತೊಳೆದು, ಕೋಡನ್ನು ಹೆರೆದು, ಎಣ್ಣೆ ಹಚ್ಚಿ ಬಣ್ಣ ಬಳಿದು ಶೃಂಗರಿಸಿ, ನೇಗಿಲನ್ನು ತೊಳೆದು ನೇಗಿಲಿನ ಈಚಿನ ತುದಿಗೆ ಹೂಟು ಕಟ್ಟಿ, ಊರಿನವರೆಲ್ಲ ಸೇರಿ ಹೊನ್ನಾರಿನಿಂದ ಊರ ಪ್ರದಕ್ಷಿಣೆ ಹಾಕಿ ಗ್ರಾಮದೇವತೆಯ ಹೊಲವನ್ನು ಉಳುತ್ತಾರೆ. ಇಲ್ಲಿಂದ ಆ ವರ್ಷದ ಬೇಸಾಯ ಆರಂಭ ವಾಗುತ್ತದೆ. ಭೂಮಿಯೇ ಹೆಣ್ಣು, ನೇಗಿಲೇ ಗಂಡು, ಬಿತ್ತನೆಯ ಅಂಕುರವೇ ಸೃಷ್ಟಿ. ಬ್ರಹ್ಮ ನಂತೆ ನಾವೂ ಸೃಷ್ಟಿ ಕಾರ್ಯ ಮಾಡಿದೆ ವೆಂಬುದು ಕೃಷಿಕರ ನಂಬಿಕೆ.

ಯುಗಾದಿಯಿಂದ ಆರಂಭವಾಗಿ ಸಂಕ್ರಾಂತಿಯವರೆಗೆ ಹತ್ತಾರು ಹಬ್ಬಗಳನ್ನಾಚರಿಸುತ್ತಾರೆ. ಗಣಪತಿ ಹಬ್ಬ, ಗೌರಿಹಬ್ಬ, ಶಿವರಾತ್ರಿ ಹಬ್ಬ, ಹೋಳಿಹಬ್ಬ, ದೀಪಾವಳಿ ಇತ್ಯಾದಿ. ಆದರೆ ಇವೆಲ್ಲವನ್ನೂ ಹಬ್ಬಗಳೆಂದು ಕರೆದರೂ ಕೆಲವೊಂದು ವಾಸ್ತವವಾಗಿ ಹಬ್ಬಗಳಲ್ಲಿ ದೇವತಾರಾಧನೆಯ ವಿಧಿಗಳು. ಕೃಷಿಕನಿಗೆ ಮುಖ್ಯವಾದದ್ದು ಯುಗಾದಿಯ ನಂತರ ಅಂದರೆ ವಸಂತಾಗಮನದ ನಂತರ ಬರುವ ಶರದಾಗಮನ ಅಂದರೆ ನವರಾತ್ರಿ ದೀಪೋತ್ಸವ ಅಂದರೆ ದೀಪಾವಳಿ, ಸುಗ್ಗಿ ಹಬ್ಬ ಅಂದರೆ ಸಂಕ್ರಾಂತಿ, ಹೋಳಿ ಮುಂತಾದುವು.

ನವರಾತ್ರಿಯಲ್ಲಿ ಕೋಲಾಟ ಕಂಸಾಳೆ ನೃತ್ಯ ಮಂಟೆದೇವರ ಪದ, ಕೊರವಂಜಿ ಆಟ ಮುಂತಾದ ಜನಪದ ಆಟೋಟಗಳಿರುತ್ತವೆ.

ಒಂದು ನೂರು ವರ್ಷ ನಡೆದ ಯುದ್ಧದಲ್ಲಿ ದೇವತೆಗಳು ಸೋತು, ದಾನವರು ಮೆರೆಯಲು ಆರಂಭಿಸಿದರು. ಈ ದಾನವರ ಸಂಹಾರಕ್ಕೆ ಬ್ರಹ್ಮ, ವಿಷ್ಣು ಮಹೇಶ್ವರರ ಕೋಪಜ್ವಾಲೆ ಯಿಂದ ಉದಿಸಿದವಳು ದುರ್ಗೆ. ಈ ದುರ್ಗಾ ರಾಧನೆಯೇ ನವರಾತ್ರಿ ಹಬ್ಬ. ಈ ನವದಿವಸ ಗಳೂ ವಿಧವಿಧವಾದ ಪೂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಗರಗಳಲ್ಲಿದ್ದರೆ ದೇವರ ಉತ್ಸವ ಪ್ರಕೃತಿ ಪೂಜೆ, ತೋಟದ ಹಬ್ಬ ಇವು ಗಳನ್ನು ಕೃಷಿಕರು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ವರ್ಷಕ್ಕೊಮ್ಮೆ ಪಿತೃಪಕ್ಷವೆಂಬ ಹಬ್ಬ ಆಚರಿಸಿ ಮಡಿದ ಪೂರ್ವಿಕರಿಗೆ ತರ್ಪಣ ನೀಡುತ್ತಾರೆ. ನೆಂಟರಿಷ್ಟರನ್ನು ಕರೆಸಿ ಒಬ್ಬಟ್ಟು ಕಜ್ಜಾಯ ಮುಂತಾದ ಭಕ್ಷ್ಯ ಭೋಜನಾದಿ ಗಳನ್ನು ಏರ್ಪಡಿಸುತ್ತಾರೆ. ರೈತರಿಗೆ ಬಿಡುವಿನ ಸಮಯ. ಈ ಮನರಂಜನೆಯೊಡನೆ ಊರ ದೇವತೆಯ ಬಾವುಟ ಹಿಡಿದು ಬೀದಿ ಬೀದಿ ಗಳಲ್ಲಿ ಕುಣಿದು ಮಳೆ ಬಂದು ಧರೆ ತಣಿಯಲಿ, ಸಮೃದ್ಧಿ ಬೆಳೆ ಬರಲೆಂದು ಹಾಡಿ ಹರಿಸುತ್ತಾರೆ.

ಇದಾದನಂತರ ಶರದೃತುವಿನ ಮಧ್ಯದಲ್ಲಿ ದೀಪಾವಳಿ ಹಬ್ಬ ಬರುತ್ತದೆ. ಕೊಯ್ಲಿಗೆ ಬಂದ ಬೆಳೆಗಳ ಸಂತಸದ ಸಮಯದಲ್ಲಿ ಆಚರಿಸುವ ಹಬ್ಬವಿದು. ಬಲಿಚಕ್ರವರ್ತಿ ಕತೆ ಎಲ್ಲರಿಗೂ ತಿಳಿದಿದೆ. ಬಲಿಪಾಡ್ಯಮಿಗೆ ಗೋವಿನ ಹಬ್ಬ, ಗೋಕ್ರೀಡನ ಹಬ್ಬ ಎಂದೂ ಹೆಸರಿದೆ. ಕ್ಷೀರ ಸಾಗರ ಮಂಥನದಿಂದ, ನಂದ, ಸುನಂದ ಮುಂತಾದ ಕಾಮಧೇನುಗಳು ಉದಿಸಿದ್ದು ಇಂದೇ ಎಂದು ಪ್ರತೀತಿಯಿದೆ. ಆದುದರಿಂದ ಗೋಧನಾಭಿವೃದ್ಧಿಗಾಗಿ ದನದ ಮನೆಗಳನ್ನು ಶುಚಿಮಾಡಿ, ಅಂದು ಸಗಣಿಯ ಉಂಡೆ ಮಾಡಿ, ಅದರ ತುದಿಗೆ ಚೆಂಡುಹೂವು ಮುಡಿಸಿ, ದನದ ಮನೆಯಲ್ಲಿ ಗೋಂತುಗಳಲ್ಲಿ ಎಲ್ಲ ಬಾಗಿಲುಗಳ ಇಕ್ಕೆಲಗಳಲ್ಲಿ ಇಟ್ಟು, ಚಿಕ್ಕ ಚಿಕ್ಕ ಹಣತೆಗೆ ಹರಳೆಣ್ಣೆ ಬತ್ತಿಹಾಕಿ ಮನೆ ಅಂಗಳ, ಕೊಟ್ಟಿಗೆ ಬಾಗಿಲುಗಳು ಎಲ್ಲ ಕಡೆ ದೀಪ ಬೆಳಗಿಸುತ್ತಾರೆ. ಅಂದು ಗೋವುಗಳನ್ನು ಈಜಿಸಿ ಮೈತೊಳೆದು ಕೋಡುಗಳನ್ನು ತಿದ್ದಿ ಬಣ್ಣ ಬಳಿದು ಅಲಂಕರಿಸಿ ಪೂಜಿಸಿ ಅಕ್ಕಿ ಬೆಲ್ಲ ತಿನ್ನಿಸುತ್ತಾರೆ. ಕತ್ತಲೆ ಕಳೆದು ನಮ್ಮ ಜೀವನ ದಲ್ಲಿ ಬೆಳಕು ಮೂಡಲೆಂದು ಬೇಡುವುದೇ ದೀಪಾವಳಿ ಸಂಕೇತ.

ಕೃಷಿಕರು ಆಚರಿಸುವ ಮತ್ತೊಂದು ಮುಖ್ಯ ಹಬ್ಬವೆಂದರೆ, ತಿಂಗಳ ಮಾವನ ಹಬ್ಬ. ಪಾಲ್ಗುಣ ಮಾಸದಲ್ಲಿ ಹದಿನೈದು ದಿನ ಅಥವಾ ಒಂದು ವಾರ ಈ ಹಬ್ಬ ಆಚರಿಸುತ್ತಾರೆ. ಊರಿನ ಹೆಂಗಸರೆಲ್ಲ ಸೇರಿ ಮನೆಯ ಮುಂದೆ ಊರಿನ ದೇವಸ್ಥಾನದ ಮುಂದೆ ಸಗಣಿಯಿಂದ ಸಾರಿಸಿ ಚಂದ್ರಾಕಾರದಲ್ಲಿ ರಂಗೋಲಿಯಿಟ್ಟು ಅಲಂಕರಿಸಿ ಹೂವುಗಳಿಂದ ಪೂಜಿಸಿ ಗುಂಪು ಗುಂಪಾಗಿ ಚಂದ್ರನ ಪದಗಳನ್ನು ಹಾಡುತ್ತಾ ಮನೆಮನೆಗೆ ಹೋಗುತ್ತಾರೆ. ಒಕ್ಕೊರಲಿನಿಂದ ಬಾರಯ್ಯ ಬೆಳದಿಂಗಳೇ ನಮ್ಮೂರ ಹಾಲಿನಂತ ಬೆಳದಿಂಗಳೇ...ತಿಂಗ್ಳ ತಿಂಗ್ಳುಗೂ ತಿಂಗ್ಳ ಮಾವನ ಪೂಜೆ...ಮುಂತಾಗಿ ಹಾಡುತ್ತಾರೆ. ಹೀಗೆ ಪ್ರತಿದಿನ ಹಾಡಿಕೊಂಡು ಕೆಂಡದ ರೊಟ್ಟಿ ಮಾಡಿ ಬಚ್ಚಿಟ್ಟು ಹುಡುಕುವ ಆಟ ಆಡಿ ಕೊನೆಯ ದಿನ ಒಬ್ಬ ಹುಡುಗನಿಗೆ ಮದಲಿಂಗನ ವೇಷ ಹಾಕಿ ಮತ್ತೊಬ್ಬನಿಗೆ ಹುಡುಗಿಯ ವೇಷ ಹಾಕಿ ಅಣಕದ ಮದುವೆ ಮಾಡಿ ನಲಿಯುತ್ತಾರೆ. ಕೊನೆಯ ದಿನ ರೊಟ್ಟಿ ಯನ್ನು ಬಚ್ಚಿಟ್ಟು ಹುಡುಕಿಸಿ ಓಡಾಡಿ ಕಿತ್ತಾಡಿ ತಿನ್ನುವ ರೀತಿ ತುಂಬ ಮೋಜು ಎನಿಸಿದರೂ ಗ್ರಾಮದ ಒಗ್ಗಟ್ಟಿಗೆ ಭಾವೈಕ್ಯತೆಗೆ ಇದು ತುಂಬ ನೆರವಾಗಿತ್ತು. ಇಲ್ಲಿ ಊರಿನ ಯುವಕ ಯುವತಿಯರಿಗೆ ಅವರ ಪ್ರತಿಭಾ ಪ್ರದರ್ಶನ ಮಾಡಲು ಅವಕಾಶವಿತ್ತು. ಆದರೆ ಆಧುನಿಕತೆ ಯ ಸೋಂಕಿನಿಂದ ಇಂತು ಇಂತಹ ಹಬ್ಬಗಳು ಕಣ್ಮರೆಯಾಗುತ್ತಿವೆ. ಇದೇ ರೀತಿ ದಕ್ಷಿಣ ಭಾರತದಲ್ಲಿ ದೀಪಾವಳಿಯ ಸಂದರ್ಭಗಳಲ್ಲೇ ಆಚರಿಸುವ ಮತ್ತೊಂದು ಹಬ್ಬ "ಬಸವನ ಅಷ್ಟಮಿ". ಮುಖ್ಯವಾಗಿ ಇದು ಹೆಣ್ಣು ಮಕ್ಕಳ ಹಬ್ಬ. ದೀಪಾವಳಿಯಲ್ಲಿ ದೊಡ್ಡವರು ಅಳಿಯ, ಬೀಗರನ್ನು ಕರೆದು ಉಪಚರಿಸಲು ತೊಡಗಿದ್ದಾಗ, ಸಣ್ಣ ವಯಸ್ಸಿನ ಹೆಣ್ಣು ಮಕ್ಕಳು ಬಸವನ ಆಟ ಆಡಲು ಇದು ರೂಪ ಗೊಂಡಂತೆ ಕಾಣುತ್ತದೆ. ಹೆಣ್ಣು ಮಕ್ಕಳು ಗುಂಪು ಗುಂಪಾಗಿ ಬಸವನಗೀತೆಗಳನ್ನು ಹಾಡುತ್ತಾ ಮನೆಮನೆಗೆ ಹೋಗಿ ದೊಡ್ಡವ ರಿಂದ ದುಡ್ಡು ವಸೂಲು ಮಾಡುತ್ತಾರೆ. ಅನಂತರ ಆ ದುಡ್ಡಿನಿಂದ ಪದಾರ್ಥಗಳನ್ನು ತಂದು ಒಂದೆಡೆ ಅಡಿಗೆ ಮಾಡಿ ಊಟ ಮಾಡುತ್ತಾರೆ. ಇದು ನಮಗೆ ಆಟವಾಗಿ

ಕಂಡರೂ ಹೆಣ್ಣು ಮಕ್ಕಳು ಸಂಸಾರವಂದಿಗ ರಾಗಲು ಪೂರ್ವಸಿದ್ಧತೆಗೆ ಇದು ತರಬೇತಿ ಯಂತಿದೆ.

ಕೃಷಿಕರ ಪ್ರಮುಖ ಹಬ್ಬ ಸುಗ್ಗಿ ಹಬ್ಬ. ಮಾರ್ಗಶಿರ ಕಳೆದು ಪುಷ್ಯ ಮಾಸದಲ್ಲಿ ಮಕರ ಸಂಕ್ರಾಂತಿ ಬರುತ್ತದೆ. ಇದಕ್ಕೆ ಮೊದಲು ಸೂರ್ಯಧನುರ್ ರಾಶಿಯಲ್ಲಿರುತ್ತಾನೆ. ಅದು ಚಳಿಗಾಲ. ಚಳಿಗಾಲ ಕಳೆದು ವಾತಾವರಣ ಹಿತವಾಗಿ ಆರಂಭವಾಗುವ ಕಾಲ ಮಕರ ಸಂಕ್ರಾಂತಿ. ಜೋಳ ರಾಗಿ ಸಜ್ಜೆ ಹೆಸರು ತೊಗರಿ ನವಣೆ ಎಳ್ಳು ನೆಲಗಡಲೆ ಬೆಳೆಗಳ ಕೊಯ್ಲು ಮುಗಿದು ಸುಗ್ಗಿಯ ಆನಂದ ತುಂಬಿರುತ್ತದೆ. ಕಬ್ಬು ಬಲಿತು ರಸಹೀರಲು ಸಿದ್ಧವಾಗಿರುತ್ತದೆ. ಅವರೆ ಗೆಣಸು ಕುಂಬಳ ಕಾಯಿ ಮುಂತಾದ ತರಕಾರಿ ಸಮೃದ್ಧವಾಗಿ ದೊರೆಯುತ್ತದೆ. ಚಳಿಯ ಕೊರೆತ ಮೋಡದ ಮುಸುಕು ಕಡಿಮೆಯಾಗಿ ಸೂರ್ಯನ ಬಿಸಿಲು ಹಿತವಾಗಿರುತ್ತದೆ. ಇದೇ ಹಬ್ಬವನ್ನು ತಮಿಳರು "ಪೊಂಗಲ್" ಎಂದು ಕೊಡವರು "ಹುತ್ತರಿ" ಎಂದೂ ಆಚರಿಸುತ್ತಾರೆ. ಧಾನ್ಯ ತರಕಾರಿ ಹಣ್ಣುಗಳನ್ನು ಬಂಧುಗಳಿಗೆ ಇಷ್ಟ ಮಿತ್ರರಿಗೆ ಕೊಟ್ಟುಕೊಳ್ಳುವ ಸಂಪ್ರದಾಯ. ಅದೇ ನಗರದಲ್ಲಿ ಎಳ್ಳು ಬೆಲ್ಲ ಕಬ್ಬು ಬೀರುತ್ತಾರೆ. ಮಕರ ಸಂಕ್ರಾಂತಿಗೂ ಎಳ್ಳಿಗೂ ನಿಕಟ ಸಂಬಂಧವಿದೆ. ಅಂದು ಎಳ್ಳು ದಾನ ಮಾಡಿದರೆ ಸಕಲ ಕಷ್ಟವೂ ನೀಗುವುದೆಂಬ ನಂಬಿಕೆ. ಸಂಕ್ರಾಂತಿಯ ಮಾರನೆಯ ದಿನ ಪಶುಗಳನ್ನು ಅಲಂಕರಿಸಿ ಮೆರವಣಿಗೆ ಮಾಡಿ ಊರ ಮುಂದೆ ಅಥವಾ ದೇವಾಲಯದ ಮುಂದೆ ಬೆಂಕಿ ಹಚ್ಚಿ ಜನಿಸುವ ಆ ಕಿಚ್ಚಿನಲ್ಲಿ ದನಗಳನ್ನು ಹಾರಿಸುತ್ತಾರೆ. ದನ ಹಾರಿಸುವುದು ಒಂದು ರೀತಿಯ ಮೋಜಿನ ಆಟವೆನಿಸಿದರೂ ದನದ ಮೈ ಮೇಲಿನ ಉಣ್ಣೆ ಮುಂತಾದ ಕೀಟಗಳು ಮೊಟ್ಟೆಗಳು ಕಾವಿಗೆ ಮಡಿದು ಪಶುಗಳ ಆರೋಗ್ಯಕ್ಕೆ ಕೂಡ ನೆರವಾಗುತ್ತದೆ.

ಹೀಗೆ ವರ್ಷದ ಆದಿಯಲ್ಲಿ ಬೇವು ಬೆಲ್ಲ ತಿಂದು ಮುಂಗಾರು ಕಟ್ಟಿ ಬೇಸಾಯ ಆರಂಭಿಸಿ ವರ್ಷದ ಅಂತ್ಯದಲ್ಲಿ ಧಾನ್ಯ ಬೆಳೆದು ದಾನ ಕೊಟ್ಟು, ಹಂಚಿ ಉಣ್ಣುವ ಮನೋಭಾವ ಕೃಷಿಕರದು. ಇಡೀ ಗ್ರಾಮದ ನೆಮ್ಮದಿ ಗಾಗಿ ಶಾಂತಿ ಬಾಳ್ವೆಗಾಗಿ ಬೇಡುತ್ತಾರೆ, ನಲಿ ಯುತ್ತಾರೆ, ನರ್ತಿಸುತ್ತಾರೆ. ಏಕತೆಯಲ್ಲಿ ಸಮಷ್ಟಿ, ಸಮಷ್ಟಿಯಲ್ಲಿ ಏಕತೆಯೇ ಕೃಷಿಕರ ಹಬ್ಬ ಹರಿದಿನಗಳ ಗುರಿ. ●

ಭಾಷಾ ಭೇದ

ಪ್ರಪಂಚದಲ್ಲಿ 2796 ಭಾಷೆಗಳಿವೆ ಎಂದು ಅಮೇರಿಕದ ಭಾಷಾತಜ್ಞರ ಅಭಿಪ್ರಾಯ. ಇವುಗಳಲ್ಲಿ ದಕ್ಷಿಣ ಅಮೇರಿಕದ ಮೂಲ ನಿವಾಸಿಗಳೇ ಸುಮಾರು ಸಾವಿರದ ಇನ್ನೂರು ಭಾಷೆಗಳನ್ನು ಬಳಸುತ್ತಾರೆ. ಒಂದೊಂದು ಬುಡಕಟ್ಟಿನದೂ ಒಂದೊಂದು ಭಾಷೆ. ಕೆಲವೊಮ್ಮೆ ಈ ಬುಡಕಟ್ಟುಗಳಲ್ಲಿ ಸಾವಿರದಷ್ಟು ಕೂಡ ಜನ ಇರುವುದಿಲ್ಲ.

ಆಫ್ರಿಕದ ನೀಗ್ರೊ ಬುಡಕಟ್ಟುಗಳು ಏಳುನೂರು ಭಾಷೆಗಳನ್ನು ಬಳಸುತ್ತವೆ. ಆಸ್ಟ್ರೇಲಿಯಾ ಮತ್ತು ಶಾಂತಸಾಗರದ ದ್ವೀಪಗಳಲ್ಲಿ ಐನೂರು ಭಾಷೆಗಳನ್ನು ಬಳಸುತ್ತಾರೆ. ಏಷಿಯದಲ್ಲಿ ಸುಮಾರು ಇನ್ನೂರು ಬೇರೆ ಬೇರೆ ಭಾಷೆಗಳನ್ನು ಬಳಸಲಾಗುತ್ತಿದೆ. ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನ ಮಾತಾಡುವ ಭಾಷೆಗಳ ಸಂಖ್ಯೆ ಕೇವಲ ನೂರಾ ಅರವತ್ತು.

ಹತ್ತು ಲಕ್ಷ ಜನಗಳನ್ನು ಪರಿಶೀಲಿಸಿದರೆ ಸರಾಸರಿಯಾಗಿ ಏಳುನೂರು ಜನ ಚೀನೀ ಭಾಷೆ ಮಾತಾಡುವವರು ಸಿಗುತ್ತಾರೆ. ದಕ್ಷಿಣದ ಭಾಷೆಗಳಲ್ಲಿ ತೆಲುಗಿನ ಸ್ಥಾನ ದೊಡ್ಡದು. ಹತ್ತು ಲಕ್ಷದಲ್ಲಿ ಸರಾಸರಿ ನಲವತ್ನಾಲ್ಕು ಜನ ತೆಲುಗು ಮಾತಾಡಿದರೆ, ತಮಿಳು ಮಾತಾಡುವವರ ಸಂಖ್ಯೆ ನಲವತ್ತೆರಡು. ಮಲಯಾಳಂ ಮಾತಾಡುವವರ ಸಂಖ್ಯೆ ಇಪ್ಪತ್ತೆರಡು. ಕನ್ನಡಿಗರದು ಇಲ್ಲಿಯೂ ಕೊನೆಯ ಸ್ಥಾನ. ಹತ್ತು ಲಕ್ಷ ಜನಗಳಲ್ಲಿ ಸರಾಸರಿ ಇಪ್ಪತ್ತೊಂದು ಜನ ಕನ್ನಡ ಬಳಸುತ್ತಾರೆ.

ಅದೃಶ್ಯ ಶಕ್ತಿಯ ಮೂಲವೇ ಇದು?



ಪ್ರಾಥಮಿಕ ಕಣಗಳ ಮಾಯಾಲೋಕ

● ಎಸ್. ರವಿಕುಮಾರ್, ಮಾಗಳ.

ನಮ್ಮ ಕಣ್ಣಿಗೆ ಬಗೆ ಬಗೆಯ ವಸ್ತುಗಳು ಕಾಣುವುದೇ ಸರ್ವೇ ಸಾಮಾನ್ಯ. ಈ ಬಗ್ಗೆ ತಲೆ ಕೆಡಿಸಿಕೊಳ್ಳುವವರು ಕಡಿಮೆ. ಆದರೆ ಪ್ರಪಂಚದಲ್ಲಿನ ಪ್ರತಿಯೊಂದು ಬಗೆಯ ವಸ್ತುವೂ, ಪ್ರತ್ಯೇಕವಾಗಿ ದೇವರಿಂದ ನಿರ್ಮಿಸಲ್ಪಟ್ಟಿದೆಯೇ ಎನ್ನುವ ಪ್ರಶ್ನೆ ಕೆಲವರನ್ನಾದರೂ ಕಾಡುತ್ತಿದೆ. ಪ್ರತಿಯೊಂದು ವಸ್ತುವೂ ಸಣ್ಣ ಸಣ್ಣ ಕಣಗಳಿಂದ ಆಗಿದೆ ಎಂದು ಕೆಲವು ಪ್ರಾಚೀನ ಗ್ರೀಕರು ವಾದಿಸಿದರು. ಪ್ರಾಚೀನ ಭಾರತದಲ್ಲೂ ಕೆಲವರು ಈ ಕಣವಾದವನ್ನು ಪ್ರತಿಪಾದಿಸಿದರು. ಈ ವಿಶ್ವವು ವೈವಿಧ್ಯಮಯವಾಗಿರುವಂತೆ ಕಂಡರೂ, ಅದರ ನಿಜವಾದ ತಳಹದಿ ಸುಲಭವೊ ಸರಳವೊ ಆಗಿರಬಹುದು ಎನ್ನುವ ನಂಬಿಕೆ ಪುರಾತನ ಕಾಲದಿಂದಲೂ ಬುದ್ಧಿಜೀವಿಗಳಿಗೆ ಆಪ್ಯಾಯಮಾನವಾಗಿದೆ. ಇದು ಹೇಗೆ ಮತ್ತೆ ಮತ್ತೆ [illegible] ಮೂಡಿ ಬಂದಿತು [illegible]

ಕಣವಾದದಿಂದ ಪ್ರಾಚೀನ ಬೌದ್ಧಿಕ ಜೀವಿಗಳಿಗೆ ಎಷ್ಟೋ ವಿಚಾರಗಳು ಸುಲಭವಾಯಿತಾದರೂ ಅದು ಪೂರ್ತಿಯಾಗಿ ತೃಪ್ತಿಯನ್ನು [illegible]

ಪ್ರಕಾರದ್ದಿದ್ದು ನಿರ್ದಿಷ್ಟವಾದ ವಿಶಿಷ್ಟ ಗುಣಗಳು ಅದಕ್ಕಿವೆ ಎನ್ನುವುದನ್ನು ಒಪ್ಪಿಕೊಂಡರೆ ಪ್ರಕೃತಿಯಲ್ಲಿ ಲಕ್ಷಾಂತರ ಬಗೆಯ ಕಣಗಳಿವೆ ಎಂದಾಗುತ್ತದೆ. ಇದು ಸಾಧ್ಯವೆ? ಎಂದು ಅನೇಕರು ಯೋಚಿಸಿದರು. ಕಳೆದ ಎರಡು ಮೂರು ಶತಮಾನಗಳವರೆಗೂ ಇದಕ್ಕೆ ಸೂಕ್ತ ಉತ್ತರ ಕಾಣಲಿಲ್ಲ. ರಸಾಯನ ಶಾಸ್ತ್ರದಲ್ಲಿ ಬೆಳವಣಿಗೆಯಾದ ಮೇಲೆ ರಾಸಾಯಿಕ ಕ್ರಿಯೆಗಳ ಮೂಲಕ ಅನೇಕ ಪದಾರ್ಥಗಳನ್ನು ಭೇದಿಸಲು, ವಿಶ್ಲೇಷಿಸಲು ಸಾಧ್ಯವಾಯಿತು. ತತ್ಪರಿಣಾಮವಾಗಿ ವಿವಿಧ ಗುಣ ಧರ್ಮಗಳ ಪದಾರ್ಥಗಳು ನಿಜವಾಗಿ ಕೇವಲ ಕೆಲವು ವಸ್ತುಗಳ ಸಂಯೋಗದಿಂದ ನಿರ್ಮಿತವಾಗಿರುವುದು ತಿಳಿದು ಬಂತು. ಉದಾಹರಣೆಗೆ ನೀರು ಎನ್ನುವುದು ಆಮ್ಲಜನಕ, ಜಲಜನಕ ಎಂಬ ಎರಡು ಬಗೆಯ ವಸ್ತುಗಳಿಂದ ಆಗಿರುವ ಪದಾರ್ಥ. ಆದರೆ ಎಷ್ಟೇ ಪ್ರಯತ್ನಪಟ್ಟರೂ ಆಮ್ಲಜನಕವನ್ನಾಗಲಿ, ಜಲಜನಕವನ್ನಾಗಲಿ ರಾಸಾಯನಿಕ ಕ್ರಿಯೆಗಳಿಂದ ಮತ್ತೆ ಬೇರೆ ಬಗೆಯ ವಸ್ತುಗಳನ್ನಾಗಿ ವಿಭಜಿಸಲು ಆಗದು. ಆದ್ದರಿಂದ ಆಮ್ಲಜನಕ ಒಂದು ಮೂಲ "ಧಾತು" (Element) [illegible] ಹೀಗೆಯೆ ಜಲ

ಜನಕವೂ ಮೂಲ "ಧಾತು" ಎಂದಾಯಿತು. ಪ್ರಕೃತಿಯಲ್ಲಿ ಸುಮಾರು ನೂರಾ ಐದು ಬಗೆಯ ಮೂಲ ಧಾತುಗಳಿವೆ ಎಂದು ನಮಗೆ ತಿಳಿದುಬಂದಿದೆ. ವಿಶ್ವದ ಯಾವ ಘನ, ದ್ರವ ಅನಿಲ ಪದಾರ್ಥವನ್ನಾದರೂ ಈ ನೂರಾ ಐದರ ಪೈಕಿ ಕೆಲವು ಮೂಲ ಧಾತುಗಳಿಂದ ತಯಾರಿಸಬಹುದು. ಎಲ್ಲಾ ಪದಾರ್ಥಗಳಂತೆ ಎಲ್ಲಾ ಮೂಲ ಧಾತುಗಳೂ ಸಣ್ಣ ಕಣಗಳಿಂದ ಆಗಿವೆ ಎಂದಾದಮೇಲೆ ವಿಶ್ವದ ವೈವಿಧ್ಯದ ಹಿಂದೆ ಕೇವಲ ನೂರಾಐದು ಬಗೆಯ ಕಣಗಳ ತಳಹದಿ ಇದೆ ಎಂದು ಒಪ್ಪಿಕೊಳ್ಳಬೇಕಾಯಿತು. ಈ ಮೂಲ ಧಾತುಗಳ ಕಣಗಳನ್ನು "ಪರಮಾಣು"ಗಳು ಎಂದು ಹೆಸರಿಸಿದರು. ಯಾವುದೇ ಪರಮಾಣುವನ್ನಾದರೂ ಮತ್ತೆ ವಿಭಜಿಸಲು ಸಾಧ್ಯವಿಲ್ಲ ಎಂಬ ನಂಬಿಕೆ ವಿಜ್ಞಾನಿಗಳಲ್ಲಿ ತಳವೂರಿತು.

ಕಳೆದ ಶತಮಾನದ ಕೊನೆಯಲ್ಲಿ ಈ ನಂಬುಗೆ ಇದ್ದಕ್ಕಿದ್ದಂತೆ ಮಾಯವಾಯಿತು! ಪರಮಾಣು ಗಟ್ಟಿ ಎಂದು ತಿಳಿದುಕೊಂಡಿರುವುದು ತಪ್ಪೆಂದು ಸಿದ್ಧವಾಯಿತು. 1890 ರಿಂದಾಚೆಗೆ ನಡೆಸಿದ್ದ ಪ್ರಯೋಗಗಳಲ್ಲಿ ವಿದ್ಯುತ್ತಿನ ಅಂಶವಿದ್ದ ಒಂದು ಬಗೆಯ ಕಣಗಳನ್ನು ಅನೇಕ ವಸ್ತುಗಳಿಂದ ಹೊರ ತೆಗೆಯಬಹುದು ಎನ್ನುವದು ಕಂಡುಬಂತು. ಋಣ ವಿದ್ಯುತ್ತನ್ನು ಹೊಂದಿದ್ದ ಈ ಕಣಗಳನ್ನು "ಎಲೆಕ್ಟ್ರಾನ್"ಗಳೆಂದು ಹೆಸರಿಸಲಾಯಿತು. ಯಾವ ವಸ್ತುವಿನಿಂದ ಬೇಕಾದರೂ "ಎಲೆಕ್ಟ್ರಾನು"ಗಳನ್ನು ತೆಗೆಯಬಹುದು ಎಂದಾದ ಮೇಲೆ ಎಲೆಕ್ಟ್ರಾನುಗಳು ನಿಜವಾಗಿಯೂ ಪರಮಾಣುಗಳ ಒಳಗೆ ಹುದುಗಿರಬೇಕು ಎಂದಾಯಿತು. ಆದ್ದರಿಂದ ಅವಿಭಾಜ್ಯ ಎಂದುಕೊಂಡಿದ್ದ ಪರಮಾಣುಗಳು ಮೂಲ ಭೂತ ಕಣಗಳಲ್ಲ ಎಂದೊಪ್ಪಿಕೊಳ್ಳಬೇಕಾಯಿತು.

ಸಾಮಾನ್ಯವಾಗಿ ವಸ್ತುಗಳಲ್ಲಿ ವಿದ್ಯುತ್ತಿನ ಅಂಶ ಇರುವದಿಲ್ಲವೆಂದು ನಮಗೆಲ್ಲಾ ಗೊತ್ತಿದೆ. ಆದರೂ ಋಣ ವಿದ್ಯುತ್ ಕಣಗಳಾದ ಎಲೆಕ್ಟ್ರಾನುಗಳು ಎಲ್ಲಾ ವಸ್ತುಗಳ ಪರಮಾಣುಗಳಲ್ಲಿ ಇರುತ್ತವೆ ಎಂದು 1897ರಲ್ಲಿ ನಿಶ್ಚಯವಾಯಿತು. ಹಾಗಾದರೆ. ಪರಮಾಣುಗಳಲ್ಲಿ ಧನ ವಿದ್ಯುತ್ತಿನ ಅಂಶವೂ ಹೇಗೋ ಇರಬೇಕು. ಇಲ್ಲದಿದ್ದರೆ. ಎಲ್ಲಾ ವಸ್ತುಗಳೂ ನಮಗೆಲ್ಲಾ ಚಳಕು ಹುಟ್ಟಿಸುತ್ತಿದ್ದವು. ಆದರೆ ವಸ್ತುಗಳು ತಟಸ್ಥವಾಗಿರುವುದರಿಂದ. ಅವುಗಳಲ್ಲಿ ಋಣ ಮತ್ತು ಧನ ವಿದ್ಯುದಂಶಗಳು ಸಮಾನ ಪ್ರಮಾಣದಲ್ಲಿದ್ದು ಒಂದರ ಪ್ರಭಾವವನ್ನು ಇನ್ನೊಂದು ಕಡೆ ಹಿಡಿದಿರಬೇಕು ಎಂದು ತರ್ಕಿಸಲಾಯಿತು. ಅಂದ ಮೇಲೆ ಪರಮಾಣುಗಳು ಅವಿಭಾಜ್ಯ ಎನ್ನುವುದಷ್ಟೇ ಅಲ್ಲದೆ, ಅವು ಮೂಲಭೂತವಾಗಿ ವಿದ್ಯುತ್ಕಣಗಳಿಂದ ಮಾಡಲ್ಪಟ್ಟಿವೆ ಎಂಬ ನಿರ್ಧಾರಕ್ಕೆ ಬರಲಾಯಿತು. ಎಲೆಕ್ಟ್ರಾನನ್ನು ಕಿತ್ತು ತೆಗೆಯುವಂತಹ ಪ್ರಯೋಗಗಳಲ್ಲಿ ವಿವಿಧ ತೂಕಗಳಿದ್ದ ಧನ ವಿದ್ಯುತ್ಕಣಗಳೂ ಗೋಚರಿಸಿದಾಗ ಸಂದೇಹವೆ ಉಳಿಯಲಿಲ್ಲ.

ಈ ಧನ ವಿದ್ಯುತ್ಕಣಗಳು ಎಲೆಕ್ಟ್ರಾನುಗಳಿಗಿಂತಲೂ ಬಹು ದೊಡ್ಡವಾಗಿಯೂ ಇವೆ ಎಂಬ ನಂಬಿಕೆ ಅನೇಕ ವರ್ಷಗಳ ಕಾಲ ಇತ್ತು. ಆದ್ದರಿಂದ ಪರಮಾಣು ಎಂದರೆ ಉಂಡೆ ಎನ್ನಿಸಿತು. ಉಂಡೆಯಲ್ಲಿನ ಧನ ವಿದ್ಯುತ್ ವಿಶಾಲವಾಗಿ ಹರಡಿಕೊಂಡಿದೆ. ಉಂಡೆ ಒಡೆದಾಗ ಆ ಚೂರುಗಳು ವಿವಿಧ ಗಾತ್ರಗಳಲ್ಲಿರುವಂತೆಯೇ ಪ್ರಯೋಗಗಳಲ್ಲಿ ಧನ ವಿದ್ಯುತ್ಕಣಗಳು ತೋರಿಬರುತ್ತಿವೆ ಎಂದೆನಿಸಿತು. ಆದರೆ ಸರ್ವತ್ರವಾಗಿಯೂ, ಸಮತೂಕದಲ್ಲಿಯೂ ಕಾಣಬರುತ್ತಿದ್ದ ಎಲೆಕ್ಟ್ರಾನುಗಳೂ, ಪರಮಾಣುವಿನಲ್ಲಿ ಒಂದೇ ತೆರನಾಗಿ ಇವೆ ಎಂದು ನಂಬಲು ಸುಲಭವಾಯಿತು.

1911ರಲ್ಲಿ ರುದರ್‌ಫರ್ಡ್‌ನು ನಡೆಸಿದ ಸಂಶೋಧನೆಗಳಿಂದ ಪರಮಾಣುವಿನ ಬಹು ಭಾಗ ಬರೀ ಖಾಲಿ ಜಾಗ ಎಂಬುದು ಗೊತ್ತಾಯಿತು. ತತ್ಫಲವಾಗಿ ಪರಮಾಣುವಿನ ಧನ ವಿದ್ಯುದಂಶವೆಲ್ಲ ಪರಮಾಣುವಿನಲ್ಲಿ ಎಲ್ಲೋ ಒಂದು ಚಿಕ್ಕ ಜಾಗದಲ್ಲಿ ಮಾತ್ರ ಒಟ್ಟಾಗಿ ಶೇಖರಿಸಲ್ಪಟ್ಟಿದೆ ಎಂದು ಒಪ್ಪಿಕೊಳ್ಳಲಾಯಿತು. ಆ ಪ್ರಕಾರ, ಎಲೆಕ್ಟ್ರಾನುಗಳಿಗಿಂತ ಅತಿ ಭಾರವಾದರೂ ಈ ಧನ ವಿದ್ಯುದಂಶವಿರುವ ಭಾಗ ಪರಮಾಣುವಿನಲ್ಲಿ ಬಿಂದುವಿನಂತೆ ಮಾತ್ರ ಇದೆ. ಋಣ ವಿದ್ಯುದಂಶ ಅದರಿಂದ ದೂರ ಕೆಳಗೆ ತೆಳಗೆ ಹರಡಿಕೊಂಡಿದೆ! ವಿಜ್ಞಾನಿಗಳು ಪರಮಾಣುವಿಗೆ ಸೌರವ್ಯೂಹದ ಉಪಮೆಯನ್ನು ಕೊಟ್ಟರು. ಅತ್ಯಂತ ಭಾರವಾದ ಸೂರ್ಯನಿಗಿಂತಲೂ ಎಷ್ಟೋ ದೂರ

ವಲ್ಲಿ ಹಗುರವಾದ ಗ್ರಹೋಪಗ್ರಹಗಳು ಸುತ್ತುತ್ತಿರುವಂತೆ ಭಾರವಾದ ಪರಮಾಣು ಕೇಂದ್ರವೊಂದರ ಸುತ್ತ ದೂರದಲ್ಲಿ ಎಲೆಕ್ಟ್ರಾನುಗಳು ಪ್ರದಕ್ಷಿಣೆ ಹಾಕುತ್ತಿರಬೇಕು ಎಂದವರು ಈ ವಾದಕ್ಕೆ ಸರಿಹೊಂದುವ ಹಾಗೆ ಸಮಾಧಾನ ಹೇಳಿದರು.

ಆದರೆ ಪರಮಾಣುವಿನ ಈ ಹೊಸ ಚಿತ್ರ ಹಳೆಯ ಸಮಸ್ಯೆಗಳನ್ನು ಬಿಡಿಸಿದರೂ ಅನೇಕ ಹೊಸ ಸಮಸ್ಯೆಗಳನ್ನು ಸೃಷ್ಟಿಸಿತು. ಉದಾಹರಣೆಗೆ ವಿದ್ಯುದಯಸ್ಕಾಂತೀಯ ನಿಯಮದ ಪ್ರಕಾರ ಕೇಂದ್ರದ ಸುತ್ತ ಸುತ್ತುವಾಗ ಎಲೆಕ್ಟ್ರಾನುಗಳು ಶಕ್ತಿಯನ್ನು ಕಳೆದುಕೊಳ್ಳಲೇಬೇಕು. ಒಂದು ವೇಳೆ ಇದು ನಿಜವೇ ಆಗಿದರೆ ಪರಮಾಣುಗಳಲ್ಲಿ ಎಲೆಕ್ಟ್ರಾನುಗಳು ಇರಲು ಆಗುತ್ತಿರಲಿಲ್ಲ. ಈ ವಿರೋಧಾಭಾಸವನ್ನು ಪರಿಹರಿಸಲು ಎಷ್ಟೆಷ್ಟೋ ಪ್ರಯತ್ನಗಳಾದವು. ಯಾವುದೂ ತೃಪ್ತಿಕರವಾಗಲಿಲ್ಲ. ಕೊನೆಗೆ ಕ್ರಾಂತಿಕಾರಕವಾದ ಸಿದ್ಧಾಂತಗಳನ್ನೇ ಮಂಡಿಸಬೇಕಾಯಿತು. 1925ರ ಸುಮಾರಿಗೆ ಇವು ಸಂದೇಹಾತೀತವಾಗಿ ನಿಜವೆಂದು ಸಿದ್ಧವಾಯಿತು. ಇವುಗಳಿಂದ ಪರಮಾಣುವಿನ ಗುಣಗಳು ತೃಪ್ತಿಕರವಾಗಿ, ಗಣಿತ ಸಮೀಕರಣಗಳಿಂದ ವಿವರಿಸಲ್ಪಡುವಂತಾಗಿ, ವಿಜ್ಞಾನಿಗಳಲ್ಲಿ ಸಮ್ಮತಿ ಮೂಡಿತ್ತು.

ಪರಮಾಣುವನ್ನು ಸ್ಥೂಲವಾಗಿ ವಿವರಿಸುವ ಗಣಿತ ಸಮೀಕರಣಗಳನ್ನು ಇನ್ನೂ ನಿಖರವಾಗಿ ಮಾಡಲು ಪರಿಷ್ಕರಿಸಿದಾಗ ಮತ್ತೂ ಒಂದು ವಿಚಿತ್ರ ಗೋಚರಿಸಿತು. ಅದೆಂದರೆ ಎಲೆಕ್ಟ್ರಾನಿಗೆ ಎಲ್ಲಾ ವಿಧದಲ್ಲೂ ವಿರುದ್ಧ ಗುಣಗಳಿರುವ ಒಂದು ಕಣ ಇರಬೇಕು ಎನ್ನುವುದು! ಆದರೂ ಇಂತಹ ಒಂದು ಕಣ ಅದುವರೆಗೂ ಕಂಡು ಬಂದಿರಲಿಲ್ಲ. ಅಲ್ಲದೆ ಪರಮಾಣುವಿನಲ್ಲಿ ಇದಕ್ಕೆ ನೆಲೆಯಿರುವುದು ಸಾಧ್ಯವಿಲ್ಲ ಎಂದೂ ಗೊತ್ತಿತ್ತು. ಹಾಗಿದ್ದರೂ ತಾರ್ಕಿಕವಾಗಿ ಪ್ರಕೃತಿಯಲ್ಲಿ ಇಂತಹ ವಿರುದ್ಧ ಕಣ ಇರಲೇಬೇಕು. ಆದರೆ ಎಲ್ಲಿ? ಎಂಬ ಪ್ರಶ್ನೆ ಮುಂದೆ ಬಂತು. ಎಷ್ಟು ಪ್ರಯತ್ನಿಸಿದರೂ ಅದು ಗೋಚರಿಸಲಿಲ್ಲ. ಹಾಗಾದರೆ ವಿಜ್ಞಾನಿಗಳ ಲೆಕ್ಕಾಚಾರವೇ ತಪ್ಪಿರಬಹುದೇ? ಎಂದೂ ಅನ್ನಿಸಿತು ಕೆಲವರಿಗೆ. ಕೊನೆಗೆ 1932 ರಲ್ಲಿ ಅಮೆರಿಕನ್ ವಿಜ್ಞಾನಿ ಕಾರ್ಲ್ ಆ್ಯಂಡರ್ ಸನ್ ಈ ಹೊಸ ಕಣದ ಅಸ್ತಿತ್ವವನ್ನು ಸಿದ್ಧಪಡಿಸಿದ. ವಿಶ್ವ ಕಿರಣಗಳಿಂದ (Cosmic rays) ಉಂಟಾದ ಪ್ರಕ್ರಿಯೆಗಳಲ್ಲಿ ಈ ಕಣ ಕಾಣ ಬಂತು. ಎಲೆಕ್ಟ್ರಾನಿನಷ್ಟೇ





ತೂಕವಿದ್ದರೂ. ಎಲೆಕ್ಟ್ರಾನಿಗೆ ವಿರುದ್ಧವಾದ ಧನ ವಿದ್ಯುದಂಶ ಹೊಂದಿದ್ದ ಇದನ್ನು "ಪಾಸಿಟ್ರಾನ್" ಎಂದಾತ ಹೆಸರಿಸಿದ. ಅಂತೂ ಅಂತಿಮವಾದುದೆಂದುಕೊಂಡಿದ್ದ ಪರಮಾಣುವೂ ಕಣಗಳಿಂದ ಆಗಿದೆ ಎನ್ನುವದಷ್ಟೇ ಅಲ್ಲದೇ, ಪರಮಾಣುವಿನಿಂದ ಪ್ರತ್ಯೇಕವಾದ ಕಣವೂ ಒಂದಿದೆ ಎಂಬ ವಿಸ್ಮಯಕರ ವಿಷಯ ಮೊದಲ ಬಾರಿಗೆ ಬೆಳಕಿಗೆ ಬಂತು.

ಅದೇ ವರ್ಷ ಮತ್ತೊಂದು ಬಗೆಯ ಹೊಸ ಕಣದ ಅಸ್ತಿತ್ವ ಕಂಡು ಬಂದಿತು. ಪರಮಾಣುವಿನ ಧನ ವಿದ್ಯುತ್ತೆಲ್ಲ ಅದರ ಸಣ್ಣ ಕೇಂದ್ರದಲ್ಲಿದೆ ಎಂದು ಗೊತ್ತಿತ್ತು. ಈ ಕೇಂದ್ರವೂ ಕಣಗಳಿಂದ ಆಗಿದೆ ಎನ್ನುವದೂ ನಿಧಾನವಾಗಿ ತಿಳಿದು ಬಂತು. ಪರಮಾಣುವನ್ನು ಒಡೆದಾಗ ಹೊರ ಬರುತ್ತಿದ್ದ ಧನ ವಿದ್ಯುತ್ತು ಯಾವಾಗಲೂ ಕಣಗಳಲ್ಲಿಯೇ ಇರುತ್ತಿತ್ತು. ಈಗ ವಿದ್ಯುತ್ತು ಕಣ ರೂಪದಲ್ಲಿಲ್ಲದೇ ಸ್ವತಂತ್ರವಾಗಿ ಇರಲು ಸಾಧ್ಯವಿಲ್ಲ ಎನ್ನುವ ಚಿತ್ರ ಮೂಡಲಾರಂಭಿಸಿತು. ಪರಮಾಣುವಿನ ಕೇಂದ್ರ ಚಿಕ್ಕದಾಗಿದ್ದರೂ ವಾಸ್ತವವಾಗಿ ಅದೂ ಅನೇಕ ಕಣಗಳಿಂದ ಆಗಿರುವ ಉಂಡೆ ಅನ್ನಿಸಿತು. ಇಲ್ಲಿ ಎಲ್ಲವೂ ಒಂದೇ ಬಗೆಯ ಧನ ವಿದ್ಯುತ್ತಿನ ಕಣಗಳು ಎಂದು ಭಾವಿಸಿದ ವಿಜ್ಞಾನಿಗಳು ಈ ಕೇಂದ್ರ ಕಣವನ್ನು "ಪ್ರೋಟಾನ್" ಎಂದು ಹೆಸರಿಸಿದರು.

ಧಾತುಗಳಲ್ಲೆಲ್ಲಾ ಅತ್ಯಂತ ಸರಳವಾದದ್ದು ಜಲಜನಕ. ಅದರ ಪರಮಾಣು ಅಂದರೆ ಪ್ರೋಟಾನಿನ ಸುತ್ತ ಒಂದು ಎಲೆಕ್ಟ್ರಾನ್ ಸುತ್ತುತ್ತಿರುವ ಸರಳ ವ್ಯವಸ್ಥೆ. ಇತರ ಧಾತುಗಳ ಪರಮಾಣುಗಳ ಕೇಂದ್ರಗಳಲ್ಲಿ ಅನೇಕ ಪ್ರೋಟಾನುಗಳಿರಬೇಕು ಎಂದೆನ್ನಿಸಿತ್ತು. ಆದರೆ ಪರಮಾಣುಗಳ ಇತರ ಗುಣಗಳ ಬಗ್ಗೆ ಜ್ಞಾನ ನಿಖರವಾಗತೊಡಗಿದಾಗ ಈ ಭಾವನೆಯ ಬಗ್ಗೆ ಸಂದೇಹ ಮೂಡಲಾರಂಭಿಸಿತು. ಉದಾಹರಣೆಗೆ ಅನೇಕ ಧಾತುಗಳು ಸಮಸ್ಥಾನಿಕಗಳನ್ನು (Isotopers) ಹೊಂದಿರುವದು ತಿಳಿದು ಬಂತು. ಸರಳವೆಂದು ಕೊಂಡಿದ್ದ ಜಲಜನಕದಲ್ಲೂ ಸಮಸ್ಥಾನಿಕಗಳಿವೆ ಎಂದು ತಿಳಿಯಿತು. "ಭಾರವಾದ ಜಲಜನಕ" ಎನ್ನುವದೂ ಇದೆ. ಅದರ ಪರಮಾಣು ಸಾಮಾನ್ಯ ಜಲಜನಕ ಪರಮಾಣುವಿನಂತೆಯೇ ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸಿದರೂ ಇದರ ತೂಕ ಸಾಮಾನ್ಯದರ ಎರಡರಷ್ಟು! ಇದೇ ಆಶ್ಚರ್ಯವೆನಿಸಿದರೆ, ಇನ್ನೂ ಒಂದು ಬಗೆಯ ಜಲಜನಕವಿದೆ. ಅದರ ಪರಮಾಣು ತೂಕ ಸಾಮಾನ್ಯ ಜಲಜನಕದ ಮೂರರಷ್ಟು! ಅಷ್ಟೇ ಸಾಲದೆನ್ನುವಂತೆ, ಅದು ಯುರೇನಿಯಂ, ಥೋರಿಯಂ ಇತ್ಯಾದಿಗಳಂತೆ "ವಿದಳನ ಕ್ರಿಯೆ" (Natural fission)ವನ್ನೂ ಪ್ರದರ್ಶಿಸುತ್ತದೆ. ಅಂದರೆ ಅದರ ಪರಮಾಣುಗಳಲ್ಲಿ ಅಲ್ಲೊಂದು ಇಲ್ಲೊಂದು ಸಹಜವಾಗಿಯೇ ಸಿಡಿದು ಹೋಗಿ ಭಾರ ಕಳೆದುಕೊಂಡು ಸಾಮಾನ್ಯ ಜಲಜನಕ ಪರಮಾಣುವಾಗಿಬಿಡುತ್ತದೆ. ಹಾಗೆ ಸಿಡಿಯುವಾಗ ಅದರಿಂದ ಎಲೆಕ್ಟ್ರಾನ್ ಹಾರಿಬಿಡುತ್ತದೆ. ಆದರೂ ಇದು ಕೇಂದ್ರದ ಸುತ್ತ ಸುತ್ತುತ್ತಿದ್ದ ಎಲೆಕ್ಟ್ರಾನ್ ಅಲ್ಲ. ಪರಮಾಣು ಕೇಂದ್ರದಿಂದಲೇ ಹಾರಿ ಬಂದದ್ದು. ಈ ಎಲ್ಲಾ ವಿಷಯಗಳಿಂದ ಪರಮಾಣು ಕೇಂದ್ರದ ರಚನೆಯ ಬಗ್ಗೆಯೇ ಅನುಮಾನ ಬರತೊಡಗಿತ್ತು. ವಿಜ್ಞಾನಿಗಳಿಗೆ ಪರಮಾಣು ಕೇಂದ್ರಗಳಲ್ಲಿ ಕೇವಲ ಪ್ರೋಟಾನುಗಳಷ್ಟೇ ಅಲ್ಲ ಬಹುಶಃ ಎಲೆಕ್ಟ್ರಾನುಗಳೂ ಇರಬಹುದು ಎನ್ನಿಸಿತು. ಆದರೆ ಇದನ್ನು ಒಪ್ಪಿಕೊಂಡರೆ ತಾತ್ವಿಕ ಸ್ವರೂಪದ ಹೊಸ ಸಮಸ್ಯೆಗಳು ಏಳುತ್ತಿದ್ದವು.

ಇಂತಹ ಪ್ರಸಂಗದಲ್ಲಿ ಜೇಮ್ಸ್ ಚಾಡ್ವಿಕ್ ಒಂದು ಹೊಸ ಕಣ ಪರಮಾಣುಗಳಿಂದ ಹೊರ ಬೀಳುತ್ತಿದೆ ಎಂಬುದನ್ನು ಕಂಡು ಹಿಡಿದ. ಕೆಲವು ವಿಶಿಷ್ಟ ಪ್ರತಿಕ್ರಿಯೆಗಳಲ್ಲಿ ಪರಮಾಣುಗಳಿಂದ ಹೊರ ಬೀಳುತ್ತಿದ್ದ ಈ ಕಣಗಳು ತೂಕದಲ್ಲಿ ಪ್ರೋಟಾನಿನಂತೆಯೇ ಇದ್ದರೂ ವಿದ್ಯುದಂಶವೇ ಇರದೆ ತಟಸ್ಥವಾಗಿದ್ದವು. ಆದ್ದರಿಂದಲೇ ಈ ತಟಸ್ಥ ಕಣಗಳು ಹೆಚ್ಚಾಗಿದ್ದರಿಂದ ಒಂದು ಮೂಲಧಾತುವಿನ ಪರಮಾಣುಗಳಲ್ಲಿ ಕೆಲವು ಮಿಕ್ಕವುಗಳಿಗಿಂತ ಭಾರವಾಗಿರುವುದು ಸಾಧ್ಯ. 1932ರಲ್ಲಿ ಮೊದಲ ಬಾರಿಗೆ ರುಜುವಾತಾದ ಈ ತಟಸ್ಥ ಕಣವನ್ನು "ನ್ಯೂಟ್ರಾನ್" ಎಂದು ಹೆಸರಿಸಲಾಯಿತು.

ತಟಸ್ಥ ಕಣದಿಂದ ಪರಮಾಣು ಕೇಂದ್ರದ ಬಗ್ಗೆ ತೃಪ್ತಿಕರ ಚಿತ್ರ ಮೂಡಿದರೂ, ಪರಮಾಣು ಕೇಂದ್ರದ ಇರುವಿಕೆ ತಿಳಿದಾಗಿನಿಂದ ಕೊರೆಯುತ್ತಲೇ ಇದ್ದ ಮೊದಲಿನ ಪ್ರಶ್ನೆ ಉಳಿದೇ ಇತ್ತು. ಅದೆಂದರೆ ಪರಮಾಣು

ಕೇಂದ್ರ ಅಸ್ತಿತ್ವದಲ್ಲಿರಲು ಹೇಗೆ ಸಾಧ್ಯ? ಯಾವ ಎರಡು ಸಮಾನ ವಿದ್ಯುದಂಶವಿರುವ ವಿದ್ಯುತ್ಕಣಗಳನ್ನು ಹತ್ತಿರ ತಂದಾಗಲೂ ಅವು ಒಂದನ್ನೊಂದು ದೂರ ತಳ್ಳಲು ಯತ್ನಿಸುತ್ತವೆ. ಪರಮಾಣು ಕೇಂದ್ರದಷ್ಟು ಅತಿ ಚಿಕ್ಕ ಜಾಗದಲ್ಲಿ ಅಷ್ಟೊಂದು ಧನವಿದ್ಯುತ್ಕಣಗಳಾದ ಪ್ರೋಟಾನುಗಳು ಒಟ್ಟಿಗಿರಲು ಸಾಧ್ಯವೇ ಇಲ್ಲ. ವಿದ್ಯುತ್ತಿನ ಬಗ್ಗೆ ನಮಗೆ ತಿಳಿದಿರುವ ಇತರ ಎಲ್ಲಾ ಸಂಗತಿಗಳಿಂದ ಈ ಘಟನೆ ಸಾಧ್ಯವೇ ಇಲ್ಲ. ಆದ್ದರಿಂದ ಪರಮಾಣು ಕೇಂದ್ರದಲ್ಲಿ ಮತ್ತಾವುದೋ ಆಕರ್ಷಕ ಶಕ್ತಿ ತನ್ನ ಕೈವಾಡ ತೋರಿಸಿ ಈ ಪ್ರೋಟಾನುಗಳನ್ನು ಹಿಡಿದಿಟ್ಟಿರಬೇಕು ಎನ್ನಿಸಿತು. ಈ ತರಹದ ಶಕ್ತಿ ಪರಮಾಣು-ಪರಮಾಣುಗಳ ಮಧ್ಯ ಕಾಣಬಹುದು. ಸಾಮಾನ್ಯ ಪ್ರಪಂಚದಲ್ಲಿ ಕಾಣಿಸದೇ ಪರಮಾಣು ಕೇಂದ್ರದಷ್ಟು ಜಾಗದಲ್ಲಿ ಮಾತ್ರ ಪ್ರತ್ಯಕ್ಷವಾಗುವ ಈ ಶಕ್ತಿ ವಿದ್ಯುತ್ತನ್ನೂ ಮೀರಿಸುವಷ್ಟು ಬಲಯುತವಾಗಿರಬೇಕಾದ್ದರಿಂದ ಇದನ್ನು "ಪ್ರಬಲ ಬಲ" ಎಂದು ಹೆಸರಿಸಿದರು. ಆದರೂ ಅದು ಏನು? ಎನ್ನುವ ಪ್ರಶ್ನೆ ಮಾತ್ರ ಹಾಗೆಯೇ ಉಳಿಯಿತು.

ಅದನ್ನು ಅರ್ಥೈಸಲು ಮಾಡಿದ ಅನೇಕ ಪ್ರಯತ್ನಗಳಲ್ಲಿ ಯಾವುದೂ ಸಫಲವಾಗಲಿಲ್ಲ. ಕೊನೆಗೆ 1935ರಲ್ಲಿ ಜಪಾನಿ ವಿಜ್ಞಾನಿ ಯುಕಾವಾ ಅವರು ಸರ್ವಸಮ್ಮತ ಎನಿಸಬಹುದಾದ ಒಂದು ಸಿದ್ಧಾಂತವನ್ನು ಮಂಡಿಸಿದರು. ಅದರ ಪ್ರಕಾರ, ಪ್ರಬಲ ಬಲ ಎನ್ನುವುದು ಒಂದು ರೀತಿಯ ಚಂಡಾಟ, ಒಬ್ಬರಿಂದ ಇನ್ನೊಬ್ಬರಿಗೆ ಸದಾ ಎಸೆಯಲ್ಪಡುವ ಚಂಡಿನ ದೆಸೆಯಿಂದಾಗಿ ಹೇಗೆ ಇಬ್ಬರು ಹುಡುಗರು ದೂರ ಸರಿಯಲು ಆಗುವದಿಲ್ಲವೋ ಹಾಗೆ, ಪರಮಾಣು ಕೇಂದ್ರದಲ್ಲಿನ ಪ್ರೋಟಾನುಗಳು ತಮ್ಮ ತಮ್ಮ ಮಧ್ಯ ಯಾವುದೋ ಒಂದು ಹೊಸ ಬಗೆಯ ಕಣಗಳನ್ನು ಎಸೆದಾಡುವುದರಿಂದ, ಅವು ಅಷ್ಟು ಚಿಕ್ಕ ಜಾಗದಲ್ಲೇ ಇರಲು ಸಾಧ್ಯವಾಗಿದೆ. ಲೆಕ್ಕಾಚಾರ ಮಾಡಿ ನೋಡಿದರೆ ಈ ಹೊಸ ರೀತಿಯ ಕಣಗಳು ಎಲೆಕ್ಟ್ರಾನಿಗಿಂತಲೂ ಸುಮಾರು ಇನ್ನೂರರಷ್ಟು ಭಾರವಿರಬೇಕು ಎನ್ನಿಸಿತು.

ಮರು ವರ್ಷವೇ ಆ್ಯಂಡರ್‌ಸನ್ ವಿಶ್ವಕಿರಣಗಳಲ್ಲಿ ಇಷ್ಟು ಭಾರವಿರುವ ಹೊಸ ಬಗೆಯ ಕಣವೊಂದನ್ನು ಗುರುತಿಸಿದ. ಮಿಕ್ಕ ವಿಜ್ಞಾನಿಗಳೂ ಇದನ್ನು ಒಪ್ಪಿದರು. ಯುಕಾವಾ ಪ್ರತಿಪಾದಿಸಿದಂತೆಯೇ ಇದ್ದ ಈ ಕಣವೇ ಪರಮಾಣು ಕೇಂದ್ರದ ಪ್ರೋಟಾನುಗಳನ್ನು ಬಂಧಿಸಿರುವ ಬೆಸುಗೆ ಕಣ ಎಂದು ಎಲ್ಲರಿಗೂ ನಂಬಿಕೆಯಾಯಿತು. ಈ ಕಣವೇ ಮುಂದೆ "ಮ್ಯೂ" ಎಂಬ ಗ್ರೀಕ್ ಅಕ್ಷರದಿಂದ ಸೂಚಿಸಲ್ಪಡತೊಡಗಿತು.

ಆದರೆ ವಿಜ್ಞಾನಿಗಳ ಹರ್ಷ ಬಹಳ ದಿನ ಉಳಿಯಲಿಲ್ಲ. ಮ್ಯೂ ಕಣಗಳ ಗುಣಗಳ ಅರಿತು ಬಂದಷ್ಟು ಅವು ಸರಿಯಲ್ಲವೆಂದು ತೋರತೊಡಗಿತು. ಅವು ಬೆಸುಗೆ ಕಣವಾಗಿದರೆ ಪದಾರ್ಥಗಳ ಜೊತೆ ತೀವ್ರವಾಗಿ ಕ್ರಿಯೆ ನಡೆಸಬೇಕಿತ್ತು. ಆದರೆ ಮ್ಯೂ ಕಣಗಳು ದಪ್ಪ ಗೋಡೆಗಳ ಮೂಲಕ ಸುಲಭವಾಗಿ ತೂರಿ ಹೋಗುವುದು ಕಂಡುಬಂತು! ಹಾಗಾದರೆ ಮ್ಯೂ ಬೆಸುಗೆ ಕಣ ಅಲ್ಲ ಎನಿಸಿತು.

ಮುಂದೆ ಹತ್ತು ವರ್ಷಗಳ ನಂತರ 1947 ರಲ್ಲಿ ವಿಶ್ವ ಕಿರಣಗಳಲ್ಲಿ ಮತ್ತೊಂದು ಬಗೆಯ ಕಣ ಕಂಡುಬಂತು. ಇದು ತೂಕದಲ್ಲಿ ಮ್ಯೂ ಕಣಕ್ಕಿಂತ ಕೊಂಚ ಭಾರವಾಗಿದ್ದರೂ ಯುಕಾವಾ ಬಯಸಿದ್ದಕ್ಕೂ ಅನುಗುಣವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಪದಾರ್ಥಗಳ ಜೊತೆ ತೀವ್ರವಾಗಿ ಕ್ರಿಯಾಶೀಲವಾಗಿದ್ದರಿಂದ ಇದೇ ಬೆಸುಗೆ ಕಣವೆನ್ನುವುದರಲ್ಲಿ ಯಾರಿಗೂ ಸಂದೇಹವುಳಿಯಲಿಲ್ಲ. ಮತ್ತೊಂದು ಗ್ರೀಕ್ ಅಕ್ಷರವನ್ನು ಉಪಯೋಗಿಸಿ ಈ ಬೆಸುಗೆ ಕಣವನ್ನು 'ಪೈ' ಎಂದು ಹೆಸರಿಸಿದರು. ಈಗ ಮ್ಯೂ ಕಣವನ್ನು ಮ್ಯೂಆನ್ (Muon) ಎಂದೂ ಪೈ ಕಣವನ್ನು ಪೈಯಾನ್ (Pion) ಎಂದೂ ಕರೆಯುವುದು ರೂಢಿಯಾಗಿದೆ.

ಪೈ ಕಣ ಕಂಡು ಬಂದ ಮೇಲೆ ಪರಮಾಣುವಿನ ಎಲ್ಲಾ ಭಾಗಗಳನ್ನು ತೃಪ್ತಿಕರವಾಗಿ ಅರ್ಥವಿಸಲು ಸಾಧ್ಯವಾಯಿತು. ಆದರೆ ಬೆಸುಗೆ ಕಣದ ಅರಸುವಿಕೆಯಲ್ಲೇ ಅನಿರೀಕ್ಷಿತವಾಗಿ ಕಂಡು ಬಂದಿದ್ದ ಮ್ಯೂ ಕಣ ಪ್ರಕೃತಿಯಲ್ಲಿ ಏಕಿದೆ? ಎಂಬ ಹೊಸ ಪ್ರಶ್ನೆ ಈಗ ಎದುರಾಯಿತು. ಪರಮಾಣುವಿನ ರಚನೆಯಲ್ಲಿ ಯಾವ ವಿಧದಲ್ಲೂ ಇದು ಭಾಗವಹಿಸುವುದಿಲ್ಲ. ಹಾಗಿದ್ದ ಮೇಲೆ ಇದರ ಅಸ್ತಿತ್ವಕ್ಕೇನು ಅರ್ಥ? ಇದರ ಪ್ರಯೋಜನವಾದರೂ ಏನು? ಈಗ ಈ ಬಗೆಗೆ

ಹೊಸ ದಲಿತ

ಕಳೆದ ನಿನ್ನೆಗಳೆಷ್ಟೊ, ಆದರೂ
ಅನಾಥ ವಸುಧೆ
ಒಂದು ಬೀಜ ಬಿತ್ತಿದೆ.
ಆದರೆ ಪೂಜಕವಲ್ಲ ಬರೇ
ನಿರರ್ಥಕ, ನಿಗೂಢ ನಿಕ್ಷೇಪಕ್ಕೆ
ನಿಕುಂಜ ಇದ್ದಂತೆ.
ಅದು ತನಕ ಉದ್ಧಾರದ
ಉಸಿರು ಜೀವನ್ಮೃತನಂತೆ
ಜೂಗರಿಸಿ ಕೇಳುತ್ತಿದ್ದು
ನಿಗೂಢ ಬದುಕಿಗೆ
ಆದಿ ಅಂತ್ಯವಿಲ್ಲದೆ
ಪರಿಶುದ್ಧತೆ ಹೊಂದಿ
ಆಸ್ಫೋಟಿಸಿದೆ.
ಭೀಕರ ಕತ್ತಲೊಳಗೆ
ಪುನೀತನಾಗದೆ
ಹೊಲಸು ಹೊರದೆ
ಹುಚ್ಚು ಆಚಾರವಂತರ
ಎಂಜಲು ನೆಕ್ಕುವ
ಮುಗ್ಧ ಪ್ರಾಣಿಯಾಗಿ
'ಕುಂಯ್ಯು' ಗುಟ್ಟುತ್ತಿವೆ

● ವೆಂಕಟಭಟ್ ಎಡನೀರು ●

ಸಂಶೋಧನೆಗಳು ಮುಂದುವರೆದವು. ವಿಶ್ವ ಕಿರಣಗಳನ್ನು ಅವಲಂಬಿಸಿ ಮಾಡುತ್ತಿದ್ದ ಸಂಶೋಧನೆಗಳಲ್ಲಿ ಅನಾನುಕೂಲಗಳಿದ್ದುದರಿಂದ ಪ್ರಯೋಗ ಶಾಲೆಯಲ್ಲೇ ಬೇಕೆಂದಾಗ ಬೇಕಾದಷ್ಟು, ಮ್ಯೂ ಮತ್ತು ಪೈ ಕಣಗಳನ್ನು ಉತ್ಪಾದಿಸುವುದು ಸೂಕ್ತವೆನಿಸಿತು. ಆದ್ದರಿಂದ ಪರಮಾಣು ಕಣಗಳನ್ನು ವೇಗಗೊಳಿಸಿ, ಶಕ್ತಿಯುತವಾಗಿ ಮಾಡಿ, ಅವನ್ನು ಪದಾರ್ಥಗಳೊಡನೆ ಘರ್ಷಿಸುವಂತೆ ಮಾಡುವುದರ ಮೂಲಕ ಅನೇಕ ಕಣಗಳನ್ನು ಉತ್ಪಾದಿಸುವ ತಂತ್ರಗಳು ಹೆಚ್ಚಾದವು.

ಇಂತಹ 'ಪರಮಾಣು' ಕಣ 'ವೇಗವರ್ಧಕ' [illegible]

ಹೊಸ ಹೊಸ ಕಣಗಳು ಕಂಡು ಬರಲಾರಂಭಿಸಿದವು. ಇವುಗಳು ಏಕೆ ಪ್ರಕೃತಿಯಲ್ಲಿ ಇವೆ? ಎನ್ನುವುದೂ ಹೊಳೆಯಲಿಲ್ಲ. ಆದರೂ ಕಣಗಳ ಸಂಖ್ಯೆ ಮಾತ್ರ ಶೀಘ್ರವಾಗಿ ಬೆಳೆಯುತ್ತಲೇ ಬಂದಿತು. 1950ರಿಂದೀಚೆಗೆ ಇದುವರೆಗೆ ಸುಮಾರು ನೂರು ಬಗೆಯ ಕಣಗಳು ಇರುವುದು ಸಿದ್ಧವಾಗಿದೆ. ಪರಮಾಣುವಿಗಿಂತಲೂ ಅತ್ಯಂತ ಚಿಕ್ಕವಾಗಿರುವುದರಿಂದ ಪರಮಾಣು ಕಣಗಳಾದ ಪ್ರೋಟಾನು ನ್ಯೂಟ್ರಾನು ಎಲೆಕ್ಟ್ರಾನ್ ಮತ್ತು ಪೈ ಕಣಗಳನ್ನು ಅಭ್ಯಸಿಸುವ ರೀತಿಯಲ್ಲೇ ಈ ಕಣಗಳನು ಅಭ್ಯಸಿಸಬಹುದಾದ್ದರಿಂದಲೂ ಈ ಕಣಗಳನ್ನು "ಪ್ರಾಥಮಿಕ ಕಣಗಳು" (Elementary Particles) ಎಂದು ವಿಜ್ಞಾನಿಗಳು ಕರೆಯಲಾರಂಭಿಸಿದರು.

ಭೌತ ವಿಶ್ವದ ತಳಹದಿ ಪರಮಾಣುಗಳಲ್ಲಿದೆ ಎಂಬ ಹಿಂದಿನಿಂದ ಬಂದಿದ್ದ ನಂಬಿಕೆ ಈ ಪ್ರಾಥಮಿಕ ಕಣಗಳು ಪ್ರತ್ಯಕ್ಷವಾದೊಡನೆ ಮಾಯವಾಯಿತು. ವಾಸ್ತವಿಕವಾಗಿ ಪ್ರಕೃತಿಯ ದೃಷ್ಟಿಯಲ್ಲಿ ಪರಮಾಣು ಮುಖ್ಯವಲ್ಲ; ಈ ಪ್ರಾಥಮಿಕ ಕಣಗಳು ಮುಖ್ಯ. ಈ ಕಣಗಳು ಒಂದರೊಡನೊಂದು ವ್ಯವಹರಿಸುವ ರೀತಿ ನೀತಿಗಳೇ ವಿಶ್ವದ ಮೂಲಭೂತ ನಿಯಮಗಳು. ಈ ನಿಯಮಗಳು ಕೆಲವೊಮ್ಮೆ ಪರಮಾಣುಗಳನ್ನು, ಮೂಲ ಧಾತುಗಳನ್ನು, ವಸ್ತುಗಳನ್ನು ಅಷ್ಟೆ ಅಲ್ಲ, ಜೀವಿಗಳನ್ನು ಸಾಧ್ಯವಾಗಿಸುತ್ತಿವೆಯಾದರೂ ಬೃಹತ್ ವಿಶ್ವದ ವೈವಿಧ್ಯವೆಲ್ಲದರ ಮೂಲ ಪ್ರಾಥಮಿಕ ಕಣ ವಿಜ್ಞಾನ ನಿರೂಪಿಸುತ್ತಿರುವ ನಿಯಮಗಳೇ.

ನಮ್ಮ ಸುತ್ತ ಮುತ್ತಲ ಘಟನೆಗಳನ್ನು ಆಳುವ ವೈಜ್ಞಾನಿಕ ನಿಯಮಗಳೇ ಎಷ್ಟೋ ಸಲ ನಮ್ಮ ಸಾಮಾನ್ಯ ಅನುಭವಕ್ಕೆ ವಿಚಿತ್ರವೆಂಬಂತೆ ತೋರುತ್ತವೆ. ಪರಮಾಣು ವಿಜ್ಞಾನದಲ್ಲಿಯ ನಿಯಮಗಳಂತೂ ಈ ಸಾಮಾನ್ಯ ನಿಯಮಗಳನ್ನು ಮೀರಿದವು, ವಿಚಿತ್ರವಾಗಿವೆ. ಪರಮಾಣುವಿಗೂ ಕೆಳಗಿಳಿದರೆ [illegible] ಪ್ರಾಥಮಿಕ ಕಣಗಳ ಲೋಕದಲ್ಲಿ ನಡೆಯುವ ಘಟನೆಗಳು ಪ್ರಚಂಡ ವಿಜ್ಞಾನಿಗಳನ್ನೂ ತಬ್ಬಿಬ್ಬು ಮಾಡುತ್ತವೆ. ಆದರೆ [illegible] ಮೂಲಭೂತ ನಿಯಮಗಳು ಮಾನವ ಬು[illegible] ಎಟುಕಬೇಕೆಂಬ [illegible]

ಸಮಗೆ ಅಸಾಧ್ಯವೆನ್ನುವ ಘಟನೆಗಳೆಷ್ಟೋ ಸಹಜವಾಗಿ ನಡೆದು ಹೋಗುತ್ತಿವೆ. ಪ್ರಾಥಮಿಕ ಕಣಗಳಲ್ಲಿನ ಇಂತಹ ವಿಚಿತ್ರಗಳಲ್ಲಿ ಒಂದು ಎಂದರೆ ಕ್ವಾರ್ಕ್.

ಪರಮಾಣು ಕೇಂದ್ರದಲ್ಲಿರುವ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳೂ ಮತ್ತೆ ಬೇರೆಯೇ ಬಗೆಯ ಕಣಗಳಿಂದ ಮಾಡಲ್ಪಟ್ಟಿರುವಂತೆ ತೋರಿಬಂತು. ಈ ಒಳ ಕಣಗಳ ವಿದ್ಯುದಂಶ ಪ್ರೋಟಾನಿನ ಅಥವಾ ಎಲೆಕ್ಟ್ರಾನಿನ ಮೂರನೇ ಒಂದು ಭಾಗದಷ್ಟಿರಬೇಕು. ಇಂತಹ ಒಳಕಣಗಳಿಗಾಗಿ ಇದುವರೆಗೆ ಎಷ್ಟೇ ಹುಡುಕಿದರೂ ಇವು ಒಂದೊಂದಾಗಿ ಕಾಣಬಂದಿಲ್ಲ. ಆದರೂ ಇವು ಇವೆ ಎಂದು ನಂಬಿ ಮಾಡುವ ಲೆಕ್ಕಾಚಾರಗಳು ತೃಪ್ತಿಕರವಾದ ಫಲಿತಾಂಶವನ್ನೇ ನೀಡಿದೆ. ಉದಾಹರಣೆಗೆ ಪ್ರಬಲ ಬಲ ತೋರಿಸುವ ಎಲ್ಲಾ ಪ್ರಾಥಮಿಕ ಕಣಗಳೂ ಈ ಒಳ ಕಣಗಳಿಂದ ಮಾಡಲ್ಪಟ್ಟಿವೆ ಎಂದು ತೋರಿಸಬಹುದು. ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಇರುವ ಪ್ರಾಥಮಿಕ ಕಣಗಳೂ ನಿಜವಾಗಿ ಕೈ ಬೆರಳ ಮೇಲೆ ಎಣಿಸುವಷ್ಟೇ ಅಲ್ಪ ಸಂಖ್ಯೆಯ, ಇನ್ನೂ ಮೂಲಭೂತ ಕಣಗಳಿಂದಾಗಿವೆ ಎನ್ನುವುದನ್ನು ಬಹು ಮಂದಿ ವಿಜ್ಞಾನಿಗಳು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಪ್ರಬಲ ಬಲ ತೋರಿಸುವ ಕಣಗಳ ಒಳಗೆ ಇರುವ ಈ ಮೂಲಭೂತ ಕಣಗಳನ್ನೇ ಕ್ವಾರ್ಕ್ ಎಂದು ಗುರುತಿಸಲಾಗುತ್ತಿದೆ.

ಈಗ ಐದು ಬಗೆಯ ಕ್ವಾರ್ಕ್‌ಗಳು ಇರುವುದು ಸಿದ್ಧವಾಗಿದೆ. ಒಟ್ಟಿನಲ್ಲಿ ಆರು ಬಗೆಯ ಕ್ವಾರ್ಕ್‌ಗಳು ಇರಬೇಕೆಂಬುದು ಬಹು ಪಾಲು ವಿಜ್ಞಾನಿಗಳ ಅಭಿಪ್ರಾಯ. ಪ್ರೋಟಾನ್ ಎನ್ನುವುದು ಮೂರು ಬಗೆಯ ಕ್ವಾರ್ಕ್‌ಗಳಿಂದಾಗಿದೆ. ಪ್ರೋಟಾನ್ ಒಡೆಯುತ್ತಿದ್ದಂತೆ ಹಾಗೆಯೇ ಕ್ವಾರ್ಕ್‌ಗಳು ರೂಪ ಬದಲಾಯಿಸಿ ಅನೇಕ ಪ್ರಾಥಮಿಕ ಕಣಗಳ ಗೊಂಚಲಾಗಿ ಕಾಣಿಸುವುದರಿಂದ ಈ ಪ್ರೋಟಾನನ್ನು ಒಡೆದು ಆ ಮೂರು ಕ್ವಾರ್ಕ್‌ಗಳನ್ನು ಒಂದೊಂದಾಗಿ ನೋಡುವುದು ಸಾಧ್ಯವಾಗಿಲ್ಲ. ಮೂಲಭೂತ ಕಣಗಳಾದರೂ ಎಂದೂ ಸ್ವತಂತ್ರವಾಗಿ ಒಂಟಿಯಾಗಿ ಬದುಕಿರಲಾರದ ಈ ವಿಚಿತ್ರ ಈವರೆಗೆ ಗೊತ್ತಿಲ್ಲದ ನಿಯಮವಾಗಿದೆ.

ಕ್ವಾರ್ಕ್‌ಗಳಿಂದ ಕೂಡಿರದ ಪ್ರಾಥಮಿಕ ಕಣಗಳೂ ಇವೆ. ಎಲೆಕ್ಟ್ರಾನ್ ಇಂತಹ ಒಂದು ನಿಜವಾಗಿ ಮೂಲಭೂತವಾಗಿರುವ ಕಣ. ಹಾಗೆಯೇ ಎರಡೋ ಮೂರೋ ಬಗೆಯಲ್ಲಿ ಕಾಣಬರುವ ನ್ಯೂಟ್ರಿನೋಗಳು ಕ್ವಾರ್ಕ್‌ಗಳಿಂದ ಆಗಿರದ ಮೂಲಭೂತ ಕಣಗಳು. ಮ್ಯೂ ಕಣವೂ ಒಂದು ಮೂಲಭೂತ ಕಣ. ಕ್ವಾರ್ಕ್‌ಗಳು ಮತ್ತು ಎಲೆಕ್ಟ್ರಾನ್ ಮ್ಯೂ, ನ್ಯೂಟ್ರಿನೋಗಳಂತಹ ಕೆಲವು ಪ್ರಾಥಮಿಕ ಕಣಗಳು ಮಾತ್ರ ಪ್ರಕೃತಿಯ ಆಳದಲ್ಲಿ ಶಾಶ್ವತವಾಗಿ ರಾಜ್ಯಭಾರ ಮಾಡುತ್ತಿವೆ. ವಿಶ್ವದ ಸಮಸ್ತ ಆಗುಹೋಗುಗಳಿಗೆ ಈ ಕೆಲವೆ ಕಣಗಳು ಮತ್ತು ಅವುಗಳನ್ನಾಳುವ ನಿಯಮಗಳೇ ಕಾರಣ.

"ಇಷ್ಟು ಸಣ್ಣ ಕಣಗಳ ಬಗೆಗಿನ ಜ್ಞಾನದಿಂದ ಸಾಮಾನ್ಯರಿಗೆ ಏನು ಪ್ರಯೋಜನ?" ಪರಮಾಣುವಿಗಿಂತಲೂ ಚಿಕ್ಕವಾಗಿದ್ದು ವಿಚಿತ್ರ ನಿಯಮಗಳಿಗೆ ಒಳಪಟ್ಟಿದ್ದರೂ ಪ್ರಾಥಮಿಕ ಕಣಗಳು ಕೇವಲ ವೈಜ್ಞಾನಿಕ ಲೆಕ್ಕಾಚಾರಗಳ ಕಸರತ್ತು ಮಾತ್ರವಲ್ಲ. ಅವುಗಳು ನಮ್ಮೆಲ್ಲರ ನಿತ್ಯ ಜೀವನದಲ್ಲೂ ನೇರವಾಗಿ ಪರಿಣಾಮ ಬೀರುತ್ತವೆ.

ಬೆಳಕು ಎನ್ನುವದೇ ವಿದ್ಯುದಯಸ್ಕಾಂತೀಯವಾದ ಪ್ರಾಥಮಿಕ ಕಣಗಳ ಸಮೂಹ. ಆಧುನಿಕ ಜೀವನದ ತಳಹದಿಯಾಗಿರುವ ವಿದ್ಯುಚ್ಛಕ್ತಿ ಎಲೆಕ್ಟ್ರಾನುಗಳ ಪ್ರವಾಹ. ಶಸ್ತ್ರಚಿಕಿತ್ಸೆಯಿಲ್ಲದೆಯೇ ಮಿದುಳಿನ ರೋಗಗ್ರಸ್ತ ಭಾಗಗಳನ್ನು ತೋರಿಸಿಕೊಡುವ ಆಧುನಿಕ ಉಪಕರಣಗಳು ಪಾಸಿಟ್ರಾನ್‌ಗಳನ್ನು ಉಪಯೋಗಿಸುತ್ತಿವೆ. ನ್ಯೂಟ್ರಾನುಗಳ ನೇರ ಬಳಕೆ ಪರಮಾಣು ರಿಯಾಕ್ಟರುಗಳಲ್ಲಿ ಮತ್ತು ವಿವಿಧ ಸಮಸ್ಥಾನಿಕಗಳ ತಯಾರಿಕೆಯಲ್ಲಿ. ಪೈ ಮತ್ತು ಮ್ಯೂ ಕಣಗಳಿಂದ ಕ್ಯಾನ್ಸರಿನ ಚಿಕಿತ್ಸೆ ಮಾಡಲಾಗುತ್ತಿದೆ. ಕೊನೆಯದಾಗಿ ಇಡೀ ಭೌತ ವಿಶ್ವದ ಗತಿಯೂ ತೂಕವೇ ಇಲ್ಲದಂತಿರುವ ನ್ಯೂಟ್ರಿನೋಗಳಿಂದ ನಿಯಂತ್ರಿತವಾಗಿರಲೂಬಹುದು! ಅಣುಶಕ್ತಿಯ ಮೂಲವೇ ಈ ಪ್ರಾಥಮಿಕ ಕಣಗಳಾಗಿರುವ ಸಾಧ್ಯತೆಗಳಿವೆ. ಅದಕ್ಕೆ ಪ್ರತಿಯೊಬ್ಬ ಮಾನವ ತಲೆಬಾಗಲೇಬೇಕು. ●

(ಕೃಪೆ:

ಪ್ರತ್ಯೇಕ ವಿಭಾಗ

ಶ್ರೀರಂಗಪಟ್ಟಣದ ಪತನ



ನಿರೂಪಣೆ: ಬಿ. ಎಸ್. ರಾಮಭಟ್ಟ

ಶ್ರೀರಂಗಪಟ್ಟಣದ ಪತನ

'ಮಾಡರ್ನ್ ಮೈಸೂರು' ಎಂಬ ಇತಿಹಾಸ ಗ್ರಂಥವನ್ನು ಬರೆದಿರುವ ಶ್ರೀ ಎಂ. ಶಾಮರಾಯರು ಸುಪ್ರಸಿದ್ಧ ಇತಿಹಾಸಕಾರರು. ರಾಜಕಾರ್ಯ ಪ್ರಸಕ್ತ ಮತ್ತು ರಾವ್‌ಬಹದ್ದೂರ್ ಪ್ರಶಸ್ತಿಗಳಿಸಿದ್ದ ಅವರು ಮೈಸೂರು ಸರಕಾರದ ಉನ್ನತ ಅಧಿಕಾರಿಗಳಾಗಿ ನಿವೃತ್ತರಾಗಿದ್ದರು. ಈ ಗ್ರಂಥವೂ ಸೇರಿದಂತೆ ಅಂದಿನ ಮೈಸೂರು ಸಂಸ್ಥಾನದ ಸಮಗ್ರ ಇತಿಹಾಸದ ಮೂರು ಗ್ರಂಥಗಳನ್ನು ಅವರು ಬರೆದಿರುವುದು ತಿಳಿದು ಬಂದಿದೆ. ಅನೇಕ ಐತಿಹಾಸಿಕ ಮೂಲಗಳನ್ನು ಸಂಗ್ರಹಿಸಿ ಆಳವಾದ ಅಧ್ಯಯನವನ್ನವರು ನಡೆಸಿದ್ದಾರೆ. 1936 ರಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾದ ಈ ಗ್ರಂಥಗಳು ಇತಿಹಾಸಕ್ಕೆ ಅವರು ಸಲ್ಲಿಸಿದ ಅಮೂಲ್ಯ ಕೊಡುಗೆಗಳು. ಲೇಖಕರಲ್ಲಿ ಇತರ ಇತಿಹಾಸ ಗ್ರಂಥಗಳ ಆಧಾರದಿಂದ ವಿಮರ್ಶಾತ್ಮಕವಾಗಿ ಈ ಲೇಖನ ಸಂಗ್ರಹವನ್ನು ನಿರೂಪಿಸಿದ್ದರೂ 'ಮಾಡರ್ನ್ ಮೈಸೂರು' ಗ್ರಂಥವೇ ಮೂಲಾಧಾರ.

1757ರ ಪ್ಲಾಸಿ ಕದನದಲ್ಲಿ ಬ್ರಿಟಿಶರ ತಂತ್ರ ಫಲ ನೀಡಿತು. ಪರಿಣಾಮವಾಗಿ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಬಲವಾಗಿ ಬೇರು ಬಿಟ್ಟಿತು. ಬ್ರಿಟಿಶರು ಸ್ವತಂತ್ರವಾದ ಜಹಗೀರನ್ನು ಪಡೆದು ಭಾರತದ ರಾಜಕೀಯದಲ್ಲಿ ಸಕ್ರಿಯವಾಗಿ ಪಾತ್ರವಹಿಸತೊಡಗಿದರು. ಮುಂದೆ ನಲವತ್ತೆರಡು ವರ್ಷಗಳ ಕಾಲ ಮೊಗಲ್ ಚಕ್ರವರ್ತಿಗಳನ್ನು ಬದಿಗೊತ್ತಿ, ಮರಾಠರ ಶಕ್ತಿಯನ್ನು ಮೀರಿ ದಕ್ಷಿಣಕ್ಕೂ ದಾಪುಗಾಲಿಟ್ಟರು. ಮದರಾಸಿನ ನೆಲೆಯನ್ನು ಬಿಟ್ಟರೆ ಬ್ರಿಟಿಶರು ದಕ್ಷಿಣದಲ್ಲಿ ಹೆಚ್ಚು ಪ್ರಬಲರಾಗಿರಲಿಲ್ಲ. ಇನ್ನೂ ಪ್ರಬಲರಾಗಿದ್ದ ಮರಾಠರು, ಟಿಪ್ಪುಸುಲ್ತಾನ್ ಮತ್ತು ಹೈದರಾಬಾದಿನ ನಿಜಾಮನು ಅವರ ರಾಜ್ಯ ವಿಸ್ತರಣೆಗೆ ತಡೆಯಾಗಿದ್ದರು. ಭಾರತವು ಬ್ರಿಟಿಶರ ಆಡಳಿತಕ್ಕೆ ಸೇರಿ ನರಳಬಾರದು; ವ್ಯಾಪಾರಕ್ಕೆ ಬಂದು ರಾಜಕಾರಣದಲ್ಲಿ ಕೈಹಾಕಿದ ಅವರ ಶಕ್ತಿಯನ್ನು ಮುರಿಯಲೇಬೇಕೆಂದು ಟಿಪ್ಪು ಸುಲ್ತಾನನು ನಿರ್ಧರಿಸಿದನು. ಸುಲ್ತಾನನ ಮಹತ್ವಾಕಾಂಕ್ಷೆಗೆ ಮರಾಠರ ಮತ್ತು ನಿಜಾಮನ ಸಹಕಾರ ಸಹಾಯಗಳೆರಡೂ ಅತ್ಯಗತ್ಯವಾಗಿತ್ತು. ಈ ಮೂವರು ಒಂದುಗೂಡಿ ಕ್ರಮಬದ್ಧವಾದ ಯೋಜನೆಯನ್ನು ರೂಪಿಸಿಕೊಳ್ಳಬೇಕಿತ್ತು. ಸೈನಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಿತ್ತು. ಆದರೆ ಈ ಮೂವರು ಒಂದೆಡೆ ಕಲೆತು ಪೂರ್ವಭಾವಿ ಯೋಜನೆಗಳನ್ನು ಸಿದ್ಧಗೊಳಿಸಲಿಲ್ಲ. ಮರಾಠರ ಸಂಕುಚಿತ ಭಾವನೆ ಮತ್ತು ಒಳಜಗಳ ಹಾಗೂ ನಿಜಾಮನ ನಿರ್ಲಿಪ್ತತೆ ಭಾರತದ ಭವಿಷ್ಯಕ್ಕೆ ಮಾರಕವಾದವು. ಭಾರತದಲ್ಲಿದ್ದ ಫ್ರೆಂಚರು ತಮ್ಮ ನೆಲೆಗಳನ್ನು ಕಳೆದುಕೊಂಡು ದುರ್ಬಲರಾಗಿದ್ದರು. ಆದರೂ ಹೈದರಲಿಖಾನನು ಮೈಸೂರು ಸಂಸ್ಥಾನದ ಬ್ಯಾರಾಕ್ಸ್‌ನಲ್ಲಿ ಫ್ರೆಂಚರ ಸೈನಿಕ ನೆಲೆಯೊಂದನ್ನು ಆರಂಭಿಸಿದನು. ಸೈನಿಕರಿಗೆ ಆಧುನಿಕ ಶಸ್ತ್ರಾಸ್ತ್ರಗಳ ಶಿಕ್ಷಣ ನೀಡಲು ಫ್ರೆಂಚರ ಸಹಾಯವನ್ನು ಪಡೆದಿದ್ದರೂ ಅದು ಅಷ್ಟೊಂದು ಪ್ರಯೋಜನಕಾರಿ ವಾಗಲಿಲ್ಲ. ಮೂರನೆಯ ಮೈಸೂರು ಕದನದಲ್ಲಿ ಟಿಪ್ಪುಸುಲ್ತಾನನು ಏಕಾಕಿಯಾಗಿ ಬ್ರಿಟಿಶರ ಆಕ್ರಮಣವನ್ನು ಎದುರಿಸಿ ಭಾರಿ ಸೋಲನ್ನು ಅನುಭವಿಸಬೇಕಾಯಿತು. ರಾಜಧಾನಿ ಶ್ರೀರಂಗಪಟ್ಟಣವನ್ನು ರಕ್ಷಿಸಿಕೊಳ್ಳಲು ಬ್ರಿಟಿಶರು ವಿಧಿಸಿದ ಕರಾರುಗಳನ್ನು ಒಪ್ಪಿ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಆಗ ರಾಜ್ಯದ ಅರ್ಧಭಾಗ ಕೈತಪ್ಪಿತು. ಯುದ್ಧದ ಖರ್ಚಿಗೆಂದು ಅಗಾಧವಾದ ಹಣವನ್ನು ತೆರಬೇಕಾಯಿತು. ಇದನ್ನು ಸಂದಾಯ ಮಾಡುವವರೆಗೆ ತನ್ನ ಇಬ್ಬರು ಮಕ್ಕಳನ್ನು ಬ್ರಿಟಿಶ್ ಅಧಿಕಾರಿಗಳ ವಶಕ್ಕೆ ಒಪ್ಪಿಸಬೇಕಾಯಿತು. ನಿರ್ವಾಹವಿಲ್ಲದೆ ಸೋಲು ನೋವು ಅವಮಾನಗಳನ್ನು ಸುಲ್ತಾನನು ಸಹಿಸಲೇಬೇಕಾಯಿತು.

ಇಷ್ಟೆಲ್ಲ ವೃತ್ತಾಂತಗಳನ್ನು ತಿಳಿದ ಮರಾಠರ ಮಹಾಮುತ್ಸದ್ದಿ ನಾನಾಫಡ್ನವೀಸನು ಟಿಪ್ಪು ಸುಲ್ತಾನನ ಸಲಹೆಗೆ ಕೊನೆಗೂ ಒಪ್ಪಿಕೊಳ್ಳಲಿಲ್ಲ. ಇದು ಆಶ್ಚರ್ಯಕರವಾಗಿತ್ತು. 1794ರ ಘಟನೆಯ ಬಳಿಕ ಟಿಪ್ಪುಸುಲ್ತಾನನು ಬಿರುಸಿನಿಂದ ರಾಜಕೀಯ ಮತ್ತು ಸೈನಿಕ ಚಟುವಟಿಕೆಗಳಲ್ಲಿ ಮಗ್ನನಾದನು. ತನ್ನ ಸಾಧನೆಗಾಗಿ ಫ್ರಾನ್ಸಿನ ಚಕ್ರವರ್ತಿ ನೆಪೋಲಿಯನ್ನನೊಂದಿಗೆ ನಿಕಟಸಂಪರ್ಕವನ್ನು ಬೆಳೆಸಿಕೊಂಡಿದ್ದ. ಭಾರತದಲ್ಲಿ ಫ್ರೆಂಚ್ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯ ನೆಪೋಲಿಯನ್ನನಿಗೆ ಟಿಪ್ಪುಸುಲ್ತಾನನ ಸಹಾಯ ಅತ್ಯವಶ್ಯವಾಗಿತ್ತು. ತುರ್ಕಸ್ತಾನದ ಸುಲ್ತಾನನಿಂದಲೂ ಟಿಪ್ಪು ಸೈನಿಕ ನೆರವು ಪಡೆಯಲು ಪ್ರಯತ್ನಿಸುತ್ತಿದ್ದುದು ಬ್ರಿಟಿಶರಿಗೆ ತಿಳಿದಿತ್ತು. ಹೀಗೆ ಎರಡು ವಿದೇಶಿ ಶಕ್ತಿಗಳ ಬೆಂಬಲದಿಂದ ಪ್ರಬಲನಾಗಿದ್ದ ಟಿಪ್ಪುಸುಲ್ತಾನನನ್ನು ಸಂಪೂರ್ಣವಾಗಿ ಸೋಲಿಸದಿದ್ದರೆ ಭಾರತದಲ್ಲಿ ತಮ್ಮ ಅಸ್ತಿತ್ವಕ್ಕೇ ಅಪಾಯವೆಂದು ಬ್ರಿಟಿಶರಿಗೂ ತಿಳಿದಿತ್ತು.

1799ರಲ್ಲಿ ಲಾರ್ಡ್‌ವೆಲ್ಲೆಸ್ಲಿ ವೆಲ್ಲೆಸ್ಲಿಯನ್ನು ಎಂದು ಓದದೆ: 1799ರಲ್ಲಿ ಲಾರ್ಡ್‌ಮಾರ್ನಿಂಗ್‌ಟನ್ನನು ಬಂಗಾಳದ ಗವರ್ನರ್ ಜನರಲ್ಲನ್ನಾಗಿ ಅಧಿಕಾರವನ್ನು ವಹಿಸಿಕೊಂಡ. ಸುಲ್ತಾನನನ್ನು ನಿಯಂತ್ರಿಸುವುದೇ ಅವನ ಮೊಟ್ಟಮೊದಲ ಯೋಜನೆಯಾಗಿತ್ತು. ಆದರೂ ಮಾರ್ನಿಂಗ್‌ಟನ್ನನು ಆತುರದಿಂದ ವರ್ತಿಸಲಿಲ್ಲ. "ಸುಲ್ತಾನರು ಹಿಂದಿನ ಯುದ್ಧದಲ್ಲಿ ಸೋಲುತ್ತಿದ್ದರೂ ನಾವು ನಿಮ್ಮೊಡನೆ ಉದಾರವಾಗಿಯೇ ನಡೆದುಕೊಂಡೆವು. ನೀವು ಯುದ್ಧವನ್ನು ನಿಲ್ಲಿಸುವಿರೆಂದು ನಂಬಿದೆವು. ನಮ್ಮ ವಿರುದ್ಧವಾಗಿ ನೀವು ಈಗಾಗಲೆ ಫ್ರಾನ್ಸಿನ ಚಕ್ರವರ್ತಿಗಳ ಸಹಾಯ ಪಡೆದು ಮತ್ತೆ ಯುದ್ಧಕ್ಕೆ ಸಿದ್ಧತೆ ನಡೆಸುತ್ತಿರುವುದು ನಮಗೆ ಅರಿವಾಗಿದೆ. ಭಾರತದ ರಾಜ್ಯಗಳು ಕಳಚಿ ನಮ್ಮ ಸಾಮ್ರಾಜ್ಯದಲ್ಲಿ ವಿಲೀನವಾಗುತ್ತಿರುವುದು ನಿಮಗೆ ತಿಳಿದಿದೆ. ನಮಗೆ ಯುದ್ಧದಲ್ಲಿ ನಂಬಿಕೆಯಿಲ್ಲ. ವಿನಾಕಾರಣ ಆಕ್ರಮಣ ನಡೆಸುವುದಿಲ್ಲ. ನೀವು ನಮ್ಮೊಡನೆ ಸ್ನೇಹದಿಂದಿರಬೇಕೆಂದು ಬಯಸುತ್ತೇವೆ. ಇದರಂತೆ ಮರಾಠರೂ ನಿಜಾಮನೂ ಸಮ್ಮತಿಸಿದ್ದಾರೆ. ನಿಮ್ಮ ಸಾರ್ವಭೌಮತ್ವವನ್ನು ಗೌರವಿಸುತ್ತೇವೆ. ನೀವು ಯುದ್ಧ ಮಾಡುವುದಿಲ್ಲವೆಂದೂ ನಮ್ಮ ವಿರುದ್ಧವಾಗಿ ವಿದೇಶಿಯರ ಸಹಾಯ ಪಡೆಯುವುದಿಲ್ಲವೆಂದೂ ಸ್ಪಷ್ಟವಾಗಿ ಭರವಸೆ ನೀಡಬೇಕು. ಇದಕ್ಕಾಗಿ ನಮ್ಮ ಪರವಾಗಿ ಮೇಜರ್ ಡೊವ್‌ಟನ್ನನನ್ನು ನಿಮ್ಮೊಡನೆ ಭೇಟಿ ಮಾಡಲು ಕಳುಹಿಸುತ್ತೇವೆ. ಇವನಿಂದ ನಮ್ಮ ರಾಜಕೀಯ ಧೋರಣೆಯನ್ನು ತಿಳಿಯಬಹುದು. ಅದಕ್ಕಾಗಿ ಸೂಕ್ತವಾದ ದಿನ ಮತ್ತು ಸ್ಥಳವನ್ನು ತಿಳಿಸಬೇಕೆಂದು ನಿಮಗೆ ವಿನಂತಿಸಿದ್ದೇವೆ." ಎಂದು ಮಾರ್ನಿಂಗ್‌ಟನ್ನನು ಬರೆದ ಪತ್ರ 18-12-1798 ರಂದು ಸುಲ್ತಾನನಿಗೆ ತಲುಪಿತು. ಆದರೆ ಆತ ಇದಕ್ಕೆ ಕೂಡಲೆ ಉತ್ತರ ನೀಡಲಿಲ್ಲ. "ನಾವು ಈವರೆಗೆ ಯಾವ ವಿದೇಶೀಯರಿಗೂ ಸಹಾಯಕ್ಕಾಗಿ ಮನವಿಯನ್ನು ಸಲ್ಲಿಸಿಲ್ಲ. ನಮಗೆ ನಮ್ಮನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವಿದೆ. ಫ್ರೆಂಚರ ಕೆಲವು ವ್ಯಾಪಾರದ ಹಡಗುಗಳು ನಮ್ಮ ಕರಾವಳಿಗೆ ಬಂದಿದ್ದು ನಿಜ. ಆದರೆ ನಾವು ಸೈನಿಕರನ್ನು ಕರೆಸಿಕೊಂಡಿಲ್ಲ, ಶಸ್ತ್ರಾಸ್ತ್ರಗಳನ್ನು ಪಡೆದಿಲ್ಲ. ನಿಮ್ಮಂತೆ ನಾವು ಸಹ ನಮ್ಮ ದೇಶದ ರಕ್ಷಣೆಗಾಗಿ ಹೋರಾಟ ನಡೆಸಲು ಸದಾ ಸನ್ನದ್ಧರಾಗಿದ್ದೇವೆ. ನಾವು ದೇಶ ಸಂಚಾರದಲ್ಲಿದ್ದ ಕಾರಣ ಜಾಗ್ರತೆಯಾಗಿ ಪ್ರತಿ ಉತ್ತರ ನೀಡಲು ಸಾಧ್ಯವಾಗಲಿಲ್ಲ ಎಂದು ಟಿಪ್ಪುಸುಲ್ತಾನನ ಪತ್ರವು 9-1-1799 ರಲ್ಲಿ ಮಾರ್ನಿಂಗ್‌ಟನ್ನನಿಗೆ ತಲುಪಿದಾಗ ಗವರ್ನರ್ ಜನರಲ್ಲನು ಮದರಾಸಿಗೆ ಬಂದಿದ್ದನು. ಹಿಂದಿರುಗಿದ ನಂತರ ಸುಲ್ತಾನನು ಯುದ್ಧವನ್ನು ನಿಲ್ಲಿಸುವ ಭರವಸೆಯನ್ನು ನೀಡದೆ ಅಸ್ಪಷ್ಟವಾಗಿ ಬರೆದ ಪತ್ರವನ್ನು ವಿಮರ್ಶಿಸಿದ. ಇಷ್ಟರ ಮೇಲೆ ಮೇಜರ್ ಡೊವ್‌ಟನ್ನನನ್ನು ಕಳುಹಿಸುವುದು ವ್ಯರ್ಥವೆಂದು ತಿಳಿದು ಯುದ್ಧದ ಸಿದ್ಧತೆಗಾಗಿ ಮದರಾಸು ಮತ್ತು ಬೊಂಬಾಯಿಯ ಗವರ್ನರುಗಳಿಗೆ ಆದೇಶ ನೀಡಿದ.

ಈ ಯುದ್ಧವೇನೂ ಅನಿರೀಕ್ಷಿತವಾಗಿರಲಿಲ್ಲ. ಮಾರ್ನಿಂಗ್‌ಟನ್ನನು ಮದರಾಸಿನ ಗವರ್ನರ್‌ನ ಸಲಹೆಯಂತೆ ಜನರಲ್‌ಹ್ಯಾರಿಸ್‌ನನ್ನು ಪ್ರಧಾನ ಸೇನಾಪತಿಯನ್ನಾಗಿ ನಿಯಮಿಸಿ ಹೆಚ್ಚಿನ ಅಧಿಕಾರವನ್ನು ನೀಡಿದನು. ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಹಲವಾರು ವರ್ಷಗಳನ್ನು ಕಳೆದಿದ್ದ ಜನರಲ್ ಬಯರ್ಡನು ಸೇನಾಧಿಪತ್ಯವನ್ನು ವಹಿಸಿಕೊಂಡನು. ಇವನಿಗೆ ಸುಲ್ತಾನನ ಸೈನಿಕ ಬಲ, ಕೋಟೆಯ ರಹಸ್ಯವು ತಿಳಿದಿತ್ತು.

ಶ್ರೀರಂಗಪಟ್ಟಣದ ಮುತ್ತಿಗೆಗಾಗಿ ಜನರಲ್‌ಹ್ಯಾರಿಸ್ಸನು ವ್ಯಾಪಕವಾದ ಯೋಜನೆಯನ್ನು

ರೂಪಿಸಿದ. ಇದರಂತೆ 2500 ಯುರೋಪಿಯನ್ ಸೈನಿಕರನ್ನು 1900 ದೇಶೀಯ ಸೈನಿಕರನ್ನು ಒಟ್ಟುಗೂಡಿಸಿ ಸುಮಾರು 4500 ಸೈನಿಕ ಪಡೆಯನ್ನು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸಿದ. ಇದರಲ್ಲಿ ನಿಜಾಮನ ಕೆಲವು ತುಕಡಿಗಳೂ ಸೇರಿದ್ದವು. ಇದರೊಂದಿಗೆ ಬಹುದೂರದವರೆಗೆ ಹಾರುವ ಮತ್ತು ಛೇದಿಸುವ ಪ್ರಬಲವಾದ ತೋಪುಗಳು, ಗ್ರೆನೇಡ್‌ಗಳು, ಬಂದೂಕುಗಳು ಅಲ್ಲದೆ ರಾಕೆಟ್‌ಗಳನ್ನೂ, ಮಾರಕ ಅಸ್ತ್ರಗಳನ್ನು ಬಳಸಲು ಸಿದ್ಧತೆ ನಡೆಯಿತು. ಜನರಲ್ ಹ್ಯಾರಿಸ್, ಜನರಲ್ ಬಯರ್ಡ್ ಮತ್ತು ಇತರ ಸೇನಾಧಿಕಾರಿಗಳು ಸೇರಿ ರಾಜಧಾನಿಯನ್ನು ಯಾವ ಮಾರ್ಗದಿಂದ, ಹೇಗೆ ಮುತ್ತಿಗೆ ಹಾಕಬೇಕೆಂಬ ಯೋಜನೆಯನ್ನೂ ನಕ್ಷೆಯನ್ನೂ ತಯಾರಿಸಿದರು. ಈ ನಡುವೆ ಮರಾಠರು ಮತ್ತು ನಿಜಾಮರು ಈ ಕದನದಲ್ಲಿ ಒಪ್ಪಿಗೆಯಾಗಿ ತಟಸ್ಥರಾಗಿರುವುದನ್ನು ಗವರ್ನರ್ ಜನರಲ್ಲನಿಗೆ ತಿಳಿಸಿದ್ದರು.

ಉನ್ನತ ಪ್ರದೇಶದಲ್ಲಿ ನಿರ್ಮಿಸಲಾಗಿದ್ದ ಶ್ರೀರಂಗಪಟ್ಟಣದ ದುರ್ಗವನ್ನು ಭೇದಿಸುವುದು ಸುಲಭವಾಗಿರಲಿಲ್ಲ. ಸುತ್ತಲೂ ಹರಿಯುವ ಕಾವೇರಿಯ ನೀರು ಆಳವಾಗಿ ತುಂಬಿಕೊಳ್ಳುವಂತೆ ಕಂದಕವನ್ನು ನಿರ್ಮಿಸಲಾಗಿತ್ತು. ನದಿಯು ಬಂಡೆಗಳಿಂದ ತುಂಬಿಕೊಂಡಿದ್ದರಿಂದ ಅಲ್ಲಲ್ಲಿ ಆಳವಾದ ಮಡುಗಳಿರುವುದು ಗೋಚರಿಸಿತು. ಕೋಟೆಗೆ ಪ್ರಧಾನ ಮಹಾದ್ವಾರ ಲಾಲ್‌ಬಾಗ್‌ದ್ವಾರ, ಆನೆಬಾಗಿಲು, ಮತ್ತು ದಕ್ಷಿಣದಲ್ಲಿ ನದಿಯುದ್ವಾರವಿತ್ತು. ದುರ್ಗದ ಒಳಭಾಗದಲ್ಲಿ ರಕ್ಷಣಾ ಸೇನಾ ಠಾಣೆ ಮತ್ತು ಶಸ್ತ್ರಾಸ್ತ್ರಗಳ ಕೊಠಡಿಯಿತ್ತು. ಗೋಡೆಗಳು ಅತ್ಯಂತ ದೃಢವಾಗಿದ್ದವು. ಬತೇರಿಗಳಲ್ಲಿ ತೋಪುಗಳನ್ನು ಅಳವಡಿಸಲಾಗಿತ್ತು.

ಟಿಪ್ಪು ಸುಲ್ತಾನನೂ ಯುದ್ಧದ ಸಿದ್ಧತೆ ನಡೆಸಿದನು. ಶತ್ರುಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ತಡೆದು ಆಕ್ರಮಣ ನಡೆಸುವಂತೆ ಯೋಜಿಸಿದನು. ತೋಪುಗಳನ್ನೂ ಸಿಡಿಮದ್ದುಗಳನ್ನೂ ಮತ್ತು ಈಚೆಗೆ ತಯಾರಿಸಲಾಗುತ್ತಿದ್ದ ಬಂದೂಕುಗಳನ್ನೂ ಬಳಸುವ ಪ್ರತ್ಯೇಕ ತುಕಡಿಗಳನ್ನು ನಿಯೋಜಿಸಿದನು. ಸಯ್ಯದ್ ಸಾಹೇಬನನ್ನು ಪ್ರಧಾನ ದಂಡನಾಯಕನನ್ನಾಗಿ ನಿಯಮಿಸಲಾಯಿತು. ತೋಪುಗಳನ್ನು ಹೊತ್ತ ಗಾಡಿಗಳು ಮೊದಲೇ ನಿರ್ಧರಿಸಿದ್ದ ಕದನ ಕ್ಷೇತ್ರಗಳಿಗೆ ಹೊರಟು ಹೋದವು. ಸೈನಿಕರಿಗೆ ನಿರಂತರವಾದ ಶಸ್ತ್ರಾಸ್ತ್ರಗಳ ಸರಬರಾಜು ಆಹಾರ ವಿತರಣೆ ಮತ್ತು ವೈದ್ಯಕೀಯ ಸೌಕರ್ಯಗಳನ್ನು ಒದಗಿಸಲಾಯಿತು. ಟಿಪ್ಪು ಶತ್ರುಗಳ ಚಲನವಲನಗಳನ್ನು ತಿಳಿಯುವ ಗೂಢಚಾರ ಪಡೆಯನ್ನು ನಿಯಮಿಸಿದನು. ಆನೆಗಳು ರಾವುತರು ಮತ್ತು ಪದಾತಿ ದಳಗಳು ಎಂದು, ಹೇಗೆ ನಿರ್ಧರಿಸಿದ ಸ್ಥಳವನ್ನು ಸೇರಬೇಕೆಂದು ಕಟ್ಟುನಿಟ್ಟಾದ ಆದೇಶವನ್ನು ನೀಡಿದನು.

ಜನರಲ್ ಹ್ಯಾರಿಸ್ಸನ ಬ್ರಿಟಿಶ್ ಸೈನ್ಯವು 13-2-1799ರಂದು ವೆಲ್ಲೂರಿನಿಂದ ಹೊರಟಿತು. ಅತ್ತ ಮೇಜರ್ ಡೊವ್‌ಟನ್ನನ ಪಡೆಯು 21-2-1799 ರಂದು ಕಣ್ಣಾನೂರಿನಿಂದ ಹೊರಟಿತು. ಜನರಲ್ ಸ್ಟುವರ್ಟನು ಪ್ರಧಾನ ಸೇನಾನಾಯಕನಾಗಿದ್ದ. ಬೊಂಬಾಯಿಯ ಸೈನ್ಯವನ್ನು ತಡೆಯಲು ಸುಲ್ತಾನನು ಕನ್ನಂಬಾಡಿ ಮತ್ತು ಪೆರಿಯಾ ಪಟ್ಟಣಕ್ಕೆ ಸೇನೆಯ ಮೂರು ವಿಭಾಗಗಳನ್ನು ಕಳುಹಿಸಿದನು. ಪೆರಿಯಾ ಪಟ್ಟಣದಿಂದ ಸುಮಾರು ಏಳು ಮೈಲಿಗಳ ದೂರದಲ್ಲಿ ಎರಡೂ ಕಡೆಯ ಸೈನ್ಯಗಳು ಬೀಡು ಬಿಟ್ಟವು. ಎರಡು ದಿನಗಳಕಾಲ ವಿಶ್ರಾಂತಿ ಪಡೆದ ನಂತರ ಬ್ರಿಟಿಶ್ ಸೈನಿಕರೇ ಮೊದಲು ಗುಂಡು ಹಾರಿಸತೊಡಗಿದರು. ಪ್ರತಿಯಾಗಿ ಸುಲ್ತಾನನ ಸೈನಿಕರು ಸಿಡಿಮದ್ದನ್ನು ಹಾರಿಸಿದರು. ಭೀಕರವಾದ ಕಾಳಗ ಆರಂಭವಾಯಿತು. ಗ್ರೆನೇಡ್‌ಗಳ ಹೊಡೆತಕ್ಕೆ ಮೈಸೂರು ಸೇನೆಯು ಚೆಲ್ಲಾಪಿಲ್ಲಿಯಾಯಿತು. ನೂರಾರು ಸೈನಿಕರು ಬಲಿಯಾದರು. ತೋಪುಗಳು ಬ್ರಿಟಿಶರ ಫಿರಂಗಿಗಳಂತೆ ಉತ್ತಮವಾಗಿರಲಿಲ್ಲ. ಹಿಂದೆ ಸರಿಯುತ್ತಿದ್ದ ಸುಲ್ತಾನನ ಸೈನಿಕರು ಬನ್ನೂರನ್ನು ತಲುಪಿ ಬೀಡುಬಿಟ್ಟರು.

ಟಿಪ್ಪು ಸುಲ್ತಾನನು ಸುಮಾರು 1500 ರಾವುತರು ಮತ್ತು ಪದಾತಿಗಳೊಡನೆ ಬನ್ನೂರಿನಲ್ಲಿ ಸಿದ್ಧನಾಗಿದ್ದನು. ಬ್ರಿಟಿಶ್ ಸೈನಿಕರು ತಡಮಾಡದೆ ನುಗ್ಗಿ ಬಂದರು. ಬಂದೂಕು ಮತ್ತು ಪಿಸ್ತೂಲುಗಳಿಂದ ಗುಂಡುಗಳು ಹಾರಿದವು. ಮೈಸೂರಿನ ಆನೆಗಳು ಸೊಂಡಿಲಿನಿಂದ ಸದೆಬಡಿಯುತ್ತ ಬೀಸುತ್ತಿದ್ದವು. ಆನೆಯ ತುಳಿತಕ್ಕೆ ಸಿಕ್ಕಿದ ಬ್ರಿಟಿಶ್ ಸೈನಿಕರು ಅಲ್ಲಿಯೇ ಜೀವತೆತ್ತರು. ಸುಲ್ತಾನನು

ಮಾರ್ಚ್ 31 ರಂದು ನಡೆಸಿದ ಸಭೆಯಲ್ಲಿ ಸೇನಾಧಿಕಾರಿಗಳು ಮತ್ತು ಪ್ರತಿಯೊಬ್ಬ ಸೈನಿಕನೂ ಮಾತೃ ಭೂಮಿಯ ರಕ್ಷಣೆಗೆ ಪ್ರತಿಜ್ಞಾವಿಧಿ ಸ್ವೀಕರಿಸಿದ್ದರು.

ಬ್ರಿಟಿಶರ ಸೇನೆಯು ಅರಕೆರೆಯಲ್ಲಿ ನದಿಯನ್ನು ದಾಟಬಹುದೆಂದು ಸುಲ್ತಾನನು ನಿರೀಕ್ಷಿಸಿದ್ದನು. ಸೇನೆಯು ಬರುವ ಹಾದಿಯಲ್ಲಿ ಯಾವ ಪದಾರ್ಥವೂ ಸಿಗದಂತೆ ನಾಶಪಡಿಸಲು ಮೀರ್‌ಸಾದಿಕ್‌ನೊಂದಿಗೆ ಪಡೆಯನ್ನು ಕಳುಹಿಸಿದ. ಎಲ್ಲಾ ಕಟ್ಟಡಗಳನ್ನು ಕೆಡವಲಾಯಿತು. ಸ್ಥಳೀಯ ನಿವಾಸಿಗಳು ಬೇರೆಡೆಗೆ ಹೋಗುವಂತೆ ಕಟ್ಟಾಜ್ಞೆ ನೀಡಲಾಯಿತು. ಆದರೆ ಜನರಲ್ ಹ್ಯಾರಿಸ್ಸನ ಸೇನೆಯು ಮಾರ್ಗವನ್ನು ಬದಲಿಸಿ ಮಾರ್ಚ್ 30 ರಂದು ಸೋಸಲೆಯ ಬಳಿ ಕಾವೇರಿಯನ್ನು ದಾಟಿತು. ನದಿಯ ದಡದಲ್ಲಿ ಆಹಾರ ಪದಾರ್ಥಗಳ ಸಂಗ್ರಹಾಗಾರಗಳು ಕಂಡುಬಂದವು. ಸೈನ್ಯವು ಏಪ್ರಿಲ್ ಒಂದರಂದು ರಂಗಸಮುದ್ರವನ್ನು ತಲುಪಿ ಬೀಡುಬಿಟ್ಟಿತು. ಮೈಸೂರಿನ ಸೈನಿಕರ ಬೀಡಿನಲ್ಲಿ ಆಕ್ರಮಣದ ಸಿದ್ಧತೆ ನಡೆಯುತ್ತಿತ್ತು. ಆದರೆ ಯಾವ ಘರ್ಷಣೆಯೂ ನಡೆಯಲಿಲ್ಲ. ಮುಂದೆ ಸೈನಿಕರು ಹಾರೋಹಳ್ಳಿಯನ್ನು ತಲುಪಿದರು. ಟಿಪ್ಪುವಿನ ಸೈನ್ಯಾಧಿಕಾರಿಗಳು ಕುಂಕುಮ ವರ್ಣದ ಛತ್ರಿಯನ್ನು ಹಿಡಿದು ಪಡೆಯನ್ನು ಪರೀಕ್ಷಿಸುತ್ತಿರುವುದು ಕಂಡುಬಂದಿತು. ಒಂದೆರಡು ಬಾರಿ ದೂರ ದರ್ಶಕದಿಂದ ಬ್ರಿಟಿಶರ ಸೈನ್ಯವನ್ನು ನೋಡಿದರು. ಆದರೆ ಯಾವ ಆತಂಕವೂ ಕಂಡುಬರಲಿಲ್ಲ. ಇಲ್ಲಿಂದ ಶ್ರೀರಂಗಪಟ್ಟಣದ ಪೂರ್ಣ ದೃಶ್ಯ ಕಾಣಿಸುತ್ತಿತ್ತು. ರಾಜಧಾನಿಗೆ ಸುಮಾರು ಒಂದು ಮೈಲು ದೂರದ ಚಂದೇಲ್ ಕೋಟೆಯ ಬಳಿ ಟಿಪ್ಪುವಿನ ವಿಶಾಲವಾದ ಠಾಣೆಯು ಕಾಣಿಸುತ್ತಿತ್ತು. ಅಲ್ಲಿ ಅನೇಕ ಅಧಿಕಾರಿಗಳೂ ಜನರೂ ಓಡಾಡುತ್ತಿದ್ದರು. ಸೈನ್ಯಕ್ಕೆ ಆಹಾರ ಮತ್ತಿತರ ಸಾಮಗ್ರಿಗಳ ಸರಬರಾಜಾಗುತ್ತಿತ್ತು.

ಏಪ್ರಿಲ್ ನಾಲ್ಕರಂದು ಬ್ರಿಟಿಶರ ಸೇನೆಯು ನವಶಹರ್ ಎಂಬ ಸ್ಥಳಕ್ಕೆ ಬಂದಾಗ ಟಿಪ್ಪುವಿನ ಸೈನಿಕರು ಸಿಡಿಮದ್ದಿನ ದಾಳಿ ನಡೆಸಿದರು. ಆದರೆ ಹೆಚ್ಚು ಹಾನಿಯಾಗಲಿಲ್ಲ. ಮುಂದೆ ಪಡೆಯು ಸುಲ್ತಾನ್‌ಪೇಟೆ ತೋಪೆ ಎಂಬಲ್ಲಿ ಬೀಡು ಬಿಟ್ಟಿತು. ಈ ಸ್ಥಳವು ತಗ್ಗು ಮತ್ತು ಕಂದಕಗಳಿಂದ ತುಂಬಿತ್ತು. ಮುಳ್ಳುಕಂಟಿಗಳು, ಕುರುಚಲು ಗಿಡಗಳು ಬೆಳೆದಿದ್ದವು. ಎತ್ತರವಾದ ದಿಣ್ಣೆಗಳಿದ್ದವು. ಅಲ್ಲಲ್ಲಿ ಈಚಲು ಮರಗಳಿದ್ದವು. ಟಿಪ್ಪುವಿನ ಸೈನಿಕರು ಯಾವ ನಿಮಿಷದಲ್ಲಿಯಾದರೂ ದಾಳಿ ಮಾಡುವ ಸಂಭವವಿತ್ತು.

ಉಭಯ ಬಣಗಳಲ್ಲಿ ನೇರವಾದ ಹೋರಾಟ ಆರಂಭವಾಯಿತು. ಲೆಫ್ಟಿನಂಟ್‌ಲ್ಯಾಂಬರ್ಟನು ತನ್ನ ಪಡೆಯನ್ನು ಕೋಟೆಯ ಎಡಭಾಗಕ್ಕೆ ಸರಿಸುತ್ತಾ ಕಾದಾಡುತ್ತಿದ್ದನು. ಉಬ್ಬು ತಗ್ಗುಗಳ ಈ ಸ್ಥಳವು ಬ್ರಿಟಿಶ್ ಸೈನಿಕರಿಗೆ ತಡೆಯಾಗಿತ್ತು. ಬತೇರಿಯಿಂದ ಮೈಸೂರಿನ ಸೈನಿಕರು ತೋಪುಗಳನ್ನು ಸಿಡಿಸುತ್ತಿದ್ದರು. ಅನೇಕ ಬ್ರಿಟಿಶ್ ಸೈನಿಕರು ಸತ್ತರು. ಜನರಲ್ ಬಯರ್ಡನು ಗುಂಡೇಟಿನಿಂದ ಹೇಗೊ ಪಾರಾದ. ಕರ್ನಲ್ ವೆಲ್ಲೆಸ್ಲಿಯು ಭೀಕರವಾದ ಹೋರಾಟ ನಡೆಸಿ ಸುಲ್ತಾನ್ ತೋಪೆಯನ್ನು ವಶಪಡಿಸಿಕೊಂಡನು. ಈ ನಡುವೆ ಬೊಂಬಾಯಿಯ ಸೈನ್ಯವು ಬ್ರಿಟಿಶ್ ಸೈನ್ಯವನ್ನು ಸೇರಿಕೊಂಡಿತು.

ಏಪ್ರಿಲ್ 16 ರಂದು ಬ್ರಿಟಿಶ್ ಸೇನೆಯು ಕೋಟೆಯ ಉತ್ತರ ಭಾಗದಿಂದ ದಾಳಿಯನ್ನು ಆರಂಭಿಸಿತು. ಬೊಂಬಾಯಿಯ ತುಕಡಿಯೊಂದು ಅಗ್ರಹಾರದ ಬಳಿ ಸುಲ್ತಾನನ ತುಕಡಿಯನ್ನು ಹಿಮ್ಮೆಟ್ಟಿಸಿತು. ಗಡಿಕಾವಲು ಪಡೆಯ ನೂರಾರು ಸೈನಿಕರನ್ನು ಸೆರೆ ಹಿಡಿಯಲಾಯಿತು. ಜನರಲ್ ಬಯರ್ಡನು ಉತ್ತರ ಭಾಗದ ನದಿಯ ದಡದಲ್ಲಿ ಭಾರಿಪ್ರಮಾಣದ ತೋಪುಗಳನ್ನು ಜೋಡಿಸಿ ಸನ್ನದ್ಧನಾದನು.

ಕೋಟೆಯ ಆಯಕಟ್ಟಿನ ಸ್ಥಳಗಳನ್ನೆಲ್ಲಾ ಬ್ರಿಟಿಶ್‌ರ ಸೈನ್ಯವು ಆಕ್ರಮಿಸಿಕೊಂಡಿತು. ಈಗ ಯಾವ ಸಮಯದಲ್ಲಾದರೂ ದುರ್ಗವನ್ನು ಭೇದಿಸಿ ಒಳಗೆ ನುಗ್ಗುವ ಅಪಾಯ ಉಂಟಾಯಿತು.

ಏಪ್ರಿಲ್ ಇಪ್ಪತ್ತರಂದು ಸುಲ್ತಾನನು ಪೂರ್ಣಯ್ಯನವರೊಡನೆಯೂ, ಸೈನ್ಯಾಧಿಕಾರಿಗಳೊಡನೆಯೂ ಸಮಾಲೋಚನೆ ನಡೆಸಿ ತಾತ್ಕಾಲಿಕವಾಗಿ ಕದನವನ್ನು ನಿಲ್ಲಿಸಲು ನಿರ್ಧರಿಸಿದ. ಸಂಧಿ ಪತ್ರವನ್ನು ಸಿದ್ಧಗೊಳಿಸಿ ಜನರಲ್ ಹ್ಯಾರಿಸ್ಸನಿಗೆ ಕಳುಹಿಸಲಾಯಿತು. ಇಂತಹ ಪರಿಸ್ಥಿತಿಯಲಿ

ಹ್ಯಾರಿಸ್ಸನು ಸುಲ್ತಾನನ ಪತ್ರವನ್ನು ನಿರೀಕ್ಷಿಸಿರಲಿಲ್ಲ. ತನ್ನ ಸಲಹಾ ಮಂಡಳಿಯೊಡನೆ ಚರ್ಚೆ ನಡೆಸಿ ಅತ್ಯಂತ ಕಠಿಣವಾದ ಷರತ್ತುಗಳನ್ನು ವಿಧಿಸಿದನು.

1. ಯುದ್ಧದ ಆರಂಭಕ್ಕೆ ಯುದ್ಧದ ಮೊದಲಿದ್ದಂತೆ ರಾಜ್ಯದ ಅರ್ಧ ಭಾಗವನ್ನು ಬ್ರಿಟೀಶರಿಗೆ ನೀಡಬೇಕು.
2. ಯುದ್ಧದ ವೆಚ್ಚಕ್ಕೆಂದು ಎರಡು ಕೋಟಿ ರೂಪಾಯಿಗಳನ್ನು ನೀಡಬೇಕು. ಇದರಲ್ಲಿ ಅರ್ಧ ಭಾಗವನ್ನು 24 ಗಂಟೆಗಳ ಒಳಗೂ ಉಳಿದ ಹಣವನ್ನು ಆರು ತಿಂಗಳ ಒಳಗೂ ನೀಡಬೇಕು.
3. ಪೂರ್ಣವಾಗಿ ಹಣ ಸಲ್ಲಿಸುವವರೆಗೆ ಸುಲ್ತಾನನು ತನ್ನ ನಾಲ್ವರು ಮಕ್ಕಳು, ನಾಲ್ಕು ಜನ ಕಿಲ್ಲೆದಾರರು, ಮತ್ತು ಎಂಟು ಜನ ಅಧಿಕಾರಿಗಳನ್ನು ಬ್ರಿಟಿಶರ ವಶಕ್ಕೆ ಒಪ್ಪಿಸಬೇಕು.

. ಈ ಪತ್ರ ತಲುಪಿದ 24 ಗಂಟೆಗಳ ಒಳಗೆ ಸಮ್ಮತಿ ನೀಡಿ ಸುಲ್ತಾನರ ಹಸ್ತಾಕ್ಷರ ಮತ್ತು ರಾಜ ಮುದ್ರೆಯೊಡನೆ ಪತ್ರವನ್ನು ನಮಗೆ ತಲುಪಿಸಬೇಕು.

ಇಂಥಹ ಶರತ್ತುಗಳಿಗೆ ಸುಲ್ತಾನನು ಒಪ್ಪಿಕೊಳ್ಳುವ ನಂಬಿಕೆ ಇರಲಿಲ್ಲ. ಯುದ್ಧವು ಮುಂದುವರೆಯಿತು. ತನ್ನ ಪತ್ರಕ್ಕೆ ಬ್ರಿಟಿಶರು ತಾತ್ಕಾಲಿಕವಾಗಿ ಯುದ್ಧವನ್ನು ನಿಲ್ಲಿಸಬಹುದೆಂಬ ಸುಲ್ತಾನನ ನಿರೀಕ್ಷೆ ಸುಳ್ಳಾಯಿತು. ಏಕಪಕ್ಷೀಯವಾಗಿ ಕದನ ನಿಲುಗಡೆಯಾಗುವಂತಿರಲಿಲ್ಲ. ಸುಲ್ತಾನನ ಸೈನಿಕರು ಅತ್ಯಂತ ಯಶಸ್ವಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದರು. ಸುಲ್ತಾನನು ಹ್ಯಾರಿಸ್ಸನ ಪತ್ರವನ್ನು ಸರಿಯಾಗಿ ಓದಿಸಿ ಅರ್ಥ ಮಾಡಿಕೊಳ್ಳಲಿಲ್ಲ. ಶರತ್ತುಗಳೂ ಒಪ್ಪಿಗೆಯಾಗಲಿಲ್ಲ. ಆದರೂ ಯುದ್ಧವನ್ನು ನಿಲ್ಲಿಸಿ ಮಾತುಕತೆಗೆ ಸಿದ್ಧವಾದರೆ ತಮ್ಮ ಕಡೆಯ ಒಬ್ಬ ವಕೀಲನನ್ನು ಕಳುಹಿಸುವುದಾಗಿ ಉತ್ತರ ನೀಡಿದನು. ವಿನಾಕಾರಣ ಕಾಲಹರಣ ಮಾಡಲು ಹ್ಯಾರಿಸ್ಸನು ಒಪ್ಪಿಕೊಳ್ಳಲಿಲ್ಲ.

ಏಪ್ರಿಲ್ 27ರವರೆಗೆ ಮೈಸೂರಿನ ಸೈನ್ಯವು ಅನೇಕ ಕದನಗಳಲ್ಲಿ ಸೋಲನ್ನು ಅನುಭವಿಸಿತು. ಆದರೂ ಬ್ರಿಟಿಶರು ನಿರೀಕ್ಷಿಸಿದಷ್ಟು ಮುನ್ನಡೆ ಪಡೆದಿರಲಿಲ್ಲ. ಕೆಲವು ಕಡೆ ಭಾರಿ ಸೋಲನ್ನನುಭವಿಸಿತ್ತು. ಇದಕ್ಕೆ ಪ್ರತಿಕೂಲ ಹವಾಮಾನವೂ ಕಾರಣವಾಗಿತ್ತು. ಕಾವೇರಿ ನದಿಯಲ್ಲಿ ಪ್ರವಾಹವು ಬರುವ ಸಂಭವವಿತ್ತು. ಮೇ ತಿಂಗಳ ಎರಡನೆಯ ದಿನಾಂಕದಂದು ಜನರಲ್ ಹ್ಯಾರಿಸ್ಸನು ತನ್ನ ಶಿಬಿರದಲ್ಲಿ ಸೇನಾಧಿಕಾರಿಗಳೊಡನೆ ಚರ್ಚೆ ನಡೆಸಿದ. ಮೇ ನಾಲ್ಕರಂದು ಮಧ್ಯಾಹ್ನ ಒಂದು ಗಂಟೆಯ ಒಳಗೆ ಕೋಟೆಯನ್ನು ಕೈವಶ ಮಾಡಿಕೊಳ್ಳಲೇಬೇಕೆಂದು ನಿರ್ಧರಿಸಲಾಯಿತು. ಈ ವೇಳೆಯು ಟಿಪ್ಪುವಿನ ಸೈನಿಕರ ಉಪಾಹಾರದ ಸಮಯವಾಗಿತ್ತು. ಮೂರನೆಯ ದಿನಾಂಕದಂದು ಲೆಫ್ಟಿನೆಂಟ್ ಟೈಲರನು ಕೋಟೆಯ ಸುತ್ತಲಿನ ಕಂದಕಗಳನ್ನು ಪರಿಶೀಲಿಸಿದನು. ಇವು ಕೆಲವೆಡೆ ಬಹಳ ಅಗಲವಾಗಿ ತಳದಲ್ಲಿ ಬಂಡೆಗಳಿದ್ದವು. ಇವನ್ನು ದಾಟಲು ಏಣಿಗಳು, ಮತ್ತಿತರ ಸಾಮಗ್ರಿಗಳನ್ನು ಸಿದ್ಧಗೊಳಿಸಿದರು. 73ನೆಯ ರೆಜಿಮೆಂಟ್ ಮತ್ತು ಸ್ಕಾಚ್ ಬ್ರಿಗೇಡಿನ ಸೈನಿಕರು ಕಂದಕದಾಚೆಯ ನೆಲವನ್ನು ಸಮಗೊಳಿಸಿ ನಾಲ್ಕು ನಾಲ್ಕು ತೋಪುಗಳ ಸಾಲನ್ನು ಅಳವಡಿಸಿದರು. ಶತ್ರು ಸೇನೆಯು ಇಲ್ಲಿಗೆ ನುಗ್ಗಿ ಬಾರದಂತೆ ಮರದ ತುಂಡುಗಳ ಬೇಲಿಯನ್ನು ನಿರ್ಮಿಸಿದರು. ಇದರಿಂದ ವೈರಿ ಪಡೆಯು ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿತ್ತು. ಮುಂದೆ ಸೂಚನೆಯನ್ನು ನೀಡುವವರೆಗೆ ಇದರ ಕಾರ್ಯಾಚರಣೆಗಾಗಿ ಬ್ರಿಗೇಡಿಯರ್ ವೇ ಎಂಬುವನನ್ನು ನೇಮಕಲಾಯಿತು.

ಮೇ ಮೂರರ ಸಾಯಂಕಾಲ ತೋಪುಗಳಿಂದ ಗುಂಡುಗಳನ್ನು ಹಾರಿಸಲಾಯಿತು. ಇದೇ ವೇಳೆ ಜನರಲ್ ಸ್ಟುವರ್ಟನ ತುಕಡಿಗಳು ಹೊವಿಟ್ಸರ್ ಫಿರಂಗಿಗಳಿಂದ ದಾಳಿಯನ್ನು ಆರಂಭಿಸಿದವು. ಸುಲ್ತಾನನ ಸೈನಿಕರೂ ಪ್ರತಿಯಾಗಿ ಬತೇರಿಯ ತೋಪುಗಳಿಂದ ಗುಂಡು ಹಾರಿಸುತ್ತಿದ್ದರು. ಭಯಂಕರವಾದ ಕೋಲಾಹಲ ಮತ್ತು ಗದ್ದಲಗಳಿಂದ ಕದನದ ಗತಿಯನ್ನು ತಿಳಿಯಲಾಗಲಿಲ್ಲ. ಎರಡೂ ಪಡೆಗಳು ಎದುರಾಗಿ ಕೇವಲ ನೂರು ಗಜ ಅಂತರದಲ್ಲಿ ಗುಂಡು ಹಾರಿಸುತ್ತಿದ್ದವು. ಸುಲ್ತಾನ ಸೈನಿಕರ ಹಿಮ್ಮಡಿನ ಹೊಡೆತದಿಂದ ಬ್ರಿಗೇಡಿಯರ್ ವೇ ಮುರಿದ ಹೊಂದಿದ. ಆಗ 73ನೆಯ

ರೆಜಿಮೆಂಟು ಅತ್ಯಂತ ಅಪಾಯದ ಸ್ಥಿತಿಯಲ್ಲಿತ್ತು. ಗುಂಡುಗಳು ಮುಗಿದು ಹೋಗಿದ್ದವು. ಅವರ ಬೂಟುಗಳೂ ಕಾಲುಚೀಲಗಳೂ ಕೆಸರಿನಲ್ಲಿ ಸಿಕ್ಕಿಕೊಂಡವು. ವಂಡೆಯು ಕುಸಿದು ಕೆಲವು ತೋಪು ಗಳು ಬಿದ್ದುಹೋದವು. ಸಾವು ನೋವಿನಿಂದ ನರಳುತ್ತಿದ್ದಂತೆ 74ನೆಯ ರೆಜಿಮೆಂಟು ಆ ಸ್ಥಳಕ್ಕೆ ಬಂದಿತು. ರಾತ್ರಿ ಒಂಭತ್ತರ ಸಮಯದಲ್ಲಿ ಕೋಟೆಯ ಗೋಡೆಯ ಮೇಲೆ ಪ್ರಕಾಶಮಾನವಾದ ಪಂಜುಗಳು ಉರಿದವು. ಬ್ರಿಟಿಶ್ ಪಡೆ ಅನಾವಶ್ಯಕವಾಗಿ ಗುಂಡು ಹಾರಿಸುವುದನ್ನು ನಿಲ್ಲಿಸಿತು. ರಾತ್ರಿ 10 ಗಂಟೆಯ ಸುಮಾರಿಗೆ ಸುಲ್ತಾನನ ಮೂರು ತುಕಡಿಗಳು ಇದ್ದಕ್ಕಿದ್ದಂತೆ ನುಗ್ಗಿ ಬಂದವು. ಕೇವಲ 12 ಗಜ ಅಂತರದಲ್ಲಿ ಎಡಭಾಗದಲ್ಲಿ ಮತ್ತು ಸೇತುವೆಯ ಮೇಲಿಂದ ಬ್ರಿಟಿಶರ ಪಡೆಯನ್ನು ಸುತ್ತುವರೆದವು. ತಕ್ಷಣ 74ನೆಯ ರೆಜಿಮೆಂಟಿನ ಕರ್ನಲ್‌ವಾಲೆಸನು ತೋಪುಗಳಿಂದ ಗುಂಡು ಹಾರಿಸಲು ಆದೇಶನೀಡಿದ. ಸುಲ್ತಾನನ ಸೈನಿಕರಿಗೆ ಮುಂದೆ ನುಗ್ಗಲು ಸಾಧ್ಯವಾಗಲಿಲ್ಲ. ರೋಷಾ ವೇಶದಿಂದ ಸಿಡಿಮದ್ದುಗಳನ್ನು ಸಿಡಿಸಿದರು. ಕೋಟೆಯ ಗೋಡೆಯ ಮೇಲಿದ್ದ ಸೈನಿಕರು ಬ್ರಿಟಿಶ್ ಸೈನಿಕರ ಮೇಲೆ ದೊಡ್ಡ ದೊಡ್ಡ ಕಲ್ಲುಗಳನ್ನೆತ್ತಿ ಎಸೆಯತೊಡಗಿದರು. ಅನೇಕ ಬ್ರಿಟಿಶ್ ಸೈನಿಕರು ಇದಕ್ಕೆ ಬಲಿಯಾದರು.

ಮಧ್ಯರಾತ್ರಿಯವರೆಗೂ ಹೋರಾಟ ನಡೆಯಿತು. ಆ ದಿನದ ಕದನ ನಿಂತ ನಂತರವೂ ಬ್ರಿಟಿಶ್ ಸೈನಿಕರು ಕೋಟೆಯ ಗೋಡೆ ಬಳಿಯಲ್ಲಿ ಮಾರನೆಯ ದಿನದ ಯುದ್ಧಕ್ಕೆ ಸಿದ್ಧತೆ ನಡೆಸುತ್ತಿರುವುದು ಕಂಡು ಬಂದಿತು.

ಮೇ ನಾಲ್ಕರ ಕದನವು ಸುಲ್ತಾನನ ಸಮಸ್ತ ಶಕ್ತಿಯನ್ನು ಪರೀಕ್ಷಿಸುವ ದಿನವಾಗಿತ್ತು. ಮೈಸೂರು ಸಂಸ್ಥಾನದ ಭವಿಷ್ಯವು ಅಂದೇ ನಿರ್ಧಾರವಾಗಬೇಕಿತ್ತು. ಅಂದು ಬೆಳಗಿನಿಂದಲೇ ಬ್ರಿಟಿಶ್ ಸೈನಿಕರ ಭಯಾನಕ ಹೋರಾಟ ಆರಂಭವಾಗಿತ್ತು. ಉತ್ತರ ಭಾಗದ ಮಹಾದ್ವಾರವನ್ನು ಭೇದಿಸಲು ತೋಪಿನ ಗುಂಡುಗಳು ಎಡೆಬಿಡದೆ ಸಿಡಿಯುತ್ತಿದ್ದವು. ಸುಲ್ತಾನನ ಹೆಚ್ಚಿನ ಪಡೆಯು ಇವರ ಪ್ರಯತ್ನವನ್ನು ವ್ಯರ್ಥಗೊಳಿಸುತ್ತಿತ್ತು. ಘನಘೋರವಾದ ಸಪ್ಪಳದೊಡನೆ ಬ್ರಿಟಿಶರ ಗ್ರನೇಡು ಗಳಿಂದ ಬಂದೂಕುಗಳಿಂದ ಗುಂಡುಗಳು ಹಾರಿದವು. ಕರ್ನಲ್ ಶಿರ್‌ಬ್ರೂಕ್, ಲೆಫ್ಟಿನೆಂಟ್ ಕರ್ನಲ್ ಡನ್‌ಲಪ್ ಮತ್ತು ಲೆಫ್ಟಿನೆಂಟ್ ಟೈಲರ್ ಸೈನಿಕರನ್ನು ಹುರಿದುಂಬಿಸುತ್ತಿದ್ದರು.

ಸುಲ್ತಾನನು ದಕ್ಷಿಣ ಭಾಗದ ತನ್ನ ಡೇರೆಯಿಂದ ಸೇನಾಪತಿಗಳಿಗೆ ನಿರ್ದೇಶನ ನೀಡುತ್ತಿದ್ದನು. ಯುದ್ಧದಲ್ಲಿ ಕಳೆದುಕೊಂಡ ಬಂದೂಕುಗಳಿಗೆ ಪ್ರತಿಯಾಗಿ ಸಾಕಷ್ಟು ಬಂದೂಕುಗಳಿರಲಿಲ್ಲ. ಸಿಡಿಮದ್ದುಗಳನ್ನು ಹೆಚ್ಚಾಗಿ ಬಳಸಬೇಕಾಯಿತು. ಕೋಟೆಯ ಒಳಭಾಗದಲ್ಲಿ ಪ್ರಧಾನ ದಂಡ ನಾಯಕನ ಸುಮಾರು ಹದಿನಾಲ್ಕು ಸಾವಿರ ಸಶಸ್ತ್ರ ಪಡೆಯು ಹೋರಾಡುತ್ತಿತ್ತು. ಉತ್ತರ ದ್ವಾರದ ರಕ್ಷಣೆಗೆಂದು ಸೈಯ್ಯದ್ ಜಾಫರನ ಮತ್ತಷ್ಟು ಪಡೆ ಧಾವಿಸಿತು. ಸುಲ್ತಾನನ ಹಿರಿಯ ಮಗ ಫತೆಹೈದರನು ನಾಲ್ಕು ಸಾವಿರ ಸೈನಿಕರೊಂದಿಗೆ ಪೂರ್ವದ ಮಹಾದ್ವಾರದ ಬಳಿ ಕಾದಾಡುತ್ತಿದ್ದನು. ಇವನಿಗೆ ಪೂರ್ಣಯ್ಯನವರು ಸಹಾಯಕರಾಗಿದ್ದರು. ಕರಿಘಾಟ ಎಂಬ ಸ್ಥಳದಿಂದ ಬ್ರಿಟಿಶ್ ಸೈನಿಕರಿಗೆ ಸರಬರಾಜಾಗುತ್ತಿದ್ದ ಮದ್ದು ಗುಂಡುಗಳು ಶಸ್ತ್ರಗಳು ಆಹಾರ ಸಾಮಗ್ರಿಗಳನ್ನು ತಡೆ ಯಲು ಸುಲ್ತಾನನ ಎರಡನೆಯ ಮಗ ಮೊಯಿನುದ್ದೀನನು ನಾಲ್ಕು ಸಾವಿರ ಸೈನಿಕರೊಂದಿಗೆ ದಾಳಿ ನಡೆಸುತ್ತಿದ್ದನು. ಅನೇಕ ತೋಪುಗಳು ಕೈವಶವಾದುವು. ಆಹಾರ ಸರಬರಾಜು ನಿಂತು ಹೋಯಿತು. ಬ್ರಿಟಿಶ್ ಸೈನಿಕರು ಕಂಗಾಲಾಗಿದ್ದರು. ಇದ್ದಕ್ಕಿದ್ದಂತೆ ಕಾರ್ಮುಗಿಲು ಕವಿದು ಸಿಡಿಲುಗಳು ಎರಗ ತೊಡಗಿದವು. ಆದರೂ ಹೆದರದೆ ಬ್ರಿಟಿಶ್ ಸೈನಿಕರು ಕೋಟೆಯ ಕಂದಕವನ್ನು ದಾಟಿದರು. ವೈರಿ ಪಡೆಯು ರಾತ್ರಿಯ ವೇಳೆಯಲ್ಲೂ ಆಕ್ರಮಣ ನಡೆಸಬಹುದೆಂದು ಸುಲ್ತಾನನು ನಿರೀಕ್ಷಿಸಿದ್ದನು. ಆದರೆ ಬ್ರಿಟಿಶರ ಪಡೆಯು ಎಲ್ಲಿಂದಲೂ ಆಕ್ರಮಣ ನಡೆಸಲಿಲ್ಲ.

ಟಿಪ್ಪುವು ಮೇ ನಾಲ್ಕರಂದು ಬೆಳಿಗ್ಗೆ ಸ್ನಾನ ಮಾಡಿ ಪ್ರಾರ್ಥನೆ ಸಲ್ಲಿಸಿದನು. ಭಿಕ್ಷುಕರಿಗೆ ಹೇರಳ ವಾಗಿ ದಾನ ಮಾಡಿದನು. ಮಧ್ಯಾಹ್ನ ಭೋಜನಕ್ಕೆ ಕುಳಿತಾಗ ಪ್ರಧಾನ ಸೇನಾಪತಿ ಸಯ್ಯದ್ ಸಾಹೇಬನು ಗುಂಡೇಟಿನಿಂದ ಮರಣ ಹೊಂದಿದನೆಂದು ತಿಳಿಯಿತು. ತಕ್ಷಣವೇ ಮೇಲೆದ್ದು ಶಸ್ತ್ರ ಸಜ್ಜಿತನಾಗಿ ಉತ್ತರದ ಮಹಾದ್ವಾರದತ್ತ ಧಾವಿಸಿದ. ಮಧ್ಯಾಹ್ನ ಒಂದು ಗಂಟೆಯ ಸಮಯದಲ್ಲಿ

ಜನರಲ್ ಬಯರ್ಡನು ಅತಿ ಪ್ರಯಾಸದಿಂದ ಕೋಟೆಯ ಗೋಡೆಯನ್ನೇರಿ ನಿಂತು ತನ್ನ ಕತ್ತಿಯನ್ನು ಝುಳಪಿಸಿದನು. ಬ್ರಿಟಿಶ್ ಸೈನಿಕರು ವೀರಾವೇಶದಿಂದ ಗೋಡೆಯನ್ನೇರಿದರು. ಉಭಯ ಬಣಗಳಲ್ಲೂ ಎಡಬಿಡದೆ ಗುಂಡುಗಳು ಹಾರಿದವು. ಮದ್ದು ಗುಂಡುಗಳ ಆರ್ಭಟದೊಂದಿಗೆ ಹೊಗೆಯು ಆವರಿಸಿತು.

ಕೋಟೆಯ ಗೋಡೆಯು ಕುಸಿದು ಬೀಳುತ್ತಾ ಕಂದಕವನ್ನು ತುಂಬಿಕೊಳ್ಳುತ್ತಿತ್ತು. ಗ್ರೆನೇಡುಗಳ ಹೊಡೆತದಿಂದ ಸುಲ್ತಾನನ ಸೈನಿಕರ ಕತ್ತಿ ಖಡ್ಗಗಳು ಛಿದ್ರ ಛಿದ್ರವಾದವು. ಸವಿರಾರು ಸಂಖ್ಯೆಯಲ್ಲಿ ಸೈನಿಕರು ಸತ್ತು ಬಿದ್ದರು. ಈ ನಡುವೆ ಬ್ರಿಟಿಶ್ ಪಡೆಯ ಸಾರ್ಜೆಂಟ್ ಗ್ರಹಾಮ್‌ನು ಬತೇರಿಯ ಮೇಲೆ ಬ್ರಿಟಿಶರ ಧ್ವಜವನ್ನು ಏರಿಸುತ್ತಿದ್ದಂತೆ ಸುಲ್ತಾನನ ಸೈನಿಕರ ಗುಂಡಿನಿಂದ ಕುಸಿದು ಬಿದ್ದ. ಮೈಸೂರು ಸೈನಿಕರ ಪ್ರತಿರೋಧಕ್ಕೆ ಸ್ವಲ್ಪ ಹೆದರಿದ ಜನರಲ್ ಬಯರ್ಡನು ತನ್ನ ಪಡೆಯನ್ನು ಬಲಭಾಗದ ಕಂದಕದತ್ತ ಕರೆದುಕೊಂಡು ಹೋದನು. ಇಲ್ಲಿಯ ಕಂದಕದಲ್ಲಿಯೂ ನೀರಿತ್ತು. ಆದರೆ ಗೋಡೆಯನ್ನು ರಿಪೇರಿ ಮಾಡುವ ಏಣಿಗಳು ಸಿಕ್ಕಿದವು. ಇದರ ಸಹಾಯದಿಂದ ಅವರ ಪಡೆಯು ಕಂದಕವನ್ನು ದಾಟಿ ಬೆಂಗಳೂರಿನ ಮಹಾದ್ವಾರವನ್ನು ತಲುಪಿ ಸ್ವಲ್ಪ ವಿಶ್ರಾಂತಿ ಪಡೆಯಿತು.

ಉತ್ತರ ದ್ವಾರದ ಬಳಿ ಇನ್ನೂ ಭಯಾನಕವಾದ ಕಾಳಗ ನಡೆಯುತ್ತಿತ್ತು. ಕೋಟೆಯ ಗೋಡೆಯನ್ನು ಏರುತ್ತಿದ್ದ ಲೆಫ್ಟಿನಂಟ್ ಡನ್‌ಲಪ್‌ನು ಸುಲ್ತಾನನ ಸೈನಿಕರ ಕತ್ತಿಯ ಹೊಡೆತಕ್ಕೆ ಗಾಯಗೊಂಡು ಕೆಳಗೆ ಬಿದ್ದನು. ಅವನ ಸ್ಥಳಕ್ಕೆ ಬಂದ ಲೆಫ್ಟಿನೆಂಟ್ ಲ್ಯಾಂಬರ್ಟನು ಭಾರೀ ಪ್ರಮಾಣದ ಸಿಡಿಮದ್ದಿನ ದಾಳಿಯನ್ನು ಆರಂಭಿಸಿದನು. ದಕ್ಷಿಣ ಭಾಗದ ಗೋಡೆಯ ಸ್ವಲ್ಪ ಭಾಗವನ್ನು

ಉರುಳಿಸಿದ ಕ್ಯಾಪ್ಟನ್ ಗೂಡಾಲ್‌ನು ಒಳಗೆ ನುಗ್ಗಲು ಪ್ರಯತ್ನಿಸಿದನು. ಇದನ್ನು ತಡೆಯಲು ಸುಲ್ತಾನನು ಅತ್ತಿಂದಿತ್ತ ಸರಿಯುತ್ತಾ ತನ್ನ ಪಡೆಗೆ ಆದೇಶ ನೀಡುತ್ತಿದ್ದನು. ಅವನ ಕಾಲಿನಲ್ಲಿ ವಿಪರೀತವಾದ ನೋವು ಆರಂಭವಾಯಿತು. ಕ್ಯಾಪ್ಟನ್ ಗೂಡಾಲ್‌ನ ಗುಂಡಿಗೆ ಸುಲ್ತಾನನ ಕುದುರೆಯು ಬಲಿಯಾಯಿತು. ಇದ್ದಕ್ಕಿದ್ದಂತೆ ಬ್ರಿಟಿಶ್ ಸೈನಿಕರು ಸುಲ್ತಾನನ ಕಡೆಗೆ ಗುಂಡು ಹಾರಿಸಿದರು. ಸುಲ್ತಾನನ ಎದೆಯಲ್ಲಿ ಗುಂಡು ನುಗ್ಗಿತು. ಅವನನ್ನು ಮೈಗಾವಲಿನವರು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ದಕ್ಷಿಣ ದ್ವಾರದ ಕಮಾನಿನ ಒಳಗೆ ಸಾಗಿಸಿದರು.

ಎಲ್ಲೆಲ್ಲಿಯೂ ತೋಪಿನ ಭಯಾನಕ ಸದ್ದು. ಬೆಂಕಿಯ ಉರಿನಾಲಗೆ, ಸತ್ತ ಸೈನಿಕರ ಉಡುಪುಗಳಿಗೂ ಬೆಂಕಿ ಹತ್ತಿಕೊಂಡಿತು. ದಕ್ಷಿಣ ದ್ವಾರದ ಸಮೀಪ ಪಥದಿಂದ ಬ್ರಿಟಿಶ್ ಸೈನಿಕರು ಒಳಗೆ ನುಗ್ಗಿಬಂದರು. ಟಿಪ್ಪು ಸುಲ್ತಾನನ ಪ್ರಾಣಪಕ್ಷಿ ಇನ್ನೂ ತೊಳಲಾಡುತ್ತಿತ್ತು. ಅವನ ಸೊಂಟದಲ್ಲಿದ್ದ ರತ್ನಖಚಿತವಾದ ಪಟ್ಟಿಯನ್ನು ಎಳೆದುಕೊಳ್ಳಲು ಒಬ್ಬ ಬ್ರಿಟಿಶ್ ಸೈನಿಕನು ನುಗ್ಗಿದನು. ಸುಲ್ತಾನನು ತನ್ನ ಕತ್ತಿಯಿಂದ ಪಟ್ಟಿಯನ್ನು ಕತ್ತರಿಸಿ ಅವನತ್ತ ಬೀಸಿದನು. ತಪ್ಪಿಸಿಕೊಂಡ ಸೈನಿಕನು ಸುಲ್ತಾನನಿಗೆ ಗುಂಡಿಕ್ಕಿದನು. ನುಗ್ಗಿ ಬಂದ ಸೈನಿಕರು ಗೊತ್ತು ಗುರಿಯಿಲ್ಲದೆ ಗುಂಡು ಹಾರಿಸುತ್ತಿದ್ದರು. ನೂರಾರು ಶವಗಳಲ್ಲಿ ಸುಲ್ತಾನನು ಮುಚ್ಚಿಹೋದನು. ಮೈಗಾವಲಿನ ಸಯ್ಯದನೂ ಗುಂಡೇಟಿನಿಂದ ಕಣ್ಣು ಮುಚ್ಚಿದನು. ಮೇ ತಿಂಗಳ ನಾಲ್ಕನೆಯ ದಿನಾಂಕ ಮಧ್ಯಾಹ್ನ ಸುಮಾರು ಐದು ಗಂಟೆಯ ವೇಳೆಗೆ ಟಿಪ್ಪುಸುಲ್ತಾನನ ಪ್ರಾಣಪಕ್ಷಿಯು ಹಾರಿಹೋಯಿತು. ಭಾರತದ ಭವಿಷ್ಯವನ್ನು ಚಿಂತಿಸುತ್ತಿದ್ದ ಅಪ್ರತಿಮ ರಾಜಕಾರಣಿ ದೇಶಪ್ರೇಮಿ ಮತ್ತು ಮಹಾಯೋಧನ ಹೋರಾಟವು ದುರಂತ ಸಾವಿನಿಂದ ಕೊನೆಗೊಂಡಿತು. ★

ಉತ್ತರ ದ್ವಾರದಿಂದ ಒಳಗೆ ನುಗ್ಗಿದ ಮೇಜರ್ ಅಲನ್, ಬೀಟ್ಸನ್ ಮತ್ತು ಡಲ್ಲಾಸರು ಟಿಪ್ಪುವು ಇನ್ನೂ ದಕ್ಷಿಣ ದ್ವಾರದ ಬಳಿ ಹೋರಾಟ ನಡೆಸುತ್ತಿರಬೇಕೆಂದು ನಿರೀಕ್ಷಿಸಿದ್ದರು. ಆದರೆ ಸುಲ್ತಾನನು ಅಲ್ಲಿಯೂ ಕಂಡು ಬರಲಿಲ್ಲ. ಹೆಚ್ಚು ಕಡಿಮೆ ಅಲ್ಲಿ ಕದನವು ಸ್ತಬ್ಧವಾಗಿತ್ತು. ಹಾಗೆಯೇ ಮುಂದೆ ಸಾಗುತ್ತಿದ್ದಂತೆ ಕಂದಕದಲ್ಲಿ ಇಬ್ಬರು ಗೌರವಾನ್ವಿತ ವ್ಯಕ್ತಿಗಳ ಶರೀರವು ತೇಲುತ್ತಿರುವುದು ಕಾಣಿಸಿತು. ತಕ್ಷಣವೇ ಪಲ್ಲಕ್ಕಿಯನ್ನು ತರಿಸಲಾಯಿತು. ಮೇಲೆ ಎತ್ತಿದವರ ಪೈಕಿ ಒಬ್ಬಾತ ಸುಲ್ತಾನನ ಸೇನಾಪತಿ ಸಯ್ಯದ್ ಸಾಹೇಬ್. ಆತ ಇನ್ನೂ ಸತ್ತಿರಲಿಲ್ಲ. ಇವನನ್ನು ಮೇಜರ್ ಡಲ್ಲಾಸ್ ಗುರುತಿಸಿದ. ಅವನನ್ನು ಉಪಚರಿಸಲು ವೈದ್ಯನನ್ನು ಕರೆಸಲಾಯಿತು. ಆದರೆ ಅಷ್ಟರಲ್ಲೆ ಸುಲ್ತಾನನ ಸೈನಿಕರು ಅವರತ್ತ ಗುಂಡು ಹಾರಿಸಿದರು. ವೈದ್ಯನ ಪ್ರಯತ್ನವೂ ಫಲ ನೀಡದೆ ಸಯ್ಯದ್ ಸಾಹೇಬನೂ ಕೊನೆಯುಸಿರೆಳೆದನು. ಬಹುಶಃ ಸುಲ್ತಾನನು ಅರಮನೆಗೆ ಹಿಂದಿರುಗಿರಬೇಕೆಂದು ಬ್ರಿಟಿಶ್ ಸೇನಾಪತಿಗಳು ತರ್ಕಿಸಿದರು. ಮೀರ್‌ಸಾದಕ್‌ನು ಹೇಗೋ ತಪ್ಪಿಸಿಕೊಂಡು ಗಂಜಾಮಿನ ಕಡೆ ಧಾವಿಸುತ್ತಿದ್ದಾಗ ಒಬ್ಬ ಸೈನಿಕನು ಅವನ ತಲೆಯನ್ನು ಕತ್ತರಿಸಿ ಎಸೆದನು. ಟಿಪ್ಪು ಸುಲ್ತಾನನು ಮರಣ ಹೊಂದಿರುವುದು ಬ್ರಿಟಿಶ್ ಸೇನಾಪತಿಗಳಿಗೆ ತಿಳಿಯಲಿಲ್ಲ.

ಎಲ್ಲಾ ಮಹಾದ್ವಾರಗಳಿಂದಲೂ ಬ್ರಿಟಿಶ್ ಸೈನಿಕರು ರಾಜಧಾನಿಗೆ ನುಗ್ಗಿ ಬಂದರು. ಮೇಜರ್ ಅಲನ್ನನು ತನ್ನ ತುಕಡಿಯೊಂದಿಗೆ ನೇರವಾಗಿ ಅರಮನೆಗೆ ಧಾವಿಸಿದನು. ಬ್ರಿಟಿಶ್ ಸೈನಿಕರು ಬಂದೂಕಗಳನ್ನೆತ್ತಿ ಗುಂಡು ಹಾರಿಸಲು ಸನ್ನದ್ಧರಾಗಿದರು. ಅರಮನೆಯ ಕಾವಲು ಪಡೆ ಹೆಚ್ಚಾಗಿರಲಿಲ್ಲ. ಸುಲ್ತಾನನ ಪ್ರತಿಯೊಬ್ಬ ಸೈನಿಕನೂ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಶರಣಾಗತನಾಗಬೇಕೆಂದು ಅಲನ್ ಘೋಷಿಸಿದ. ಪ್ರತಿಯಾಗಿ ಆಕ್ರಮಣ ನಡೆಸಿದರೆ ಬಲಿ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಿದ. ಸುಲ್ತಾನನ ಸೈನಿಕರು ಹಾಗೆಯೇ ನಿಂತಿದ್ದರು. ಅಷ್ಟರಲ್ಲಿ ಅರಮನೆಯ ರಕ್ಷಕ ಕಿಲ್ಲೇದಾರ ನದೀಮ ಖಾನನು ಅಲನ್ನನ ಎದುರಿಗೆ ಬಂದ. ಸನ್ನಿವೇಶದ ಅಪಾಯವನ್ನು ಅಲನ್ನನು ಖಾನನಿಗೆ ತಿಳಿಸಿದ. ಆದರೆ ಕಿಲ್ಲೇದಾರನು ಅರಮನೆಯನ್ನು ಪ್ರವೇಶಿಸಲು ಅನುಮತಿ ನೀಡಲಿಲ್ಲ. ಅಲನ್ ತನ್ನ ತುಕಡಿಯೊಂದಿಗೆ ಭಗ್ನವಾಗಿದ್ದ ಕೋಟೆಯ ಗೋಡೆಯನ್ನು ಹತ್ತಿ ದಾಟಿ

★ ನೋಡಿ –1979ರ ಡಿಸೆಂಬರ್ ಸಂಚಿಕೆಯ 90ನೆಯ ಪುಟದಲ್ಲಿ ಪ್ರಕಟವಾದ "ಟಿಪ್ಪು ಸುಲ್ತಾನನ ಕೊನೆಯ ದಿನಗಳು" ಲೇಖನವನ್ನು –ಸಂ.

ಬಂದ. ಮೈಸೂರಿನ ಸೈನಿಕರು ಈಗಲೂ ಅವರನ್ನು ತಡೆಯಲಿಲ್ಲ. ಅರಮನೆಯ ಮುಂಭಾಗದಲ್ಲಿಯೂ ರಕ್ಷಕರ ಪಡೆಯಿತ್ತು. ಅಲನ್ನನೊಂದಿಗೆ ಬಂದಿದ್ದ ಒಬ್ಬ ಅಧಿಕಾರಿಗೆ ಹಿಂದೂಸ್ತಾನಿಯಲ್ಲಿ ಮಾತನಾಡಲು ಬರುತ್ತಿತ್ತು. ಈ ಅಧಿಕಾರಿಯು ತನ್ನ ಕೈಯಲ್ಲಿದ್ದ ಬಿಳಿಯ ನಿಶಾನೆಯನ್ನು ಎತ್ತಿ ಹಿಡಿದು ಬ್ರಿಟಿಶ್ ಸೈನಿಕರಿಂದ ರಕ್ಷಣೆ ನೀಡುವುದಾಗಿಯೂ, ಯಾರಿಗೂ ಪ್ರಾಣಾಪಾಯವಾಗದಂತೆ ಎಚ್ಚರಿಕೆ ವಹಿಸುವುದಾಗಿಯೂ ಅನೇಕ ಬಾರಿ ಹೇಳಿದ. ಆದರೆ ಟಿಪ್ಪು ಸುಲ್ತಾನರು ಅರಮನೆಯಲ್ಲಿ ಎಲ್ಲಿದ್ದಾರೆಂದು ತಿಳಿಸದಿದ್ದರೆ ತಮ್ಮ ಸೈನಿಕರು ಅರಮನೆಗೆ ಮುತ್ತಿಗೆ ಹಾಕುವುದಾಗಿಯೂ ಮುಂದಾಗುವ ಅನಾಹುತಗಳಿಗೆ ತಾನು ಹೊಣೆಯಲ್ಲವೆಂದೂ ಘೋಷಿಸಿದನು.

ಅರಮನೆಯಲ್ಲಿದ್ದವರು ಗಾಬರಿಯಿಂದ ಇಣುಕಿ ನೋಡುತ್ತಿದ್ದರು. ಸಿಡಿಯುತ್ತಿರುವ ತೋಪಿನ ಗರ್ಜನೆಯೊಂದಿಗೆ ಬೀಳುತ್ತಿರುವ ದುರ್ಗದ ಗೋಡೆಯ ಸಪ್ಪಳವು ಇನ್ನಷ್ಟು ಭಯವನ್ನು ಸೃಷ್ಟಿಸಿತ್ತು. ಅಲ್ಲಿನ ಜನ ಅರಮನೆಯೂ ಕುಸಿದು ಬೀಳಬಹುದೆಂದು ಕಂಗಾಲಾಗಿದ್ದರು. ಕಪ್ಪು ಮೋಡದ ಹಿಂದೆ ಮರೆಯಾದ ಸೂರ್ಯನನ್ನು ಹಿಂಬಾಲಿಸಿದ ಕತ್ತಲು ಈಗ ಅರಮನೆಯನ್ನು ಆವರಿಸತೊಡಗಿತು.

ಅಲನ್ನನನ್ನು ಅರಮನೆಯೊಳಗೆ ಬಿಡಲಾಯಿತು. ಕುಳಿತುಕೊಳ್ಳಲು ಸುಂದರವಾದ ರತ್ನಗಂಬಳಿಯನ್ನು ಹಾಸಿದ್ದರು. ಅಲನ್ನನು ಸುಲ್ತಾನನ ಮಗ ಮೊಯಿನುದ್ದೀನನನ್ನು ಸಮಾಧಾನಪಡಿಸಿದನು. ಸೈನಿಕರು ಅರಮನೆಯೊಳಕ್ಕೆ ನುಗ್ಗುವುದಿಲ್ಲವೆಂದು ಭರವಸೆ ನೀಡಿದನು. ತನ್ನ ತಂದೆ ಟಿಪ್ಪು ಸುಲ್ತಾನರು ಈವರೆಗೂ ಅರಮನೆಗೆ ಬರಲಿಲ್ಲವೆಂದೂ, ಅವರಿಗೆ ಏನಾಯಿತೆಂದು ತಿಳಿದಿಲ್ಲವೆಂದೂ ಮೊಯಿನುದ್ದೀನನು ಕಣ್ಣೀರು ಒರೆಸಿಕೊಳ್ಳುತ್ತಾ ಹೇಳಿದ. ಅರಮನೆಯ ಮುಂದಿನ ಮಹಾದ್ವಾರವನ್ನು ತೆರೆಯುವಂತೆ ಅಲನ್ನನು ಕೇಳಿಕೊಂಡ. ಆದರೆ ಮೊಯಿನುದ್ದೀನನು ಹೆದರಿಕೆಯಿಂದ ಏನನ್ನು ಹೇಳಲಿಲ್ಲ.

ಜನರಲ್ ಬಯರ್ಡನನ್ನು ಅರಮನೆಗೆ ಕರೆತರಲು ಅಲನ್ನನು ಕ್ಯಾಪ್ಟನ್ ಫ್ರೇಜರನನ್ನು ಕಳುಹಿಸಿದ. ಸುಲ್ತಾನನ ಸುಳಿವನ್ನು ತಿಳಿಯದೆ ತಾಳ್ಮೆಯನ್ನು ಕಳೆದುಕೊಂಡ ಬಯರ್ಡನು ರೋಷಾವೇಶದಿಂದಲೇ ಅರಮನೆಗೆ ಬಂದ. ಸುಲ್ತಾನನ ಕುಮಾರರು ತಡ ಮಾಡದೆ ಅರಮನೆಯಿಂದ ಹೊರಗೆ ಬರಬೇಕೆಂದೂ, ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಗುಂಡಿಕ್ಕುವುದಾಗಿಯೂ ಕೂಗಿದ. ಅವರನ್ನು ಹೊರಗೆ ಕರೆತರಲು ಕರ್ನಲ್ ಕ್ಲೋಸ್‌ನನ್ನು ಕಳುಹಿಸಿದ. ಸುಲ್ತಾನನ ಕುಮಾರರು ಹೊರಗೆ ಬರಲು ನಿರಾಕರಿಸಿದರು. ಅವರಿಗೆ ಯಾವ ರೀತಿಯಲ್ಲೂ ಅಪಾಯವಾಗದಂತೆ ತಾನು ಜವಾಬ್ದಾರನಾಗುವುದಾಗಿ ಕ್ಲೋಸ್‌ನು ಅವರಲ್ಲಿ ನಂಬಿಕೆ ಹುಟ್ಟಿಸಿದ. ಬೇರೆ ದಾರಿಯಿಲ್ಲದೆ ಕುಮಾರರು ಅಂಜಿಕೆಯಿಂದಲೇ ಹೊರಗೆ ಬಂದರು. ಬ್ರಿಟಿಶ್ ಸೈನಿಕರು ಸಾಲಾಗಿ ನಿಂತು ಅವರಿಗೆ ಗೌರವ ರಕ್ಷೆ ನೀಡಿದರು. ಕುಮಾರರು ಕಾಲು ನಡಿಗೆಯಿಂದಲೇ ಹೊರಟರು. ಅರಮನೆಯಲ್ಲಿ ಎಲ್ಲಿಂದಲೋ ಜೋರಾಗಿ ಅಳುತ್ತಿರುವ ಶಬ್ದವು ಕೇಳಿಸುತ್ತಿತ್ತು. ಇವರನ್ನು ಜನರಲ್ ಹ್ಯಾರಿಸನ ಡೇರೆಗೆ ಕರೆದುಕೊಂಡು ಹೋಗಲು ಕ್ಯಾಪ್ಟನ್ ಮಾರಿಯಟ್ ಮತ್ತು ಕರ್ನಲ್ ಅಗ್ನ್ಯೂ ಎಂಬುವವರ ಜೊತೆಯಲ್ಲಿ ಸಶಸ್ತ್ರಪಡೆಯನ್ನು ನಿಯಮಿಸಿದರು.

ನಡೆಯುವ ಹಾದಿ ಸುಗಮವಾಗಿರಲಿಲ್ಲ. ಕೋಟೆಯ ಗೋಡೆಗಳು ಉರುಳಿ ಕಲ್ಲಿನ ರಾಶಿ ಬಿದ್ದಿತ್ತು. ಇನ್ನೂ ಬೆಂಕಿ ಉರಿಯುತ್ತಿತ್ತು. ಹೊಗೆಯು ಮುಸುಕಿತ್ತು. ನೆಲದ ತುಂಬೆಲ್ಲಾ ಗುಂಡಿಗಳು. ಟಿಪ್ಪುವಿನ ಕುಮಾರರು ನಿರ್ವಾಹವಿಲ್ಲದೆ ಲೆಕ್ಕವಿಲ್ಲದಷ್ಟು ಸತ್ತ ಸೈನಿಕರ ಶವಗಳ ಮೇಲೆ ಕಾಲಿಡುತ್ತಾ ಸಾಗುತ್ತಿದ್ದರು. ಹರಿಯುತ್ತಿರುವ ರಕ್ತದ ಕೋಡಿ. ಅರೆಜೀವದಿಂದ ಹೊರಳಾಡುತ್ತಿರುವ ಸೈನಿಕರ ಹಾಹಾಕಾರವನ್ನು ಕೇಳಿ ಅವರ ಹೃದಯ ಕಿತ್ತುಬಂತು. ಅರಮನೆಯಲ್ಲಿಯೇ ಒಂದು ನೂರು ಗಜವನ್ನು ಸಹ ನಡೆದು ಅಭ್ಯಾಸವಿಲ್ಲದ ಕುಮಾರರು ಇಂದು ಬಂದಿಗಳಂತೆ ಬೀಳುತ್ತಾ ಏಳುತ್ತಾ ಸಾಗುತ್ತಿದ್ದರು. ತಾಯಿಯನ್ನು ಅಗಲಿದಾಗಿನ ಎಳೆಗರುಗಳಂತೆ ಆಗಾಗ ಹಿಂದಿರುಗಿ ಅರಮನೆಯನ್ನು ನೋಡುತ್ತ ಉಕ್ಕಿ ಬರುವ ಕಣ್ಣೀರನ್ನು ಒರೆಸಿಕೊಳ್ಳುತ್ತ ದಾರಿಯಲ್ಲಿ ಅನಾಥರಂತೆ ಅವರು ಹೆಜ್ಜೆ ಹಾಕುತ್ತಿದ್ದರು. ಜನರಲ್ ಹ್ಯಾರಿಸನ ಡೇರೆಯನ್ನು ತಲುಪಿದಾಗ ಮಧ್ಯ ರಾತ್ರಿಯಾಗಿತ್ತು.

ಟಿಪ್ಪುಸುಲ್ತಾನನು ಅರಮನೆಯಲ್ಲಿಯೇ ಇರಬಹುದೆಂದು ಊಹಿಸಿದ ಜನರಲ್ ಬಯರ್ಡ್‌ನೂ, ಅಲನ್ನನೂ ಕೊಠಡಿಗಳ ಬಾಗಿಲನ್ನು ಒಡೆಸಿ ಹುಡುಕುತ್ತಿದ್ದರು. ಸುಲ್ತಾನನು ಮರಣಹೊಂದಿರುವು ದನ್ನು ಹೇಗೋ ತಿಳಿದುಕೊಂಡ ಟಿಪ್ಪುವಿನ ಸೈನಿಕನೊಬ್ಬನು ಆ ಸುದ್ದಿಯನ್ನು ಪರಿವಾರದವರಿಗೆ ತಿಳಿಸಲು ಕೈಯಲ್ಲಿ ಒಂದು ಬಿಳಿಯ ಬಟ್ಟೆಯನ್ನು ಬೀಸುತ್ತಾ ಓಡಿ ಬಂದ. ಅವನನ್ನು ತಡೆದು ನಿಲ್ಲಿಸಿ ಸುಲ್ತಾನನ ಮರಣವನ್ನು ಖಚಿತಪಡಿಸಿಕೊಳ್ಳಲಾಯಿತು.

ಜನರಲ್ ಬಯರ್ಡ್ ಕೂಡಲೆ ದಕ್ಷಿಣ ದ್ವಾರದ ಬಳಿಗೆ ಬಂದ. ರಾತ್ರಿಯ ಕರಾಳ ಕತ್ತಲು. ಸೈನಿಕರು ಕಂದೀಲುಗಳನ್ನು ತಂದರು. ಹೆಣಗಳ ರಾಶಿಯ ನಡುವೆ ಯಾರೋ ನರಳಿದಂತಾಯಿತು. ಸುಲ್ತಾನನ ಮೈಗಾವಲಿನ ರಾಜಖಾನನು ಅತ್ಯಂತ ಕಷ್ಟದಿಂದ ಸುಲ್ತಾನನು ಬಿದ್ದಿರುವ ಸ್ಥಳವನ್ನು ಕೈಸನ್ನೆಯಿಂದ ತೋರಿಸಿದ. ಹೆಣಗಳನ್ನು ಎಳೆದು ಹಾಕಿದಾಗ ಸುಲ್ತಾನನ ಶವ ಸಿಕ್ಕಿತು. ಅವನ ಕಣ್ಣುಗಳು ಇನ್ನೂ ತೆರೆದಿದ್ದವು. ಮೈಬಿಸಿಯಾಗಿತ್ತು. ಸುಲ್ತಾನನು ಇನ್ನೂ ಜೀವದಿಂದಿರಬೇಕೆಂಬ ಸಂದೇಹ ಅಲ್ಲಿದ್ದವರಿಗೆ ಬಂದಿತು. ಆದರೆ ಹೃದಯ ಮತ್ತು ನಾಡಿಗಳ ಬಡಿತ ನಿಂತುಹೋಗಿತ್ತು. ಗುಂಡಿನ ಗಾಯಗಳಿಂದ ಮೂರು ಕಡೆಗಳಿಂದ ರಕ್ತ ಬಸಿಯುತ್ತಿತ್ತು. ಕಣ್ಣಿನ ಮೇಲ್ಭಾಗದಲ್ಲಿ ತಲೆಯಲ್ಲಿ ಒಂದು ಗುಂಡು ಹಾದು ಹೋಗಿತ್ತು. ಇನ್ನೊಂದು ಕಿವಿಯ ತಳಭಾಗದಲ್ಲಿ ಕೆನ್ನೆಯನ್ನು ಭೇದಿಸಿತ್ತು. ಮತ್ತೊಂದು ಎಡಭಾಗದ ಹೃದಯದೊಳಕ್ಕೆ ನಾಟಿತ್ತು.

ಸುಲ್ತಾನ ನಯವಾದ ನಾರಿನ ಬಿಳಿಯ ನಿಲುವಂಗಿಯನ್ನು ಧರಿಸಿದ್ದ. ನಡುವಿಗೆ ಕುಂಕುಮವರ್ಣದ ರೇಷ್ಮೆಯ ವಸ್ತ್ರವನ್ನು ಸುತ್ತಿಕೊಂಡಿದ್ದ. ಹೆಗಲಿನಲ್ಲಿ ನೇತಾಡುತ್ತಿದ್ದ ಕೆಂಪು ಮತ್ತು ಹಸಿರು ಮಿಶ್ರಿತವಾದ ರೇಷ್ಮೆಯ ಕುಚ್ಚು ಕಾಣಿಸಿತು. ತಲೆಯ ಮೇಲಿನ ಪೇಠಾ ಎಲ್ಲಿಯೋ ಕಳಚಿಬಿದ್ದಿತ್ತು. ತೋಳಿನಲ್ಲಿ ತಾಯಿತವಿತ್ತು. ಮೈಮೇಲೆ ಯಾವ ಆಭರಣಗಳೂ ಇರಲಿಲ್ಲ. ಖುರಾನಿನ ಪ್ರತಿಯನ್ನಿಟ್ಟಿದ್ದ ಅತಿ ಚಿಕ್ಕದಾದ ಒಂದು ಬೆಳ್ಳಿಯ ಕರಡಿಗೆಯು ಪಕ್ಕದಲ್ಲಿ ಬಿದ್ದಿತ್ತು.

ಬಯರ್ಡ್ ಅಲ್ಪಕಾಲ ಸುಲ್ತಾನನನ್ನು ನೋಡಿ ನಿಟ್ಟುಸಿರು ಬಿಟ್ಟ. ಅವನ ಮುಖದಲ್ಲಿ ವಿಷಾದದ ಛಾಯೆ ಮೂಡಿತ್ತು. ಪಾರ್ಥಿವ ಶರೀರವನ್ನು ಪಲ್ಲಕ್ಕಿಯಲ್ಲಿರಿಸಲಾಯಿತು. ಬ್ರಿಟಿಶ್ ಸೈನಿಕರು ಇದನ್ನು ಹೊತ್ತು ಅರಮನೆಗೆ ತಂದರು. ಅರಮನೆಯ ಪ್ರಾಂಗಣದಲ್ಲಿ ಎತ್ತರವಾದ ವೇದಿಕೆಯನ್ನು ನಿರ್ಮಿಸಿ ಅದರ ಮೇಲೆ ಟಿಪ್ಪುವಿನ ಶರೀರವನ್ನಿಡಲಾಯಿತು. ಎಲ್ಲರಿಗೂ ಅಂತ್ಯದರ್ಶನಕ್ಕೆ ಅವಕಾಶ ನೀಡಲಾಯಿತು. ಸುಲ್ತಾನರ ಶರೀರವನ್ನು ನೋಡಿದ ರಾಣಿಯರು ರಾಜಕುಮಾರರನ್ನು ಅಗಲಿದ ತಾಯಂದಿರು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಅರಮನೆಯು ರೋದನದಿಂದ ತುಂಬಿಹೋಯಿತು.

ಇಷ್ಟೆಲ್ಲ ಕಾರ್ಯಗಳನ್ನು ನಿರ್ವಹಿಸಿದ ನಂತರ ಅಲನ್ನನು ತನ್ನ ಡೇರೆಯನ್ನು ತಲುಪಿದಾಗ ಮಧ್ಯರಾತ್ರಿ ಮೀರಿತ್ತು. ಜನರಲ್ ಬಯರ್ಡ್ ತೀರಾ ಬಳಲಿದ್ದ. ಆತ ಅರಮನೆಯ ಆವರಣದಲ್ಲೇ ಕಾಲುನೀಡಿ ಮಲಗಿದಾಗ ಗಾಢವಾದ ನಿದ್ರೆ ಬಂದಿತು. ಎಚ್ಚರವಾದಾಗ ಮತ್ತೆ ಅಲ್ಲಲ್ಲಿ ಗುಂಡಿನ ಸಪ್ಪಳ ಕೇಳಿಸುತ್ತಿತ್ತು. ಬೆಂಕಿಯ ಜ್ವಾಲೆಯು ಕಾಣಿಸಿಕೊಂಡಿತು. ಬ್ರಿಟಿಶ್ ಸೈನಿಕರು ನಗರವನ್ನು ಲೂಟಿ ಮಾಡುತ್ತಿದ್ದರು. ಅಧಿಕಾರಿಗಳು, ಶ್ರೀಮಂತರು, ಸರಾಫರು, ವ್ಯಾಪಾರಿಗಳು ಮತ್ತು ಇತರರ ಮನೆಗಳಿಗೆ ನುಗ್ಗಿ ಬೆದರಿಸಿ ಎಲ್ಲವನ್ನು ದೋಚುತ್ತಿದ್ದರು. ವಿರೋಧಿಸಿದವರನ್ನು ಬಡಿದು ತಳ್ಳುತ್ತಿದ್ದರು. ಎಲ್ಲೆಲ್ಲೂ ಜನರು ಹಾಹಾಕಾರ ಮಾಡುತ್ತಾ, ಚೀತ್ಕರಿಸುತ್ತಾ ಓಡುತ್ತಿದ್ದರು. ಹೆಂಗಸರು ಮಾನವನ್ನು ಕಾಪಾಡಿಕೊಳ್ಳಲು ಬೀದಿಗೆ ಓಡಿ ಬರುತ್ತಿದ್ದರು. ಸ್ಮಶಾನದಂತಿದ್ದ ನಗರದ ನಿವಾಸಿಗಳನ್ನು ರಕ್ಷಿಸುವವರೇ ಇಲ್ಲವಾಯಿತು. ಕೆಲವು ಸೈನ್ಯಾಧಿಕಾರಿಗಳೂ ಕೊಳ್ಳೆ ಹೊಡೆಯುವವರ ಸಂಗಡ ಸೇರಿಕೊಂಡಿದ್ದರು. ಆದರೆ ಅವರೇ ಲೂಟಿ ಮಾಡದಂತೆ ಕೂಗುತ್ತ ತಾವು ನ್ಯಾಯನಿಷ್ಠರೆಂಬಂತೆ ನಟಿಸುತ್ತಿದ್ದರು. ಅತ್ಯಮೂಲ್ಯವಾದ ರತ್ನಾಭರಣಗಳು, ಹರಳುಕಲ್ಲುಗಳು, ಚಿನ್ನ ಮತ್ತು ಬೆಳ್ಳಿಯ ವಸ್ತುಗಳು ಕೊಳ್ಳೆಹೊಡೆಯುವವರ ಪಾಲಾದವು.

ಕೋಟೆಯಿಂದ ತಪ್ಪಿಸಿಕೊಂಡಿದ್ದ ಸುಲ್ತಾನನ ಎರಡನೆಯ ಮಗನಾದ ಅಬ್ದುಲ್ ಖಾಲಿಕ್‌ನು ಮೇ ನಾಲ್ಕರಂದು ಬ್ರಿಟಿಶ್‌ರಿಗೆ ಶರಣಾಗಲು ನಿರ್ಧರಿಸಿದನು. ತನ್ನ ಕೆಲವೇ ಮೈಗಾವಲಿನವರೊಂದಿಗೆ ಸಟಿಯ ಉತ್ತರ ಭಾಗದಲ್ಲಿ ನಿಂತು ತನ್ನ ಬಿಳಿಯ ಕರವಸ್ತ್ರವನ್ನು ಬೀಸುತ್ತಿದನು. ಅಲ್ಲಿದ್ದ ಬ್ರಿಟಿಶ್

ಕರ್ನಲ್ ಡ್ಯಾಲ್ರಿಂಪಲ್ಲನು ಅವನಿಗೆ ರಕ್ಷಣೆ ನೀಡುವುದಾಗಿ ತಿಳಿಸಿ ಒಬ್ಬ ಸೇವಕನನ್ನು ಕ್ಯಾಪ್ಟನ್ ಜಿರಾರ್ಡನ ಬಳಿಗೆ ಕಳುಹಿಸಿದನು. ಜಿರಾರ್ಡನು ನದಿಯ ನಡುವಿನ ಬಂಡೆಯ ಮೇಲೆ ಇದ್ದ ಬಿಳಿಯ ನಿಶಾನೆಯನ್ನು ತೋರಿಸುತ್ತಾ ಖಾಲಿಕ್ಖನು ರಾಜಧಾನಿಗೆ ಬರಲು ಸೂಚನೆ ನೀಡಿದನು. ನಂತರ ಇವರಿಬ್ಬರೂ ಜನರಲ್ ಹ್ಯಾರಿಸನ ಶಿಬಿರಕ್ಕೆ ತೆರಳಿದರು. ಹ್ಯಾರಿಸನು ಖಾಲಿಕ್ಖನನ್ನು ಗೌರವದಿಂದ ಬರಮಾಡಿಕೊಂಡನು. ನಂತರ ಮೀರ್ ಆಲಮನೂ ಖಾಲಿಕ್ಖನೂ ವಿಶ್ರಾಂತಿ ಪಡೆದು ಉಪಾಹಾರವನ್ನು ಸ್ವೀಕರಿಸಿದರು. ರಾಜಧಾನಿಯ ಪತನವನ್ನು ತಿಳಿಯದ ಮುಪಿತರಾಗಿದ್ದ ಕುಮಾರರಿಗೆ ಸುಲ್ತಾನನು ಮರಣಹೊಂದಿರುವುದನ್ನು ತಿಳಿಸಲಾಯಿತು. ಅಲ್ಲದೆ ತಂದೆಯ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಲು ಅವರಿಗೆ ಅನುಮತಿ ನೀಡಿ ರಾಜಧಾನಿಗೆ ಕಳುಹಿಸಲಾಯಿತು. ಕರ್ನಲ್ ವೆಲ್ಲೆಸ್ಲಿಯು ಅರಮನೆಯಲ್ಲಿಯೇ ಇದ್ದು ಲೂಟಿ ನಡೆಯದಂತೆ ಎಚ್ಚರಿಕೆವಹಿಸಿದ. ಜನರಲ್ ಹ್ಯಾರಿಸ್ಸನೂ ಅರಮನೆಗೆ ಆಗಮಿಸಿದ.

ಸಮಸ್ತ ರಾಜ ಗೌರವದೊಂದಿಗೆ ಸುಲ್ತಾನನ ಅಂತ್ಯಕ್ರಿಯೆ ನಡೆಸಲು ಸಿದ್ಧತೆ ನಡೆಯಿತು. ಅದಕ್ಕಾಗಿ ಪ್ರಧಾನ ಖಾಜಿಯನ್ನು ಕರೆಸಲಾಯಿತು. ಸುಲ್ತಾನನ ಪಾರ್ಥಿವ ಶರೀರದ ಮೇಲೆ ಅಮೂಲ್ಯವಾದ ರೇಷ್ಮೆಯ ಚಾದರವನ್ನು ಹೊದಿಸಲಾಯಿತು. ಜನರಲ್ ಹ್ಯಾರಿಸ್ ಬ್ರಿಟಿಶರ ಪರವಾಗಿ ಪಾರ್ಥಿವ ಶರೀರದ ಮೇಲೆ ಪುಷ್ಪಗುಚ್ಛವನ್ನಿರಿಸಿದ. ಹೈದರಾಬಾದಿನ ನಿಜಾಮನ ಪರವಾಗಿ ಮೀರ್ ಆಲಮನೂ ನಂತರ ಇತರ ಸೇನಾನಿಗಳೂ ಪುಷ್ಪಗುಚ್ಛವನ್ನಿರಿಸಿದರು. ಮೌನವನ್ನಾಚರಿಸಿ ಅಗಲಿದ ಸುಲ್ತಾನನ ಆತ್ಮಕ್ಕೆ ಶಾಂತಿ ಕೋರಲಾಯಿತು. ಸ್ವಲ್ಪ ಕಾಲ ಅರಮನೆಯಲ್ಲಿ ಖುರಾನಿನ ಪಠಣವೂ ನೆರವೇರಿತು. ಸುಲ್ತಾನನು ಉಪಯೋಗಿಸುತ್ತಿದ್ದ ಪಲ್ಲಕ್ಕಿಯಲ್ಲಿ ಪಾರ್ಥಿವ ಶರೀರವನ್ನು ಇಡಲಾಯಿತು. ದುಃಖತಪ್ತರಾದ ರಾಣೀವಾಸದವರನ್ನು ಬೀಬಿಯರು ಸಂತೈಸುತ್ತಿರುವುದು ಕಾಣಿಸುತ್ತಿತ್ತು. ಬ್ರಿಟಿಶ್ ಮತ್ತು ಮೈಸೂರಿನ ಕಿಲ್ಲೇದಾರರು ಪಲ್ಲಕ್ಕಿಯನ್ನು ಹೊತ್ತು ಹೊರಟರು. ಅಬ್ದುಲ್ ಖಾಲಿಕ್ಖನು ಕುದುರೆಯ ಮೇಲೇರಿ ಪಲ್ಲಕ್ಕಿಯ ಹಿಂದೆ ಬರುತ್ತಿದ್ದನು. ಸಚಿವರು, ಉನ್ನತ ಅಧಿಕಾರಿಗಳು, ಬಂಧು ಬಾಂಧವರು ಮತ್ತು ನಾಗರಿಕರು ತಮಗಾದ ಹಿಂಸೆ ಮತ್ತು ನಷ್ಟವನ್ನು ಮರೆತು ಚರಮ ಯಾತ್ರೆಯಲ್ಲಿ ಪಾಲ್ಗೊಂಡರು. ಶಸ್ತ್ರಸಜ್ಜಿತವಾದ ಬ್ರಿಟಿಶ್ ಪಡೆಗಳು ಗೌರವ ರಕ್ಷೆ ನೀಡುತ್ತಾ ಸಾಗುತ್ತಿದ್ದವು. ಲಾಲ್‌ಬಾಗ್ ಮಹಾದ್ವಾರದ ಮೂಲಕ ಅಂತಿಮ ಯಾತ್ರೆ ನಿಧಾನವಾಗಿ ಸಾಗಿತು. ಮಧ್ಯಾಹ್ನದ ವೇಳೆಗೆ ಗಂಜಾಮನ್ನು ತಲುಪಿತು. ಸುಲ್ತಾನನ ಅಂತಿಮ ಗೌರವಾರ್ಥವಾಗಿ ಗುಂಡುಗಳನ್ನು ಹಾರಿಸಲಾಯಿತು. ಪ್ರಾರ್ಥನೆ ಮತ್ತು ಧಾರ್ಮಿಕ ವಿಧಿಗಳು ಮುಗಿದ ನಂತರ ಸುಲ್ತಾನನ ಪಾರ್ಥಿವ ಶರೀರವನ್ನು ಹೈದರನ ಸಮಾಧಿಯ ಪಕ್ಕದಲ್ಲೇ ನೆಲೆಗೊಳಿಸಲಾಯಿತು. ಕರ್ನಲ್ ವೆಲ್ಲೆಸ್ಲಿಯು ಫಕೀರರಿಗೆ ಮತ್ತು ಬಡವರಿಗೆ ದಾನ ನೀಡಲು ಐದು ಸಾವಿರ ರೂಪಾಯಿಗಳನ್ನು ನೀಡಿದನು.

ಮೇಜರ್ ಅಲನ್ ಅರಮನೆಯ ಕಿಲ್ಲೇದಾರ ಮತ್ತು ಸೆಯ್ಯದ್ ಸಾಹೇಬರ ಸಹೋದರನೊಂದಿಗೆ ಅರಮನೆಗೆ ಹಿಂತಿರುಗಿದ. ಮೈಸೂರಿನ ಪ್ರಧಾನ ಸೇನಾಪತಿ, ಸಯ್ಯದ್ ಸಾಹೇಬನ ನಿವಾಸವು ಬೆಂಕಿಯಿಂದ ಭಸ್ಮವಾಗಿತ್ತು. ಅವನ ಕುಟುಂಬದವರು ದನದ ಕೊಟ್ಟಿಗೆಯಲ್ಲಿ ಆಶ್ರಯ ಪಡೆದಿದ್ದರು. ಸುಲ್ತಾನನ ಸಹೋದರ ಕಮರುದ್ದೀನನ ನಿವಾಸದ ಒಂದು ಭಾಗವು ಬೆಂಕಿಗೆ ಆಹುತಿಯಾಗಿತ್ತು. ರಾಜಧಾನಿಯು ಮೃತ್ಯುವಿನ ಕೂಪವಾಗಿ ಇನ್ನೂ ಅಲ್ಲಲ್ಲಿ ಲೂಟಿ ನಡೆಯುತ್ತಿತ್ತು. ಆರ್ಥರ್ ವೆಲ್ಲೆಸ್ಲಿಯು ನಗರದ ರಕ್ಷಣೆಗಾಗಿ ಸೈನ್ಯವನ್ನು ಕಳುಹಿಸಿದ. ಯಾರೂ ಕೊಳ್ಳೆ ಹೊಡೆಯ ಕೂಡದೆಂದೂ ಮಾನಭಂಗ ಮಾಡಕೂಡದೆಂದೂ ಹಾಗೂ ಮಾಡಿದವರನ್ನು ಸ್ಥಳದಲ್ಲೇ ಗುಂಡಿಕ್ಕಿ ಕೊಲ್ಲಲಾಗುವುದೆಂದೂ ಘೋಷಿಸಿದನು. ನಗರದಲ್ಲಿ ಶಾಂತಿ ನೆಲೆಸಲು ಎಲ್ಲರೂ ಸಹಕರಿಸಬೇಕೆಂದೂ ಊರು ಬಿಟ್ಟು ಹೋಗಿರುವ ನಾಗರಿಕರು ಹಿಂತಿರುಗಬೇಕೆಂದೂ ಸೈನಿಕರು ಬೀದಿ ಬೀದಿಗಳಲ್ಲಿ ತಮಟೆ ಬಾರಿಸುತ್ತ ಹೇಳಿದರು.

ಸುಲ್ತಾನನ ಅರಮನೆಯ ಒಂದು ಭಾಗದಲ್ಲಿ ಆಹಾರವಿಲ್ಲದೆ ಹುಲಿಗಳು ಆರ್ಭಟಿಸುತ್ತಿದ್ದವು. ಸುಲ್ತಾನನ ಮಗ ಮೀರ್ ಆಲಮನು ಇವುಗಳನ್ನು ಪೋಷಿಸಲು ನಿರಾಕರಿಸಿದ. ಹೀಗಾಗಿ ಇವುಗಳನ್ನು ಅಲ್ಲಿಯೇ ಗುಂಡಿಕ್ಕಿ ಕೊಲ್ಲಲಾಯಿತು. ಅರಮನೆಯ ಮಹಾದ್ವಾರದಿಂದ [illegible]

ಯಾರೂ ಪ್ರವೇಶಿಸುವಂತಿರಲಿಲ್ಲ. ಕೋಟೆಯ ಒಳಭಾಗ ಮತ್ತು ಕಂದಕಗಳಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಶವಗಳು ತೇಲುತ್ತಿದ್ದವು. ಗಂಡಸರು ಹೆಂಗಸರು ಅಲ್ಲದೆ ಮಕ್ಕಳು ಸಹ ಗೋಡೆಗಳ ತಳದಲ್ಲಿ ಹುಗಿದುಹೋಗಿದ್ದರು. ಬ್ರಿಟಿಶ್ ಸೈನಿಕರು ಅತ್ಯಂತ ಪ್ರಯಾಸದಿಂದ ಹಲವಾರು ದಿನಗಳ ಕಾಲ ಶವಗಳನ್ನು ಶೋಧಿಸಿ ಅಂತ್ಯ ಸಂಸ್ಕಾರಗಳನ್ನು ಪೂರ್ಣಗೊಳಿಸಿದರು. ಗಾಯಾಳುಗಳಿಗಾಗಿ ಪ್ರತ್ಯೇಕ ಶಿಬಿರಗಳನ್ನು ಸ್ಥಾಪಿಸಲಾಯಿತು.

ಟಿಪ್ಪುವಿನ ಮರಣಾನಂತರ ಗವರ್ನರ್ ಜನರಲ್ ಮಾರ್ನಿಂಗ್‌ಟನ್ನನು ಮಹತ್ತರವಾದ ರಾಜಕೀಯ ಕ್ರಮವನ್ನು ಕೈಗೊಳ್ಳಬೇಕಾಯಿತು. ಮೈಸೂರು ಸಂಸ್ಥಾನವನ್ನು ನೇರವಾಗಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಸೇರಿಸಿಕೊಂಡು ಪ್ರತ್ಯೇಕ ಪ್ರಾಂತವನ್ನಾಗಿ ವಿಂಗಡಿಸುವ ಯಾವ ಯೋಜನೆಯೂ ಇರಲಿಲ್ಲ. ಸುಲ್ತಾನನ ಮಕ್ಕಳಿಗೆ ಮೊದಲಿನಂತೆ ಆಡಳಿತ ನಡೆಸಲು ಅನುಮತಿ ನೀಡುವಂತಿರಲಿಲ್ಲ. ಹೀಗೆ ಮಾಡಿದರೆ ಅವರು ತಮ್ಮ ಗೌರವ ಘನತೆ ಮತ್ತು ಕಳೆದುಕೊಂಡಿರುವ ಸ್ವಾತಂತ್ರ್ಯವನ್ನೂ ಮರಳಿ ಪಡೆಯಲು ಹೋರಾಟ ನಡೆಸುವುದರಲ್ಲಿ ಸಂದೇಹವಿರಲಿಲ್ಲ. ಇವರಿಂದ ರಾಜ್ಯದ ಅಭಿವೃದ್ಧಿ ಮತ್ತು ಉತ್ತಮ ಆಡಳಿತವನ್ನು ನಿರೀಕ್ಷಿಸುವಂತಿರಲಿಲ್ಲ.

ಹೈದರಲಿಖಾನರ ಕಾಲದಿಂದಲೂ ಮೈಸೂರಿನ ಅರಸರು ಕಳೆದುಕೊಂಡಿರುವ ತಮ್ಮ ರಾಜ್ಯವನ್ನು ಮರಳಿ ಪಡೆಯಲು ಬ್ರಿಟಿಶರ ಸಹಾಯವನ್ನು ಕೇಳಿ ಮನವಿಯನ್ನು ಸಲ್ಲಿಸುತ್ತಿದ್ದರು. ಲಾರ್ಡ್ ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಳ್ಳಲು ಸಮ್ಮತಿಸಿದ್ದರು. ಈ ಎಲ್ಲ ಕಾರಣಗಳಿಂದ ಸಂಸ್ಥಾನದ ಆಡಳಿತವನ್ನು ಮೈಸೂರು ಅರಸರಿಗೆ ವಹಿಸಿಕೊಡಲು ಮಾರ್ನಿಂಗ್‌ಟನ್ನನು ನಿರ್ಧರಿಸಿದ್ದನು. ಈ ಕಾರ್ಯಕ್ಕಾಗಿ ತಡಮಾಡದೆ ಸುಲ್ತಾನನ ಕುಟುಂಬದವರನ್ನು ಸ್ಥಳಾಂತರಿಸಬೇಕಾಗಿತ್ತು.

ಆ ಪ್ರಕಾರ ಜನರಲ್ ಹ್ಯಾರಿಸ್ಸನು ಮೇ ಆರರಂದು ಟಿಪ್ಪುವಿನ ಹಿರಿಯಮಗ ಫತೆಹೈದರ, ಸುಲ್ತಾನನ ಸಹೋದರ ಕಮರುದ್ದೀನ್ ಮತ್ತು ಪೂರ್ಣಯ್ಯನವರಿಗೆ ಪ್ರತ್ಯೇಕವಾದ ಪತ್ರಗಳನ್ನು ಬರೆಸಿ ಆಡಳಿತದ ನಿರ್ಧಾರ ಕೈಗೊಳ್ಳಲು ರಾಜಧಾನಿಗೆ ಬರಬೇಕೆಂದು ಆಹ್ವಾನಿಸಿದನು. ಇದಕ್ಕಾಗಿ ಆತ ಅರಮನೆಯ ಒಂದು ವಿಶಾಲವಾದ ಕೊಠಡಿಯನ್ನು ತೆರವು ಮಾಡಿಸಿದ. ಕಾವೇರಿಯಲ್ಲಿ ನೀರು ಹೆಚ್ಚಾದ ಕಾರಣ ಪೂರ್ಣಯ್ಯನವರು ಮೇ ಹನ್ನೆರಡರಂದು ಹ್ಯಾರಿಸ್ಸನನ್ನು ಭೇಟಿ ಮಾಡಿದರು. ಮೈಸೂರಿನ ಆಡಳಿತದ ಬಗೆಗೆ ದೀರ್ಘವಾದ ಚರ್ಚೆ ನಡೆಯಿತು. ಸುಲ್ತಾನನ ಕುಟುಂಬದವರನ್ನು ಗೌರವದಿಂದ ನಡೆಸಿಕೊಳ್ಳಬೇಕೆಂದೂ, ಧಾರಾಳವಾದ ವರ್ಷಾಸನ ನೀಡಬೇಕೆಂದೂ ಪೂರ್ಣಯ್ಯನವರು ಒತ್ತಾಯಿಸಿದರು. ಆದರೆ ಅವರ ಕುಟುಂಬಕ್ಕೆ ಪ್ರತ್ಯೇಕವಾದ ಜಹಗೀರನ್ನು ನೀಡಬೇಕೆಂದು ಮಾತ್ರ ಒತ್ತಾಯಿಸಲಿಲ್ಲ. ಅವರ ನಿಷ್ಪಕ್ಷಪಾತವಾದ ನಿಲುವನ್ನು ಹ್ಯಾರಿಸ್ಸನು ಮೆಚ್ಚಿಕೊಂಡನು. ಅಲ್ಲದೆ ಅವರ ಕೆಲವು ಹೆಚ್ಚಿನ ಸಲಹೆಗಳನ್ನೂ ಒಪ್ಪಿಕೊಳ್ಳಲಾಯಿತು. ಪೂರ್ಣಯ್ಯನವರೇ ದಿವಾನರಾಗಿ ಈಸ್ಟ್ ಇಂಡಿಯಾ ಕಂಪನಿ ಪರವಾಗಿ ಮೈಸೂರು ಸಂಸ್ಥಾನದ ಆಡಳಿತವನ್ನು ನಡೆಸಿಕೊಡಬೇಕೆಂದು ಹ್ಯಾರಿಸ್ ಕೇಳಿಕೊಂಡ. ಸುಲ್ತಾನರ ಮರಣದಿಂದ ತುಂಬಾ ವ್ಯಾಕುಲರಾಗಿದ್ದ ಪೂರ್ಣಯ್ಯನವರು ಅದನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಆದರೆ ಆಡಳಿತವನ್ನು ಮೈಸೂರಿನ ಅರಸು ಕುಟುಂಬದವರಿಗೆ ವಹಿಸಿಕೊಡುವ ಮಹತ್ಕಾರ್ಯವನ್ನು ಪೂರ್ಣಯ್ಯನವರೇ ನೆರವೇರಿಸಬೇಕು ಎಂದು ಗವರ್ನರ್ ಜನರಲ್‌ನು ಸೂಚಿಸಿದಾಗ ಭವಿಷ್ಯತ್ತಿನ ಬಗೆಗೆ ಆಶಾವಾದಿಯಾಗಿದ್ದ ಪೂರ್ಣಯ್ಯನವರು ಒಪ್ಪಿಗೆ ನೀಡಿದರು.

ಮೇ 13ರಂದು ಫತೆಹೈದರನು ಕ್ಯಾಪ್ಟನ್ ಮಾಲ್ಕಂನೊಡನೆ ಹ್ಯಾರಿಸ್ಸನನ್ನು ಭೇಟಿ ಮಾಡಿದನು. ದುಃಖತಪ್ತನಾಗಿದ್ದ ಅವನನ್ನು ಹ್ಯಾರಿಸ್ಸನು ಸಾಂತ್ವನಗೊಳಿಸಿದನು. ಅವನಿಗೂ ಅವನ ಸರದಾರರಿಗೂ ಪೋಷಾಕುಗಳನ್ನು ನೀಡಲಾಯಿತು. ಫ್ರೆಂಚ್‌ರಾಕ್ಸ್‌ನಿಂದ ಇವನೊಂದಿಗೆ ಬಂದಿದ್ದ ಫ್ರೆಂಚ್ ಅಧಿಕಾರಿಗಳು ಶರಣಾಗತರಾದರು. ಫತೆಹೈದರನು ತನ್ನ ಹಕ್ಕುಗಳನ್ನು ಹ್ಯಾರಿಸ್ಸನ ಮುಂದಿಟ್ಟು ಸಂಸ್ಥಾನದ ಆಡಳಿತವನ್ನು ಹಿಂದಿನಂತೆ ತಾವೇ ನಡೆಸಿಕೊಂಡು ಹೋಗುವುದಾಗಿ ತಿಳಿಸಿದನು. ಆದರೆ ಇದರ ಬಗೆಗೆ ಸಮಾಲೋಚನೆ ನಡೆಸಬೇಕಾಗಿರುವುದರಿಂದ ಆತುರದಿಂದ ತೀರ್ಮಾನಿಸು

ವಮ ಸಾಧ್ಯವಿಲ್ಲವೆಂದು ಹ್ಯಾರಿಸ್‌ನು ಸ್ಪಷ್ಟವಾಗಿ ತಿಳಿಸಿದ. ಪೂರ್ಣಯ್ಯನವರು ದಿವಾನರಾಗಿ ಕಾರ್ಯನಿರ್ವಹಿಸುವುದನ್ನು ಮಾತ್ರ ಫತೆಹೈದರ್ ವಿರೋಧಿಸಲಿಲ್ಲ. ನಂತರ ರಾಜಧಾನಿಯಲ್ಲಿ ಫತೆಹೈದರನ ವಾಸಕ್ಕೆ ಪ್ರತ್ಯೇಕವಾದ ಒಂದು ನಿವಾಸವನ್ನು ಗೊತ್ತುಪಡಿಸಲಾಯಿತು. ಬ್ರಿಟಿಷರ ಸೈನಿಕರು ಲೂಟಿ ಮಾಡಿದ ಬೆಳ್ಳಿ ಮತ್ತು ಚಿನ್ನದ ಗಟ್ಟಿಗಳನ್ನು, ವಸ್ತುಗಳನ್ನು ಅಗ್ಗದ ಬೆಲೆಗೆ ಮಾರಲಾಗುತ್ತಿತ್ತು. ಅಮೂಲ್ಯವಾದ ರತ್ನಾಭರಣಗಳನ್ನು ಕೇವಲ ಒಂದು ಬಾಟಲಿ ಮದ್ಯಕ್ಕಾಗಿ ಮಾರಲಾಗುತ್ತಿತ್ತು. ಬ್ರಿಟಿಷ್ ಸೇನೆಯ ಒಬ್ಬ ವೈದ್ಯನು ವಜ್ರ ಖಚಿತವಾದ ಒಂದು ಜೊತೆ ಬಳೆಯನ್ನು ಕೇವಲ 30 ಪಗೋಡಗಳಿಗೆ ಕೊಂಡುಕೊಂಡ.

ಹ್ಯಾರಿಸ್‌ನು ಗವರ್ನರ್ ಜನರಲ್ಲನ ಅನುಮತಿಯನ್ನು ಪಡೆದು ಹೈದರನಿಗೆ ಸೇರಿದ ಗುರುಮಕೊಂಡ ಜಹಗೀರನ್ನು ಟಿಪ್ಪುವಿನ ಸಹೋದರ ಕಮರುದ್ದೀನನಿಗೆ ನೀಡಿದ. ಇದರ ವಾರ್ಷಿಕ ಉತ್ಪನ್ನ ಸುಮಾರು 70 ಸಾವಿರ ಪಗೋಡದಷ್ಟಿತ್ತು. ಜೂನ್ 19 ರಂದು ಕಮರುದ್ದೀನನು ಕುಟುಂಬದೊಂದಿಗೆ ಅಲ್ಲಿಗೆ ಪ್ರಯಾಣ ಬೆಳೆಸಿದ.

ಸುಲ್ತಾನನ ಅರಮನೆಯನ್ನು ಶೋಧಿಸಲು ನಿರ್ಧರಿಸಲಾಯಿತು. ಅಲ್ಲಿ ದೊರೆಯುವ ಸಂಪತ್ತಿನ ಬೆಲೆಯನ್ನು ನಿರ್ಧರಿಸಲು ಹ್ಯಾರಿಸ್‌ನು ಒಂದು "ಮೌಲ್ಯ ಮಾಪನ ಸಮಿತಿ"ಯನ್ನು ನೇಮಿಸಿದನು. ಶೋಧನೆ ನಡೆಸುವಾಗ ಇನ್ನೂ ಅಲ್ಲಿರುವ ರಾಣಿವಾಸದವರನ್ನು ಯಾವ ರೀತಿಯಲ್ಲೂ ಬಾಧಿಸಕೂಡದೆಂದೂ ಅವರಿಗೆ ಪ್ರತ್ಯೇಕ ಕೊಠಡಿಗಳನ್ನು ನೀಡಬೇಕೆಂದು ನಿರ್ಧರಿಸಿದ.

ಅರಮನೆಯ ಒಂದು ಭಾಗದ ತೋಷಖಾನೆಯಲ್ಲಿ ಅನೇಕ ಸುಂದರ ಮೂರ್ತಿಗಳಿದ್ದವು. ಚಿನ್ನ, ಬೆಳ್ಳಿ ಮತ್ತು ಪಂಚ ಲೋಹದ ಮೂರ್ತಿಗಳನ್ನು ವಿಂಗಡಿಸಿ ದೇವಾಲಯಗಳಿಗೆ ನೀಡಿ ಪ್ರತಿಯಾಗಿ 500 ಪಗೋಡಗಳನ್ನು ಪಡೆಯಬೇಕೆಂಬ ಸೂಚನೆ ಬಂದಾಗ ಮೌಲ್ಯಮಾಪನ ಸಮಿತಿಯಲ್ಲಿದ್ದ ಪೂರ್ಣಯ್ಯನವರ ಪ್ರತಿನಿಧಿಯು ಇದನ್ನು ವಿರೋಧಿಸಿ ಈ ವಿಗ್ರಹಗಳು ಮೈಸೂರು ಅರಸರಿಗೆ ಸೇರಿದ್ದು, ಇದನ್ನು ಹಾಗೆಯೇ ದೇವಾಲಯಗಳಿಗೆ ನೀಡಬೇಕೆಂದು ಒತ್ತಾಯಿಸಿದನು. ಆಗ ಇದನ್ನು ಒಪ್ಪಿಕೊಳ್ಳಲಾಯಿತು. ಟಿಪ್ಪುವಿನ ಶಯನಾಗಾರದಲ್ಲಿ ಸಿಕ್ಕಿದ ಆತನ ಖಡ್ಗವನ್ನು ಕರ್ನಲ್ ವೆಲ್ಲೆಸ್ಲಿಯು ಜನರಲ್ ಬಯರ್ಡ್‌ನಿಗೆ ಕಾಣಿಕೆಯಾಗಿ ನೀಡಿದನು. ಇನ್ನೊಂದು ಕೊಠಡಿಯಲ್ಲಿ ಸುಲ್ತಾನನ ಬೆಲೆಬಾಳುವ ಉಡುಪುಗಳಿದ್ದವು. ಇದನ್ನು ಹಾಗೆಯೇ ಬಿಟ್ಟರೆ ಪೇಟೆಯಲ್ಲಿ ಮಾರಾಟವಾಗಿ ಸುಲ್ತಾನರ ಗೌರವ ಘನತೆಗೆ ಕುಂದು ಬರಬಹುದು. ಇವುಗಳನ್ನು ಸುಲ್ತಾನರ ಪರಿವಾರಕ್ಕೆ ನೀಡಬೇಕು ಇಲ್ಲವೆ ಬ್ರಿಟಿಷರೇ ಇದನ್ನು ಭದ್ರಪಡಿಸಿ ಸೂಕ್ತವಾದ ರೀತಿಯಲ್ಲಿ ವಿತರಿಸಬೇಕೆಂದು ಸಮಿತಿಯು ಸೂಚಿಸಿತು.

ಖಜಾನೆಯಲ್ಲಿ ಲಕ್ಷಾಂತರ ಹೊನ್ನು ಮತ್ತು ಬೆಳ್ಳಿಯ ನಾಣ್ಯಗಳು, ತಟ್ಟೆಗಳು, ಆಭರಣಗಳು ಲಭ್ಯವಾದವು. ಭಾರಿ ಪ್ರಮಾಣದ ಆಭರಣಗಳನ್ನು ಭದ್ರವಾದ ಪೆಟ್ಟಿಗೆಗಳಲ್ಲಿಟ್ಟು ಕತ್ತಲೆಯ ಕೊಠಡಿಯಲ್ಲಿ ಇಟ್ಟಿದ್ದರು. ಇವುಗಳ ಬೀಗದ ಕೈಗಳಿಗೆ ಹ್ಯಾರಿಸ್ ಮತ್ತು ಟಿಪ್ಪು ಸುಲ್ತಾನರ ಮೊಹರನ್ನು ಹಾಕಿದರು. ಅರಮನೆಯಲ್ಲಿ ಬಂಗಾರದ ಬಳೆಗಳೂ ವಜ್ರದ ಹಾರಗಳೂ ಉಂಗುರಗಳೂ ತಂಬಿಗೆಗಳೂ ತಟ್ಟೆಗಳೂ ಅಲ್ಲದೆ ಬೆಲೆಬಾಳುವ ವಿವಿಧ ಗಾತ್ರದ ಪಾತ್ರೆಗಳೂ ಬಾಣಗಳೂ ಚಿನ್ನ ಮತ್ತು ಬೆಳ್ಳಿಯ ಲೋಟಗಳನ್ನು ಸಂಗ್ರಹಿಸಲಾಯಿತು. ಇನ್ನೂ ಹಲವಾರು ಪೆಟ್ಟಿಗೆಗಳಲ್ಲಿದ್ದ ವಜ್ರ ವೈಡೂರ್ಯಗಳಿಂದ ಮಾಡಿದ ಆಭರಣಗಳನ್ನು ತೆಗೆದಿರಿಸಲಾಯಿತು. ಬಹುಶಃ ಈ ಎಲ್ಲ ವಸ್ತುಗಳೆಲ್ಲವೂ ಸುಲ್ತಾನರು ಗೆದ್ದ ರಾಜ್ಯಗಳ ಸಾಮಂತರಿಂದ ಕಾಣಿಕೆಯ ರೂಪದಲ್ಲಿ ಬಂದಿರಬಹುದೆಂದು ಮೌಲ್ಯಮಾಪನ ಸಮಿತಿಯ ಸದಸ್ಯರು ತರ್ಕಿಸಿದರು.

ಶಸ್ತ್ರಾಗಾರದಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟು ಕಂಚು ಮತ್ತು ಉಕ್ಕಿನ ತೋಪುಗಳಿದ್ದವು. ಸುಮಾರು ಐದು ಲಕ್ಷದಷ್ಟು ಗುಂಡುಗಳು, 12 ಸಾವಿರ ಸುತ್ತು ಹಾರಿಸುವಷ್ಟು ಮದ್ದುಗುಂಡುಗಳು, ಸುಮಾರು 60 ಸಾವಿರ ಇತರ ಸಣ್ಣ ಪ್ರಮಾಣದ ಆಯುಧಗಳಿದ್ದವು. ಇವುಗಳನ್ನು ಸಾಗಿಸಲು ಸುಮಾರು ಒಂದು ಸಾವಿರದಷ್ಟು ಬಿಡಿ ಗಾಡಿಗಳಿದ್ದವು. ಇದಲ್ಲದೆ ಆಗ ಅತ್ಯಾಧುನಿಕ ಎನಿಸಿದ "[illegible]" ಬಂದೂಕುಗಳಿದ್ದವು. ಇವುಗಳನ್ನು ತಯಾರಿಸುತ್ತಿದ್ದ [illegible] ಉಪಯೋಗಿಸಲಾಗುತ್ತಿತ್ತು. ಇನ್ನೊಂದು ಭಾಗದಲ್ಲಿ ಸುಲ್ತಾನನ ವಸ್ತ್ರ [illegible]

ಯುವ ಕತ್ತಿ, ಖಡ್ಗ ಮತ್ತು ಕಠಾರಿಗಳಿದ್ದವು. ಅಲ್ಲದೆ ವಿವಿಧಗಾತ್ರದ ದೂರದರ್ಶಕಗಳು ಮತ್ತು ಕನ್ನಡಕದ ಗಾಜುಗಳಿದ್ದವು. ಇದರ ಪಕ್ಕದ ಕೊಠಡಿಯಲ್ಲಿ ಹುಲಿಯ ಮುಖದ ಪುರುಷಾಕೃತಿಯ ಅಭೂತಪೂರ್ವವಾದ ವಿಗ್ರಹವಿತ್ತು. ಇದರ ಹೊಟ್ಟೆಯ ಭಾಗದಲ್ಲಿ ಕೀಲಿಕೈಗಳಿಂದ ತಿರುಗಿಸಿದಾಗ ಒಮ್ಮೆ ಮನುಷ್ಯನ ಆಕ್ರಂದನವೂ ಇನ್ನೊಮ್ಮೆ ಹುಲಿಯ ಗರ್ಜನೆಯೂ ಕೇಳಿಸುತ್ತಿತ್ತು. ಅದೇ ಕೊಠಡಿಯಲ್ಲಿ ದಂತದ ಅನೇಕ ಮತ್ತು ಮತ್ತಿತರ ಸುಂದರವಾದ ಪೀಠೋಪಕರಣಗಳೂ ಆಕರ್ಷಕವಾದ ಚೈನಾದೇಶದ ಹೂಜಿಗಳೂ ಪಾತ್ರೆಗಳೂ ಕಂಡು ಬಂದವು. ಸುಮಾರು 500 ಒಂಟೆಗಳ ಮೇಲೆ ಸಾಗಿಸಬಹುದಾದ ರತ್ನಗಂಬಳಿ ಮತ್ತು ಉಣ್ಣೆಯ ಬಟ್ಟೆ, ಬೇಲುಗಟ್ಟಲೆ ಮಸ್ಲಿನ್ ರೇಶ್ಮೆ ಹತ್ತಿ ಮತ್ತು ನಾರಿನ ಬಟ್ಟೆಗಳನ್ನು ಇಡಲಾಗಿತ್ತು.

ಟಿಪ್ಪುಸುಲ್ತಾನನ ಸಿಂಹಾಸನ ಅದ್ಭುತವಾಗಿತ್ತು. ಪೂರ್ಣ ಪ್ರಮಾಣದ ಬೃಹದಾಕಾರವಾದ ಹುಲಿಯ ಆಧಾರದ ಮೇಲೆ ರಚಿತವಾದ ಸಿಂಹಾಸನವನ್ನು ಕರಿಯಮರದಿಂದ ಮಾಡಲಾಗಿತ್ತು. ಈ ಮರಕ್ಕೆ ಚಿನ್ನ ಮತ್ತು ಬೆಳ್ಳಿಯ ತಗಡುಗಳ ಹೊದಿಕೆಯಿತ್ತು. ಸಿಂಹಾಸನ ಸುಮಾರು 8 ಅಡಿಗಳಷ್ಟು ಉದ್ದ 5 ಅಡಿಗಳಷ್ಟು ಅಗಲವಾಗಿತ್ತು. ನೆಲದಿಂದ 4 ಅಡಿ ಎತ್ತರದಲ್ಲಿತ್ತು. ಹುಲಿಯನ್ನು ಚಿನ್ನದ ತಗಡಿನಿಂದ ಅಲಂಕರಿಸಲಾಗಿತ್ತು. ಸಿಂಹಾಸನದ ಎಡ ಭಾಗದ ಮೆಟ್ಟಿಲುಗಳಿಗೆ ಅಲಂಕೃತವಾದ ಬೆಳ್ಳಿಯ ತಗಡನ್ನು ಅಳವಡಿಸಿದ್ದರು. ಹಿಂಭಾಗದಲ್ಲಿ ಖುರಾನಿನ ಪವಿತ್ರ ಶ್ಲೋಕಗಳನ್ನು ಚಿನ್ನದ ತಗಡಿನ ಮೇಲೆ ಕೆತ್ತಲಾಗಿತ್ತು. ಬಂಗಾರದ ತಗಡಿನ ಛತ್ರಿಯಲ್ಲಿ ಮುತ್ತಿನ ಸರವು ನೇತಾಡುತ್ತಿತ್ತು. ಮೇಲ್ಭಾಗದ ಛಾವಣಿಯಲ್ಲಿ ಪಾರಿವಾಳದಂಥ ಪಕ್ಷಿಯ ಕೊಕ್ಕನ್ನು ಹರಳು ಕಲ್ಲುಗಳಿಂದ ಶೃಂಗರಿಸಿದ್ದರು. ಕಲ್ಲುಗಳು ಫಳಫಳ ಹೊಳೆಯುತ್ತಿದ್ದವು. ಗರಿ ಬಿಚ್ಚಿಕೊಂಡ ಪಕ್ಷಿಯ ಎದೆಯಲ್ಲಿ ವಜ್ರಗಳನ್ನು ಅಳವಡಿಸಲಾಗಿತ್ತು. ಬೃಹದಾಕಾರವಾದ ಈ ಸಿಂಹಾಸನವನ್ನು ಸ್ಥಳಾಂತರಿಸುವುದು ತುಂಬಾ ಪ್ರಯಾಸಕರವಾಗಿತ್ತು.

ಗವರ್ನರ್ ಜನರಲ್ ಮಾರ್ನಿಂಗ್‌ಟನ್ನನು ಈ ಅಪೂರ್ವ ಪಕ್ಷಿಯನ್ನು ಇಂಗ್ಲೆಂಡಿನ ಮಹಾರಾಣಿಗೆ ಕಾಣಿಕೆಯ ರೂಪದಲ್ಲಿ ರವಾನಿಸಿದನು. ಸಿಂಹಾಸನದ ಒಂದೊಂದೇ ಭಾಗವನ್ನು ಬೇರ್ಪಡಿಸಿ ಮಾರಾಟ ಮಾಡಲಾಯಿತು. ಒಬ್ಬ ಬ್ರಿಟಿಶ್ ಸೇನಾನಿಯು ಕೆಲವು ಭಾಗಗಳನ್ನು ಸುಮಾರು 2500 ಪೌಂಡುಗಳಿಗೆ ಕೊಂಡುಕೊಂಡನು. ಉಳಿದುವನ್ನು ತೀರಾ ಅಗ್ಗದ ಬೆಲೆಗೆ ಮಾರಲಾಯಿತು. ಹೀಗೆ ಹೈದರ್ ಮತ್ತು ಟಿಪ್ಪುಸುಲ್ತಾನರ ಸಿಂಹಾಸನವು ಹೇಳಹೆಸರಿಲ್ಲದಂತಾಯಿತು.

ಅರಮನೆಯ ವಿಶಾಲವಾದ ಕೊಠಡಿಯಲ್ಲಿ ಪುಸ್ತಕ ಭಂಡಾರವಿತ್ತು. ಕೆಲವು ಗ್ರಂಥಗಳನ್ನು ರೇಶ್ಮೆ ಬಟ್ಟೆಯಿಂದ ಸುತ್ತಿಡಲಾಗಿತ್ತು. ಖುರಾನಿನ ಪ್ರತಿಗಳು ಬಂಗಾರದ ಲಿಪಿಯಲ್ಲಿ ಬರೆಯಲ್ಪಟ್ಟಿದ್ದವು. ಪುಸ್ತಕ ಭಂಡಾರದಲ್ಲಿ ಪ್ರಾರ್ಥನೆ, ಆಚರಣೆಗಳು, ಸೂಫಿಸಂ, ನೀತಿಶಾಸ್ತ್ರ, ಕಲೆ, ವಿಜ್ಞಾನ, ಗಣಿತ, ಭೌತಶಾಸ್ತ್ರ, ತತ್ವಶಾಸ್ತ್ರ, ಜ್ಯೋತಿಷ್ಯ, ಇತಿಹಾಸ, ಹಿಂದಿ ಮತ್ತಿತರ ಭಾಷೆಯ ಕಾವ್ಯಗಳು, ತುರ್ಕಿಯ ಗದ್ಯ ಗ್ರಂಥಗಳು ಮತ್ತು ನೀತಿ ಕಥೆಯ ಒಟ್ಟು ಸುಮಾರು 1200 ಗ್ರಂಥಗಳಿದ್ದವು. ಬಹುಪಾಲು ಪುಸ್ತಕಗಳನ್ನು ಇಂಗ್ಲೆಂಡಿನ ಕೋರ್ಟ್ ಆಫ್ ಡೈರೆಕ್ಟರರಿಗೆ ಕಳುಹಿಸಲು ತೀರ್ಮಾನಿಸಲಾಯಿತು. ಇವುಗಳ ನಕಲನ್ನು ಕಲ್ಕತ್ತೆಯ ಏಶಿಯಾಟಿಕ್ ಸೊಸೈಟಿಗೆ ನೀಡಿ ಪುಸ್ತಕ ಭಂಡಾರವನ್ನು ಅಲ್ಲಿಗೆ ಸ್ಥಳಾಂತರಿಸಲಾಯಿತು. ಅಮೂಲ್ಯವಾದ ಖುರಾನಿನ ಕೃತಿಯೊಂದು ಈಗಲೂ ಲಂಡನ್ನಿನ ವಿಂಡ್ಸರ್ ಕ್ಯಾಸಲ್‌ನಲ್ಲಿದೆ. ಔರಂಗಜೇಬನಿಗೆ ಸೇರಿದ್ದ ಈ ಗ್ರಂಥದ ಬೆಲೆ ಸುಮಾರು 9 ಸಾವಿರ ರೂಪಾಯಿಗಳೆಂದು ಅಂದಾಜು ಮಾಡಲಾಗಿತ್ತು. ಒಂದು ವಜ್ರಖಚಿತವಾದ ಪದಕ, ಕೆಲವು ಬೆಲೆ ಬಾಳುವ ಆಭರಣಗಳನ್ನೂ ಸುಲ್ತಾನನ ಇನ್ನೊಂದು ಖಡ್ಗವನ್ನೂ ಬ್ರಿಟಿಶ್ ಸೈನಾಧಿಪತ್ಯದ ಪರವಾಗಿ ಗವರ್ನರ್ ಜನರಲ್ ಮಾರ್ನಿಂಗ್‌ಟನ್ನನಿಗೆ ನೀಡಲಾಯಿತು. ಯುದ್ಧದ ವೇಳೆಯಲ್ಲಿ ಸುಲ್ತಾನನು ಧರಿಸಿದ್ದ ಪೇಟ ಮತ್ತು ಮುರಾರಿರಾಯನ ಹೆಸರಿನ ಕತ್ತಿ ಮಾರ್ಕ್ವಿಸ್ ಕಾರ್ನವಾಲೀಸ್‌ನ ಕೈವಶವಾಯಿತು. ಜನರಲ್ ಹ್ಯಾರಿಸ್ಸನಿಗೆ ಒಂದೂವರೆ ಲಕ್ಷ ಪೌಂಡ್ ಬೆಲೆಯ ಪಗೋಡ ಮತ್ತು ಆಭರಣಗಳು ಉದಾರ ಕೊಡುಗೆಯ ರೂಪದಲ್ಲಿ ಸಂದಾಯವಾದವು. ಟಿಪ್ಪು

ಸುಲ್ತಾನನಿಗೆ ವಿದೇಶೀಯರು ಹಾಗೂ ಮತ್ತಿತರ ರಾಜತಾಂತ್ರಿಕರಿಂದ ಬಂದಿದ್ದ ಪತ್ರಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲು ಗವರ್ನರ್ ಜನರಲ್‌ನ ವಶಕ್ಕೆ ಒಪ್ಪಿಸಲಾಯಿತು.

ಅರಮನೆ ಬಹು ವಿಶಾಲವಾಗಿದ್ದರೂ ಹೊರನೋಟಕ್ಕೆ ಅಷ್ಟೇನೂ ಸುಂದರವಾಗಿರಲಿಲ್ಲ. ಗೋಡೆಯನ್ನು ಕಲ್ಲುಮಣ್ಣಿನಿಂದಲೇ ಕಟ್ಟಲಾಗಿತ್ತು. ಕುಟುಂಬದವರ ವಾಸಕ್ಕೆ ಪ್ರತ್ಯೇಕವಾದ ಕೊಠಡಿಗಳಿದ್ದವು. ಸುಲ್ತಾನನ ದಿವಾನಖಾನೆಯು ಸುಂದರವಾದ ಆಸನಗಳಿಂದ ಸುಸಜ್ಜಿತ ವಾಗಿತ್ತು. ರಾಜತಾಂತ್ರಿಕರನ್ನು ಸುಲ್ತಾನನು ಇಲ್ಲಿಯೇ ಭೇಟಿ ಮಾಡುತ್ತಿದ್ದ. ಗೋಡೆಯ ಮೇಲೆ ಸುಂದರವಾದ ತೈಲ ಚಿತ್ರಗಳಿದ್ದವು.

ರಾಣಿವಾಸದಲ್ಲಿ ಸುಮಾರು 600 ಮಹಿಳೆಯರಿದ್ದರು. ಇವರಲ್ಲಿ ಟಿಪ್ಪುಸುಲ್ತಾನನ ಕಾಲದಲ್ಲಿ ಕೇರಳದಿಂದ ಬಂದಿದ್ದ ಕ್ರಿಶ್ಚಿಯನ್ ಮಹಿಳೆಯರೂ ಸೇರಿದ್ದರು. ಸುಲ್ತಾನರ ಕುಟುಂಬದ ಹನ್ನೆರಡು ಗಂಡು ಮತ್ತು ಹನ್ನೆರಡು ಹೆಣ್ಣು ಮಕ್ಕಳಿದ್ದರು. ಸುಲ್ತಾನನ ಹಿರಿಯ ಮಗನ ವಯಸ್ಸು 26 ವರ್ಷ ಗಳಾಗಿದ್ದರೆ ಕಿರಿಯ ಮಗನ ವಯಸ್ಸು ಒಂದೂವರೆ ವರ್ಷವಾಗಿತ್ತು. ರಾಜ ಕುಟುಂಬದ ವೆಚ್ಚಕ್ಕೆಂದು ಎರಡೂವರೆ ಲಕ್ಷ ಪಗೋಡಗಳನ್ನು ನೀಡಲಾಯಿತು. ರಾಜ್ಯದಿಂದ ದೂರದಲ್ಲಿರುವ ವೆಲ್ಲೂರಿನ ಕೋಟೆಯಲ್ಲಿ ಟಿಪ್ಪುವಿನ ನಾಲ್ವರು ಮಕ್ಕಳು ಮತ್ತು ಕುಟುಂಬದವರಿಗಾಗಿ ನಿವಾಸವನ್ನು ಗೊತ್ತುಪಡಿಸಲಾಯಿತು. ಅದರ ವೆಚ್ಚಕ್ಕಾಗಿ ಫತೆಹೈದರನಿಗೆ ವರ್ಷಂಪ್ರತಿ ಏಳು ಲಕ್ಷ ಪಗೋಡ ಗಳನ್ನು ನೀಡಲು ತೀರ್ಮಾನಿಸಲಾಯಿತು. ತಮಗೆ ಅರಮನೆಯಲ್ಲಿಯೇ ವಾಸ ಮಾಡಲು ವ್ಯವಸ್ಥೆ ಮಾಡುವುದಾಗಿ ನಂಬಿದ್ದ ಫತೆಹೈದರನಿಗೆ ಆಡಳಿತದ ತಮ್ಮ ಹಕ್ಕನ್ನು ಮನ್ನಿಸದೇ ಬೇರೆಡೆಗೆ ಕಳುಹಿಸುವ ನಿರ್ಧಾರವನ್ನು ತಿಳಿದು ಆಶ್ಚರ್ಯವಾಯಿತು. ಆಗ ಆತ ಹಲವಾರು ಬಾರಿ ಹ್ಯಾರಿಸ್ಸನನ್ನು ಭೇಟಿ ಮಾಡಿ ತಮ್ಮ ನ್ಯಾಯವಾದ ಹಕ್ಕನ್ನು ಮನ್ನಿಸಿ ಆಡಳಿತ ನಡೆಸಲು ಅವಕಾಶ ನೀಡಬೇಕೆಂದು ಒತ್ತಾಯಿಸಿದ. ಮುಂದೆ ಸಣ್ಣ ಘರ್ಷಣೆ ನಡೆದರೂ ಇದಕ್ಕೆ ಸುಲ್ತಾನರ ಕುಟುಂಬದವರೇ ಜವಾಬ್ದಾರರಾಗಬೇಕಾಗುವುದೆಂದು ಹ್ಯಾರಿಸ್ಸನು ಎಚ್ಚರಿಕೆ ನೀಡಿ, ಬ್ರಿಟಿಶ್‌ರ ವಿರುದ್ಧ ಹೋರಾಡಿದ ಸುಲ್ತಾನರ ಪರಿವಾರದ ಮೇಲೆ ಸೇಡು ತೀರಿಸದೆ ಅತ್ಯಂತ ಉದಾರವಾಗಿ ನಡೆದುಕೊಂಡಿರುವುದಾಗಿ ತಿಳಿಸಿದ. ಆದರೂ ಫತೆಹೈದರನು ತನ್ನ ವಾದವನ್ನು ಬಿಡಲಿಲ್ಲ. ಬಿಡುವಿಲ್ಲದ ಕಾರ್ಯಗಳಿಂದ ಇನ್ನು ಮುಂದೆ ಫತೆಹೈದರನು ಹ್ಯಾರಿಸ್ಸನನ್ನು ಭೇಟಿ ಮಾಡಲು ಅವಕಾಶವಿಲ್ಲವೆಂದು ಕರ್ನಲ್ ವೆಲ್ಲಸ್ಲಿಯು ತಿಳಿಸಿದನು. ಅವನ ಮನವಿಗೆ ಯಾವ ಪುರಸ್ಕಾರವೂ ಸಿಗಲಿಲ್ಲ. ಆದರೂ ಟಿಪ್ಪು ಸುಲ್ತಾನನ ಪರಿವಾರದ ವೆಚ್ಚಕ್ಕೆಂದು ಐವತ್ತು ಸಾವಿರ ಪಗೋಡಗಳನ್ನು ನೀಡಲಾಯಿತು.

ವಾಹನಗಳ ತೊಂದರೆ ಮತ್ತು ಮಳೆಗಾಲ ಆರಂಭವಾದುದರಿಂದ ಎಲ್ಲರನ್ನೂ ಒಂದೇ ಬಾರಿಗೆ ವೆಲ್ಲೂರಿಗೆ ಕರೆದೊಯ್ಯಲು ಸಾಧ್ಯವಿರಲಿಲ್ಲ. ಜೂನ್ ಹದಿನೆಂಟರಂದು ಕ್ಯಾಪ್ಟನ್ ಮಾರಿಯಟ್ಟನ ನೇತೃತ್ವದ 1500 ಸೈನಿಕರೊಂದಿಗೆ ಸುಲ್ತಾನನ ನಾಲ್ವರು ಮಕ್ಕಳು ರಾಜ ಪರಿವಾರದೊಡನೆ ಅರಮನೆಯಿಂದ ತೆರಳಿದರು.

ಅಷ್ಟು ಕಾಲ ರಾಜವೈಭವದಿಂದ ಬಾಳಿದ ಅರಮನೆಯಿಂದ ಅಗಲುವಾಗ, ಕಣ್ಣೀರಿನ ಕಡಲು ಹರಿದಿತ್ತು. ಪರಿವಾರವು ವೆಲ್ಲೂರಿಗೆ ತಲುಪಿದ ನಂತರ ಕುಟುಂಬದವರ ವ್ಯವಸ್ಥೆಗಾಗಿ ಕರ್ನಲ್ ಡೋವ್‌ಟನ್ ಎಂಬ ಅಧಿಕಾರಿಯನ್ನು ನೇಮಿಸಲಾಯಿತು.

ಮೈಸೂರು ಅರಸರಿಗೆ ಪುನಃ ಸಂಸ್ಥಾನದ ಆಡಳಿತವನ್ನು ವಹಿಸಿಕೊಡುವುದನ್ನು ಫತೆಹೈದರ್ ಪ್ರತಿಭಟಿಸಿದ. ಇದರೊಂದಿಗೆ ತಮ್ಮ ಕುಟುಂಬದ ಕಮುರುದ್ದೀನನಿಗೆ ನೀಡಿದ ಜಹಗೀರಿಯ ಬಗೆಗೂ ಅಸಮಾಧಾನವಾಗಿತ್ತು. ತನ್ನ ಅವಶ್ಯಕತೆಗಾಗಿ ಹುಲ್ಲು ಮತ್ತು ಉರುವಲು ಪಡೆಯಲು ಸಂಸ್ಥಾನದಲ್ಲಿ ಒಂದು ಗ್ರಾಮವನ್ನಾದರೂ ಜಹಗೀರಿಯನ್ನಾಗಿ ನೀಡಬೇಕೆಂಬ ಆತನ ಬೇಡಿಕೆ ಯನ್ನು ನಿರಾಕರಿಸಲಾಯಿತು.

ಟಿಪ್ಪು ಸುಲ್ತಾನನ ಸೇನಾಪತಿಗಳಾದ ಸಯ್ಯದ್ ಸಾಹೇಬ್, ಸಯ್ಯದ್ ಜಾಫರ್, ಬರ್‌ಹಾನುದ್ದೀನ್ ಮತ್ತು ಮೀರಸಾದಕ್ ಆ ವೇಳೆಗೆ ಮರಣಹೊಂದಿದ್ದರು. ಬೇರೆಯ [illegible]

ಸಿದ್ದೇಶ್ವರದ ಕದನದಲ್ಲಿ ಮಡಿದಿದ್ದನು. ಸುಲ್ತಾನನ ಅಳಿದುಳಿದ ಸೇನೆಯನ್ನು ವಿಸರ್ಜಿಸಲಾಯಿತು.

ರಾಜಧಾನಿಯ ಧಾರ್ಮಿಕ ಸ್ಥಳಗಳಿಗೂ, ಕಾವೇರಿಯ ತೀರದ ದರಿಯಾ ದೌಲತ್ ಅರಮನೆಗೂ ಹಾನಿಯಾಗಿರಲಿಲ್ಲ. ಮೈಸೂರು ಅರಸರ ಕುಟುಂಬದವರು ಶ್ರೀರಂಗಪಟ್ಟಣದಲ್ಲಿ ಒಂದು ಸಾಮಾನ್ಯ ನಿವಾಸದಲ್ಲಿದ್ದರು. ಇದು ಸುಲ್ತಾನನ ಮಗ ಮೊಯಿನುದ್ದೀನನ ನಿವಾಸದ ಪಕ್ಕದಲ್ಲಿತ್ತು. ರಾಜಧಾನಿಯ ಭೀಕರ ಕದನ ಮತ್ತು ಸುಲ್ತಾನರ ಮರಣವನ್ನು ತಿಳಿದ ಪರಿವಾರದವರು ವಿಹ್ವಲರಾಗಿದ್ದರು. ಕೋಟೆಯು ಪತನವಾದ ರಾತ್ರಿ ಬ್ರಿಟಿಶ್ ಸೈನಿಕರು ಲೂಟಿ ಮತ್ತು ಕೊಳ್ಳೆ ಹೊಡೆಯುತ್ತಿರುವುದನ್ನು ಕೇಳಿ ಅವರು ಭಯಭೀತರಾಗಿದ್ದರು. ಆದರೆ ಅವರ ನಿವಾಸದ ಬಳಿ ಯಾರೂ ಸುಳಿಯಲಿಲ್ಲ.

ಪಟ್ಟಾಭಿಷೇಕದ ದಿನವನ್ನು ನಿರ್ಧರಿಸಲಾಯಿತು. ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರಿಸಲು ನಿರ್ಧರಿಸಿದರು. ಮೈಸೂರಿನಲ್ಲಿ ಅರಮನೆಯನ್ನು ಕಟ್ಟಿರಲಿಲ್ಲ. ಟಿಪ್ಪು ಸುಲ್ತಾನನ ಕಾಲದಲ್ಲಿ ಅಧ್ಯರು ಮತ್ತು ವ್ಯಾಪಾರಿಗಳು ದೊಡ್ಡ ಮಹಲುಗಳನ್ನು ನಿರ್ಮಿಸಿ ಕೊಂಡಿದ್ದರು. ಅರಸರ ಮತ್ತು ಕುಟುಂಬದವರಿಗಾಗಿ ಒಂದು ತಾತ್ಕಾಲಿಕ ನಿವಾಸವನ್ನು ಗೊತ್ತು ಪಡಿಸಲಾಯಿತು.

ಶ್ರೀರಂಗಪಟ್ಟಣದ ಅರಮನೆಯಲ್ಲಿ ಇನ್ನೂ ಹಲವಾರು ಜನ ಸುಲ್ತಾನರ ಪರಿವಾರದವರಿದ್ದರು. ಅಲ್ಲಿ ಪಟ್ಟಾಭೀಷೇಕ ನಡೆಸುವುದು ಯೋಗ್ಯವಲ್ಲವೆಂದು ತೀರ್ಮಾನಿಸಲಾಯಿತು.

ಅಧಿಕಾರವಿಲ್ಲದೆ ಹೆಸರಿಗೆ ಮಾತ್ರ ಅರಸರಾಗಿದ್ದ ಎರಡನೆಯ ಕೃಷ್ಣರಾಜ ಒಡೆಯರು ಸ್ವರ್ಗಸ್ಥ ರಾಗಿದ್ದರು. ಅವರ ಪತ್ನಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ದತ್ತುಪುತ್ರನನ್ನು ಸ್ವೀಕರಿಸಿದ್ದರು. ಜನರಲ್ ಹ್ಯಾರಿಸ್ಸನೂ ಪೂರ್ಣಯ್ಯನವರೂ ಮತ್ತು ಇತರ ಅಧಿಕಾರಿಗಳೂ ಮಹಾರಾಣಿ ಯವರನ್ನು ಭೇಟಿ ಮಾಡಿ ಈಸ್ಟ್ ಇಂಡಿಯಾ ಕಂಪನಿಯ ಆದೇಶದಂತೆ ರಾಜ್ಯಾಧಿಕಾರವನ್ನು ವಹಿಸಿ ಕೊಳ್ಳುವಂತೆ ವಿನಂತಿಸಿದರು. ಅನಿರೀಕ್ಷಿತವಾದ ಈ ಸುದ್ದಿಯನ್ನು ಮಹಾರಾಣಿಯವರು ಅತ್ಯಾನಂದದಿಂದ ಸ್ವೀಕರಿಸಿದರು.

ಪಟ್ಟಾಭಿಷೇಕಕ್ಕಾಗಿ ಮೈಸೂರಿನ ಲಕ್ಷ್ಮೀನಾರಾಯಣ ದೇವಾಲಯದ ಬಳಿಯಲ್ಲಿ ವಿಶಾಲವಾದ ಹಸಿರು ಹಂದರವನ್ನು ನಿರ್ಮಿಸಲಾಗಿತ್ತು. ಸಮಸ್ತ ರಾಜಗೌರವಗಳೊಡನೆ ರಾಜಕುಮಾರನನ್ನೂ ರಾಜಪರಿವಾರವನ್ನೂ ಮೈಸೂರಿಗೆ ಕರೆದೊಯ್ಯಲಾಯಿತು. ಜೂನ್ 30ರಂದು ಅತ್ಯಂತ ವೈಭವ ದಿಂದ ಪಟ್ಟಾಭಿಷೇಕ ನೆರವೇರಿತು. ರಾಜಕುಮಾರನು ಪ್ರಾಪ್ತವಯಸ್ಕನಾಗುವವರೆಗೆ ಪೂರ್ಣಯ್ಯ ನವರನ್ನು ದಿವಾನರಾಗಿ ಕಾರ್ಯನಿರ್ವಹಿಸಲು ನೇಮಿಸಲಾಯಿತು. ಈ ಸಮಾರಂಭದ ನಂತರ ಅರಸರು ಮತ್ತು ಗವರ್ನರ್ ಜನರಲ್ಲನ ನಡುವೆ ಸಹಾಯಕ ಸೈನ್ಯ ಪದ್ಧತಿಯ ಒಪ್ಪಂದವಾಯಿತು.


ಶ್ರೀರಂಗಪಟ್ಟಣದ ಕೋಟೆಯ ಒಳಭಾಗದಲ್ಲಿದ್ದ ಅರಮನೆಯಲ್ಲಿ ಸುಲ್ತಾನರ ದೂರದ ಬಂಧುಗಳು ಸೇವಕರು ಮತ್ತು ಆಶ್ರಯದಾತರು ತುಂಬಿ ಕೊಂಡಿದ್ದರು. ಅವರು ತಮ್ಮ ವೆಚ್ಚಕ್ಕಾಗಿ ಹಣವನ್ನೂ ಉಡುಪುಗಳನ್ನೂ ನೀಡಬೇಕೆಂದು ಗವರ್ನರ್ ಜನರಲ್‌ನಿಗೆ ಪದೇ ಪದೇ ಮನವಿ ಗಳನ್ನು ಸಲ್ಲಿಸುತ್ತಿದ್ದರು. ಈಗಾಗಲೇ ಸಾಕಷ್ಟು ಹಣವನ್ನು ನೀಡಿರುವುದರಿಂದ ಇನ್ನು ಮುಂದೆ ಸಹಾಯಧನ ನೀಡುವುದು ಸಾಧ್ಯವಿಲ್ಲವೆಂದು ಗವರ್ನರ್ ಜನರಲ್‌ನು ಸ್ಪಷ್ಟವಾಗಿ ತಿಳಿಸಿದನು. ಕೇರಳದಿಂದ ಅರಮನೆಗೆ ಬಂದಿದ್ದ ಬಹುಪಾಲು ಕ್ರಿಶ್ಚಿಯನ್ ಮಹಿಳೆಯರು ಅವಿವಾಹಿತ ರಾಗಿದ್ದರು. ಇವರನ್ನು ಹಿಂದಕ್ಕೆ ಕಳುಹಿಸುವಂತೆ ಇವರ ಬಂಧುಗಳು ಮನವಿ ಸಲ್ಲಿಸಿದ್ದರು. ಇದರಂತೆ ಈ ಮಹಿಳೆಯರು ಸ್ವಂತ ಖರ್ಚಿನಲ್ಲಿ ತಮ್ಮ ಸ್ಥಳಗಳಿಗೆ ಹಿಂದಿರುಗುವಂತೆ ಅಧಿಕಾರಿಗಳು ಆದೇಶ ನೀಡಿದರು. ಉಳಿದ ಆಶ್ರಿತರು ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ವ್ಯವಸ್ಥೆ ಮಾಡಿಕೊಳ್ಳ ಬೇಕೆಂದು ತಿಳಿಸಲಾಯಿತು.ಕ್ರಮೇಣ ಇವರೆಲ್ಲರೂ ಬೇರೆಡೆಗೆ ಹೊರಟುಹೋದರು. ಅರಮನೆಯು ಶೂನ್ಯವಾಯಿತು. ಹಲವಾರು ದಶಕಗಳು ಕಳೆದವು. ಬೀಳುತ್ತಿದ್ದ ಅರಮನೆಯನ್ನು ಯಾರೂ ರಕ್ಷಿಸ ಲಿಲ್ಲ. ಕುಸಿದುಬಿದ್ದ ಅರಮನೆಯು ಮಣ್ಣಿನ ರಾಶಿಯಾಗಿ ಕಾಲಗರ್ಭದಲ್ಲಿ ಮರೆಯಾಯಿತು.

ಬ್ರಿಟಿಶರು ಶ್ರೀರಂಗಪಟ್ಟಣದಲ್ಲಿ ಸೇನೆಯ ಠಾಣೆಯನ್ನು ಸ್ಥಾಪಿಸಿದ್ದರು. ಕೆಟ್ಟ ಹವಾಮಾನದ ಕಾರಣದಿಂದ ಸೇನೆಯನ್ನು ಬೇರೆಡೆಗೆ ಸ್ಥಳಾಂತರಿಸಬೇಕೆಂದು ಅಧಿಕಾರಿಗಳು ಒತ್ತಾಯಿಸುತ್ತಿದ್ದರು. ಸುಮಾರು 1909 ರಲ್ಲಿ ಇಲ್ಲಿದ್ದ ಮದರಾಸು ರೆಜಿಮೆಂಟಿನಲ್ಲಿ ದೊಡ್ಡ ಘರ್ಷಣೆ ನಡೆಯಿತು. ಅನಂತರ ಸೇನಾಪಡೆಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಶ್ರೀರಂಗಪಟ್ಟಣವು ಮೊದಲಿನ ವೈಭವವನ್ನು ಕಳೆದುಕೊಂಡಿತು.

ಗವರ್ನರ್ ಜನರಲ್ ಮಾರ್ನಿಂಗ್‌ಟನ್ನನು ಅಲಿಪ್ತನೀತಿಯನ್ನು ಕೈಬಿಟ್ಟು ರಾಜ್ಯವಿಸ್ತರಣೆಗೆ ಪ್ರಾಶಸ್ತ್ಯ ನೀಡಿದನು. ಇದರಿಂದ ಟಿಪ್ಪುಸುಲ್ತಾನನು ತಟಸ್ಥನಾಗಿರುವುದು ಸಾಧ್ಯವಿರಲಿಲ್ಲ. ನೆಪೋಲಿಯನ್ನನು 27.4.1798ರಂದು ಬರೆದ ಪತ್ರವು ರಾಯಭಾರಿಗಳಾದ ಹುಸೇನ್ ಅಲಿ ಮತ್ತು ಶೇಕ್ ಇಬ್ರಾಹಿಮರ ಮೂಲಕ ಸುಲ್ತಾನನಿಗೆ ತಲುಪಿತ್ತು. ಆದರೆ ನೆಪೋಲಿಯನ್ ನೈಲ್ ಕದನದಲ್ಲಿ ಬ್ರಿಟಿಶರಿಂದ ಸೋಲನ್ನು ಅನುಭವಿಸಿದನು. ಇದು ಸುಲ್ತಾನನಿಗೆ ಭಾರಿ ಆಘಾತವನ್ನುಂಟು ಮಾಡಿತು. ಶ್ರೀರಂಗಪಟ್ಟಣದಲ್ಲಿ ನವಾಬರ ಸರ್ವಾಧಿಕಾರದ ಆಡಳಿತವು ಇನ್ನೂ ಹೆಚ್ಚು ಕಾಲ ನಡೆಯುವುದು ಸಾಧ್ಯವಿರಲಿಲ್ಲ. ಮೈಸೂರಿನ ಅರಸರು ಕೈತಪ್ಪಿಹೋಗಿರುವ ತಮ್ಮ ಸಂಸ್ಥಾನದ ಆಡಳಿತವನ್ನು ಪಡೆದುಕೊಳ್ಳಲು ಬ್ರಿಟಿಶರ ಸಹಾಯವನ್ನು ಯಾಚಿಸಿ ಅನೇಕ ಮನವಿಗಳನ್ನು ಸಲ್ಲಿಸಿದ್ದರು. ಅವರ ದೀರ್ಘಕಾಲದ ಬೇಡಿಕೆಯನ್ನು ನಿರಾಕರಿಸುವಂತಿರಲಿಲ್ಲ. ಸಮೃದ್ಧವಾದ ಮೈಸೂರು ಸಂಸ್ಥಾನವು ಬ್ರಿಟಿಶರ ಬಲವರ್ಧನೆಗೆ ಅತ್ಯುತ್ತಮ ಸ್ಥಳವಾಗಿತ್ತು. ಸುಲ್ತಾನನ ಸೈನಿಕರ ಹೋರಾಟವನ್ನು ಮೆಚ್ಚಿಕೊಳ್ಳಲೇ ಬೇಕು ಅವರು ಬ್ರಿಟಿಶರಂತೆ ಆಗ ಲಭ್ಯವಿದ್ದ ಆಧುನಿಕ ಶಸ್ತ್ರಾಸ್ತ್ರಗಳಿಂದ ಹೋರಾಡಿದರು. ಸುಲ್ತಾನನ ಅನಿರೀಕ್ಷಿತ ಮರಣವು ರಾಜಧಾನಿಯ ಪತನಕ್ಕೆ ನಾಂದಿಯಾಯಿತು. ಯುದ್ಧದ ನಂತರ ಬ್ರಿಟಿಶ್ ಅಧಿಕಾರಿಗಳು ಸಮಸ್ಯೆಗಳನ್ನು ಬಹುಜಾಣ್ಮೆಯಿಂದ ನಿವಾರಿಸಿಕೊಂಡರು. ಅಪ್ರತಿಮ ರಾಜಕಾರಣಿ ಮತ್ತು ಮಹಾಯೋಧನಾಗಿದ್ದ ಟಿಪ್ಪುಸುಲ್ತಾನನ ಕೀರ್ತಿಯು ಇತಿಹಾಸದಲ್ಲಿ ಅಮರವಾಯಿತು. ●

ದೂರ ಲೋಕದೊಳು ಇರುವ ಜೀವಿಗಳ
ಶೋಧಿಸಲೇಕಿಷ್ಟು ವೆಚ್ಚ?
ಆ ಜೀವಿಗಳೆ ಮನಸು ಮಾಡಿದರೆ
ಶೋಧಿಸಬಹುದಲ ನಮ್ಮನ್ನು!

— ಎಂ.ಆರ್.



Printed and published by **M.H. BELGAUMKAR** on behalf of Lokashikshana Trust at "SAMYUKTA KARNATAKA PRESS", No. 2, Residency Road, Bangalore-560 025. Managing Editor **K. SHAMA RAO.** Rep: Bombay: V. Satyamurthi. Phone: 5510502, Madras, S.K. Murti Phone: 414870. New Delhi: V.K. Chopra Phone: 7114785.

Registered with the Registrar of Newspapers for India under No. 35/3957.